ವಿಶ್ವವಾಣಿ
ವಿಶ್ವಾಸವೇ ವಿಶ್ವ

ಯುಎಸ್ ಓಪನ್-2024: 2ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದ ಯಾನಿಕ್ ಸಿನ್ನರ್

ನ್ಯೂಯಾರ್ಕ್: ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಇಟಲಿಯ ಯಾನಿಕ್ ಸಿನ್ನರ್ ಅವರು ಗೆಲುವು ಸಾಧಿಸಿದ್ದಾರೆ. ವಿಶ್ವದ ಅಗ್ರ ಶ್ರೇಯಾಂಕದ ಯಾನಿಕ್ ಸಿನ್ನರ್ ಅವರು ಭಾನುವಾರ ರಾತ್ರಿ ನಡೆದ ಫೈನಲ್ ಹಣಾಹಣಿಯಲ್ಲಿ ಅಮೆರಿಕದ 12ನೇ ಶ್ರೇಯಾಂಕದ ಟೇಲರ್ ಫ್ರಿಟ್ಜ್ ಅವರನ್ನು 6-3, 6-4, 7-5 ಸೆಟ್‌ಗಳಿಂದ ಸೋಲಿಸಿದ್ದಾರೆ.

ಪುಟ ತೆರೆದಂತೆ...

ನೀರಾವರಿ ಯೋಜನೆಗಳ ಸುತ್ತಮುತ್ತ
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ಸಂ.ಪುಟ | 6

ಮನಿ-ಮ್ಯಾಟರ್: ಹೆಣ್‌ಮಕ್ಕಳೇ ಸ್ಟ್ರಾಂಗು ಗುರು!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
ಸಂ.ಗಮ | 7

ದಾರಿದೀಪೋಕ್ತಿ

ಬೇರೆಯವರ ಮಾತಿಗೆ ಬಹಳ ತಲೆ ಕೆಡಿಸಿಕೊಳ್ಳಬಾರದು. ಬೇರೆಯವರು ಹೇಳುತ್ತಾ ಇರುತ್ತಾರೆ. ಅದು ಅವರ ಸ್ವಭಾವ. ಆದರೆ ನಿಮ್ಮ ಸ್ವಭಾವವನ್ನು ಬದಲಿಸಿಕೊಳ್ಳಬೇಕು. ನಿಮ್ಮ ಬಗ್ಗೆ ಅವರಿಗೆ ಪೂರ್ತಿ ಗೊತ್ತಿಲ್ಲದಿರುವುದರಿಂದ ಅವರು ನಿಮ್ಮ ಬಗ್ಗೆ ಹೇಳುವ ಮಾತುಗಳೆಲ್ಲ ನಿಜವಲ್ಲ ಎಂಬುದನ್ನು ಅರಿತಿರಬೇಕು.

ವಕ್ರತುಂಡೋಕ್ತಿ

ಗಂಡ-ಹೆಂಡತಿ ಇಬ್ಬರೂ ಸರಿಯಾಗಿ ಕನೆಕ್ಟ್ ಆಗಿದ್ದಾರೆ ಅಂದ್ರೆ, ಅದು ಹೆಚ್ಚಿನ ಸಂದರ್ಭಗಳಲ್ಲಿ ವೈಫೈ

ಹರಿಯಾಣ: ಕೈ ಮೈತ್ರಿ ಇಲ್ಲದೆ ಆಪ್ ಸ್ಪರ್ಧೆ

ಚಂಡೀಗಢ: ಹರಿಯಾಣದಲ್ಲಿ ವಿಧಾನಸಭೆ ಚುನಾವಣೆಯಲ್ಲಿ ಆಮ್ ಆದ್ಮಿ ಪಾರ್ಟಿ ಏಕಾಂಗಿ ಸ್ಪರ್ಧೆಗೆ ಮುಂದಾಗಿದ್ದು, ಸೋಮವಾರ 20 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದೆ. ಕಾಂಗ್ರೆಸ್ ಜತೆಗೆ ಸೀಟು ಹಂಚಿಕೆ ವಿಚಾರದಲ್ಲಿ ಹೊಂದಾಣಿಕೆಯಾಗದ ಹಿನ್ನೆಲೆ ಆಪ್ ಏಕಾಂಗಿ ಸ್ಪರ್ಧೆಗೆ ಮುಂದಾಗಿದೆ. 90 ವಿಧಾನಸಭಾ ಕ್ಷೇತ್ರಗಳಿರುವ ಹರಿಯಾಣದಲ್ಲಿ 10 ಸೀಟುಗಳಿಗೆ ಆಪ್ ಬೇಡಿಕೆ ಇಟ್ಟಿತ್ತು. ಆದರೆ ಕೇವಲ ಮೂರರಿಂದ ನಾಲ್ಕು ಸ್ಥಾನ ನೀಡಲು ಕಾಂಗ್ರೆಸ್ ಒಪ್ಪಿತ್ತು. ಇದರಿಂದಾಗಿ ಆಪ್ ಮೈತ್ರಿ ಮುರಿದಿದೆ.

ಬಿಜೆಪಿ, ಆರ್‌ಎಸ್‌ಎಸ್ ರಾಹುಲ್ ವಿರುದ್ಧ ಕಿಡಿ

ಡಲ್ಲಾಸ್: ಭಾರತೀಯ ರಾಜಕೀಯದಲ್ಲಿ ಪ್ರೀತಿ, ಗೌರವ ಮತ್ತು ನಮ್ರತೆ ಕಾಣೆಯಾಗಿದೆ. ಇದಕ್ಕೆ ಮೂಲ ಕಾರಣ ಆರ್‌ಎಸ್‌ಎಸ್ ಎಂದು ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಕಿಡಿಕಾರಿದ್ದಾರೆ. ನಾಲ್ಕು ದಿನಗಳ ಅಮೆರಿಕ ಪ್ರವಾಸದಲ್ಲಿರುವ ಅವರು ಟೆಕ್ಸಾಸ್‌ನಲ್ಲಿ ಭಾರತೀಯ ಅಮೇರಿಕನ್ ಸಮುದಾಯವನ್ನು ಉದ್ದೇಶಿಸಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ಮತ್ತು ಆರ್‌ಎಸ್‌ಎಸ್ ಟೀಕಿಸಿದ್ದಾರೆ. ರಾಹುಲ್ ಗಾಂಧಿ ಹೇಳಿಕೆಗೆ ಬಿಜೆಪಿ ನಅಯಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಅಯೋಧ್ಯೆ: ಭಕ್ತರ ಭೇಟಿ ಶೇ.20 ಇಳಿಕೆ

ಅಯೋಧ್ಯೆ: ಅಯೋಧ್ಯೆಗೆ ಭೇಟಿ ನೀಡುವ ಭಕ್ತರ ಸಂಖ್ಯೆಯಲ್ಲಿ ಶೇ.20ರಷ್ಟು ಇಳಿಕೆ ಕಂಡುಬಂದಿದೆ ಎಂದು ಅಯೋಧ್ಯೆಯ ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ. ಪ್ರವಾಸೋದ್ಯಮ ಉತ್ತಮವಾಗಿದ್ದರೂ ಏಪ್ರಿಲ್‌ನಿಂದ ಅದರ ವೇಗ ಕಡಿಮೆಯಾಗಿದೆ. ಧಾರ್ಮಿಕ ಸ್ಥಳಕ್ಕೆ ಬರುವ ಭಕ್ತರಲ್ಲಿ ಶೇ.80ರಷ್ಟು ಜನರು ಅಯೋಧ್ಯೆಗೆ ನಿಯಮಿತವಾಗಿ ಭೇಟಿ ನೀಡುತ್ತಾರೆ. ನಿತ್ಯ ಅಯೋಧ್ಯೆಗೆ ಬರುವ ಭಕ್ತರ ಸಂಖ್ಯೆ 50,000 ರಿಂದ 80,000 ರ ನಡುವೆ ಇದೆ. ಇದು ಏಪ್ರಿಲ್‌ನಿಂದ ಕ್ಷೀಣಿಸಲು ಪ್ರಾರಂಭಿಸಿದೆ ಎಂದು ಹೇಳಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಸಿಎಂ ಬದಲಾವಣೆ ಚರ್ಚೆ



ಸೆಪ್ಟೆಂಬರ್ 12ಕ್ಕೆ ವಿಚಾರಣೆ ಮುಂದೂಡಿದ ಹೈಕೋರ್ಟ್

ಸಿಎಂ ಪರ ಎ.ಜಿ ವಕಾಲತು, ಮತ್ತೊಮ್ಮೆ ಸಿಂಘ್ವಿ ವಾದ ಮಂಡನೆ

ಪ್ರಾಸಿಕ್ಯೂಷನ್ ಫೈನಲ್‌ಗೆ ದಿನಗಣನೆ

ಬೆಂಗಳೂರು: ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ರಾಜ್ಯಪಾಲರ ಪ್ರಾಸಿಕ್ಯೂಷನ್‌ಗೆ ತಡೆಯಾಜ್ಞೆ ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆಯ ವಾದ-ವಿವಾದ ಆಲಿಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಹೈಕೋರ್ಟ್ ಪೀಠ ಸೆಪ್ಟೆಂಬರ್ 12ಕ್ಕೆ ವಿಚಾರಣೆಯನ್ನು ಮುಂದೂಡಿದೆ. ಅಂದು ಸಿಎಂ ಪರ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರು ಮತ್ತೊಂದು ಸುತ್ತಿನ ವಾದ ಮಂಡನೆ ಮಾಡಲಿದ್ದು, ಅಲ್ಲಿಯವರೆಗೆ ಸಿದ್ದರಾಮಯ್ಯಗೆ ರಿಲೀಫ್ ಸಿಕ್ಕಂತಾಗಿದೆ.

ಸರಕಾರದ ಪರ ಅಡ್ವೋಕೆಟ್ ಜನರಲ್ ಶಶಿಕಿರಣ್ ಶೆಟ್ಟಿ ವಾದ ಮಂಡಿಸಿ, 17ಎ ಅಡಿ ಪ್ರಾಸಿಕ್ಯೂಷನ್‌ಗೆ ಪೊಲೀಸರು ಅನುಮತಿ ಕೇಳಬಹುದು. ಅದಕ್ಕೂ ಮೊದಲು ತನಿಖಾಧಿಕಾರಿ ಪ್ರಾಥಮಿಕ ತನಿಖೆ ನಡೆಸಬೇಕು. ಪ್ರಾಥಮಿಕ ತನಿಖೆಯ ವಿವರವನ್ನು ಸಕ್ಷಮ ಪ್ರಾಧಿಕಾರಕ್ಕೆ ನೀಡಬೇಕು ಎಂದು ಲಲಿತಾ ಕುಮಾರಿ ಪ್ರಕರಣವನ್ನು ಉಲ್ಲೇಖಿಸಿದ್ದರು. ಯಾವ ಪ್ರಕರಣದಲ್ಲಿ ಪ್ರಾಥಮಿಕ ತನಿಖೆ ಬೇಕೆಂಬುದನ್ನು ಸುಪ್ರೀಂಕೋರ್ಟ್ ಹೇಳಿದೆ. ಇದು 22 ವರ್ಷಕ್ಕಿಂತ ಹಳೆಯ ಪ್ರಕರಣ ಆಗಿರುವುದರಿಂದ ಪ್ರಾಥಮಿಕ ತನಿಖೆ ಬೇಕು ಎಂದು ಎಜಿ ವಾದಿಸಿದರು.

ಪೊಲೀಸರಿಗೆ ದೂರು ನೀಡಿದ ನಂತರ 15 ದಿನಗಳಿಂದ ಆರು ವಾರ ಕಾಲಾವಕಾಶವಿದೆ. ಆದರೆ ಅದಕ್ಕೆ ಕಾಯದೇ ರಾಜ್ಯಪಾಲರಿಗೆ ದೂರು ನೀಡಲಾಗಿದೆ. ಎಲ್ಲ ನಾಗರಿಕರು ಎಲ್ಲರ ವಿರುದ್ಧ ದೂರು ನೀಡಿದರೆ ಸಮಸ್ಯೆಯಾಗಲಿದೆ. ರಾಜ್ಯಪಾಲರು ತನಿಖಾಧಿಕಾರಿಯಿಂದ ವರದಿ ಪಡೆಯಬೇಕಿತ್ತು. ಸರಕಾರಕ್ಕೆ ಶೋಕಾಸ್ ನೋಟಿಸ್ ನೀಡುವ ಬದಲು ವರದಿ ಪಡೆಯಬೇಕಿತ್ತು. ವರದಿಯ ಬಲವಿಲ್ಲದೇ ರಾಜ್ಯಪಾಲರು ಅನುಮತಿ ನೀಡಿದ್ದಾರೆ. ಸಿಎಂ ಕರ್ತವ್ಯದ ಭಾಗವಾಗಿ ಈ ಕೃತ್ಯ ನಡೆದಿಲ್ಲ. ಇದಕ್ಕೆ ಅವಕಾಶ ಕೊಟ್ಟರೆ ನಿತ್ಯ ಹಲವು ಖಾಸಗಿ ದೂರು ದಾಖಲಾಗಬಹುದು. ಸಕ್ಷಮ ಪ್ರಾಧಿಕಾರವೇ ಇದನ್ನೆಲ್ಲಾ ವಿಚಾರಣೆ ನಡೆಸಿದರೆ ಸಮಸ್ಯೆ ಆಗಲಿದೆ. ಪೊಲೀಸ್ ಅಧಿಕಾರಿಯ ಮೂಲಕವೇ 17ಎ ಅಡಿ ಅನುಮತಿ ಪಡೆಯಬೇಕು ಎಂದರು.

→ 4

ಮೂರು ಪ್ರಕರಣ ಉಲ್ಲೇಖಿಸಿದ ಎಜಿ

ಚಂದ್ರಬಾಬು ನಾಯ್ಡು ವರ್ಸಸ್ ಆಂಧ್ರ

ಸಿಎಂ ಕೈಗೊಂಡ ನಿರ್ಧಾರ, ಶಿಫಾರಸ್ಸಿನಲ್ಲಿ ಅಪರಾಧದ ಅಂಶವಿರಬೇಕು. 17 ಎ ಅಡಿ ಅನುಮತಿ ನೀಡುವಾಗ ಕೃತ್ಯ ಕರ್ತವ್ಯದ ಭಾಗವಾಗಿತ್ತೇ ನೋಡಬೇಕು.

ಲಲಿತಾ ಕುಮಾರಿ

17ಎ ಅಡಿ ಪ್ರಾಸಿಕ್ಯೂಷನ್‌ಗೆ ಪೊಲೀಸರು ಅನುಮತಿ ಕೇಳಬಹುದು. ಅದಕ್ಕೂ ಮೊದಲು ತನಿಖಾಧಿಕಾರಿ ಪ್ರಾಥಮಿಕ ತನಿಖೆ ನಡೆಸಬೇಕು. ಪ್ರಾಥಮಿಕ ತನಿಖೆಯ ವಿವರ ಸಕ್ಷಮ ಪ್ರಾಧಿಕಾರಕ್ಕೆ ನೀಡಬೇಕು.

ಯಡಿಯೂರಪ್ಪ ಡಿನೋಟಿಫಿಕೇಷನ್

ಡಿನೋಟಿಫಿಕೇಷನ್ ಪ್ರಕರಣದಲ್ಲಿ ಅಂದಿನ ಸಿಎಂ ಬಿ.ಎಸ್.ಯಡಿಯೂರಪ್ಪ ತೀರ್ಮಾನ ಕೈಗೊಂಡಿದ್ದರು. ಆದರೆ ಮುಡಾ ಹಗರಣದಲ್ಲಿ ಸಿದ್ದರಾಮಯ್ಯ ತೀರ್ಮಾನ ಕೈಗೊಂಡಿಲ್ಲ.

ನ್ಯಾಯಾಧೀಶರು ಹೇಳಿದ್ದು

- ಎಫ್‌ಐಆರ್ ದಾಖಲಿಸುವ ಮೊದಲು ಪ್ರಾಥಮಿಕ ತನಿಖೆ ಅಗತ್ಯವೆಂದಿದೆ. ಆದರೆ 17 ಎ ಅಡಿ ಅನುಮತಿಗೆ ಪ್ರಾಥಮಿಕ ತನಿಖೆ ಆಗಿರಬೇಕಿಂದಿಲ್ಲ? ವಿಚಾರಣೆ, ತನಿಖೆಗೂ ಮುನ್ನ 17 ಎ ಅನುಮತಿ ಬೇಕಲ್ಲವೇ?
- ಎಲ್ಲ ನಾಗರಿಕರು ಎಲ್ಲರ ವಿರುದ್ಧ ದೂರು ನೀಡಿದರೆ ಸಮಸ್ಯೆ ಆಗಲಿದೆ. ಹೀಗಾಗಿ ಡಾ.ಅಶೋಕ್ ಪ್ರಕರಣದಲ್ಲಿ ಮಾರ್ಗಸೂಚಿ ರೂಪಿಸಲಾಗಿದೆ.
- ಎಫ್‌ಐಆರ್ ದಾಖಲಿಸುವ ಮುನ್ನ 17ಎ ಅನುಮತಿ ಪಡೆಯಬೇಕು. ಕೋರ್ಟ್ ಸೂಚಿಸಿದ್ದರೆ ಎಫ್‌ಐಆರ್ ದಾಖಲಾಗುತ್ತಿತ್ತು. ಇದನ್ನು ಪಡೆಯಲು ಖಾಸಗಿ ದೂರುದಾರರಿಗೆ ಅನುಮತಿಗೆ ಅವಕಾಶ ನೀಡಲಾಗಿದೆ.

ಶಶಿಕಿರಣ್ ಶೆಟ್ಟಿ ವಾದವೇನು?

- 3 ವಾಲ್ಯೂಮ್‌ಗಳ ದಾಖಲೆಗಳನ್ನು ರಾಜ್ಯಪಾಲರ ಪರ ವಕೀಲರು ನೀಡಿದ್ದಾರೆ. ಆದರೆ ಶೋಕಾಸ್ ನೋಟಿಸ್ ನೀಡುವ ಮುನ್ನ ಪ್ರಾಥಮಿಕ ವರದಿ ಇಲ್ಲ.
- 17ಎ ಅಡಿ ರಾಜ್ಯಪಾಲರೇ ಪ್ರಾಥಮಿಕ ತನಿಖೆ ನಡೆಸುವಂತಿಲ್ಲ. ತನಿಖಾಧಿಕಾರಿಯಂತೆ ರಾಜ್ಯಪಾಲರು ವರ್ತಿಸುವಂತಿಲ್ಲ. ತನಿಖಾಧಿಕಾರಿಯು ಪ್ರಾಥಮಿಕ ತನಿಖೆ ನಡೆಸಬೇಕು, ರಾಜ್ಯಪಾಲರಲ್ಲ. ರಾಜ್ಯಪಾಲರು ಅನುಸರಿಸಿದ ಪ್ರಕ್ರಿಯೆಗೆ ಕಾನೂನಿನಡಿ ಅವಕಾಶವಿಲ್ಲ.
- ರಾಜ್ಯಪಾಲರು ಖಾಸಗಿ ದೂರುದಾರರಿಗೆ ಅವಕಾಶವನ್ನೇ ನೀಡಬಾರದಿತ್ತು. ದೂರುದಾರ ಪ್ರದೀಪ್ ಕುಮಾರ್ ಪೊಲೀಸರಿಗೆ ದೂರನ್ನೇ ನೀಡಿರಲಿಲ್ಲ. ಖಾಸಗಿ ದೂರುದಾರರ ಮನವಿಯನ್ನು ರಾಜ್ಯಪಾಲರು ಹಿಂತಿರುಗಿಸಬೇಕಿತ್ತು.
- ಸಚಿವ ಸಂಪುಟದ ನಿರ್ಧಾರವನ್ನು ತಿರಸ್ಕರಿಸುವ ಅನಿಯಂತ್ರಿತ ಅಧಿಕಾರ ರಾಜ್ಯಪಾಲರಿಗೆ ಇಲ್ಲ. ರಾಜ್ಯಪಾಲರ ಆದೇಶದಲ್ಲಿ ಇದಕ್ಕೆ ಕಾರಣಗಳಿರಬೇಕು. ಆದರೆ ರಾಜ್ಯಪಾಲರು ಪರಿಶೀಲಿಸಿದ ಕಡತದಲ್ಲಿಲ್ಲ.

ವಿಡಿಯೋ ಕಾನ್ಫರೆನ್ಸ್ ಮೂಲಕ ನ್ಯಾಯಾಧೀಶರ ಮುಂದೆ ಹಾಜರಾದ ಎಲ್ಲ ಆರೋಪಿಗಳು

ದರ್ಶನ್, ಗ್ಯಾಂಗ್‌ಗೆ ಸೆ.12ರವರೆಗೆ ಜೈಲೇ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲುಪಾಲಾಗಿರುವ ನಟ ದರ್ಶನ್ ಮತ್ತು ಗ್ಯಾಂಗ್‌ಗೆ ಸೆಪ್ಟೆಂಬರ್ 12 ರವರೆಗೆ ನ್ಯಾಯಾಂಗ ಬಂಧನ ವಿಸ್ತರಣೆ ಮಾಡಿ 24ನೇ ಎಸಿಎಂಎಂ ಕೋರ್ಟ್ ಆದೇಶ ಹೊರಡಿಸಿದೆ.

ನ್ಯಾಯಾಂಗ ಬಂಧನ ಅವಧಿ ಮುಕ್ತಾಯವಾದ ಹಿನ್ನೆಲೆಯಲ್ಲಿ ನಟ ದರ್ಶನ್‌ನನ್ನು ಬಳ್ಳಾರಿ ಜೈಲಿನಿಂದ, ಪವಿತ್ರಾಗೌಡ ಮತ್ತಿತರನ್ನು ಪರಪ್ಪನ ಅಗ್ರಹಾರದಿಂದ ಹಾಗೂ ಮೈಸೂರು, ಬಳ್ಳಾರಿ, ಶಿವಮೊಗ್ಗ, ಧಾರವಾಡ, ಬೆಳಗಾವಿ, ಕಲಬುರಗಿ, ವಿಜಯಪುರದ ಜೈಲಿನಿಂದ ಒಟ್ಟು 17 ಆರೋಪಿಗಳನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾ ಧೀಶರ ಮುಂದೆ ಹಾಜರು ಪಡಿಸಲಾಗಿತ್ತು. ಸೆ.12ರವರೆಗೆ ನ್ಯಾಯಾಂಗ ಬಂಧನ ವಿಸ್ತರಣೆ ಮಾಡಿರುವುದರಿಂದ ದರ್ಶನ್ ಗ್ಯಾಂಗ್‌ಗೆ ಸೆರೆವಾಸ ಮುಂದುವರಿದಿದೆ.

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧಿಯಾಗಿರುವ ನಟ ದರ್ಶನ್ ಗ್ಯಾಂಗ್‌ನ ನ್ಯಾಯಾಂಗ ಬಂಧನ ಸೆ.9ರಂದು ಅಂತ್ಯವಾದ ಹಿನ್ನೆಲೆಯಲ್ಲಿ ಆರೋಪಿಗಳನ್ನು ಕೋರ್ಟ್‌ಗೆ ಹಾಜರು ಪಡಿಸಲಾಯಿತು. ನ್ಯಾಯಾಧೀಶರು ಎಲ್ಲ ಆರೋಪಿಗಳ ಹಾಜರಾತಿ ಪಡೆದುಕೊಂಡರು. ಈ ವೇಳೆ ಚಾರ್ಜ್ ಶೀಟ್ ನೀಡಲು ಸರಕಾರಿ ವಕೀಲರು ಕಾಲಾವಕಾಶ ಕೋರಿದರು. ಆರೋಪಿಗಳ ಪರ ವಕೀಲರಿಗೆ ವೈಯಕ್ತಿಕವಾಗಿ ಚಾರ್ಜ್‌ಶೀಟ್ ನೀಡಿ ಎಂದು ನ್ಯಾಯಾಧೀಶರು ಸೂಚನೆ ನೀಡಿದರು. ಆರೋಪಿಗಳು ಒಂದೊಂದು ಜೈಲಿನಲ್ಲಿದ್ದಾರೆ, ಹೀಗಾಗಿ ಆರೋಪಿಗಳ ಕೈಗೆ ಚಾರ್ಜ್‌ಶೀಟ್ ಸಲ್ಲಿಸಿದರೆ ಜಾಮೀನು ಪ್ರಕ್ರಿಯೆಗೆ ತಡವಾಗುತ್ತದೆ. ಆರೋಪಿಗಳು ವಿಡಿಯೋ ಕಾನ್ಫರೆನ್ಸ್‌ನಲ್ಲಿದ್ದಾರೆ. ಅವರನ್ನು ಕೇಳಿ ಅವರ ಸೂಚನೆ ಮೇರೆಗೆ ಚಾರ್ಜ್‌ಶೀಟ್ ನೀಡುವಂತೆ ವಕೀಲರು ಮನವಿ ಮಾಡಿದರು.

ಕೋರ್ಟ್‌ಗೆ ಡಿಜಿಟಲ್ ಎವಿಡೆನ್ಸ್ ಸಲ್ಲಿಕೆ: ನ್ಯಾಯಾಲಯಕ್ಕೆ ಹಾಜರಾದ ಎಸ್‌ಪಿಪಿ ಪ್ರಸನ್ನ ಕುಮಾರ್, ಪ್ರಕರಣಕ್ಕೆ ಸಂಬಂಧಿಸಿದಂತೆ ಡಿಜಿಟಲ್ ಎವಿಡೆನ್ಸ್ ಹಾರ್ಡ್ ಡಿಸ್ಕ್, ಪೆನ್ ಡ್ರೈವ್ ಅನ್ನು ಸಲ್ಲಿಕೆ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು. ತನಿಖಾಧಿಕಾರಿ ಎಸಿಪಿ ಚಂದನ್ ಪೆನ್ ಡ್ರೈವ್, ಸಿಡಿ, ಡಿವಿಡಿ, ಹಾರ್ಡ್ ಡಿಸ್ಕ್ ಕಂ ಪೆನ್ ಡ್ರೈವ್ ಸೇರಿ ಒಟ್ಟು 60 ಡಿಜಿಟಲ್ ಸಾಕ್ಷಿಗಳನ್ನು ಕೋರ್ಟ್‌ಗೆ ಸಲ್ಲಿಸಿದರು.

→ 4

ದೋಷಾರೋಪ ಪಟ್ಟಿ ಪ್ರಕಟಣೆ ನಿರ್ಬಂಧಿಸಲು ಮನವಿ

ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುವ ದೋಷಾರೋಪ ಪಟ್ಟಿ ಮತ್ತು ಅದಕ್ಕೆ ಪೂರಕವಾದ ಇತರೆ ಯಾವುದೇ ಅಂಶಗಳನ್ನು ಪ್ರಸಾರ ಮಾಡದಂತೆ ಎಲ್ಲ ವಿಧವಾದ ಮಾಧ್ಯಮ ಸಂಸ್ಥೆಗಳನ್ನು ನಿರ್ಬಂಧಿಸಲು ನಿರ್ದೇಶಿಸಬೇಕು ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಮಾಧ್ಯಮ ಸಂಸ್ಥೆಗಳನ್ನು ಹೆಸರಿಸುವಂತೆ ನಟ ದರ್ಶನ್ ಅವರಿಗೆ ಹೈಕೋರ್ಟ್ ಸೂಚಿಸಿದೆ.

ಮನೆಯೂಟದ ಅರ್ಜಿ ವಿಚಾರಣೆ ಮುಂದೂಡಿಕೆ

ಮನೆ ಊಟಕ್ಕಾಗಿ ನಟ ದರ್ಶನ್ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಇದೇ ವೇಳೆ ವಾದ ಮಂಡನೆಗೆ ಕಾಲಾವಕಾಶ ಕೋರಿ ದರ್ಶನ್ ಪರ ವಕೀಲರ ಮನವಿ ಹಿನ್ನೆಲೆಯಲ್ಲಿ ವಿಚಾರಣೆಯನ್ನು ಸೆ.11ಕ್ಕೆ ಹೈಕೋರ್ಟ್ ನಿಗದಿಪಡಿಸಿದೆ.

ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣದ ಚಾರ್ಜ್‌ಶೀಟ್ ಸಲ್ಲಿಕೆ

ಬಿಜೆಪಿ ಕಚೇರಿ ಸ್ಫೋಟ ಯತ್ನ

ಬೆಂಗಳೂರು: ದಿ ರಾಮೇಶ್ವರಂ ಕೆಫೆಯಲ್ಲಿ ನಡೆದ ಸ್ಫೋಟ ಪ್ರಕರಣದ ನಾಲ್ವರು ಆರೋಪಿಗಳಾದ ಮುಸಾವಿರ್ ಹುಸೇನ್ ಶಾಜೀಬ್, ಅಬ್ದುಲ್ ಮತೀನ್ ಅಹಮದ್ ತಾಹಾ, ಮಾಜ್ ಮುನೀರ್ ಅಹಮದ್ ಹಾಗೂ ಮುಜಾಮಿಲ್ ಷರೀಫ್ ವಿರುದ್ಧ ರಾಷ್ಟ್ರೀಯ ತನಿಖಾ ದಳ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದೆ.

ಜನವರಿ 22ರಂದು ಅಯೋಧ್ಯೆಯಲ್ಲಿ ನಡೆದ ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ ದಂದೇ ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಬಿಜೆಪಿ ಕಚೇರಿಯಲ್ಲಿ ಸ್ಫೋಟಿಸಲು ಯತ್ನಿಸಿ ವಿಫಲವಾಗಿದ್ದರು. ಬಳಿಕ ರಾಮೇಶ್ವರಂ ಕೆಫೆಯಲ್ಲಿ ಸ್ಫೋಟಿಸಿದ್ದರು ಎಂಬ ಅಂಶ ಚಾರ್ಜ್‌ಶೀಟ್‌ನಲ್ಲಿ ಬಹಿರಂಗವಾಗಿದೆ.

ಮುಸ್ಲಿಂ ಯುವಕರೇ ಐಸಿಸ್‌ನ ಟಾರ್ಗೆಟ್: ಶಿವಮೊಗ್ಗ ಮೂಲದವರಾಗಿದ್ದ ಮುಸಾವಿರ್ ಹುಸೇನ್ ಶಾಜೀಬ್, ಅಬ್ದುಲ್ ಮತೀನ್ ಅಹಮದ್ ತಾಹಾ ಐಸಿಸ್‌ನಿಂದ ಪ್ರೇರಿತರಾಗಿದ್ದು, ಮುಸ್ಲಿಂ ಯುವಕರನ್ನು ಐಸಿಸ್‌ನತ್ತ ಸೆಳೆಯುತ್ತಿದ್ದರು. ಪ್ರಕರಣದ ಇನ್ನಿಬ್ಬರು ಆರೋಪಿಗಳಾದ ಮಾಜ್ ಮುನೀರ್ ಅಹಮದ್ ಹಾಗೂ ಮುಜಾಮಿಲ್ ಷರೀಫ್‌ನನ್ನು ಸಹ ಅದೇ ರೀತಿ ಐಸಿಸ್‌ನ ವಿಚಾರಗಳೆಡೆಗೆ ಸೆಳೆಯಲಾಗಿತ್ತು. ಆರೋಪಿಗಳು ಭಾರತದ ಸಿಮ್ ಕಾರ್ಡ್‌ಗಳು, ಭಾರತೀಯ ಬ್ಯಾಂಕ್ ಖಾತೆ ಹಾಗೂ ಡಾರ್ಕ್ ವೆಬ್ ಬಳಸಿ ಸೃಷ್ಟಿಸಿದ ಭಾರತ ಹಾಗೂ ಬಾಂಗ್ಲಾದೇಶದ ಗುರುತಿನ ಚೀಟಿಗಳನ್ನು ಹೊಂದಿದ್ದರು ಎಂದು ಚಾರ್ಜ್‌ಶೀಟ್‌ನಲ್ಲಿ ವಿವರಿಸಲಾಗಿದೆ.

ಏನಿದು ಪ್ರಕರಣ?

ಬೆಂಗಳೂರಿನ ಐಟಿಪಿಎಲ್ ರಸ್ತೆಯಲ್ಲಿರುವ ರಾಮೇಶ್ವರಂ ಕೆಫೆಯಲ್ಲಿ ಮಾರ್ಚ್ 1ರಂದು ಐಇಡಿ ಬಳಸಿ ಸ್ಫೋಟಿಸಲಾಗಿತ್ತು. ಸ್ಫೋಟದ ತೀವ್ರತೆಗೆ ಗ್ರಾಹಕರು, ಕೆಫೆ ಸಿಬ್ಬಂದಿ ಸಹಿತ 9 ಜನರು ಗಾಯಗೊಂಡಿದ್ದರು. ಬಳಿಕ ಪ್ರಕರಣದ ತನಿಖೆ ಆರಂಭಿಸಿದ್ದ ಎನ್‌ಐಎ, ಆರೋಪಿ ಮುಸಾವಿರ್ ಹುಸೇನ್ ಶಾಜೀಬ್ ಹಾಗೂ ಅಬ್ದುಲ್ ಮತೀನ್ ಅಹಮದ್ ತಾಹಾನ ಪಾತ್ರದ ಕುರಿತು ಮಾಹಿತಿ ಕಲೆ ಹಾಕಿತ್ತು. ಸ್ಫೋಟದ ಬಳಿಕ ನಾಪತ್ತೆಯಾಗಿದ್ದ ಆರೋಪಿಗಳನ್ನು ಬರೋಬ್ಬರಿ 42 ದಿನಗಳ ಬಳಿಕ ಪಶ್ಚಿಮ ಬಂಗಾಳದಲ್ಲಿ ಬಂಧಿಸಲಾಗಿತ್ತು.

ಹುಬ್ಬಳ್ಳಿ-ಪುಣೆ ಮತ್ತೊಂದು ವಂದೇ ಭಾರತ್ ರೈಲು

ಹುಬ್ಬಳ್ಳಿ: ಹುಬ್ಬಳ್ಳಿ-ಪುಣೆ ಮಧ್ಯೆ ಎರಡನೇ ವಂದೇ ಭಾರತ್ ರೈಲು ಆರಂಭವಾಗಲಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು. ಅತಿ ಶೀಘ್ರದಲ್ಲೇ ಹುಬ್ಬಳ್ಳಿ-ಪುಣೆ ನಡುವೆ ವಂದೇ ಭಾರತ್ ರೈಲು ಸಂಚಾರ ಆರಂಭಿಸುವುದಾಗಿ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಮಾಹಿತಿ ನೀಡಿದ್ದು, ರೈಲು ಸಂಚಾರದ ಉದ್ಘಾಟನೆ ದಿನ ಮತ್ತು ವೇಳಾ ಪಟ್ಟಿಯನ್ನು ಶೀಘ್ರದಲ್ಲೇ ರೈಲ್ವೆ ಇಲಾಖೆ ಪ್ರಕಟಿಸಲಿದೆ ಎಂದು ಸಚಿವ ಜೋಶಿ ತಿಳಿಸಿದ್ದಾರೆ.

ವೈದ್ಯರು ಕೆಲಸಕ್ಕೆ ಹಾಜರಾಗದಿದ್ದರೆ ಕ್ರಮ

ದೆಹಲಿ: ಕೋಲ್ಕತ್ತದ ಆರ್.ಜಿ.ಕರ್ ಕಾಲೇಜಿನ ವೈದ್ಯ ವಿದ್ಯಾರ್ಥಿಯ ಅತ್ಯಾ ಚಾರ, ಕೊಲೆ ಪ್ರಕರಣ ಖಂಡಿಸಿ ಪ್ರತಿಭ ಟನೆ ನಡೆಸುತ್ತಿರುವ ಕಿರಿಯ ವೈದ್ಯರು ಮಂಗಳವಾರ ಸಂಜೆ 5 ಗಂಟೆಯೊಳಗಾಗಿ ಕರ್ತವ್ಯಕ್ಕೆ ಹಾಜರಾಗಬೇಕು. ಇಲ್ಲದಿದ್ದರೆ ರಾಜ್ಯ ಸರಕಾರ ಶಿಸ್ತು ಕ್ರಮ ತೆಗೆದುಕೊಳ್ಳಲಿದೆ ಎಂದು ಸುಪ್ರಿಂ ಕೋರ್ಟ್ ಎಚ್ಚರಿಕೆ ನೀಡಿದೆ.

ಬಿಎಸ್‌ವೈ ಬಂಧಿಸದಂತೆ ನೀಡಿದ್ದ ಆದೇಶ ಮುಂದುವರಿಕೆ

ಯಡಿಯೂರಪ್ಪ ಪ್ರಕರಣ ಪ್ರೊ.ರವಿವರ್ಮ ಎಸ್‌ಪಿಪಿ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧದ ಪೋಕ್ಸೊ ಪ್ರಕರಣದಲ್ಲಿ ರಾಜ್ಯ ಸರಕಾರದ ಪರವಾಗಿ ವಾದಿಸಲು ವಿಶೇಷ ಸರಕಾರಿ ಅಭಿಯೋಜಕರನ್ನಾಗಿ ಹಿರಿಯ ವಕೀಲ ಪ್ರೊ.ರವಿವರ್ಮ ಕುಮಾರ್ ಅವರನ್ನು ನೇಮಕ ಮಾಡಲಾಗಿದೆ.

ಬೆಂಗಳೂರಿನ ಸದಾಶಿವನಗರ ಠಾಣೆಯಲ್ಲಿ ದಾಖಲಾಗಿರುವ ಪೋಕ್ಸೊ ಪ್ರಕರಣ ರದ್ದುಪಡಿಸುವಂತೆ ಹಾಗೂ ಇದೇ ಪ್ರಕರಣದಲ್ಲಿ ಜಾಮೀನು ಮಂಜೂರು ಮಾಡುವಂತೆ ಕೋರಿ ಯಡಿಯೂರಪ್ಪ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ಸಿಐಡಿ ಪ್ರತಿನಿಧಿಸಿದ್ದ ವಿಶೇಷ ಸರಕಾರಿ ಅಭಿಯೋಜಕ ಅಶೋಕ್ ನಾಯ್ಕ್ ಅವರು ಸೆಪ್ಟೆಂಬರ್ 3ರಂದು ರಾಜ್ಯ ಸರಕಾರವು ಪ್ರೊ. ರವಿವರ್ಮ ಕುಮಾರ್ ಅವರನ್ನು ಈ ಪ್ರಕರಣದಲ್ಲಿ ವಿಶೇಷ ಸರಕಾರಿ ಅಭಿಯೋಜಕರನ್ನಾಗಿ ನೇಮಕ ಮಾಡಿದೆ. ಅವರಿಗೆ ಪ್ರಕರಣದ ಮಾಹಿತಿ ನೀಡಲಾಗುವುದು. ಹೀಗಾಗಿ, ಅರ್ಜಿ ವಿಚಾರಣೆಯನ್ನು ಮುಂದೂಡಬೇಕು ಎಂದು ಕೋರಿದರು.

ಇದನ್ನು ಪರಿಗಣಿಸಿದ ನ್ಯಾಯಾಲಯವು ಯಡಿಯೂರಪ್ಪ ಅವರನ್ನು ಬಂಧಿಸದಂತೆ ಮತ್ತು ಅವರಿಗೆ ವಿಚಾರಣೆಗೆ ಖುದ್ದು ಹಾಜರಾತಿಯಿಂದ ವಿನಾಯಿತಿ ನೀಡಿ ಈ ಹಿಂದೆ ಮಾಡಿದ್ದ ಮಧ್ಯಂತರ ಆದೇಶ ಮುಂದುವರಿಯಲಿದೆ ಎಂದು ಆದೇಶಿಸಿದ ನ್ಯಾಯಾಲಯವು ವಿಚಾರಣೆಯನ್ನು ಸೆಪ್ಟೆಂಬರ್ 19ಕ್ಕೆ ಮುಂದೂಡಿತು.

ಎತ್ತಿನಹೊಳೆ ಯೋಜನೆಗೆ ಕೇಂದ್ರ ತಕರಾರು

ದೆಹಲಿ: ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಮೊದಲ ಹಂತ ಸಾಕಾರಗೊಂಡ ಬೆನ್ನಲ್ಲೇ, ಈ ಯೋಜನೆಗೆ ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ತಕರಾರು ಎತ್ತಿದೆ. ಯೋಜನೆ ಅನುಷ್ಠಾನದ ಸಂದರ್ಭದಲ್ಲಿ ಪಶ್ಚಿಮ ಘಟ್ಟಕ್ಕೆ ಹಾನಿಯಾದ ಬಗ್ಗೆ ವರದಿಗಳಿದ್ದು, ಈ ಬಗ್ಗೆ ವಾಸ್ತವಾಂಶದ ಹಾಗೂ ಇಡೀ ಯೋಜನೆ ಕಾರ್ಯಸಾಧ್ಯತೆಯ ವರದಿ ಸಲ್ಲಿಸಬೇಕು ಎಂದು ತಾಕೀತು ಮಾಡಿದೆ.

ಯಶ್‌ಪಾಲ್ ವಿರುದ್ಧ ಪ್ರಕರಣ ದಾಖಲು

ಉಡುಪಿ: ರಾಜ್ಯ ಸರಕಾರದ ವಿರುದ್ಧ ಸೆ.6ರಂದು ಬಿಜೆಪಿ ನಡೆಸಿದ್ದ ಪ್ರತಿಭಟನೆಯ ವೇಳೆ ಸಿಎಂ ಸಿದ್ದರಾಮಯ್ಯ ಪ್ರತಿಕೃತಿಗೆ ಚಪ್ಪಲಿ ಏಟು ನೀಡಿದ ಹಿನ್ನೆಲೆಯಲಿ ಉಡುಪಿ ಶಾಸಕ ಯಶ್ ಪಾಲ್ ಸುವರ್ಣ ಸೇರಿ 11 ಮಂದಿ ವಿರುದ್ಧ ಮಣಿಪಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಸಂತ್, ಈ ಬರಹಕ್ಕೆ ನೀವೇ ಹೆಡ್ ಲೈನ್ ಹಾಕಿಕೊಳ್ಳಿ!

ವಿಶ್ವೇಶ್ವರ ಭಟ್

ಕನ್ನಡ ಪತ್ರಿಕೆಯ ಸುದ್ದಿ ಮನೆಯ ಕಾಯಂ, ಕರ್ಮಠ, ಕರ್ಮಯೋಗಿಯೊಬ್ಬರು ತಮ್ಮ ಬದುಕಿನ ಎಡಿಷನ್ ಮುಗಿಸಿ, ಇಹಲೋಕದಿಂದ ನಿರ್ಗಮಿಸಿದ್ದಾರೆ!

ವಸಂತ ನಾಡಿಗೇರ್ ತಮ್ಮ ವೃತ್ತಿ ಬದುಕಿನ ಉತ್ತುಂಗದಲ್ಲಿದ್ದರು. ಅರವತ್ತು ಸಾಯುವ ವಯಸ್ಸಲ್ಲ. ಅದು ಸಂಪಾದಕರಾಗುವ ವಯಸ್ಸು. ಆದರೆ ಅವರೊಳಗೇ ಇದ್ದ ಕ್ಯಾನ್ಸರ್ (ಪ್ಯಾಂಕ್ರಿಯಾಟಿಕ್) ಅವರಿಗೆ ಬದುಕಲು ಬಿಡಲಿಲ್ಲ. ತಾವು ಬಾಲ್ಯದಲ್ಲಿ ಮೊದಲು ಓದುತ್ತಿದ್ದ 'ಸಂಯುಕ್ತ ಕರ್ನಾಟಕ' ಪತ್ರಿಕೆಗೆ, ಎರಡು ವರ್ಷಗಳ ಹಿಂದೆ ಅವರು ಸಂಪಾದಕರಾಗಿ ಸೇರಿದ್ದರು. ಅವರಲ್ಲಿ ಇನ್ನೂ ಸಾಕಷ್ಟು ಪತ್ರಕರ್ತತನ ಉಳಿದಿತ್ತು. ಕಳೆದ ಎರಡು ತಿಂಗಳ 'ಸಂಯುಕ್ತ ಕರ್ನಾಟಕ'ವನ್ನು ಸೂಕ್ಷ್ಮವಾಗಿ ಓದಿದ ವರಿಗೆ, ವಸಂತ್ ಅವರ ಅನುಪಸ್ಥಿತಿ ಗೊತ್ತಾಗುತ್ತಿತ್ತು. ನಾನು ಕೆಲವರಲ್ಲಿ, 'ವಸಂತಗೆ ಏನಾಗಿದೆ, ಯಾಕೋ ಪತ್ರಿಕೆಯಲ್ಲಿ ಅವರ ಕೈಚಳಕ ಕಾಣುತ್ತಿಲ್ಲವಲ್ಲ' ಎಂದು ಕೇಳಿದ್ದುಂಟು.

ಅವರು ಕೆಲಸ ಮಾಡಿದ ಯಾವ ಪತ್ರಿಕೆಗಾದರೂ ಹೆಡ್ ಲೈನ್ ಮೂಲಕವೇ ಜೀವ ತುಂಬುವುದರಲ್ಲಿ ನಿಷ್ಣಾತರಾಗಿದ್ದ ವಸಂತ್, ಹಾಗೆ ನೋಡಿದರೆ, ತಮ್ಮ ಮೂರೂವರೆ ದಶಕಗಳ ವೃತ್ತಿ ಬದುಕಿನಲ್ಲಿ ಬರೆದಿದ್ದು ಕಮ್ಮಿ. ಆದರೆ ಹೆಚ್ಚು ಬರೆದಿದ್ದು ಹೆಡ್‌ಲೈನ್‌ಗಳನ್ನೇ. ಕಳೆದ ಕಾಲು ಶತಮಾನ ಅವಧಿಯಲ್ಲಿ ಜರುಗಿದ ಪ್ರಮುಖ ಘಟನೆಗಳಿಗೆಲ್ಲ ತಮ್ಮ ಹೆಡ್ ಲೈನ್ ಬರಹಗಳಿಂದಲೇ, ಇಂದಿಗೂ ನೆನಪಿನಲ್ಲಿ ಉಳಿಯುವಂತೆ ಕಟ್ಟಿಕೊಟ್ಟ ಅಗ್ಗಳಿಕೆ ಅವರದ್ದು. ವಸಂತ್ ಯಾವುದೇ ಸುದ್ದಿಮನೆಗಾದರೂ ಭೂಷಣಪ್ರಾಯರು. ಪತ್ರಿಕೆಯೊಂದು ಅರಳುವ ಮತ್ತು ಅದನ್ನು ಸಹಜವಾಗಿ ಅರಳಿಸುವ ಬಗೆ ಅವರಿಗೆ ಕರಗತವಾಗಿತ್ತು.

ವಸಂತ್ ಸಂಪಾದಕರ 'ಸುದ್ದಿ ಸಂಪಾದಕ'ರಾಗಿದ್ದರು. ಯಾವುದೇ ಪ್ರಮುಖ ಘಟನೆ ಸಂಭವಿಸಿದಾಗ, ನಾಳಿನ ಪತ್ರಿಕೆ ಹೀಗೆ ಬರಬೇಕು ಎಂದು ಪ್ರಧಾನ ಸಂಪಾದಕನಾದವನು ಮನಸ್ಸಿನಲ್ಲಿ ಸಂಚಿಕೆಯನ್ನು ಕಲ್ಪಿಸಿಕೊಳ್ಳುತ್ತಾನೆ. ಪ್ರಧಾನ ಸಂಪಾದಕನ ಮನಸ್ಸಿನ ಹೆಜ್ಜೆಯನ್ನು ಗ್ರಹಿಸಿ, ಆ ಪ್ರಕಾರ ನಾಳಿನ ಆವೃತ್ತಿಗೆ ಅಣಿಯಾಗುವುದು ಸುದ್ದಿ ಸಂಪಾದಕನ ಜಾಣ್ಮೆ ಮತ್ತು ಕಸುಬುದಾರಿಕೆಯ ಶ್ರೇಷ್ಠತೆ. ಈ ವಿಷಯದಲ್ಲಿ ವಸಂತ್ ಎಡವಿದ್ದೇ ಇಲ್ಲ. ಸಂಪಾದಕೀಯ ಸಭೆಯಲ್ಲಿ ಹತ್ತಾರು ಮಂದಿಯೊಂದಿಗೆ ಚರ್ಚಿಸಿದ್ದಕ್ಕಿಂತ ವಿಭಿನ್ನವಾಗಿ, ಊಹಿಸಿದ್ದಕ್ಕಿಂತ ಅದ್ಭುತವಾಗಿ ಮರುದಿನದ ಪತ್ರಿಕೆ ಆಕರ್ಷಕವಾಗಿ ಮೂಡಿ ಬಂದಿರುತ್ತಿತ್ತು. ವಸಂತ್ ಛಾಪು ಎದ್ದು ಕಾಣುತ್ತಿತ್ತು.

ಪತ್ರಿಕೆಯಲ್ಲಿ ಮುದ್ರಿತವಾಗುವ ಅರ್ಧ ವಿರಾಮ, ಪೂರ್ಣವಿರಾಮ, ಪ್ರಶ್ನಾರ್ಥಕ, ಉದ್ಧರಣ ಚಿಹ್ನೆಗಳಿಂದ ಹಿಡಿದು, factual ಸಂಗತಿಗಳ ಮೇಲೆಲ್ಲ ಅವರ ಹದ್ದಿನ ಕಣ್ಣುಗಳು ನೆಟ್ಟಿರುತ್ತಿದ್ದವು. ಒಮ್ಮೆ ಅವರು ಕಣ್ಣಾಡಿಸಿದರೆ, ಮತ್ತೊಮ್ಮೆ ಯಾರೂ ನೋಡಬೇಕಿರಲಿಲ್ಲ, ನೇರವಾಗಿ ಮುದ್ರಣಕ್ಕೆ ಕಳಿಸಬಹುದಾಗಿತ್ತು.

→ 4

ಒಮ್ಮೆ ಪತ್ರಿಕೆಯ ಒಂದು ಸಮಾರಂಭದಲ್ಲಿ ನಾನು, 'ಸುದ್ದಿಮನೆಯಲ್ಲಿ ವಸಂತ ನಾಡಿಗೇರರಂಥ ನಾಲ್ಕು ಕರ್ಮಯೋಗಿಗಳಿದ್ದರೆ, ಯಾರು ಬೇಕಾದರೂ ಸಂಪಾದಕರಾಗಬಹುದು' ಎಂದು ಹೇಳಿದ್ದೆ. ಆ ಮಾತಿನಲ್ಲಿ ಉತ್ಪ್ರೇಕ್ಷೆ ಇರಲಿಲ್ಲ. ಪತ್ರಿಕೆಯ ಎಲ್ಲ ವಿಭಾಗಗಳ ನಡುವೆ ಸಮನ್ವಯ ಮೂಡಿಸುವ ಸೊಗಸುಗಾರಿಕೆ ಅವರಲ್ಲಿತ್ತು. ವಸಂತ್ ಅವರ ಮೇಲೆ ಒಂದು ವಾರ ನಿರುಮ್ಮಳವಾಗಿ ಪತ್ರಿಕೆಯನ್ನು ಬಿಟ್ಟು ಹೋಗುವಷ್ಟು ಅವರನ್ನು ನಂಬಬಹುದಾಗಿತ್ತು ಮತ್ತು ಅವರ ಮೇಲೆ ಆ ಭಾರವನ್ನು ಹಾಕಬಹುದಾಗಿತ್ತು.

ಹಿರಿಯ ಪತ್ರಕರ್ತ ನಾಡಿಗೇರ್ ಇನ್ನಿಲ್ಲ

ಬೆಂಗಳೂರು: ಸಂಯುಕ್ತ ಕರ್ನಾಟಕ ಸಂಪಾದಕ ವಸಂತ್ ನಾಡಿಗೇರ್ (60) ಅವರು ಸೋಮವಾರ ಮುಂಜಾನೆ ನಿಧನರಾಗಿದ್ದಾರೆ. ಮೃತರು ಪತ್ನಿ, ಪುತ್ರಿ, ಪುತ್ರನನ್ನು ಅಗಲಿದ್ದಾರೆ. ವಸಂತ್ ನಾಡಿಗೇರ್ ಅವರು ಸಂಯುಕ್ತ ಕರ್ನಾಟಕಕ್ಕೆ ಸಂಪಾದಕರಾಗುವ ಮೊದಲು ಕನ್ನಡಪ್ರಭ, ವಿಜಯ ಕರ್ನಾಟಕದಲ್ಲಿ ಕಾರ್ಯನಿರ್ವಹಿಸಿದ್ದರು. ವಿಶ್ವವಾಣಿಯಲ್ಲಿ ಮೂರು ವರ್ಷಗಳ ಕಾಲ ಕಾರ್ಯನಿರ್ವಾಹಕ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದರು. ಕೆಲ ತಿಂಗಳಿನಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು, ಭಾನುವಾರ ಆಸ್ಪತ್ರೆಗೆ ದಾಖಲಾಗಿದ್ದರು. ಚಿಕಿತ್ಸೆ ಫಲಕಾರಿಯಾಗದೇ ಸೋಮವಾರ ಮುಂಜಾನೆ 3.13ಕ್ಕೆ ಕೊನೆಯುಸಿರೆಳೆದಿದ್ದಾರೆ. ವಸಂತ್ ನಾಡಿಗೇರ್ ಅವರ ನಿಧನಕ್ಕೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಕೇಂದ್ರ ಸಚಿವ ಕುಮಾರ ಸ್ವಾಮಿ ಸೇರಿದಂತೆ ವಿವಿಧ ಕ್ಷೇತ್ರಗಳ ಗಣ್ಯರು ಸಂತಾಪ ಸೂಚಿಸಿದ್ದಾರೆ. ಸೋಮವಾರ ಮಧ್ಯಾಹ್ನ 2.30ರ ಸುಮಾರಿಗೆ ಚಾಮರಾಜಪೇಟೆಯಲ್ಲಿ ಅಂತಿಮ ವಿಧಿವಿಧಾನಗಳು ನೆರವೇರಿತು.

ಶಂಕರ ಮಠಗಳಲ್ಲಿ ಅದ್ವೈತ ಅಗತ್ಯ

ವೈಭವ ತಾಮ್ರ ಶಾಸನದ ಅನಾವರಣ | ರಾಘವೇಶ್ವರ ಶ್ರೀಗಳಿಂದ ಆಶೀರ್ವಚನ

ಗೋಕರ್ಣ: ಅದ್ವೈತ ಸಾರುವ ಮಠಗಳು ಕೂಡಾ ದ್ವೈತವಾಗಿರಬಾರದು. ವಿದ್ಯಾರಣ್ಯರ ಹೃದಯ ವೈಶಾಲ್ಯ ಎಲ್ಲ ಗುರುಗಳಲ್ಲಿ ಬರಬೇಕಾದ್ದು ಸಮಾಜದ ಹಿತದೃಷ್ಟಿಯಿಂದ ಅಗತ್ಯ ಎಂದು ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀರಾಘವೇಶ್ವರ ಭಾರತೀ ಮಹಾಸ್ವಾಮೀಜಿ ಕರೆ ನೀಡಿದರು.

ಅಶೋಕೆಯ ಗುರುದೃಷ್ಟಿಯಲ್ಲಿ ಚಾತುರ್ಮಾಸ್ಯ ವ್ರತ ಕೈಗೊಂಡಿರುವ ಶ್ರೀಗಳು 51ನೇ ದಿನವಾದ ಸೋಮವಾರ, ವಿದ್ಯಾರಣ್ಯರು ನೀಡಿದ ವೈಭವತಾಮ್ರಶಾಸನದ ಅನಾವರಣ ನೆರವೇರಿಸಿ ಆಶೀರ್ವಚನ ನೀಡಿದರು.

ನಮ್ಮದು ಸ್ವತಂತ್ರ ಅಸ್ತಿತ್ವದ, ರಾಜಮಾನ್ಯವಾದ, ರಾಜಪ್ರಭುತ್ವಕ್ಕೆ ಸಮಾನ ಸ್ಥಾನಮಾನ ಹೊಂದಿದ್ದ ಪೀಠ ಎನ್ನುವುದನ್ನು ತಿಳಿದುಕೊಳ್ಳಬೇಕು. ವಿದ್ಯಾರಣ್ಯರು ತೋರಿದ ಭಾವಾದ್ವೈತ ಮೆರೆಯುವುದು ಸಮಾಜದ ಹಿತದೃಷ್ಟಿಯಿಂದ ಅಗತ್ಯ. ಅದು ಶ್ರೀಶಂಕರರ ಮೂಲಸಂಕಲ್ಪಕ್ಕೆ, ಮೂಲ ಆಶಯಕ್ಕೆ ಅನುಸಾರವಾಗಿದೆ ಎಂದು ಹೇಳಿದರು.

ಈ ಅದ್ವೈತ ಭಾವ ಮುಂದುವರಿಯಬೇಕು. ವಿದ್ಯಾರಣ್ಯರು ಮೆರೆದ ಆದರ್ಶದಂತೆ ಎಲ್ಲ ಶಂಕರ ಪೀಠಗಳು ಏಕ ಮನಸ್ಸಿನಿಂದ ಇರಬೇಕು. ಈ ವೈಭವ ತಾಮ್ರಶಾಸನ ಎರಡೂ ಮಠಗಳ ಮಧ್ಯೆ ಎಂಥ ಅದ್ವೈತ ಇತ್ತು ಎನ್ನುವುದನ್ನು ಬಿಂಬಿಸುತ್ತದೆ. ದಕ್ಷಿಣಾಮ್ನಾಯದ ಪರಿಧಿಯ ಗೋಕರ್ಣ

ಮಂಡಲದ ಆಚಾರ್ಯತ್ವವನ್ನು ವಿದ್ಯಾರಣ್ಯರು ಈ ಶಾಸನದ ಮೂಲಕ ಸ್ಥಿರೀಕರಿಸಿದರು.

ಇದಾಗಿ 75 ವರ್ಷ ಕಳೆದ ಬಳಿಕ ಇಮ್ಮಡಿ ದೇವರಾಯ ಚಕ್ರವರ್ತಿ ಇದನ್ನು ದೃಢೀಕರಿಸಿದರು ಎಂದು ಬಣ್ಣಿಸಿದರು.

ರಘೂತ್ತಮ ಮಠ ಹಾಗೂ ಶೃಂಗೇರಿ ಮಠ ಶಂಕರಾಚಾರ್ಯ ಪರಂಪರೆಗಳು ಎರಡು ಮಠಗಳು. ಗೋಕರ್ಣ ಮಹಾಬಲೇಶ್ವರ ಸಮ್ಮುಖದಲ್ಲಿ ಉಭಯ ಗುರುಗಳ ಸಮಾಯೋಗ ನೆರವೇರುತ್ತದೆ. ಆ ಸಂದರ್ಭದಲ್ಲಿ ನಮ್ಮ ಮಠದ ಎಲ್ಲ ಹಿರಿಮೆ ಗರಿಮೆಗಳನ್ನು ಶೃಂಗೇರಿ ಮಠಾಧೀಶರು ಬಣ್ಣಿಸಿದ್ದಾರೆ. ಶಂಕರ ಪರಂಪರೆಯಲ್ಲಿ ವಿದ್ಯಾರಣ್ಯರಂಥ ಗುರುಗಳು ಮತ್ತೆ ಬಂದಿಲ್ಲ. ಮತ್ತೊಂದು ಮಠವನ್ನು ಅದ್ವಿತೀಯವಾಗಿ ಗೌರವಿಸಿದ ಅವರು ಶ್ರೀಮಠಕ್ಕೆ ರಾಜಲಾಂಛನಗಳೆಲ್ಲ ಇರಬೇಕು ಎಂದು ಅಭಿಪ್ರಾಯಪಟ್ಟಿದ್ದರು ಎಂಬುದಾಗಿ ವಿವರಿಸಿದರು.

ಶಂಕರಾಚಾರ್ಯರಿಂದ ಎರಡೂ ಪರಂಪರೆಗಳು ಬಂದಿವೆ. ಸುರೇಶ್ವರಾಚಾರ್ಯರ ಬಳಿಕ ಎರಡು ಮಠಗಳು ಮುಂದುವರಿಯುತ್ತವೆ. ಸುರೇಶ್ವರಾಚಾರ್ಯರ ಶಿಷ್ಯರಲ್ಲಿ ಜ್ಯೇಷ್ಠರು ಯಾರು ಎಂಬ ಪ್ರಶ್ನೆ ಬರುತ್ತದೆ. ನಾವು ಎರಡೂ ಮಠಗಳು ಒಂದೇ ಪರಂಪರೆಗೆ ಸೇರಿದವು. ರಘೂತ್ತಮ ಮಠ ಜ್ಯೇಷ್ಠ ಪರಂಪರೆ ಎಂದು ವಿದ್ಯಾರಣ್ಯರೇ ಹಾಡಿಹೊಗಳಿದ್ದಾರೆ. ಅದು

> ಜ್ಯೋತಿಷ ಎನ್ನುವುದು ಅದ್ಭುತ ವಿಜ್ಞಾನವನ್ನು ನಮ್ಮ ಪೂರ್ವಜರು ಕಂಡುಕೊಂಡಿದ್ದರು. ಉದಾಹರಣೆಗೆ ತಾಂಬೂಲ ಪ್ರಶ್ನದಿಂದ ಕೂಡಾ ಭವಿಷ್ಯ, ವರ್ತಮಾನಗಳನ್ನು ತಿಳಿಯುವ ಅಪೂರ್ವ ಸಾಧನವಾಗಿತ್ತು.
> -ರಾಘವೇಶ್ವರ ಶ್ರೀ

ವಿದ್ಯಾರಣ್ಯರ ಹೃದಯ ವೈಶಾಲ್ಯವನ್ನು ತಿಳಿಸುತ್ತದೆ ಎಂದರು.

ನಮ್ಮ ಮಠವನ್ನು ಶಂಕರಾಚಾರ್ಯ ಪೀಠವೇ ಅಲ್ಲ ಎಂಬ ಅಪಪ್ರಚಾರವೂ ನಡೆಯಿತು. ಹಾಗಿಲ್ಲದಿದ್ದರೆ ಈ ತಾಮ್ರಶಾಸನ ಹೇಗೆ ನೀಡಲಾಗಿದೆ? ಜತೆಗೆ ಸಿಂಹಾಸನ, ರಾಜಲಾಂಛನಗಳು ಹೇಗೆ ಬರುತ್ತವೆ ಎಂದು ಪ್ರಶ್ನಿಸಿದರು. ರಘೂತ್ತಮ ಮಠ ಶಾಖಾ ಮಠ ಅಲ್ಲ ಎನ್ನುವುದನ್ನು ಆ ಶಾಸನವೇ ಸಾರುತ್ತದೆ. ಶಾಖಾ ಮಠಕ್ಕೆ ಸಿಂಹಾಸನ, ಕಿರೀಟ, ಮಂಡಲಾಚಾರ್ಯತ್ವವನ್ನು ಹೇಗೆ ನೀಡಲಾಗುತ್ತದೆ. ಇದು ಸ್ವತಂತ್ರ ಮಠ ಎನ್ನುವುದನ್ನು ಸೂರ್ಯಸ್ಪಷ್ಟವಾಗಿ ಶಾಸನ ಹೇಳುತ್ತದೆ ಎಂದು ಪ್ರತಿಪಾದಿಸಿದರು.

ಗುರುತತ್ವ- ಪ್ರಭುಶಕ್ತಿಗಳ ಅನುಗ್ರಹದ ಬೆಳಕು ನೀಡುತ್ತಾ ಬಹುಕಾಲದಿಂದ ಬೆಳಗಿದೆ. ಗುರುತತ್ವಗಳಿದ್ದಲ್ಲಿ ಎಲ್ಲ ಅಮಂಗಲಗಳು ದೂರ ಸರಿದು ಮಂಗಲಗಳಾಗಿ ಪರಿಣಮಿಸುತ್ತವೆ. ಅಂತೆಯೇ ಪ್ರಭು ಚರಣ ಕೂಡಾ ಎಲ್ಲ ಆಪತ್ತುಗಳನ್ನು ಬಗೆಹರಿಸಿ ಸರ್ವ ಸಂಪತ್ತನ್ನು, ಆನಂದವನ್ನು ತುಂಬಿಕೊಡುವಂಥದ್ದು ಎಂದು ವಿವರಿಸಿದರು.

ಇದಕ್ಕೂ ಮುನ್ನ ಶೃಂಗೇರಿ ಮಠದ 12ನೇ ಪೀಠಾಧಿಪತಿಗಳಾಗಿದ್ದ ಶ್ರೀವಿದ್ಯಾರಣ್ಯ ಶ್ರೀಪಾದಂಗಳವರು, ನಮ್ಮ ಪೂರ್ವಾಚಾರ್ಯರಾದ 10ನೇ ಪೀಠಾಧಿಪತಿಗಳಾದ ಚಿದ್ಬೋಧ ಭಾರತೀ ಸ್ವಾಮಿಗಳವರಿಗೆ ನೀಡಿದ್ದ ವೈಭವ ತಾಮ್ರಶಾಸನ ಹಾಗೂ ವಿಜಯ ನಗರದ ಅರಸ ಇಮ್ಮಡಿ ದೇವರಾಯರು ಇದನ್ನು ಸ್ಥಿರೀಕರಿಸಿ ಪ್ರಥಮ ರಾಘವೇಶ್ವರ ಭಾರತೀ ಸ್ವಾಮಿಗಳವರಿಗೆ ನೀಡಿದ ವೈಭವತಾಮ್ರಶಾಸನದ ಅನಾವರಣವನ್ನು ಪರಮಪೂಜ್ಯರು ನೆರವೇರಿಸಿದರು.

ಹವ್ಯಕ ಮಹಾಮಂಡಲ ಪ್ರಧಾನ ಕಾರ್ಯದರ್ಶಿ ಉದಯಶಂಕರ ಭಟ್ ಮಿತ್ತೂರು, ಚಾತುರ್ಮಾಸ್ಯ ಸೇವಾ ಸಮಿತಿ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ ಪಂಡಿತ್, ಕೋಶಾಧ್ಯಕ್ಷ ಸುಧಾರಕ ಬಡಗಣಿ, ವಿವಿ ಹಿರಿಯ ಲೋಕಸಂಪರ್ಕಾಧಿಕಾರಿ ಜಿ.ಕೆ.ಹೆಗಡೆ, ಜಿ.ವಿ.ಹೆಗಡೆ, ದೈವಜ್ಞರಾದ ಮಧು ಶರ್ಮಾ, ಮಿತ್ತೂರು ಕೇಶವ ಭಟ್, ಶ್ರೀಕಾರ್ಯದರ್ಶಿ ಜಿ.ಕೆ.ಮಧು, ಶ್ರೀಶ ಶಾಸ್ತ್ರಿ, ಅರವಿಂದ ಬಂಗಲಗಲ್ಲು ಮತ್ತಿತರರು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಅಡಕೆಗೆ ಕೊಳೆರೋಗ; ಆತಂಕದಲ್ಲಿ ರೈತರು

ಯಲ್ಲಾಪುರ: ತಾಲೂಕಿನ ಉಮ್ಮಚ್ಗಿ ಪಂಚಾಯತ ವ್ಯಾಪ್ತಿಯ ಕನೇನಳ್ಳಿ, ಕೋಟೆಮನೆ, ಸೀಗೆಮನೆ,ಉಮ್ಮಚ್ಗಿ, ಕಾನಗೋಡ, ಚವತ್ತಿ, ತಾರೆಹಳ್ಳಿ, ತುಡುಗುಣಿ, ಹಾಸ್ಪುರ ಹೀಗೆ ಬಹುತೇಕ ಕಡೆಗಳಲ್ಲಿ ಅಡಕೆಗೆ ಕೊಳೆ ರೋಗ ವ್ಯಾಪಿಸಿದ್ದು, ರೈತರು ಆತಂಕದಿಂದ ತಲೆ ಮೇಲೆ ಕೈ ಹೊತ್ತು ಕುಳಿತುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಡಕೆ ಧಾರಣೆಯೂ ತೀವ್ರವಾಗಿ ಕುಸಿತ ಕಾಣುತ್ತಿರುವ ಈ ಸಂದರ್ಭದಲ್ಲಿ ರೋಗ ಬಾಧೆಯೂ ಈ ಪರಿ ಕಾಡಿದರೆ ಅಡಿಕೆ ಬೆಳೆಗಾರರ ಪಾಲಿಗೆ ಮುಂದಿನ ದಿನಗಳು ಕರಾಳವಾಗುವುದರಲ್ಲಿ ಸಂಶಯವಿಲ್ಲವೆಂಬ ಮಾತು ಬೆಳೆಗಾರರ ವಲಯದಿಂದ ಕೇಳಿ ಬರುತ್ತಿದೆ. ಕೆಲವು ರೈತರು ಎರಡು ಮೂರು ಸಲ ಮದ್ದು ಸಿಂಪರಣೆ ಮಾಡಿಸಿದರೂ ರೋಗ ಹತೋಟಿಗೆ ಬಾರದಿರುವುದು ವಿಚಿತ್ರವಾಗಿದ್ದು, ಕಳೆದೆರಡು ತಿಂಗಳಿನಿಂದ ಎಡೆಬಿಡದೆ ಸುರಿಯುತ್ತಿರುವ ಮಳೆಯೇ ಇದಕ್ಕೆಲ್ಲ ಕಾರಣವಾಗಿರುತ್ತದೆ. ಯಲ್ಲಾಪುರಕ್ಷೇತ್ರಕ್ಕೆ ಮೊದಲ ಬಾರಿ ಶಾಸಕರಾಗಿದ್ದಾಗ ಶಿವರಾಮ ಹೆಬ್ಬಾರ್ ಅವರು ಮೊದಲ ಸಲ ಭಾಗದ ಬಹಳಷ್ಟು ರೈತರಿಗೆ ಸರ್ಕಾರದಿಂದ ಕೊಳೆ ಪರಿಹಾರ ಕೊಡಿಸುವಲ್ಲಿ ಸಫಲರಾಗಿದ್ದರು. ಅಂದಿನಂತೆ ಇಂದೂ ಸರ್ಕಾರದಿಂದ ಅಂಥದೇ ಒಂದು ಸಹಾಯ ಒದಗೀತೆಂಬ ಆಶೆಯೂ ಕೆಲವು ರೈತರಲ್ಲಿದೆ.

ಪ್ರಧಾನಿ ಶ್ರಮಕ್ಕೆ ಕೈ ಜೋಡಿಸುವುದು ಕರ್ತವ್ಯ

ಕಾರವಾರ: ದೇಶಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಮಹತ್ವಪೂರ್ಣ ಕಾರ್ಯಗಳನ್ನು ಮಾಡಿದ್ದಾರೆ. ಅವರ ಯೋಜನೆ, ಶ್ರಮಕ್ಕೆ ಕೈ ಜೋಡಿಸಬೇಕಾದದ್ದು ನಮ್ಮ ಕರ್ತವ್ಯ ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷೆ ರೂಪಾಲಿ ಎಸ್. ನಾಯ್ಕ ಅವರು ಹೇಳಿದರು. ಕಾರವಾರ ನಗರ ಮಂಡಲದ ವ್ಯಾಪ್ತಿಯ ವಿವಿಧ ವಾರ್ಡ್‌ಗಳಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ನಾವೆಲ್ಲರೂ ದೇಶಕ್ಕಾಗಿ ಈ ಸದಸ್ಯತ್ವ ಅಭಿಯಾನದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸೋಣ. 8800002024 ಸಂಖ್ಯೆಗೆ ಮಿಸ್ ಕಾಲ್ ನೀಡುವ ಮೂಲಕ ಸದಸ್ಯತ್ವದ ಪ್ರಕ್ರಿಯೆಯನ್ನು ಆರಂಭಿಸಿ. ನೋಂದಣಿ ಮಾಡಿಕೊಳ್ಳಬೇಕು ಎಂದರು.

ಬಿಜೆಪಿ ಅಧ್ಯಕ್ಷ ನಾಗೇಶ ಕುರಡೇಕರ್, ನಗರಸಭೆ ಅಧ್ಯಕ್ಷ ರವಿರಾಜ ಅಂಕೋಲೇಕರ್, ಸ್ಥಳೀಯ ನಗರಸಭೆ ಸದಸ್ಯೆ ಮಾಲಾ ಹುಲಸ್ವಾರ್, ನಗರಸಭೆ ಸದಸ್ಯರಾದ ರೋಷನಿ ಮಾಲಸೇಕರ್, ಹನುಮಂತ ತಳವಾರ, ಶಿಲ್ಪಾ ನಾಯ್ಕ, ಜಿಲ್ಲಾ ಮಾಧ್ಯಮ ಸಂಚಾಲಕ ಕಿಶನ್ ಕಾಂಬ್ಳೆ, ಪ್ರಧಾನ ಕಾರ್ಯದರ್ಶಿ ದೇವಿದಾಸ ಕಂತ್ರೆಕರ, ಶಕ್ತಿಕೇಂದ್ರ ಪ್ರಮುಖ ದೀಪಕ ಗಾವಕರ್ ನಾಗೇಶ, ಗಣಪತಿ ಗುನಗಿ, ಸುಧಾಕರ್ ಗುನಗಿ, ರೇಣುಕಾ ಕಂಟೋಜಿ, ಕಾರ್ಯಕರ್ತರು ಉಪಸ್ಥಿತರಿದ್ದರು.

ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಕಾರವಾರ: ಕರ್ನಾಟಕ ರಾಜ್ಯಅಲ್ಪಸಂಖ್ಯಾತರ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಫಾರ್ಸಿ) ವಿದ್ಯಾರ್ಥಿಗಳಿಂದ ಪ್ರಸಕ್ತ ಸಾಲಿಗೆ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ 1ನೇ ತರಗತಿಯಿಂದ 8ನೇ ತರಗತಿಯ ವಿದ್ಯಾರ್ಥಿಗಳ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿಗಳು ಕರ್ನಾಟಕ ರಾಜ್ಯ ನಿವಾಸಿಯಾಗಿರಬೇಕು, ಹಿಂದಿನ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ ಕನಿಷ್ಠ 50 % ಅಂಕಗಳನ್ನು ಪಡೆದಿರಬೇಕು ಹಾಗೂ ಕುಟುಂಬದ ವಾರ್ಷಿಕ ಆದಾಯರೂ. 1 ಲಕ್ಷ ಒಳಗಿರಬೇಕು. ಕಳೆದ ವರ್ಷದಲ್ಲಿ ವಿದ್ಯಾರ್ಥಿ ವೇತನ ಮಂಜೂರಾಗಿದ್ದಲ್ಲಿ auto renewal ಎಂದು ಪರಿಗಣಿಸಲಾಗುವುದು, ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆಯಿರುವುದಿಲ್ಲ. ಕಡ್ಡಾಯವಾಗಿ ವಿದ್ಯಾರ್ಥಿಯ ಬ್ಯಾಂಕ್‌ಖಾತೆಗೆ (NPIC Mapping Active) ಆಧಾರ್ ಜೋಡಣೆಯಾಗಿದೆಯೇ ಎಂದು ಖಚಿತಪಡಿಸಿಕೊಳ್ಳತಕ್ಕದ್ದು, ಅರ್ಜಿಯನ್ನು ಪೋರ್ಟಲ್ https://ssp.karnataka.gov.in ಮೂಲಕ ಅಕ್ಟೋಬರ್ 31 ರೊಳಗಾಗಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ವೆಬ್‌ಸೈಟ್ https://dom.karnataka.gov.in ಅಥವಾ ಸಹಾಯವಾಣಿ: 8277799990 ನ್ನುಅಥವಾ ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರವನ್ನು ಸಂಪರ್ಕಿಸುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಬೆಂಬಲ ಬೆಲೆ ಕೇಂದ್ರ ಆರಂಭಕ್ಕೆ ಡಿಸಿ ಸೂಚನೆ

ಹಾವೇರಿ: ಬೆಂಬಲ ಬೆಲೆ ಯೋಜನೆಯಡಿ ಸೋಯಾಬೀನ್ ಉತ್ಪನ್ನ ಖರೀದಿ ಕೇಂದ್ರಗಳನ್ನು ಜಿಲ್ಲೆಯ ಹಾವೇರಿ, ಶಿಗ್ಗಾಂವ, ಹಾನಗಲ್, ರಾಣೇಬೆನ್ನೂರು, ಸವಣೂರು, ಬ್ಯಾಡಗಿ ಹಾಗೂ ಹಿರೇಕೆರೂರು ತಾಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣದಲ್ಲಿ ಆರಂಭಿಸುವಂತೆ ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಜರುಗಿದ ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರ್ಕಾರ ನಿಗಧಿಪಡಿಸಿದ ಬೆಂಬಲ ಬೆಲೆ ಹಾಗೂ ಮಾರ್ಗಸೂಚಿ ಅನ್ವಯ ಗುಣಮಟ್ಟದ ಸೋಯಾಬೀನ್ ಖರೀದಿಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಶಾಖಾ ವ್ಯವಸ್ಥಾಪಕರಿಗೆ ಸೂಚಿಸಿದರು.

ಬೆಂಬಲ ಬೆಲೆ: ಬೆಂಬಲ ಬೆಲೆ ಯೋಜನೆಯಡಿ ಎಫ್.ಎ.ಕ್ಯೂ ಗುಣಮಟ್ಟದ ಸೋಯಾಬೀನ್ ಪ್ರತಿ ಕ್ವಿಂಟ್‌ಲಗೆ ರೂ.4,892 ರಂತೆ ಖರೀದಿಸಲು ಸರ್ಕಾರ ಆದೇಶ ಹೊರಡಿಸಿದೆ. 45 ದಿನಗಳವರೆಗೆ ರೈತರ ನೋಂದಣಿ ಆರಂಭಿಸಿ, 90 ದಿನಗಳವರೆಗೆ ಖರೀದಿಸಬೇಕು. ಖರೀದಿ ಕೇಂದ್ರದ ಮುಂದೆ ಬ್ಯಾನರ್ ಅಳವಡಿಸಬೇಕು. ಕರಪತ್ರಗಳ ಮೂಲಕ ರೈತರಿಗೆ ಖರೀದಿ ಕೇಂದ್ರಗಳ ಮಾಹಿತಿ ನೀಡಲು ಸೂಚನೆ ನೀಡಿದರು.

ಖರೀದಿ ಕೇಂದ್ರ: ಸೋಯಾಬೀನ್ ಖರೀದಿ ಕೇಂದ್ರಗಳನ್ನು ಜಿಲ್ಲೆಯ ಹಾವೇರಿ, ಶಿಗ್ಗಾಂವ, ಹಾನಗಲ್, ರಾಣೇಬೆನ್ನೂರು, ಸವಣೂರು, ಬ್ಯಾಡಗಿ ಹಾಗೂ ಹಿರೇಕೆರೂರು ತಾಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣದಲ್ಲಿ ತೆರೆಯಲು ಆಯಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾರ್ಯದರ್ಶಿಗಳಿಗೆ ಸೂಚನೆ ನೀಡಿದರು. ರೈತರಿಂದ ಖರೀದಿಸಲ್ಪಡುವ ಸೋಯಾಬೀನ್ ಎಫ್.ಎ.ಕ್ಯೂ ಗುಣಮಟ್ಟದ ಹೆಸರುಕಾಳು ಗುರುತಿಸಲು ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ ಸಿಬ್ಬಂದಿ ಖರೀದಿ ಕೇಂದ್ರಗಳಿಗೆ ನಿಯೋಜಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಸರ್ಕಾರದ ಆದೇಶದನ್ವಯ ಪ್ರತಿ ರೈತರಿಂದ ಪ್ರತಿ ಎಕರೆಗೆ ಐದು ಕ್ವಿಂಟಲ್ ನಂತೆ ಹಾಗೂ ಪ್ರತಿಯೊಬ್ಬ ರೈತರಿಂದ 20 ಕ್ವಿಂಟಲ್ ಖರೀದಿಗೆ ಅವಕಾಶವಿದೆ. ಸೋಯಾಬೀನ್ ಖರೀದಿ ಮೊತ್ತವನ್ನು ರೈತರ ಹೆಸರಿನ ಆಧಾರ್ ಸಂಖ್ಯೆ ಜೋಡಣೆಯಾದ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ಜಮೆ ಮಾಡಬೇಕು ಎಂದು ಸೂಚಿಸಿದರು.

ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಖರೀದಿಸಿದ ಸೋಯಾಬೀನ್ ಹುಟ್ಟುವಳಿ ದಾಸ್ತಾನಿಗೆ ಜಿಲ್ಲೆಯಲ್ಲಿರುವ ರಾಜ್ಯ ಉಗ್ರಾಣಗಳಲ್ಲಿ ಸ್ಥಳ ಕಾಯ್ದಿರಿಸಲು ಕರ್ನಾಟಕ ರಾಜ್ಯ ಉಗ್ರಾಣ ನಿಮಗದ ಆಯಾ ತಾಲೂಕಾ ಉಗ್ರಾಣ ವ್ಯವಸ್ಥಾಪಕರಿಗೆ ಸೂಚನೆ ನೀಡಿದರು.

ಜಿಲ್ಲೆಯಲ್ಲಿ 2024-25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 13,386 ಹೆಕ್ಟೇರ್ ಪ್ರದೇಶದಲ್ಲಿ ಸೋಯಾಬೀನ್ ಬೆಳೆಯಲಾಗಿದೆ. ಹಾವೇರಿ ತಾಲೂಕಿನಲ್ಲಿ 3,392 ಹೆಕ್ಟೇರ್, ಶಿಗ್ಗಾಂವ ತಾಲೂಕಿನಲ್ಲಿ 3,972 ಹೆಕ್ಟೇರ್, ಹಾನಗಲ್ ತಾಲೂಕಿನಲ್ಲಿ 2,110 ಹೆಕ್ಟೇರ್, ರಾಣೇಬೆನ್ನೂರ ತಾಲೂಕಿನಲ್ಲಿ 1,791 ಹೆಕ್ಟೇರ್, ಸವಣೂರ ತಾಲೂಕಿನಲ್ಲಿ 1,510 ಹೆಕ್ಟೇರ್, ಬ್ಯಾಡಗಿ ತಾಲೂಕಿನಲ್ಲಿ 430 ಹೆಕ್ಟೇರ್ ಮತ್ತು ಹಿರೇಕೆರೂರು ತಾಲೂಕಿನ 102 ಹೆಕ್ಟೇರ್ ಸೋಯಾಬೀನ್ ಬಿತ್ತನೆಯಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ ಉಪನಿರ್ದೇಶಕರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾರ್ಯದರ್ಶಿಗಳು ಉಪಸ್ಥಿತರಿದ್ದರು.

ಅಭಿವೃದ್ಧಿ ಪತ್ರಿಕೋದ್ಯಮ, ಪರಿಸರ ಪತ್ರಿಕೋದ್ಯಮ ಪ್ರಶಸ್ತಿಗೆ ಅರ್ಜಿ ಆಹ್ವಾನ

ಕಾರವಾರ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು 2017ನೇ ಸಾಲಿನಿಂದ 2023ನೇ ಸಾಲಿನವರೆಗೆ ಅಭಿವೃದ್ಧಿ ಪತ್ರಿಕೋದ್ಯಮ ಮತ್ತು ಪರಿಸರ ಪತ್ರಿಕೋದ್ಯಮ ಪ್ರಶಸ್ತಿಗಳಿಗೆ ಅರ್ಹ ಪತ್ರಕರ್ತರು/ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರಿಂದ ನಾಮನಿರ್ದೇಶನಗಳನ್ನು ಆಹ್ವಾನಿಸಿದೆ.

ಅಭಿವೃದ್ಧಿ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಹಾಗೂ ಪರಿಸರ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಅಪೂರ್ವ ಸಾಧನೆ ಮಾಡಿರುವ ಪತ್ರಕರ್ತರನ್ನು ಪ್ರೋತ್ಸಾಹಿಸುವ ಸಲುವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೂಲಕ ಅಭಿವೃದ್ಧಿ ಪತ್ರಿಕೋದ್ಯಮ ಮತ್ತು ಪರಿಸರ ಪತ್ರಿಕೋದ್ಯಮ ಪ್ರಶಸ್ತಿಗಳನ್ನು ನೀಡಲು 2001ರಲ್ಲಿ ರಾಜ್ಯ ಸರ್ಕಾರವು ಆದೇಶ ಹೊರಡಿಸಿತು.

ಅದರಂತೆ 2001ರಿಂದ 2016ರ ವರೆಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಅರ್ಹ ಪತ್ರಕರ್ತರನ್ನು ಗುರುತಿಸಿ ಪ್ರಶಸ್ತಿಗಳನ್ನು ನೀಡುತ್ತಾ ಬಂದಿದೆ.

2017ನೇ ಸಾಲಿನಿಂದ 2023ನೇ ಸಾಲಿನವರೆಗೆ ಅರ್ಹ ಪತ್ರಕರ್ತರಿಗೆ ಈ ಪ್ರಶಸ್ತಿಗಳನ್ನು ನೀಡುವ ಸಲುವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ. ಪರಿಸರ ಹಾಗೂ ಅಭಿವೃದ್ಧಿ ಪತ್ರಿಕೋದ್ಯಮ ಕ್ಷೇತ್ರಕ್ಕೆ ಅನುಪಮ ಕೊಡುಗೆ ನೀಡಿರುವ ಹಾಗೂ ಪತ್ರಿಕೋದ್ಯಮದಲ್ಲಿ ಕನಿಷ್ಠ 10 ವರ್ಷಗಳ ಅನುಭವ ಹೊಂದಿರುವ ಅರ್ಹ ಪತ್ರಕರ್ತರನ್ನು ಸಾರ್ವಜನಿಕರು, ಸಂಘ ಸಂಸ್ಥೆಗಳು ನಾಮನಿರ್ದೇಶನ ಮಾಡಬಹುದು ಅಥವಾ ವೈಯುಕ್ತಿಕವಾಗಿ ಸ್ವಯಂ ಅರ್ಜಿ ಸಲ್ಲಿಸಬಹುದು.

2017 ರಿಂದ 2023 ರ ಅವಧಿಯ ಎರಡೂ ವಿಭಾಗಗಳ ಪ್ರಶಸ್ತಿಗಳಿಗೆ ತಲಾ 7 ಅರ್ಹ ಪತ್ರಕರ್ತರನ್ನು ಆಯ್ಕೆ ಮಾಡಲಾಗುವುದು.

ಈ ಪ್ರಶಸ್ತಿಯ ಮೊತ್ತ ಒಂದು ಲಕ್ಷ ರೂ. ನಗದು ಪುರಸ್ಕಾರ ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆಯನ್ನು ಹೊಂದಿರುತ್ತದೆ. ಅರ್ಜಿಗಳು / ನಾಮನಿರ್ದೇಶನಗಳನ್ನು ಮಾನ್ಯ ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ನಂ. 17, ವಾರ್ತಾಸೌಧ, ಭಗವಾನ್ ಮಹಾವೀರ ರಸ್ತೆ, (ಇನ್‌ಫೆಂಟ್ರಿ ರಸ್ತೆ), ಬೆಂಗಳೂರು 560001 ಇಲ್ಲಿಗೆ ಅಥವಾ ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಅಧಿಕಾರಿಗಳಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಅಥವಾ ಇ-ಮೇಲ್ ವಿಳಾಸ tsraward@gmail.com ಗೆ ದಿನಾಂಕ: 30-09-2024ರ ಸಂಜೆ 5 ಗಂಟೆಯ ಒಳಗಾಗಿ ಸಲ್ಲಿಸಬಹುದು ಎಂದು ಇಲಾಖೆಯ ಆಯುಕ್ತರಾದ ಹೇಮಂತ್ ಎಂ. ನಿಂಬಾಳ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಜಾಪ್ರಭುತ್ವ ದಿನಾಚರಣೆಗೆ ಸಿದ್ಧತೆ ಕೈಗೊಳ್ಳಿ

ತಹಸೀಲ್ದಾರ್‌ಗಳು, ಪಿಡಿಒಗಳಿಗೆ ಸೇರಿ ಹಲವು ಅಧಿಕಾರಿಗಳಿಗೆ ಡಿಸಿ ಕೆ. ಲಕ್ಷ್ಮೀಪ್ರಿಯ ಸೂಚನೆ

ಕಾರವಾರ: ಸೆಪ್ಟಂಬರ್ 15 ರಂದು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯನ್ನು ಜಿಲ್ಲೆಯಲ್ಲಿ ಅತ್ಯಂತ ವ್ಯವಸ್ಥಿತವಾಗಿ ಮತ್ತು ಅರ್ಥಪೂರ್ಣವಾಗಿ ಆಚರಿಸಲು ಅಗತ್ಯವಿರುವ ಎಲ್ಲಾ ಸಿದ್ಧತೆಗಳನ್ನು ಕೈಗೊಳ್ಳುವಂತೆ ಎಲ್ಲಾ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯ ಸೂಚನೆ ನೀಡಿದರು.

ಅವರು ಸೋಮವಾರ, ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ಆಚರಣೆ ಪ್ರಯುಕ್ತ ಈಗಾಗಲೇ ಸೂಚಿಸಿರುವಂತೆ ಜಿಲ್ಲೆಯಲ್ಲಿ ಮಾನವ ಸರಪಳಿ ಕಾರ್ಯಕ್ರಮವನ್ನು ರಚಿಸಲು ಅಂತಿಮ ಸಿದ್ಧತೆಗಳನ್ನು ಕೈಗೊಳ್ಳುವಂತೆ ತಿಳಿಸಿದ ಅವರು, ಜಿಲ್ಲೆಯಲ್ಲಿನ ಅರಣ್ಯ ಪ್ರದೇಶ ಮತ್ತು ಅಪಾಯಕಾರಿ ಗುಡ್ಡಕುಸಿತ ಪ್ರದೇಶಗಳ ವ್ಯಾಪ್ತಿಯನ್ನು ಹೊರತುಪಡಿಸಿ ಇತರೆ ಮಾರ್ಗದಲ್ಲಿ ಮಾನವ ಸರಪಳಿ ರಚನೆ ಕುರಿತಂತೆ ಸಂಬಂಧಪಟ್ಟ ವ್ಯಾಪ್ತಿಯ ತಹಸೀಲ್ದಾರ್‌ಗಳು, ತಾ.ಪಂ. ಕಾರ್ಯನಿರ್ವಹಣಾಧಿಕಾರಿಗಳು, ಪಿಡಿಓ ಗಳು ಹಾಗೂ ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು ಅಗತ್ಯವಿರುವ

ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ತಿಳಿಸಿದರು.

ಪ್ರಜಾಪ್ರಭುತ್ವದ ಮೂಲ ಉದ್ದೇಶದಂತೆ ಎಲ್ಲರನ್ನೂ ಒಳಗೊಳ್ಳುವ ರೀತಿಯಲ್ಲಿ, ಜಿಲ್ಲೆಯಲ್ಲಿನ ಎಲ್ಲಾ ಜನಪ್ರತಿನಿಧಿಗಳು, ಸಾರ್ವಜನಿಕರು, ಸಂಘ ಸಂಸ್ಥೆಗಳು, ಸ್ವ ಸಹಾಯ ಸಂಘಗಳು, ಜಿಲ್ಲೆಯ ಬುಡಕಟ್ಟು ಜನಾಂಗದವರು, ಶಾಲಾ ಕಾಲೇಜು ವಿದ್ಯಾರ್ಥಿಗಳು, ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಿಬ್ಬಂದಿ ಸೇರಿದಂತೆ ಪ್ರತಿಯೊಬ್ಬರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ಜಿಲ್ಲೆಯಲ್ಲಿ ಅತ್ಯಂತ ಯಶಸ್ವಿಯಾಗಿ ಕಾರ್ಯಕ್ರಮ ಆಚರಣೆ ಆಗುವಂತೆ ನೋಡಿಕೊಳ್ಳಬೇಕು ಎಂದರು.

ರಾಜ್ಯಾದ್ಯಂತ ಏಕಕಾಲದಲ್ಲಿ ಬೆಳಗ್ಗೆ 9 ಗಂಟೆಯಿಂದ ಆರಂಭಗೊಳ್ಳುವ ಮಾನವ ಸರಪಳಿ ರಚನೆಯ ಕಾರ್ಯಕ್ರಮದ ಜೊತೆಗೆ ಇದೇ ಸಂದರ್ಭದಲ್ಲಿ ಜಿಲ್ಲೆಯಾದ್ಯಂತ ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರಿಂದ ಗಿಡ ನೆಡುವ ಕಾರ್ಯಕ್ರಮವನ್ನು ವ್ಯವಸ್ಥಿತ ರೀತಿಯಲ್ಲಿ ಆಯೋಜಿಸುವಂತೆ ತಿಳಿಸಿದರು.

ಜಿಲ್ಲೆಯ ಎಲ್ಲಾ ನಗರಸ್ಥಳೀಯ ಸಂಸ್ಥೆಗಳು ಈ ಕಾರ್ಯಕ್ರಮಕ್ಕೆ ಅಗತ್ಯ ಸಹಕಾರ ನೀಡುವಂತೆ ತಿಳಿಸಿದ ಜಿಲ್ಲಾಧಿಕಾರಿಗಳು, ಮಾನವ ಸರಪಳಿ ರಚನೆಯಾಗುವ ಗ್ರಾಮ ಪಂಚಾಯತ್ ಗಳ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸುವ ಕುರಿತಂತೆ, ಈ ಕಾರ್ಯಕ್ರಮದ ಮಹತ್ವದ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವಂತೆ ತಿಳಿಸಿದರು. ಸಭೆಯಲ್ಲಿ ಜಿ.ಪಂ. ಮುಖ್ಯ ಕಾರ್ಯನಿರ್ವ ಹಣಾಧಿಕಾರಿ ಈಶ್ವರ ಕಾಂದೂ, ಅಪರ ಜಿಲ್ಲಾಧಿಕಾರಿ ಪ್ರಕಾಶ್ ರಜಪೂತ್, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಉಮೇಶ್ ಹಾಜರಿದ್ದರು.

ಅಡುಗೆಯವರ ಹುದ್ದೆಗೆ ಅರ್ಜಿ ಆಹ್ವಾನ

ಕಾರವಾರ: ಮುಂಡಗೋಡ ಪಟ್ಟಣದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬಸವನಗರ ಒಬ್ಬ ಮುಖ್ಯ ಅಡುಗೆಯವರು (ಎಸ್ ಸಿ/ ಎಸ್ ಟಿ ಮೀಸಲಾತಿ) ಹಾಗೂ ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ, ದೇಶಪಾಂಡೆನಗರ, ಒಬ್ಬ ಮುಖ್ಯಅಡುಗೆಯವರು, (ಎಸ್‌ಸಿ/ಎಸ್‌ಟಿ ಮೀಸಲಾತಿ) ಅಕ್ಷರದಾಸೋಹದ ಯೋಜನೆ ಅಡಿಯಲ್ಲಿ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವವರು 30 ರಿಂದ 40 ವರ್ಷ ವಯೋಮಾನದ ಆಸಕ್ತ ಮಹಿಳೆಯಾಗಿದ್ದು, ಕಡ್ಡಾಯವಾಗಿ ಕನಿಷ್ಠ ಏಳನೇ ತರಗತಿ ಉತ್ತೀರ್ಣರಾಗಿರಬೇಕು. ಮತದಾರರ ಗುರುತಿನ ಚೀಟಿ, ಆಧಾರಕಾರ್ಡ, ಪಡಿತರಚೀಟಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಮತ್ತು ವಿದ್ಯಾರ್ಹತೆಯ ಪ್ರಮಾಣ ಪತ್ರ ಲಗತ್ತಿಸಿ ಕೈಬರಹದ ಅರ್ಜಿಯೊಂದಿಗೆ ಸೆ.23ರೊಳಗಾಗಿ ಕಚೇರಿಗೆ ಸಲ್ಲಿಸುವಂತೆ ಜಿಲ್ಲಾ ಮುಂಡಗೋಡ ಪಂಚಾಯತ್ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಟ್ಟ ಅಭ್ಯಾಸಗಳಿಂದ ದೂರವಿರಿ: ಶ್ರೀ

ಶಿರಸಿ: ಕೆಟ್ಟ ಅಭ್ಯಾಸಗಳು ಮನುಷ್ಯನಿಗೆ ಬೇಗ ಹತ್ತಿರವಾಗುತ್ತವೆ, ಹಾಗೆ ಆ ಕೆಟ್ಟ ಅಭ್ಯಾಸಗಳಿಂದ ಅಷ್ಟೇ ಬೇಗ ಹಾಳಾಗುತ್ತಾನೆ. ಈ ಸತ್ಯ ಗೊತ್ತಿದ್ದರೂ ಮನುಷ್ಯ ಕೆಟ್ಟ ಅಭ್ಯಾಸಗಳಿಗೆ ಬಲಿಯಾಗುತ್ತಿರುವುದು ಬೇಸರದ ಸಂಗತಿ. ಕೆಟ್ಟ ಅಭ್ಯಾಸಗಳು ಜೀವನದಲ್ಲಿ ದುರಂತ ತಂದೊಡ್ಡುತ್ತವೆ ಎಂದು ಶ್ರೀಸಚ್ಚಿದಾನಂದ ಜ್ಞಾನೇಶ್ವರ ಭಾರತೀ ಮಹಾಸ್ವಾಮಿಗಳು ನುಡಿದರು. ಚಾತುರ್ಮಾಸ್ಯದಲ್ಲಿ ಅವರು ಶಿರಸಿಯಲ್ಲಿ ಆಶೀರ್ವಚನ ನೀಡಿದರು. ಜತೆಗೆ ಮನೆತನದ ಗೌರವ ಕಡಮೆ ಮಾಡುತ್ತದೆ. ಜೊತೆಗೆ ಜೂಜು, ಪರಸ್ತ್ರೀ ಸಂಘ ಇನ್ನು ಅನೇಕ ಕೆಟ್ಟ ಕೆಲಸದಿಂದ ಮನುಷ್ಯನ ಬದುಕು ಹೈರಾಣಾಗುತ್ತದೆ ಎಂದು ಶ್ರೀಗಳು ನುಡಿದರು.

ನೂತನ ಸಿಪಿಐ ಮಠಪತಿಗೆ ಸ್ವಾಗತ

ಅಂಕೋಲಾ: ತಾಲೂಕಿನ ನೂತನ ಸಿಪಿಐ ಆಗಿ ಅಧಿಕಾರ ವಹಿಸಿಕೊಂಡ ಮಠಪತಿ ಅವರಿಗೆ ನಾಮಧಾರಿ ಗಣೇಶೋತ್ಸವ ಸಮಿತಿಯವರು ತೆರಳಿ ಶುಭ ಕೋರಿದರು. ಈ ಸಂದರ್ಭದಲ್ಲಿ ನಾಮಧಾರಿ ಗಣೇಶೋತ್ಸವ ಸಮಿತಿ ಅಧ್ಯಕ್ಷ ರಾಜೇಶ ಮಿತ್ರಾ ನಾಯ್ಕ, ವ್ಯವಸ್ಥಾಪಕ ನಾಗೇಶ ಎಸ್. ನಾಯ್ಕ, ಕಾರ್ಯದರ್ಶಿ ಅಶೋಕ ನಾಯ್ಕ ಇದ್ದರು.

CHANGE OF NAME

I, **RESHMA PENDAR** (Old Name) have changed my name and shall hereafter be known as **RESHMA M YAKKUNDI** (New Name) R/o Saidapur, Dandin Oni, Dharwad vide affidavit sworn before notary Esther Rani at Dharwad on 09/09/2024.

20 ಪಶು ಚಿಕಿತ್ಸಾಲಯ ಸ್ಥಾಪನೆ

ಹಾನಗಲ್: ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ 100 ಪಶು ಚಿಕಿತ್ಸಾಲಯ ಆರಂಭಿಸುವುದಾಗಿ ಬಜೆಟ್‌ನಲ್ಲಿ ಘೋಷಿಸಲಾಗಿದ್ದು, ಮೊದಲ ಹಂತದಲ್ಲಿ ಹಾನಗಲ್ ತಾಲೂಕಿನ ಸಮ್ಮಸಗಿ ಸೇರಿದಂತೆ 20 ಕಡೆಗಳಲ್ಲಿ ಪಶು ಚಿಕಿತ್ಸಾಲಯ ಆರಂಭಿಸಲಾಗುತ್ತಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಸಮ್ಮಸಗಿ ಗ್ರಾಮದಲ್ಲಿ ನೂತನ ಪಶು ಚಿಕಿತ್ಸಾಲಯ ಉದ್ಘಾಟಿಸಿ ಅವರು ಮಾತನಾಡಿದರು. ತಾಲೂಕಿನಲ್ಲಿ ಹೈನುಗಾರಿಕೆ ಅಭಿವೃದ್ಧಿ ಪಥದಲ್ಲಿದ್ದು, ನಿತ್ಯವೂ 21 ಸಾವಿರ ಲೀ. ಹಾಲು ಉತ್ಪಾದಿಸಲಾಗುತ್ತಿದೆ. ಹೈನುಗಾರಿಕೆಯಲ್ಲಿ ತೊಡಗುವ ಮಹಿಳೆಯರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸರಕಾರ ಹಸು ಘಟಕ ಸ್ಥಾಪಿಸಲು ಸಹಾಯಧನ ವಿತರಿಸುತ್ತಿದೆ. ಕ್ಷೀರಧಾರೆ ಯೋಜನೆಯಡಿ ಪ್ರತಿ ಲೀ. ಹಾಲಿಗೆ 5 ರು. ಪ್ರೋತ್ಸಾಹಧನ ನೀಡಲಾಗುತ್ತಿದೆ. ತಾಲೂಕಿನಲ್ಲಿ ಶೇ. 50 ರಷ್ಟು ಸಹಾಯಧನದಲ್ಲಿ 50 ಮೇವು ಕತ್ತರಿಸುವ ಯಂತ್ರಗಳನ್ನು ವಿತರಿಸಲಾಗಿದೆ. 6,400 ಮೇವಿನ ಕಿರು ಪೊಟ್ಟಣಗಳನ್ನು ವಿತರಿಸಲಾಗಿದೆ ಎಂದು ತಿಳಿಸಿದ ಅವರು ಪಶುಪಾಲಕರಿಗೆ ಆರ್ಥಿಕ ನಷ್ಟ ತಡೆಯಲು ರಾಜ್ಯ ಸರಕಾರ ಅನುಗ್ರಹ ಯೋಜನೆ ಜಾರಿಗೊಳಿಸಿದ್ದು, ಪ್ರಸಕ್ತ ಸಾಲಿನಲ್ಲಿ ಮರಣ ಹೊಂದಿದ ಜಾನುವಾರುಗಳ ಮಾಲಿಕರಿಗೆ 10 ಸಾವಿರ ಪರಿಹಾರದಂತೆ ಒಟ್ಟು 25 ಫಲಾನುಭವಿಗಳಿಗೆ ಒಟ್ಟು 2.50 ಲಕ್ಷ ವಿತರಿಸಲಾಗಿದೆ. ಸಿಬ್ಬಂದಿ ಕೊರತೆಯ ಮಧ್ಯೆಯೂ ಉತ್ತಮ ಪಶುಚಿಕಿತ್ಸೆಗೆ ಗಮನ ನೀಡಲಾಗಿದ್ದು, ತಾಲೂಕಿಗೆ ಹೊಸದಾಗಿ ಇಬ್ಬರು ಪಶು ವೈದ್ಯರನ್ನು ಸರಕಾರ ಒದಗಿಸಿದೆ ಎಂದರು.

ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಉಪ ನಿರ್ದೇಶಕ ಡಾ.ಎಸ್.ವಿ.ಸಂತಿ ಮಾತನಾಡಿ, ಜಾನುವಾರುಗಳನ್ನು ಕಡ್ಡಾಯವಾಗಿ ವಿಮಾ ವ್ಯಾಪ್ತಿಗೆ ಒಳಪಡಿಸಿದರೆ ಆರ್ಥಿಕ ನಷ್ಟ ತಪ್ಪಿಸಬಹುದಾಗಿದೆ. ಈ ಕುರಿತು ರೈತ ಸಮೂಹದಲ್ಲಿ ಜಾಗೃತಿ ಮೂಡಬೇಕಿದೆ. ಜಿಲ್ಲೆಯಲ್ಲಿ ಜಾನುವಾರುಗಳ ಲಸಿಕಾ ಕಾರ್ಯಕ್ರಮ ಯಶಸ್ವಿಯಾಗಿ ನಡೆಯುತ್ತಿದೆ ಎಂದರು. ಗ್ರಾಪಂ ಅಧ್ಯಕ್ಷೆ ಹೇಮಾವತಿ ದೊಡ್ಡಮನಿ, ಉಪಾಧ್ಯಕ್ಷ ಮಾರುತಿ ಜಿಗಳಿಕೊಪ್ಪ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷ ವಿಜಯಕುಮಾರ ದೊಡ್ಡಮನಿ, ತಾಪಂ ಕೆಡಿಪಿ ಸದಸ್ಯ ರಾಜಕುಮಾರ ಜೋಗಪ್ಪನವರ, ಕೆಪಿಸಿಸಿ ಸದಸ್ಯ ಖ್ವಾಜಾಮೊಹಿದ್ದೀನ್ ಜಮಾದಾರ, ತಾಪಂ ಮಾಜಿ ಅಧ್ಯಕ್ಷ ಸಿದ್ದನಗೌಡ ಪಾಟೀಲ, ಮುಖಂಡರಾದ ಮಾಲತೇಶ ಈಳಿಗೇರ, ಈರಣ್ಣ ಬೈಲವಾಳ, ನವೀನ್ ದೇಶಪಾಂಡೆ, ಶಿವಾನಂದ ವಡ್ಡರ ಉಪಸ್ಥಿತರಿದ್ದರು.

ಕೋಳಿ ಫಾರಂ ಮೇಲೆ ಚಿರತೆ ದಾಳಿ; 300 ಕೋಳಿ ಸಾವು

ಬ್ಯಾಡಗಿ: ನಾಟಿ ಕೋಳಿ ಸಾಕಾಣಿಕೆ ಫಾರಂ ಮೇಲೆ ಚಿರತೆ ದಾಳಿ ನಡೆಸಿದ ಪರಿಣಾಮ 300 ಕ್ಕೂ ಹೆಚ್ಚು ಕೋಳಿಗಳು ಸಾವನ್ನಪ್ಪಿದ ಘಟನೆ ಶುಕ್ರವಾರ ತಡರಾತ್ರಿ ತಾಲೂಕಿನ ಬುಡಪಹಳ್ಳಿ ಗ್ರಾಮದ ಹೊಲವೊಂದರಲ್ಲಿ ನಡೆದಿದ್ದು ಗ್ರಾಮದಲ್ಲಿ ಭಯದ ವಾತಾವರಣ ಮೂಡಿದೆ.

ಬುಡಪನಹಳ್ಳಿ ಗ್ರಾಮದ ನಿವಾಸಿ ಕರಿಯಪ್ಪ ನಿಂಗಪ್ಪ ಮೆಡ್ಲೇರಿ ಎಂಬ ರೈತನು ತನ್ನ ಹೊಲದಲ್ಲಿ ಮಾಡಿಕೊಂಡಿದ್ದ ಕೋಳಿ ಫಾರಂನಲ್ಲಿ ಘಟನೆ ನಡೆದಿದ್ದು ಆತಂಕ ತಂದೊಡ್ಡಿದೆ.

ತಾಲೂಕಿನಲ್ಲಿ ಚಿರತೆ ಹಾವಳಿ ಕಳೆದ ಹಲವು ವರ್ಷದಿಂದ ನಿರಂತರವಾಗಿ ಸಾಗುತ್ತಲೇ ಬಂದಿದೆ, ತಾಲೂಕಿನ ತಡಸ, ಮಾಸಣಗಿ, ಕದರಮಂಡಲಗಿ, ಸೇರಿದಂತೆ ಹಲವು ಗ್ರಾಮಗಳಲ್ಲಿ ಶ್ವಾನ, ಎತ್ತು ಹಾಗೂ ಜಿಂಕೆಗಳನ್ನ ಬಲಿ ಪಡೆದಿರುವ ಘಟನೆಗಳು ಜನ ಮಾನಸದಿಂದ ಮಾಸುವ ಮುನ್ನವೇ ಚಿರತೆ ಮತ್ತೆ ದಾಳಿ ನಡೆಸಿದ್ದು ಸಾರ್ವಜನಿಕರ ನಿದ್ದೆಗೇಡಿಸಿದೆ.

ಲಕ್ಷಾಂತರ ರೂ ನಷ್ಟ: ಬುಡಪನಹಳ್ಳಿ ಗ್ರಾಮದ ನಿವಾಸಿ ಕರಿಯಪ್ಪ ನಿಂಗಪ್ಪ ಮೆಡ್ಲೇರಿ ಕೃಷಿಯ ಜೊತೆಯಲ್ಲಿ ನಾಟಿ ಕೋಳಿ ಸಾಕಾಣ ಕೆ ಸಾಹಸಕ್ಕೆ ಕೈ ಹಾಕಿದ್ದ, ಸುಮಾರು 750ಕ್ಕೂ ಹೆಚ್ಚು ಕೋಳಿಗಳನ್ನ ಸಾಕಿ ಜೋಪಾನ ಮಾಡಿದ್ದ ಇನ್ನೇನು ಮಾರಾಟ ಮಾಡಿ ಲಾಭದ ನಿರೀಕ್ಷೆಯಲ್ಲಿದ್ದ ರೈತನಿಗೆ ಶುಕ್ರವಾರ ರಾತ್ರಿ ಫಾರಂ ಮೇಲೆ ಚಿರತೆ ನಡೆಸಿದ ಧಾಳಿ ಲಕ್ಷಾಂತರ ರೂಪಾಯಿ ನಷ್ಟವನ್ನ ತಂದೊಡ್ಡಿದೆ. ಘಟನೆ ನಡೆದ

ನಾಟಿ ಕೋಳಿ ಸಾಕಾಣ ಕೆ ಫಾರಂ ಮೇಲೆ ಚಿರತೆ ದಾಳಿ ನಡೆಸಿ 300 ಕ್ಕೂ ಹೆಚ್ಚು ಕೋಳಿಗಳು ಸಾವನ್ನಪ್ಪಿದ ಘಟನೆ ಶುಕ್ರವಾರ ತಡರಾತ್ರಿ ತಾಲೂಕಿನ ಬುಡಪಹಳ್ಳಿ ಗ್ರಾಮದ ಹೊಲವೊಂದರಲ್ಲಿ ನಡೆದಿರುವುದು.

ಸ್ಥಳಕ್ಕ ಅರಣ್ಯ ಇಲಾಖೆ ಸಿಬ್ಬಂದಿ ಶನಿವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಭಯದಲ್ಲಿ ಜನರು: ಕಳೆದ ಹಲವು ದಿನಗಳಿಂದ ಬ್ಯಾಡಗಿ ಛತ್ರ ಮಾರ್ಗ ಮಧ್ಯದಲ್ಲಿ ಹಾಗೂ ಬುಡಪನಹಳ್ಳಿ ಗ್ರಾಮದ ಅರಣ್ಯ ಪ್ರದೇಶ ದಲ್ಲಿ ಚಿರತೆ ಸಾರ್ವಜನಿಕರ ಕಣ್ಣಿಗೆ ಕಾಣ ಸಿಕೊಂಡಿದೆ.

ಬ್ಯಾಡಗಿ, ಛತ್ರ ರಸ್ತೆಯಲ್ಲಿಯೇ ಕಾಣ ಸಿಕೊಂಡ ನಂತರ ಜನರು ಭಯ ಭೀತ ರಾಗಿ ವಾಯುವಿ ಹಾರಕ್ಕೆ ಹೋಗುವುದನ್ನ ನಿಲ್ಲಿಸಿದ ಘಟನೆ ಸಹ ಕಳೆದ 15 ದಿನಗಳ ಹಿಂದೆ ನಡೆದಿತ್ತು ಅಲ್ಲದೇ ಅಗಸಲಹಳ್ಳಿ ಗ್ರಾಮ ದಲ್ಲಿಯೂ ಚಿರತೆ ಕಾಣ ಸಿಕೊಂಡಿದ್ದರಿಂದ ಅರಣ್ಯ ಇಲಾಖೆ ಸಿಬ್ಬಂದಿ ಬೋನ್ ಸಹ ಇಟ್ಟಿದ್ದರು. ಆದರೆ ಚಿರತೆ ಮಾತ್ರ ಬೋನಿಗೆ ಬೀಳದೆ ಪರಾರಿಯಾಗಿತ್ತು.

ನಾಟಿ ಕೋಳಿ ಸಾಕಾಣ ಗೆ ಲಾಭದಾಯಕ ಎಂದು ಬ್ಯಾಂಕ್‌ನಲ್ಲಿ 5 ಲಕ್ಷ ಸಾಲ ಮಾಡಿ ಶೆಡ್ ನಿರ್ಮಾಣ ಮಾಡಿ ಕೋಳಿ ಸಾಕಿದ್ದೆ, 750 ಕೋಳಿಗಳ ಪೈಕಿ 300 ಕೋಳಿಗಳು ಚಿರತೆ ಧಾಳಿಗೆ ಅಸುನೀಗಿವೆ. ಎರಡು ಲಕ್ಷಕ್ಕೂ ಅಧಿಕ ನಷ್ಟವಾಗಿದೆ ಸರಕಾರ ನಮ್ಮತ್ತ ತಿರುಗಿ ನೋಡಿ ಸೂಕ್ತ ಪರಿಹಾರ ನೀಡಲಿ, ಅರಣ್ಯ ಇಲಾಖೆ ಚಿರತೆ ಸೆರೆ ಹಿಡಿದು ಬೇರೆಡೆಗೆ ಸ್ಥಳಾಂತರ ಮಾಡಲಿ ಎಂದು ಸಂತ್ರಸ್ಥ ರೈತ ಕರಿಯಪ್ಪ ನಿಂಗಪ್ಪ ಮೆಡ್ಲೇರಿ ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆ ಸೆ.18ಕ್ಕೆ

ಲಿಂಗಸೂಗೂರು: ಪುರಸಭೆಯ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಯ ಚುನಾವಣೆ ಸೆಪ್ಟೆಂಬರ್ 18ಕ್ಕೆ ನಿಗದಿಪಡಿಸಲಾಗಿದೆ. ಅಧ್ಯಕ್ಷ ಸ್ಥಾನ ಸಾಮಾನ್ಯ, ಉಪಾಧ್ಯಕ್ಷ ಸ್ಥಾನ ಬಿ ಸಿ ಎ ವರ್ಗಕ್ಕೆ ನಿಗದಿಯಾಗಿದ್ದು, ಅಧ್ಯಕ್ಷ, ಉಪಾಧ್ಯಕ್ಷರ ಸ್ಥಾನಗಳಿಗೆ ನಾಮ ನಿರ್ದೇಶನಗಳನ್ನು ಸಲ್ಲಿಸುವ 2024ರ ಸೆ.18ರಂದು ಬೆಳಗ್ಗೆ 9 ಗಂಟೆಯಿಂದ 11 ಗಂಟೆವರೆಗೆ, ನಾಮ ನಿರ್ದೇಶನಗಳನ್ನು ಪರಿಶೀಲನೆಗೆ ತೆಗೆದುಕೊಳ್ಳುವ ಸಮಯ ಮಧ್ಯಾಹ್ನ 11.15 ಗಂಟೆಯಿಂದ 11.30 ಗಂಟೆಯವರೆಗೆ, ನಾಮ ಪತ್ರ ಪರಿಶೀಲನೆಯ ನಂತರ ಮಧ್ಯಾಹ್ನ 11-30 ಗಂಟೆಯಿಂದ 12 ಗಂಟೆಯವರೆಗೆ ನಾಮ ನಿರ್ದೇಶನಗಳನ್ನು ಹಿಂತೆಗೆದುಕೊಳ್ಳುವ ಸಮಯ ಅವಶ್ಯವಿದ್ದಲ್ಲಿ ಚುನಾವಣೆ ನಡೆಸುವ ಸಮಯ ಮಧ್ಯಾಹ್ನ 12.30 ಗಂಟೆಗೆವರೆಗೆ ಇರುತ್ತದೆ ಎಂದು ಚುನಾವಣಾಧಿಕಾರಿಗಳು ತಹಸೀಲ್ದಾರರು ತಿಳಿಸಿದ್ದಾರೆ.

ಬೆಳೆ ಹಾನಿ ಪರಿಹಾರ: ಆಕ್ಷೇಪಣೆಗೆ ಅರ್ಜಿ

ರಾಯಚೂರು: ಜಿಲ್ಲಾಡಳಿತ ವತಿಯಿಂದ 2024-25ನೇ ಸಾಲಿನ ನೈಸರ್ಗಿಕ ವಿಕೋಪಗಳಾದ ಪ್ರವಾಹ ಅಥವಾ ಅತಿವೃಷ್ಟಿಯಿಂದ ಜಿಲ್ಲೆಯ ಲಿಂಗಸೂಗೂರು ತಾಲೂಕಿನಲ್ಲಿ ಜುಲೈ-2024 ಹಾಗೂ ಆಗಸ್ಟ್-2024 ತಿಂಗಳುಗಳಲ್ಲಿ ಉಂಟಾದ ಬೆಳೆ ಹಾನಿ ಪರಿಹಾರವನ್ನು ಪಾವತಿಸುವ ಕುರಿತು ಜಂಟಿ ಸಮೀಕ್ಷೆಯ ಪರಿಶೀಲನಾ ವರದಿಯಂತೆ ಬೆಳೆ ಹಾನಿಯಾದ ರೈತರ ಪಟ್ಟಿಯನ್ನು ಜಿಲ್ಲಾಧಿಕಾರಿಗಳ, ಉಪ ವಿಭಾಗಾಧಿಕಾರಿಗಳ, ತಹಶೀಲ್ದಾರರ, ಗ್ರಾಮ ಪಂಚಾಯತ ಹಾಗೂ ರೈತ ಸಂಪರ್ಕ ಕೇಂದ್ರಗಳಲ್ಲಿ ಹಾಗೂ ಜಿಲ್ಲಾಧಿಕಾರಿಗಳ ಅಧಿಕೃತ ಜಾಲತಾಣದಲ್ಲಿ (https://raichur.nic.in)ನಲ್ಲಿ ಸೆ.6ರಂದು ಪ್ರಕಟಿಸಲಾಗಿದೆ. ಈ ಕುರಿತು ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಲಿಖಿತ ಆಕ್ಷೇಪಣೆಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ತಿಳಿಸಿದ್ದಾರೆ. ಜಿಲ್ಲೆಯ ಲಿಂಗಸೂಗೂರು ತಾಲೂಕಿನಲ್ಲಿ ಒಟ್ಟು 41.16 ಹೆಕ್ಟರ್ ಹಾನಿಯಾದ ಪ್ರದೇಶ ಎಂದು ಗುರುತಿಸಲಾಗಿದ್ದು, ಸಂಬಂಧಿಸಿದ ತಹಸೀಲ್ದಾರ್, ಕೃಷಿ, ಇಲಾಖೆಗಳ ತಾಲ್ಲೂಕು ಕಚೇರಿಗಳಲ್ಲಿ ಸಂಬಂದಿಸಿದ ರೈತ ಸಂಪರ್ಕ ಕೇಂದ್ರಗಳಲ್ಲಿ 7ದಿನಗಳ ಒಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಸಲ್ಲಿಕೆಯಾಗಿಲ್ಲ. ಎಂದಾದಲ್ಲಿ ಪಟ್ಟಿಯನ್ನು ಅಂತಿಮಗೊಳಿಸಿ ನಿಯಮಾನುಸಾರ ಪರಿಹಾರ ಪಾವತಿಸಲು ಕ್ರಮವಹಿಸಲಾಗುವುದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೆಜೆಟಿಯರ್
ಪ್ರತಿ ಮಂಗಳವಾರ
ಇದು ಅನುಕ್ಷಣದ ಆ್ಯಪ್

ವಾಹನದಲ್ಲಿ ಮಿತಿ ಮೀರಿದ ಮಕ್ಕಳು | ಪ್ರಯಾಣ ನಿಯಮಗಳ ಉಲ್ಲಂಘನೆ

ಅವಘಡಕ್ಕೆ ಖಾಸಗಿ ಶಾಲಾ ವಾಹನ ಕಾರಣ ಇರಬಹುದಾ?

ರಾಯಚೂರು: ಜಿಲ್ಲೆಯ ಮಾನ್ವಿ ತಾಲೂಕಿನ ಕಪಗಲ್ ಗ್ರಾಮದ ರಸ್ತೆಯಲ್ಲಿ ಜರುಗಿದ ಸರಕಾರಿ ಬಸ್ಸು ಹಾಗೂ ಲೋಯೋಲಾ ಶಾಲಾ ವಾಹನಗಳ ಅವಘಡದಲ್ಲಿ ಬಸ್ಸು ವಾಹನ ಚಾಲಕ ನಿರ್ಲಕ್ಷ್ಯ ಪರಿಗಣಿಸಲಾಗಿದೆ. ಆದರೆ ಖಾಸಗಿ ಶಾಲಾ ವಾಹನದಲ್ಲಿ ಮಿತಿಮೀರಿದ ಮಕ್ಕಳನ್ನು ತುಂಬಿಕೊಂಡಿದ್ದು ಈ ಅವಘಡಕ್ಕೆ ಕಾರಣವಾಗಿದೆ ಇದರಲ್ಲಿ ಕನಿಷ್ಠ 50 ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಇದ್ದರು ಎಂದು ಅನೇಕ ಪ್ರತ್ಯಕ್ಷ ಸಾಕ್ಷಿದಾರರು ಅನೇಕ ವಿಡಿಯೋದಲ್ಲಿ ಹೇಳಿರುವುದನ್ನು ತನಿಖಾ ಅಧಿಕಾರಿಗಳು ನಿರ್ಲಕ್ಷ್ಯ ಮಾಡಿದ್ದಾರೆ.

ಪ್ರತ್ಯಕ್ಷವಾಗಿ ಕಂಡವರು ಹೇಳಿರುವಂತೆ ಈ ಶಾಲಾ ವಾಹನದಲ್ಲಿ ಸರಿಸುಮಾರು ಹೆಚ್ಚಿನ ಜನರಿದ್ದರು ಎಂದು ಹೇಳಿದರೂ ಕೂಡ ಯಾಕೆ ಶಿಕ್ಷಣ ಇಲಾಖೆ ಲೋಯೋಲಾ ಶಾಲೆಯ ಮೇಲೆ ಕ್ರಮವನ್ನು ಕೈಗೊಳ್ಳಲು ಸಾಧ್ಯವಾಗಿಲ್ಲ ಇದಕ್ಕೆಲ್ಲ ರಾಜಕೀಯ ಒತ್ತಡ ಇರಬಹುದಾ ಎಂದು ಸಾರ್ವಜನಿಕರಲ್ಲಿ ಅನುಮಾನ ಮೂಡುತ್ತದೆ.

ಲೋಯೋಲಾ ಶಾಲೆಯ ಮಕ್ಕಳು ಹೋಗುತ್ತಿದ್ದ ಶಾಲಾ ವಾಹನ ಕೆ ಎಸ್ಆರ್‌ಟಿಸಿ ಬಸ್ ನಡುವೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ವಿದ್ಯಾರ್ಥಿಗಳು ಅಸುನಿಗಿದ್ದು ಇದಕ್ಕೆ ಪ್ರಮುಖ ಕಾರಣ ಸರಿಯಾಗಿ ಶಾಲಾ ವಾಹನದವರು ನಿಯಮಗಳನ್ನು ಪಾಲಿಸದೇ ಇರುವುದು ಬಸ್‌ನಲ್ಲಿ 50ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಕೂಡಿಸಿಕೊಂಡಿದ್ದು, ಫಿಟ್ನೆಸ್ ಇಲ್ಲದ ವಾಹನ ಬಳಸಿದ್ದು, ಶಾಲಾ ವಿದ್ಯಾರ್ಥಿಗಳ ಬಸ್ ನಲ್ಲಿ ನಿರ್ವಾಹಕನೇ ಇಲ್ಲದೆ ಚಲಾಯಿಸಿದ್ದು, ಬಸ್ ಸೀಟ್ ಗೆ ಸೀಟ್ ಬೆಲ್ಟ್ ವ್ಯವಸ್ಥೆ ಇಲ್ಲದೆ ಇರುವುದು, ಶಾಲಾ ವಾಹನದ ಬಸ್ ಅತಿ ವೇಗವಾಗಿ ಚಲಿಸಿದ್ದೆ ಈ ದುರ್ಘಟನೆಗೆ ಕಾರಣವಾಗಿದೆ.

ಇದಕ್ಕೆ ಇನ್ನೊಂದು ಕಾರಣ ರಸ್ತೆಯಲ್ಲಿರುವ ಗುಂಡಿಯಾಗಿದೆ, ಎಚ್ಚರವಹಿಸಿ ವಾಹನ ಚಲಾಯಿಸದೆ ಇರುವುದು ವಾಹನ ಚಾಲಕನ ಕರ್ತವ್ಯ ಅದು ಬಿಟ್ಟು ಹಿಂದೆ ಮುಂದೆ ನೋಡದೆ ಶಾಲೆಗೆ ತಡವಾಗುತ್ತದೆ ಎನ್ನುವ ಕಾರಣಕ್ಕೆ ಅತಿ ವೇಗವಾಗಿ ಬಸ್ಸು ಚಲಾಯಿಸಿರುವುದೇ ಇಂತಹ ದುರ್ಘಟನೆ ನಡೆಯಲು ಪ್ರಮುಖ ಕಾರಣವಾಗಿದೆ ಎಂದರೆ ತಪ್ಪಾಗಲಾರದು.

ಇಷ್ಟೆಲ್ಲಾ ಎಡವಟ್ಟು ಲೋಯಲಾ ಶಾಲೆಯ ಆಡಳಿತ ಮಂಡಳಿಯಿಂದ ನಡೆದಿದ್ದರೂ ಕೂಡ ಇದುವರೆಗೂ ಯಾವುದೇ ರೀತಿಯ ಎಫ್ಐಆರ್ ಇವರ ಮೇಲೆ ದಾಖಲಿಸಿಕೊಂಡಿಲ್ಲ ಎಂಬುದು ತಿಳಿದು ಬಂದಿದೆ ಯಾಕಿರಬಹುದು ಎನ್ನುವುದು ಯಕ್ಷಪ್ರಶ್ನೆಯಾಗಿದೆ..? ನಿಯಮಗಳನ್ನೆಲ್ಲ ಗಾಳಿಗೆ ತೂರಿದ ಘಟನೆ ಶಾಲೆಯ ಆಡಳಿತ ಮಂಡಳಿ ವಿರುದ್ಧ ಅನೇಕ ಸಂಘಟಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ, ಜಿಲ್ಲೆಯ ಅಧಿಕಾರಿಗಳು ಇಲ್ಲಿನ ರಾಜಕೀಯ ಮುಖಂಡರ ಒತ್ತಡಕ್ಕೆ ಮಣಿದು ಎಫ್ ಐ ಆರ್ ಶಾಲೆ ಆಡಳಿತ ಮೇಲೆ ಹಾಕಿಲ್ಲ ಎನ್ನುವುದು ಅನುಮಾನ ಬರುತ್ತಿದ್ದು ಹಾಗಾಗಿ ಇವರು ಶಾಲಾ ಆಡಳಿತ ಮಂಡಳಿ ಮೇಲೆ ಒಂದು ವೇಳೆ ಕ್ರಮ ಜರುಗಿಸದೆ ಹೋದರೆ ತೀವ್ರ ಹೋರಾಟ ನಡೆಸಲಾಗುವುದು ಹಾಗೂ ಸೋಮವಾರದಂದು ಬೆಂಗಳೂರಿಗೆ ಹೋಗಿ ಪೋಲಿಸ್ ಕಮಿಷನರ್ ಅವರಿಗೆ ಈ ಬಗ್ಗೆ ದೂರು ನೀಡಲಾಗುವುದು ಹಾಗೂ ವಿಶೇಷ ತನಿಖೆ ಕೈಗೊಳ್ಳಬೇಕೆಂದು ಮನವಿ ಮಾಡಲಾಗುವುದು ಎಂದು ಸಂಘಟಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲೆಯ ಮಾನ್ವಿ ತಾಲೂಕಿನ ಕಪಗಲ್ ಗ್ರಾಮದ ರಸ್ತೆಯಲ್ಲಿ ಸರಕಾರಿ ಬಸ್ಸು ಹಾಗೂ ಲೋಯೋಲಾ ಶಾಲಾ ವಾಹನದ ಮಧ್ಯೆ ಅಪಘಾತ ಸಂಭವಿಸಿತ್ತು.

ಶಾಲೆ ಮೇಲೂ ಕ್ರಮ

ಲೋಯೋಲಾ ಶಾಲೆಯ ಆಡಳಿತ ಮಂಡಳಿ ಮೇಲೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ, ಈ ಘಟನೆಯ ಬಗ್ಗೆ ಇನ್ನಷ್ಟು ವರದಿಯನ್ನು ತೆಗೆದುಕೊಂಡು ಶಾಲೆಯ ಮೇಲೂ ಕೂಡ ಕ್ರಮ ಕೈಗೊಳ್ಳಲಾಗುವುದು ಎಂದು ಡಿಡಿಪಿಐ ಬಡಿಗೇರ್ ತಿಳಿಸಿದರು.

> ತಾಲೂಕಿನಲ್ಲಿರುವ ಎಲ್ಲಾ ಖಾಸಗಿ ಶಾಲಾ ವಾಹನಗಳನ್ನು ತಪಾಸಣೆ ಮಾಡಲಾಗುವುದು ಒಂದು ವೇಳೆ ನಿಯಮಗಳನ್ನು ಪಾಲಿಸದೇ ಇದ್ದರೆ ಅಂತಹ ವಾಹನಗಳ ಮೇಲೆ ಹಾಗೂ ಶಾಲಾ ಆಡಳಿತದ ಮೇಲೆ ಸೂಕ್ತ ಕ್ರಮಕ್ಕಾಗಿ ಡಿಡಿಪಿಐ ಅವರಿಗೆ ವರದಿ ಸಲ್ಲಿಸಲಾಗುವುದು.
> ಚಂದ್ರಶೇಖರ್, ತಾಲೂಕು ಶಿಕ್ಷಣಾಧಿಕಾರಿ

ಪತ್ರಕರ್ತ ವಸಂತ್ ನಾಡಗೇರ್‌ಗೆ ಸಂತಾಪ

ಕೊಪ್ಪಳ: ಸಂಯುಕ್ತ ಕರ್ನಾಟಕ ಸಂಪಾದಕ ವಸಂತ್ ನಾಡಗೇರ್ ನಿಧನದ ಹಿನ್ನೆಲೆ, ನಗರದ ಮೀಡಿಯಾ ಕ್ಲಬ್ ನಲ್ಲಿ ಸಂತಾಪ ಸಭೆ ಸೋಮವಾರ ನಡೆಯಿತು. ಸಭೆ ನಂತರ ಮೌನ ಆಚರಿಸಲಾಯಿತು.

ಪತ್ರಕರ್ತ ಪ್ರಮೋದ್ ಜಿ.ಕೆ ಮಾತನಾಡಿ, ನಾಡಿಗೇರ ಅವರು ಡೆಸ್ಕ್ ಪತ್ರಕರ್ತರಾ ಗಿಯೂ ಸಾಕಷ್ಟು ಹೆಸರು ಮಾಡಿದವರು. ಸುದ್ದಿಗೆ ಶೀರ್ಷಿಕೆ ನೀಡುವುದರಲ್ಲಿ ಹೆಸರು ಮಾಡಿದ್ದರು. ಹಾಗಾಗಿ ಇವರನ್ನು ಹೆಡ್ಡಿಂಗ್ ಮಾಸ್ಟರ್ ಎಂದೇ ಪ್ರಖ್ಯಾತಿ ಪಡೆದಿದ್ದರು. ವಿಜಯ ಕರ್ನಾಟಕ ಪತ್ರಿಕೆ ಆರಂಭವಾದ ಹಲವು ವರ್ಷ ಪ್ರಕಟವಾದ ಪಂಚಿಂಗ್ ತಲೆಬರ ಕೊಟ್ಟವರು ವಸಂತ್ ನಾಡಗೇರ ಅವರು. ವಸಂತ ನಾಡಿಗೇರ್ ನಿಧನ ನಾಡಿನ ಪತ್ರಿಕಾ ಬಳಗಕ್ಕೆ ದುಃಖ ತಂದಿದೆ ಎಂದರು.

ಪತ್ರಕರ್ತ ಶರಣಬಸವ ಹುಲಿಹೈದರ ಮಾತನಾಡಿ, ನಾಡಿಗೇರ ಅವರ ತಲೆ ಬರಹದ ಪ್ರಯೋಗ ಕನ್ನಡ ಪತ್ರಿಕೋದ್ಯಮದ ಹೊಸತನಕ್ಕೆ ಸಾಕ್ಷಿ ಆಗಿತ್ತು. ವಿಶ್ವೇಶ್ವರ ಭಟ್ ಅವರು ಬರೆದ 'ತಲೆಬರಹ ಪತ್ರಿಕೆಗಳ ಹಣೆಬರಹ' ಎನ್ನುವ ಪುಸ್ತಕದಲ್ಲಿ ವಸಂತ್ ನಾಡಗೇರ್ ಬಗ್ಗೆ ಬರೆದಿದ್ದಾರೆ. ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ವಿಶ್ವೇಶ್ವರ್ ಭಟ್ ಅವರು ನಾಡಿಗೇರ ನೀಡಿದ ತಲೆ ಬರಹಗಳ ಬಗ್ಗೆ ಮುಕ್ತ ಕಂಠದಿಂದ ಸ್ಮರಿಸಿದ್ದರು. ಅತ್ಯಂತ ಸೌಮ್ಯ ಸ್ವಭಾವದ ವ್ಯಕ್ತಿತ್ವ. ಇವರ ಸಾವು ಕನ್ನಡ ಪತ್ರಿಕಾ ರಂಗಕ್ಕೆ ತುಂಬಲಾರದ ನಷ್ಟ ಎಂದರು.

ಕ್ಲಬ್ ಖಜಾಂಚಿ ಅನಿಲ ಬಾಚನಹಳ್ಳಿ ಮಾತನಾಡಿ, ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕರಾಗಿ, ಬಹಳಷ್ಟು ಬದಲಾವಣೆ ತಂದಿದ್ದರು. ಉತ್ತಮ ಶೀರ್ಷಿಕೆ ಸೇರಿ ವಿವಿಧ ರೀತಿಯ ಸುಧಾರಣೆ ಮಾಡಿದ್ದರು. ಅವರ ಸೇವೆ ಅಗತ್ಯವಿತ್ತು. ಉತ್ತರ ಕರ್ನಾಟಕ ಮೂಲದ ಹಾವೇರಿ ಜಿಲ್ಲೆಯವರು ಸಂಪಾದಕರಾಗಿರುವುದು ನಮ ಗೆಲ್ಲರಿಗೂ ಹೆಮ್ಮೆಯ ವಿಷಯ ಆಗಿತ್ತು. ಅಲ್ಲದೇ ಅವರು ಕೆಲಸರ ವಿಷಯದಲ್ಲಿ ನಮಗೆಲ್ಲರಿಗೂ ಮಾದರಿಯಾ ಗಿದ್ದರು ಎಂದರು.

ಕೊಪ್ಪಳ ಮೀಡಿಯಾ ಕ್ಲಬ್ ಅಧ್ಯಕ್ಷ ರವೀಂದ್ರ ವಿ.ಕೆ., ಕಾರ್ಯದರ್ಶಿ ದತ್ತು ಕಮ್ಮಾರ, ಖಜಾಂಚಿ ಅನಿಲ್ ಬಾಚನಹಳ್ಳಿ, ಹಿರಿಯ ಪತ್ರಕರ್ತರಾದ ಹುಸೇನ್ ಪಾಷಾ, ಸೋಮರಡ್ಡಿ ಅಳವಂಡಿ, ದೇವು ನಾಗನೂರ, ಸಂತೋಷ ದೇಶಪಾಂಡೆ, ಶ್ರೀನಾಥ ಮರಕುಂಬಿ, ಜಾಹೀರಾತು ಪ್ರತಿನಿಧಿ ಪರಮೇಶರಡ್ಡಿ ಇದ್ದರು.



ಕೊಪ್ಪಳದ ಮೀಡಿಯಾ ಕ್ಲಬ್‌ನಲ್ಲಿ ವಸಂತ್ ನಾಡಗೇರ ನಿಧನದ ಹಿನ್ನೆಲೆ ಸಂತಾಪ ಸಭೆ ಸೋಮವಾರ ನಡೆಯಿತು.

ವಿರಾಮ
ಪ್ರತಿ ಭಾನುವಾರ

ಜೀವನ ಪ್ರಗತಿ
ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ
ಅರಿಹಂತ ಅವೆನ್ಯೂ, ಎಸ್-04, 2ನೇ ಮಹಡಿ, ಮೈತ್ರಿ ಪ್ಯಾಲೇಸ್ ಹತ್ತಿರ, ಹುಬ್ಬಳ್ಳಿ ರೋಡ, ಧಾರವಾಡ-580004, ಮೊ.9448161065
10 ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯ ನೋಟೀಸು
ಮಾನ್ಯರೆ, ಸನ್ 2023-24ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ನಿರ್ದೇಶಕ ಮಂಡಳಿಯ ನಿರ್ಣಯ ಮೇರೆಗೆ ದಿ: 25-09-2024 ರ ಬುಧವಾರ ಮು.11.00 ಘಂಟೆಗೆ ಸಹಕಾರಿಯ ಕಚೇರಿಯ ಆವರಣದಲ್ಲಿ ಕರೆಯಲಾಗಿದೆ. ಕಾರಣ ಸಹಕಾರಿಯ ಎಲ್ಲ ಸದಸ್ಯರು ಸಭೆಗೆ ಹಾಜರಾಗಬೇಕೆಂದು ಈ ಮೂಲಕ ಕೋರಲಾಗಿದೆ.
ಸಹಿ/- ಶ್ರೀರಕ್ಷಾ ರಾ. ಕಲ್ಲೂರ, ಮುಖ್ಯ ಕಾರ್ಯನಿರ್ವಾಹಕರು

ಶ್ರೀ ವಿರುಪಾಕ್ಷಲಿಂಗರ ಪತ್ತಿನ ಸೌಹಾರ್ದ ಸಹಕಾರ ಸಂಘ ನಿಯಮಿತ ತಳುವಗೇರಾ
ತಾ.ಕುಷ್ಟಗಿ ಜಿಲ್ಲಾ : ಕೊಪ್ಪಳ-583277
ನೊ.ಸಂಖ್ಯೆ ಸನಿ-14/ಎ-1/ಆರ್. ಜಿ.ಎನ್/ಸೌಕಾ/4933/2017-18
7ನೇ ವರ್ಷದ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ
ಮಾನ್ಯ ಸಹಕಾರಿ ಸದಸ್ಯ ಬಂಧುಗಳೇ,
ನಮ್ಮ ಸಹಕಾರಿಯ 2024-25ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆ 16-09-2024 ಸೋಮವಾರ ದಂದು ಬೆಳಿಗ್ಗೆ 11.30ಗಂಟೆಗೆ ಸರಿಯಾಗಿ ಸಹಕಾರಿಯ ಕಛೇರಿ ಆವರಣದಲ್ಲಿ ನಮ್ಮ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಮಲ್ಲಪ್ಪ ಮಹಾಂತಪ್ಪ ಗೊಣ್ಣಾಗರ ಅವರ ಅಧ್ಯಕ್ಷತೆಯಲ್ಲಿ ಜರುಗಿಸಲಾಗುವುದು.
ಕಾರಣ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಗೆ ಸರ್ವಸದಸ್ಯರು ಸಮಯಕ್ಕೆ ಸರಿಯಾಗಿ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಲು ಕೋರಲಾಗಿದೆ.
ಆಡಳಿತ ಮಂಡಳಿ ಅನುಮತಿ ಮೇರೆಗೆ
ಸಹಿ/-
ಶ್ರೀಮತಿ ಕಾವೇರಿ ಬಸವರಾಜ ಕುಂಟೋಜಿ
ಮುಖ್ಯ ಕಾರ್ಯನಿರ್ವಾಹಕರು
ಸ್ಥಳ : ತಳುವಗೇರಾ
ದಿನಾಂಕ : 31-08-2024
ವಿ.ಸೂ : 7 ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸ್ ಎಲ್ಲಾ ಸದ್ಯಸ್ಯರಿಗೂ ಕಳುಹಿಸಲಾಗಿದ್ದು, ತಲುಪದಿದ್ದಲ್ಲಿ ಇದನ್ನೆ ನೋಟೀಸ್ ಎಂದು ತಿಳಿದು ಸಭೆಗೆ ಆಗಮಿಸಬೇಕೆಂದು ಕೋರಲಾಗಿದೆ.

ಬಾಯಿ ಮುಚ್ಚಿಸಿ; ಕೈ ಕಮಾಂಡ್‌ಗೆ ಮನವಿ

ದಿನಕ್ಕೊಬ್ಬರು ಸಿಎಂ ಆಕಾಂಕ್ಷಿ ಎನ್ನುತ್ತಿರುವುದು ಪಕ್ಷಕ್ಕೆ ಮುಜುಗರ

ಸಿಎಂ ಬದಲಾವಣೆ ಬಗ್ಗೆ ಯಾರೂ ಮಾತಾಡದಂತೆ ಸೂಚನೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಮುಂದುವರೆಯಲಿದ್ದಾರೆ ಎನ್ನುವ ಹೈಕಮಾಂಡ್‌ನ ಸ್ಪಷ್ಟ ಸಂದೇಶ ಹೊರತಾಗಿಯೂ ಕಾಂಗ್ರೆಸ್‌ನಲ್ಲಿ ದಿನಕ್ಕೊಬ್ಬರು ಮುಖ್ಯಮಂತ್ರಿ ಕುರ್ಚಿಗೆ ಸಂಬಂಧಿಸಿ ದಂತೆ ಹೇಳಿಕೆ ನೀಡುತ್ತಿರುವುದು ಇದೀಗ ಮುಜುಗರಕ್ಕೆ ಕಾರಣ ವಾಗಿತ್ತಿರುವ ಬೆನ್ನಲ್ಲೇ, ಈ ರೀತಿಯ ಹೇಳಿಕೆಗಳಿಗೆ ಬ್ರೇಕ್ ಹಾಕು ವಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮನವಿ ಮಾಡಲಾಗಿದೆ.



ಈ ರೀತಿಯ ಹೇಳಿಕೆಯಿಂದ ಪಕ್ಷ ದಲ್ಲಿ ಅನಗತ್ಯ ಗೊಂದಲ ಮೂಡುತ್ತದೆ. ಆದ್ದರಿಂದ ಪಕ್ಷದ ಹೈಕಮಾಂಡ್ ಕೂಡಲೇ ಮಧ್ಯಪ್ರವೇಶಿಸಿ, ಮುಖ್ಯ ಮಂತ್ರಿ ಬದಲಾವಣೆ ವಿಷಯದಲ್ಲಿ ಯಾರೂ ಹೇಳಿಕೆ ನೀಡದಂತೆ ಸೂಚನೆ ನೀಡಬೇಕು ಎಂದು ಕೆಪಿಸಿಸಿ ಕಾರ್ಯಾ ಧ್ಯಕ್ಷ ಮಂಜುನಾಥ್ ಭಂಡಾರಿ ಹಾಗೂ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮನವಿ ಮಾಡಿದ್ದಾರೆ.

ಈ ಸಂಬಂಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪತ್ರ ಬರೆದಿರುವ ನಾಯಕರು, 34 ವರ್ಷಗಳ ಇತಿಹಾಸದಲ್ಲಿಯೇ ಅತಿ ಹೆಚ್ಚು ಮತ ಗಳಿಸಿ, ಅಧಿಕಾರದ ಗದ್ದುಗೆ ಏರಿದ್ದೇವೆ. ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಗ್ಯಾರಂಟಿ ಯೋಜನೆಗಳ ಯಶಸ್ಸಿನಿಂತ ಆತಂಕಿತವಾಗಿರುವ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಪಕ್ಷಗಳು ಮುಡಾ ಹಗರಣ ಎಂಬ ಹುರುಳಿಲ್ಲದ ಸುಳ್ಳು ಆರೋಪ ಮಾಡಿ, ಸರಕಾರವನ್ನು ಅಭದ್ರ ಮಾಡಲು ಹೊರಟಿವೆ. ಆದರೆ, ಕಾಂಗ್ರೆಸ್ ಸರಕಾರದ ಭಾಗವಾಗಿರುವ ಸಚಿವರು ತಾನು ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಎಂದು ಮಾಧ್ಯಮಗಳಲ್ಲಿ ಹೇಳಿಕೆ ನೀಡುವ ಮೂಲಕ ಸರಕಾರಕ್ಕೆ ಹಾಗೂ ಪಕ್ಷಕ್ಕೆ ಮುಜುಗರ ಉಂಟು ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಲಗಾಮಿಲ್ಲದ ಹೇಳಿಕೆಗಳಿಂದ ಪಕ್ಷದ ವರ್ಚಸಿಗೆ ಧಕ್ಕೆ

ಮುಖ್ಯಮಂತ್ರಿಗಳ ಬದಲಾವಣೆಯ ವಿಷಯಗಳು ಹೈಕಮಾಂಡ್ ಹಂತದಲ್ಲಿ ನಿರ್ಧಾರವಾಗುತ್ತವೆ, ಆಗಬೇಕು ಎಂಬುದು ಎಲ್ಲರಿಗೂ ತಿಳಿದ ವಿಚಾರವಾಗಿದೆ. ಹೀಗಿರುವಾಗ ಸಚಿವರ ಹಾಗೂ ಪಕ್ಷದ ಕೆಲ ಹಿರಿಯರ ಹೇಳಿಕೆಗಳಿಂದ ಮಾಧ್ಯಮಗಳಲ್ಲಿ ಈಗ ಮುಖ್ಯಮಂತ್ರಿ ಬದಲಾವಣೆಯ ವಿಷಯ ಚರ್ಚೆಯಾಗುತ್ತಿದೆ. ಸರಕಾರದ ಭಾಗವಾಗಿರುವ ಸಚಿವರ ಲಗಾಮಿಲ್ಲದ ಹೇಳಿಕೆಗಳಿಂದ ಮುಂದೆ ಪಕ್ಷದ ವರ್ಚಸಿಗೆ ಧಕ್ಕೆ ತರುವ ಹಾಗೂ ಸರಕಾರದ ಅಭದ್ರತೆಯ ಬಗ್ಗೆ ಚರ್ಚೆಗಳಿಗೆ ಎಡೆಮಾಡಿ ಕೊಟ್ಟಂತಾಗುತ್ತದೆ. ಹಾಗಾಗಿ ಇಂಥ ಚರ್ಚೆಗಳಿಗೆ ತಕ್ಷಣ ತಡೆ ಹಾಕುವ ಅವಶ್ಯಕತೆಯಿದೆ ಎಂದು ಆಗ್ರಹಿಸಿದ್ದಾರೆ.

ಇಲಾಖೆಯ ಬಗ್ಗೆ ಮಾತನಾಡಲಿ

ಸಚಿವರು ತಮಗೆ ನೀಡಿರುವ ಜವಾಬ್ದಾರಿಯ ಬಗ್ಗೆ ಮಾತನಾಡುವುದನ್ನು ಬಿಟ್ಟು, ಈ ರೀತಿ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಮಾತನಾಡುವುದು ಸರಿಯಲ್ಲ. ಸಾರ್ವಜನಿಕರಿಗೆ, ರಾಜ್ಯದ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಮುಖ್ಯಮಂತ್ರಿಗಳು ಘೋಷಣೆ ಮಾಡಿದ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು. ಜನರ ಸಮಸ್ಯೆಗಳನ್ನು ಆಲಿಸಬೇಕು. ರಾಜ್ಯದ ಜನರ ಆಶೋತ್ತರಗಳಿಗೆ ಸ್ಪಂದಿಸಬೇಕು. ಅದನ್ನು ಬಿಟ್ಟು ಮುಖ್ಯಮಂತ್ರಿ ಆಕಾಂಕ್ಷಿ ಎಂದು ಹೇಳಿಕೊಂಡು ಹೋಗುವುದು ತಪ್ಪು. ಅಂಥವರ ಮೇಲೆ ಶಿಸ್ತುಕ್ರಮದ ಎಚ್ಚರಿಕೆ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಸಿಎಂ ಬದಲಾವಣೆಯ ಕುರಿತು ಚರ್ಚೆ ನಡೆದಿಲ್ಲ

ಕಲಬುರಗಿ: ಜಿಲ್ಲೆಯಲ್ಲಿ ನಡೆಯಲಿರುವ ಸಚಿವ ಸಂಪುಟದ ಸಭೆಯಲ್ಲಿ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಯ ಕುರಿತಂತೆ ಸಮಗ್ರವಾಗಿ ಚರ್ಚೆ ನಡೆಯಲಿದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸಾಮಾನ್ಯವಾಗಿ ಸಚಿವ ಸಂಪುಟ ಸಭೆಯಲ್ಲಿ ಇಡೀ ರಾಜ್ಯದ ಅಭಿವೃದ್ಧಿ ಕುರಿತಂತೆ ಚರ್ಚೆ ನಡೆಯುತ್ತದೆ. ಆದರೆ, ಬಹಳ ವರ್ಷಗಳ ನಂತರ ಕಲಬುರಗಿ ಯಲ್ಲಿ ನಡೆಯುತ್ತಿರುವ ಸಂಪುಟ ಸಭೆಯಲ್ಲಿ ನಮ್ಮ ಭಾಗದ ಜನರ ಆಶಯದಂತೆ ಚರ್ಚೆ ನಡೆಸಿ ಅಭಿವೃದ್ಧಿಯ ನೀಲಿನಕ್ಷೆ ತಯಾರಿಸ ಲಾಗುವುದು ಎಂದರು. ಈಗಾಗಲೇ, ಸಚಿವ ಸಂಪುಟ ಸಭೆ ನಡೆಸುವ ಹಿನ್ನಲೆಯಲ್ಲಿ ಕಕ ಭಾಗಕ್ಕೆ ಅಗತ್ಯವಿರುವ ಯೋಜನೆಗಳ ಕುರಿತಂತೆ ಸಭೆಯಲ್ಲಿ ಚರ್ಚಿಸಲು ಈಗಾಗಲೇ ಸಂಬಂಧಿಸಿದ ಕ್ಷೇತ್ರಗಳ ಶಾಸಕರ ಹಾಗೂ ಅಧಿಕಾರಿಗಳ ಜತೆ ಎರಡು ಸುತ್ತಿನ ವಿಸಿ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿ ಚರ್ಚಿಸಲಾಗಿದೆ. ಅಲ್ಲದೇ, ಸಂಪುಟ ಸಭೆ ನಡೆಯುತ್ತಿರುವ ಹಿನ್ನಲೆಯಲ್ಲಿ ಸರಕಾರದ ಮುಖ್ಯ ಕಾರ್ಯದರ್ಶಿಗಳೊಂದಿಗೆ ಸಭೆ ನಡೆಸಲಾಗುವುದು. ಇದೇ ರೀತಿ ಸಚಿವರ ಸಭೆ ನಡೆಸಲು ಸಿಎಂ ಅವರಿಗೆ ಮನವಿ ಮಾಡಲಾಗಿದೆ ಎಂದರು.

ಸಿಎಂ ಬದಲಾವಣೆ ಕುರಿತ ಚರ್ಚೆ ಸಂಪುಟದಲ್ಲಿ ನಡೆದಿಲ್ಲ. ಅದು ಮಾಧ್ಯಮಗಳಲ್ಲಿ ಮಾತ್ರ ನಡೆದಿದೆ. ಸಚಿವರಾದ ಎಂ.ಬಿ ಪಾಟೀಲ್ ಹಾಗೂ ಶಿವಾನಂದ್ ಪಾಟೀಲರು ಈ ವಿಚಾರದಲ್ಲಿ ಮಾತನಾಡಿರುವುದು ಗೊತ್ತಿದೆ. ಸಿಎಂ ಕುರ್ಚಿ ಖಾಲಿ ಇಲ್ಲ. ಯಾರೇ ಸಿಎಂ ಆದರೂ ಬೆಂಬಲವಿದೆ.

- ಪ್ರಿಯಾಂಕ್ ಖರ್ಗೆ, ಸಚಿವ

ಸುದ್ದಿಮನೆಯ ಪದ ಗಾರುಡಿಗ

ಮಾಧ್ಯಮ ಲೋಕದ 'ನಾಡಿಗೆ' ಒಬ್ಬರೇ ನಾಡಿಗೇರ್

ಜಿತೇಂದ್ರ ಕುಂದೇಶ್ವರ,
ಜಿಲ್ಲಾ ವರದಿಗಾರ, ವಿಶ್ವವಾಣಿ

ಕನ್ನಡ ಮಾಧ್ಯಮ ಲೋಕದ 'ನಾಡಿಗೆ' ಒಬ್ಬರೇ ನಾಡಿಗೇರ್

ಅತ್ಯಂತ ಪ್ರಮಾಣಿಕರು, ನೇರ ನಿಷ್ಠುರವಾದಿ, ಹೊಗಳಿಕೆಗೆ ಬಗ್ಗದವರು, ಬಕೆಟ್ ಇಡದವರು... ಇಂಥವರು ಎಷ್ಟೇ ಒಳ್ಳೆಯ ಕೆಲಸ ಮಾಡಲಿ. ಎಷ್ಟೇ ಒಳ್ಳೆಯ ವ್ಯಕ್ತಿತ್ವಗಳನ್ನು ರೂಪಿಸಲಿ ಅವರನ್ನು ಕೊಂಡಾಡುವುದು ಸತ್ತಾಗ ಮಾತ್ರ. ಈ ಮಾತನ್ನು ಇತ್ತೀಚೆಗೆ ಹೇಳುತ್ತಲೇ ಬಂದಿದ್ದೇನೆ. ಇದಕ್ಕೆ ಸರಿಯಾದ ಉದಾಹರಣೆ ನನಗೆ ಹೇಳಲು ಸಿಕ್ಕಿರಲಿಲ್ಲ. ಆದರೆ ಈಗ ಸಿಕ್ಕಿದ್ದಾರೆ ಅವರೇ ವಸಂತ ನಾಡಿಗೇರ್ !

ಭಯಮಿಶ್ರಿತ ಗೌರವದ ಹೆಸರು, ಶೀರ್ಷಿಕೆ ಮೂಲಕವೇ ಓದುವಂತೆ ಮಾಡುವ ಮೋಡಿಗಾರ.. ಒಳ್ಳೆಯ ಲೇಖನಗಳನ್ನು ಹೈಲೈಟ್ ಮಾಡುವ ಮಾಡುವ ಮನಸ್ಸಿದ್ದರಲ್ಲಿ ನಾಡಿಗೆ ಒಬ್ಬರೇ ಅವರೇ ವಸಂತ ನಾಡಿಗೇರ್. ಬೆಳೆಯುವವರು ಬೆಳೆಯುತ್ತಾ ಹೋಗುತ್ತಾರೆ. ಬೆಳೆಸುವವರು ಬೆಳೆಸುತ್ತಾ ಹೋಗುತ್ತಾರೆ. ಈ ಬೆಳೆಸುವವರ ಸಾಲಿನಲ್ಲಿ ನಾಡಿಗೇರ್ ಮುಂಚೂಣಿ.

ವಸಂತ್ ಅವರಲ್ಲಿ ಪತ್ರಿಕಾ ಸಿದ್ಧಾಂತ ಹೊರತುಪಡಿಸಿ ಇನ್ಯಾವುದೇ ಎಡ-ಬಲದ ಸಿದ್ಧಾಂತಗಳಿರಲಿಲ್ಲ. ಪತ್ರಿಕೆ ಡೆಸ್ಕ್‌ನಲ್ಲಿ ಇಂಥ ನಿಸ್ವಾರ್ಥಿ, ಕರ್ತವ್ಯ ನಿಷ್ಠ ಕೆಲಸಗಾರ ಇಲ್ಲದೇ ಇದ್ದಿದ್ದರೆ ಇಂದು ವಿಜಯ ಕರ್ನಾಟಕದಲ್ಲಿ ಹತ್ತು ಹಲವು ಪ್ರತಿಭೆಗಳಿಗೆ ಖಂಡಿತಾ ನ್ಯಾಯ ಸಿಗುತ್ತಿರಲಿಲ್ಲ. ಹೆಸರು ಮಾಡುವ ಸಾಧ್ಯತೆಯಿರಲಿಲ್ಲ.

ವಿಶ್ವೇಶ್ವರ ಭಟ್ಟರು ಎಲ್ಲರಿಗೂ ಅವಕಾಶ ಕೊಟ್ಟರೆ, ಅರ್ಹರನ್ನು ಅರ್ಹ ಲೇಖನವನ್ನು ಆಯ್ಕೆ ಮಾಡುವ ಹೊಣೆಗಾರಿಕೆಯಿದ್ದದ್ದು ಸುದ್ದಿ ಸಂಪಾದಕ ವಸಂತ ನಾಡಿಗೇರ್ ಅವರಿಗೆ. ಆರಂಭಿಕ ವರ್ಷಗಳಲ್ಲಿ ಮುಖಪುಟದ ಅಂಕರ್ ಸ್ಟೋರಿಗಳು ಅದ್ಭುತ. ಈ ಜಾಗದಲ್ಲಿ ಲೇಖನ ಪ್ರಕಟವಾದರೆ ಅದೇನೋ ಸಾಧಿಸಿದ ಖುಷಿ. ಆರಂಭದಲ್ಲಿ ನಾನು, ಜಾನ್ ಡಿಸೋಜ ಮಂಗಳೂರು ಆವೃತ್ತಿಯಿಂದ ಅಂಕರ್ ಸ್ಟೋರಿ ಜಾಗಕ್ಕೆ ಪೈಪೋಟಿ. ನಾಡಿಗೇರ್ ಅವರು ನೋಡಿ ಲೇಖನ ಪಾಸ್ ಮಾಡಿದರೆ ಮುಗೀತು. ಹೀಗಾಗಿ ಇಂತಹ ಅನೇಕ ಖುಷಿಗಳನ್ನು ಕೊಟ್ಟ ನಾಡಿಗೇರ್ ಅವರ ಮೇಲೆ ಭಯ ಮಿಶ್ರಿತ ಗೌರವ.

ನಾನು ತುಳುನಾಡಿನಲ್ಲಿದ್ದ ಕಾರಣ ಅವರನ್ನು ನೇರವಾಗಿ ಸಿಕ್ಕಿ ಮಾತನಾಡಿಸುವ ಅವಕಾಶ ಬಹಳ ಕಡಿಮೆ. ಸಿಕ್ಕಿದಾಗ ಒಂದೇ ಒಂದು ಪ್ರೋತ್ಸಾಹದ ಮಾತು. ನಾನು ಕೊನೆಯದಾಗಿ ಸಿಕ್ಕಿದ್ದು ವಿಶ್ವವಾಣಿ ಸಂಪಾದಕರಾಗಿ ನಾಡಿಗೇರ್ ಬಂದಾಗ. ಅವರ ಕ್ಯಾಬಿನ್‌ಗೆ ಹೋಗಿ ಉಭಯ ಕುಶಲೋಪರಿ ಮಾತನಾಡಿದ್ದೆ.

ಎರಡು ವಾರದ ಹಿಂದೆ ಉಡುಪಿ ಸಂಯುಕ್ತ ಕರ್ನಾಟಕದ ವರದಿಗಾರ ಕಿರಣ್ ಮಂಜನಬೈಲ್ ಮಾತಾಡುತ್ತಾ, ನಾಡಿಗೇರ್ ಸಂಯುಕ್ತ ಕರ್ನಾಟಕಕ್ಕೆ ಬಂದಿದ್ದಾರೆ. ಹುಷಾರಿಲ್ಲವಂತೆ. ಸೀರಿಯಸ್ಸೇನು ಅಲ್ಲ ಅಂಥ ಹೇಳಿದ್ದರು. ಅಯ್ಯೋ ಅಂಥ ಮನಸ್ಸು ಮಿಡಿಯಿತು. ಇನ್ನೂ ವರ್ಷ ಅರುವತ್ತು ದಾಟಿಲ್ಲ! ಇನ್ನೆಲ್ಲಿಯ ವಸಂತಕಾಲ?

ನಾಡಿಗೇರ್‌ರಂಥ ನಿಸ್ವಾರ್ಥಿ, ಪ್ರತಿಭಾವಂತ ಕನ್ನಡ ಶಬ್ದ, ವ್ಯಾಕರಣಗಳ ಸ್ಟೈಲ್‌ಶೀಟ್‌ಗಳ ಖಟ್ಟರ್ ಫಾಲೋವರ್, ಆಕರ್ಷಕ ಶೀರ್ಷಿಕೆ ನೀಡುವ ಸುದ್ದಿಸಂಪಾದಕ ನಾನು ನೋಡಿದಂತೆ ಖಂಡಿತಾ 25 ವರ್ಷಗಳಲ್ಲಿ! ಇನ್ನು ಆ ಸ್ಥಾನ ತುಂಬುವವರು ಬರುವುದೇ ಡೌಟು !

ಸರ್ ಶಬ್ದಗಳಲ್ಲಿ ಆಡುತ್ತಾ ಹೆಡ್ಡಿಂಗ್ ಕೊಡುವ ತಮಗೆ ಶ್ರದ್ಧಾಂಜಲಿಯಲ್ಲಿಯೂ ಒಳ್ಳೆಯ ಹೆಡ್ಡಿಂಗ್ ಕೊಡುವ ಪ್ರಯತ್ನ ಮಾಡುವ ಮೂಲಕ ನುಡಿನಮನ ಸಲ್ಲಿಸುತ್ತಿದ್ದೇನೆ... ಅನ್ಯಥಾ ಭಾವಿಸಬೇಡಿ.

ನಾಡಿಗೆ ಒಬ್ಬರೇ ನಾಡಿಗೇರ್.

ನಾಡಿಗೇರ್ ಡೆಸ್ಕ್‌ನ ಆಧಾರಸ್ತಂಭ

ಎಂ.ಸಿ. ಶೋಭಾ, ಸುವರ್ಣ ನ್ಯೂಸ್ ಔಟ್‌ಪುಟ್ ಹೆಡ್

ವಸಂತ ನಾಡಿಗೇರ್. ವಿಜಯ ಕರ್ನಾಟಕ ಬೆಂಗಳೂರು ಕಚೇರಿಯ ತಳಪಾಯ. ಇಡೀ ಡೆಸ್ಕ್‌ನ ಆಧಾರಸ್ತಂಭವಾಗಿದ್ದರು. ನ್ಯಾಷನಲ್ ಸುದ್ದಿಗಳನ್ನು ಅರೆದು ಕುಡಿದವರು. ಹೊಸದಾಗಿ ಸುದ್ದಿಮನೆಗೆ ಕಾಲಿಡುವ ಹೊಸಬರ ಪಾಲಿನ ಅಕ್ಷರಬ್ರಹ್ಮ. ಪ್ರತಿಯೊಬ್ಬರ ಬರೆಯುವ ಸುದ್ದಿಗಳನ್ನು ತಿದ್ದಿ, ತೀಡದೇ ಮುಂದೆ ಕಳಿಸಿದ್ದೇ ಇಲ್ಲ. ತಿದ್ದುವುದೂ ಒಂದು ಕಲೆ. ಅಂತಹ ತಿದ್ದುವ ಕಲೆ ವಸಂತ್ ನಾಡಿಗೇರ್ ಅವರಿಗೆ ಸಿದ್ಧಿಸಿತ್ತು.

ಇವರ ಕಣ್ಣಿಂದ ಒಂದೇ ಒಂದು ತಪ್ಪು ಮಿಸ್ ಆಗಿದ್ದೇ ಇಲ್ಲ. ಪ್ರೂಫ್ ರೀಡರ್, ಸಬ್ ಎಡಿಟರ್ ಎಷ್ಟೇ ಕಣ್ಣಲ್ಲಿ ಕಣ್ಣಿಟ್ಟು ತಪ್ಪು ಹುಡುಕಿ, ತಿದ್ದುವುದೇ ಸವಾಲು. ಅಬ್ಬಾ, ಒಂದೇ ಒಂದು ತಪ್ಪು ಇಲ್ಲ ಎಂದು ಬೀಗುತ್ತಾ, ಇವರ ಮುಂದೆ ಪೇಜ್ ಹಿಡಿದರೆ, ಶಾಕ್ ಗ್ಯಾರಂಟಿ. ಪೇಜ್ ನೋಡಿದ ಎರಡೇ ಸೆಕೆಂಡ್‌ನಲ್ಲಿ ಇವರ ಕಣ್ಣಿಗೆ ಅದ್ಯಾವ ಮಾಯದಲ್ಲಿ ತಪ್ಪು ಕಾಣ್ತಿತ್ತೋ..! ಕನಿಷ್ಠ ಎರಡರಿಂದ ಮೂರು ತಪ್ಪಾದರೂ ಹುಡುಕಿ, ತಿದ್ದಿ ಕೊಟ್ಟಾಗ, ಸಬ್ ಎಡಿಟರ್ ಮುಖ ಪೆಚ್ಚು, ಪೆಚ್ಚು. ಶಾಂತ ಸ್ವಭಾವ, ಒಮ್ಮೆಯೂ ರೇಗಿದ್ದು, ಸಿಡಿಕಿದ್ದು ನೋಡಿದ್ದೇ ಇಲ್ಲ. ಅವರು ಕಾರ್ಯನಿರ್ವಹಿಸುತ್ತಿದ್ದ ಸಂಸ್ಥೆಗಳಲ್ಲಿನ ಅದ್ಭುತ ಹೆಡ್‌ಲೈನ್‌ಗಳಲ್ಲಿ ಇವರ ಕೊಡುಗೆಯೂ ಇದೆ.

ನಾನಿಂದು ಒಂದಕ್ಷರ ತಪ್ಪಿಲ್ಲದೇ ಏನಾದರೂ ಬರೆಯಲು ಸಾಧ್ಯವಾಗಿದ್ದರೆ ಅದಕ್ಕೆ ಕಾರಣ ವಸಂತ್ ಸಾರ್. 1999ರಲ್ಲಿ ಶುರುವಾದ ವಿಜಯ ಕರ್ನಾಟಕ ಪತ್ರಿಕೆಯ ಮೂಲಕ ಪತ್ರಿಕೋದ್ಯಮಕ್ಕೆ ಕಾಲಿಟ್ಟವರ ಪಾಲಿಗೆ ಇವರೇ ಗುರು. ಒಂದಿಡೀ ಜನರೇಷನ್‌ಗೆ ಅಕ್ಷರ ಕಲಿಸುವುದು ಸುಲಭದ ಮಾತಲ್ಲ. ಅವರು ತಿದ್ದಿ ತೀಡಿದ್ದಕ್ಕೇ ನಾವಿನ್ನೂ ಸುದ್ದಿ ಮನೆಯಲ್ಲಿದ್ದೇವೆ. ನನ್ನ ವೃತ್ತಿ ಬದುಕಿನ ಆರಂಭದಲ್ಲಿ ವಸಂತ್ ನಾಡಿಗೇರ್ ಅವರು ಗುರುವಾಗಿ ಸಿಕ್ಕಿದ್ದು ನನ್ನ ಅದೃಷ್ಟವೇ ಸರಿ!

ಹೋಗಿ ಬನ್ನಿ ಸಾರ್
ನಿಮಗೆ ಸಾವಿಲ್ಲ...
ಓಂ ಶಾಂತಿ.

ಮಾಧ್ಯಮದ ಶಬ್ದ ಯೋಗಿ

ರಾಜೀವ್ ಹೆಗಡೆ, ಅಸೋಸಿಯೇಟ್ ಎಡಿಟರ್, ಗ್ಲಾನ್ಸ್

ಪತ್ರಿಕೋದ್ಯಮದ ಪದವಿ, ಸ್ನಾತಕೋತ್ತರ ಪದವಿ ಮಾಡಿದರೂ, ಮಾಧ್ಯಮಕ್ಕೆ ಸಂಬಂಧಿಸಿ ನನಗೆ ನಿಜವಾದ ಪಾಠಶಾಲೆಯಾಗಿದ್ದು ವಿಜಯ ಕರ್ನಾಟಕ ಪತ್ರಿಕೆ. ಸುದ್ದಿಯನ್ನು ಹೇಗೆ ಆಯ್ಕೆ ಮಾಡಬೇಕು, ಹೇಗೆ ಬರೆಯಬೇಕು, ಜನಪರ ವಿಷಯಗಳನ್ನು ಹೇಗೆ ಮಂಡಿಸಬೇಕು ಎನ್ನುವುದನ್ನು ನನ್ನ ಹಿರಿಯ ಸಹೋದ್ಯೋಗಿಗಳು ಹೇಳಿಕೊಟ್ಟಿದ್ದರು. ಆದರೆ ಶಬ್ದಗಳ ಆಯ್ಕೆ ಹೇಗಿರಬೇಕು ಎನ್ನುವುದನ್ನು ಹೇಳಿಕೊಟ್ಟ ಗುರುಗಳು ವಸಂತ್ ನಾಡಿಗೇರ್.

'ನೀನು ಎಷ್ಟೇ ಶಬ್ದ ಮಾಡಿದರೂ, 'ಶಬ್ದ'ದಲ್ಲಿ ಎಲ್ಲವೂ ಅಲ್ಪ ಪ್ರಾಣವೇ ಇರುತ್ತದೆ' ಇದು ನಾಡಿಗೇರ್ ಅವರು ಹೇಳುವ ಶೈಲಿಯಾಗಿತ್ತು. ಅವರ ಬಳಿ ಕೆಲಸ ಮಾಡಿದವರಿಗೆ ಇಂತಹ ನೂರಾರು ಉದಾಹರಣೆಗಳು ಸಿಗುತ್ತವೆ. ನಮ್ಮ ವಾಕ್ಯ ರಚನೆ ಅಥವಾ ಶಬ್ದಗಳ ಆಯ್ಕೆಯನ್ನು ತಪ್ಪೆಂದು ಸುಮ್ಮನಾಗುತ್ತಿರಲಿಲ್ಲ. ಈ ರೀತಿಯ ಉದಾಹರಣೆಗಳನ್ನು ನೀಡುವ ಮೂಲಕ, ಜೀವನ ಪರ್ಯಂತ ನೆನಪಿಟ್ಟುಕೊಳ್ಳುವಂತೆ ಮಾಡುತ್ತಿದ್ದರು.

ಆದ್ದರಿಂದ ನಾನು ಪ್ರತಿ ಲೇಖನವನ್ನು ಬರೆಯುವಾಗಲೂ ವಸಂತ್ ನಾಡಿಗೇರ್ ಅವರು ನೆನಪಾಗುತ್ತಾರೆ. ಇಲ್ಲವಾದಲ್ಲಿ ನನ್ನ ಮನಸ್ಸಿನೊಳಗೆ ಒಂದಿಷ್ಟು ಪ್ರಶ್ನೆಗಳು ಮೂಡುವಂತೆ ಮಾಡುತ್ತಾರೆ. ಒಂದು ಪ್ಯಾರಾದಲ್ಲಿ ಬಳಸಿದ ಶಬ್ದಗಳು ಪುನರ್ ಬಳಕೆಯಾಗದಂತೆ ಬರೆಯಲು ಜಾಗೃತಗೊಳಿಸುತ್ತಾರೆ. 'ಗರ್ಭಿಣಿ ಸ್ತ್ರೀ', 'ಅಜಗಜಾಂತರ ವ್ಯತ್ಯಾಸ' ಎನ್ನುವ ಬಾಲಿಶ ಶಬ್ದಗಳನ್ನು ಬಳಕೆ ಮಾಡದಂತೆ ಆಗ್ಗಾಗ್ಗೆ ಜ್ಞಾಪಿಸುತ್ತಲೇ ಇರುತ್ತಾರೆ. ಇದರೊಂದಿಗೆ ಅವರ ಒಂದು ವಿಶೇಷತೆ ಏನೆಂದರೆ, ಇಂತಹ ನೂರಾರು ತಪ್ಪುಗಳನ್ನು ಪ್ರತಿದಿನವೂ ಪತ್ರಕರ್ತರಿಗೆ ಹೇಳಿದರೂ, ಅವರ ಪಕ್ಕದ ಕ್ಯಾಬಿನ್‌ನಲ್ಲಿ ಕೂರುವರಿಗೂ ಅದು ಗೊತ್ತಾಗುತ್ತಿರಲಿಲ್ಲ. ಅದೆಷ್ಟೋ ಬಾರಿ ಶಬ್ದಗಳು ಹೊಳೆಯದಿದ್ದಾಗ ಅವರ ಕ್ಯಾಬೀನ್‌ಗೆ ಓಡಿ ಹೋಗಿ ಕೇಳಿದ್ದಿದೆ.

ಕನ್ನಡ ಪತ್ರಿಕೋದ್ಯಮದಲ್ಲಿ ನೂರಾರು ಉಪ ಸಂಪಾದಕರು ಹಾಗೂ ವರದಿಗಾರರಿಗೆ ಈ ರೀತಿಯ ಮಾರ್ಗದರ್ಶನವನ್ನು ಅವರು ಮಾಡಿದ್ದಾರೆ. ವಿಜಯ ಕರ್ನಾಟಕದ ಸಂಪಾದಕೀಯ ವಿಭಾಗದ ಯಶಸ್ಸಿನಲ್ಲಿ ಅವರ ಪಾಲು ಸಾಕಷ್ಟಿದೆ. ಹಾಗೆಯೇ ಪತ್ರಿಕೆಯ ಭಾಷೆ ಸುಧಾರಣೆ ಜತೆಗೆ, ಅಚ್ಚುಕಟ್ಟಾಗಿ ಮೂಡಿಬರಲು ಕೂಡ ಕಾರಣರಾಗಿದ್ದರು. ನನ್ನಂತಹ ನೂರಾರು ಪತ್ರಕರ್ತರ ಭಾಷೆ ಶುದ್ಧತೆಗೆ ಪ್ರಯತ್ನಿಸಿದ್ದರು. ಒಬ್ಬ ಸುದ್ದಿ ಸಂಪಾದಕ ಹೇಗಿರಬೇಕು ಎನ್ನುವುದಕ್ಕೆ ವಸಂತ್ ನಾಡಿಗೇರ್ ಮಾದರಿಯಾಗಿದ್ದರು.

ಇಂತಹ ಒಬ್ಬ 'ಶಬ್ದ' ಯೋಗಿ ಮಾಧ್ಯಮ ವಲಯದಲ್ಲೂ ಇದ್ದಷ್ಟು ದಿನ ಯಾವುದೇ ಅನಗತ್ಯ ಸದ್ದು ಮಾಡಲಿಲ್ಲ. ಕೆಲಸದ ಮೂಲಕ ಸದ್ದು ಮಾಡಿದ್ದರೂ, ಹೊರ ಜಗತ್ತಿನಲ್ಲಿ ಶಬ್ದ ಮಾಡಿರಲಿಲ್ಲ. ವಸಂತ್ ನಾಡಿಗೇರ್ ಅವರು ಇಂದು ನಮ್ಮನ್ನು ಅಗಲಿರಬಹುದು. ಆದರೆ ಅವರ ಅಲ್ಪಪ್ರಾಣ, ಮಹಾಪ್ರಾಣ ಸೇರಿ ಪ್ರತಿಯೊಂದು ಪಾಠವೂ ನಮ್ಮಲ್ಲಿ ಜೀವಂತವಾಗಿರುತ್ತದೆ. ಇದಕ್ಕಿಂತ ದೊಡ್ಡ ಸಾರ್ಥಕ ಜೀವನ ಇನ್ಯಾವುದಿದೆ, ಅಲ್ಲವೇ!

ಹೋಗಿ ಬನ್ನಿ ವಸಂತ್ ಸರ್..!

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ

ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಳಗಾವಿ

ಸ್ವಚ್ಛ ಭಾರತ — ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ

ಕ್ರ.ಸಂ. ಬಿಜಿಎಂ/ಡಿಯುಡಿಸಿ:5:ಸಿಆರ್-25:2021-22 ದಿನಾಂಕ: 06-09-2024

ಟೆಂಡರ್ ಅಧಿಸೂಚನೆ

ಬೆಳಗಾವಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-1 ಯೋಜನೆಯ 24.10%, 7.25% ಮತ್ತು 5% ಅನುದಾನದ ಈ ಕೆಳಕಂಡ ಕಾಮಗಾರಿಗಳಿಗೆ KW 1, 2, 3 ಮತ್ತು 4 ಡಾಕುಮೆಂಟ್ ಉಪಯೋಗಿಸಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (GST) ಹೊರತುಪಡಿಸಿ	ಇ.ಎಂ.ಡಿ.	ಮೀಸಲಾತಿ
1	ಕುಡಚಿ ಪುರಸಭೆ ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT25923)	41.44	0.41	ಪ.ಜಾ.
2	ಐನಾಪೂರ ಪ.ಪಂ. ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT25914)	18.18	0.23	ಪ.ಜಾ.
3	ಅರಭಾಂವಿ ಪ.ಪಂ. ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT26619)	18.18	0.23	ಪ.ಪಂ.
4	ಚಿಂಚಲಿ ಪ.ಪಂ. ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT25902)	24.92	0.50	ಇತರೆ
5	ಬೋರಗಾಂವ ಪ.ಪಂ. ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ನಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT25916)	21.61	0.50	ಇತರೆ
6	ಶೇಡಬಾಳ ಪ.ಪಂ. ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT25915)	13.85	0.28	ಇತರೆ
7	ಯಕ್ಸಂಬಾ ಪ.ಪಂ. ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT25913)	8.01	0.22	ಇತರೆ
8	ಕಬ್ಬೂರ ಪ.ಪಂ. ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT25925)	23.14	0.50	ಇತರೆ
9	ಮುನವಳ್ಳಿ ಪ.ಪಂ. ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT26623)	8.39	0.10	ಇತರೆ
10	ಯರಗಟ್ಟಿ ಪ.ಪಂ. ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT26621)	7.63	0.19	ಇತರೆ
11	ಕಲ್ಲೋಳಿ ಪ.ಪಂ. ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT26616)	5.85	0.15	ಇತರೆ
12	ಹಾರೂಗೇರಿ ಪುರಸಭೆ ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT28694)	90.38	1.80	ಇತರೆ
13	ನಿಪ್ಪಾಣಿ ನಗರಸಭೆ ವ್ಯಾಪ್ತಿಯ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವುದು. (Tender No. DMA/2024-25/OW/WORK_INDENT29389)	232.50	3.49	ಇತರೆ

ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್ ಡೌನ್‌ಲೋಡ್ ಹಾಗೂ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ ಹಾಗೂ ಟೆಂಡರ್ ಪ್ರೊಸೆಸಿಂಗ್ ಫೀ ಯನ್ನು ಸಹ ವಿದ್ಯುನ್ಮಾನ ಮೂಲಕ ಸಲ್ಲಿಸುವುದು. ಟೆಂಡರ್ ವೇಳಾಪಟ್ಟಿ ಮತ್ತು ಇತರೆ ಮಾಹಿತಿಯು ಈ ಕೆಳಗಿನಂತಿರುತ್ತದೆ.

ಕ್ರಂ.ಸಂ.01 ರಿಂದ 12	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	:	24-09-2024ರಂದು 17-00 ಘಂಟೆವರೆಗೆ
	ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	:	26-09-2024ರಂದು 10-30 ಘಂಟೆ ನಂತರ
ಕ್ರ.ಸಂ.13	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	:	08-10-2024ರಂದು 17-00 ಘಂಟೆವರೆಗೆ
	ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	:	10-10-2024ರಂದು 10-30 ಘಂಟೆ ನಂತರ

ಅವಧಿ ವಿಸ್ತರಣೆ ಇದ್ದಲ್ಲಿ ಇ-ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವುದು, ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/-
ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ

DIPR /BGM/RO-NO -775/2023-24

ಕರ್ನಾಟಕ ಸರಕಾರ (ಪೌರಾಡಳಿತ ಇಲಾಖೆ)
ಪುರಸಭೆ ಕಾರ್ಯಾಲಯ, ಹಾನಗಲ್ಲ
ಜಿಲ್ಲಾ॥ ಹಾವೇರಿ ರಾಜ್ಯ: ಕರ್ನಾಟಕ Ph No:08379/262626
Website:www.hanagaltown.gov.in, E-mail:ka.hanagal.tmc@gmail.com

ನಂ.ಪುಸಹಾ/ತಾಂತ್ರಿಕ/15 ಹ/ವಹಿ/2024-25 ದಿನಾಂಕ:-09-09-2024.

ಟೆಂಡರ ಪ್ರಕಟಣೆ (ಕೆ.ಪಿ.ಪಿ.ಪಿ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಹಾನಗಲ್ಲ ಪುರಸಭೆ ವ್ಯಾಪ್ತಿಯಲ್ಲಿ ಸನ್ 2023-24ನೇ ಸಾಲಿನ 15ನೇ ಹಣಕಾಸು ಯೋಜನೆಯ ಇಂಡೆಂಟ್ ನಂಬರ: DMA/2024-25/WT/WORK_INDENT29464 Rs.9.00 L. ಆನಲೈನ್‌ನಲ್ಲಿ ಅರ್ಜಿ ಸಲ್ಲಿಸಿ ದರವಾರು ಸಲ್ಲಿಸಲು ಕೊನೆಯ ದಿನಾಂಕ: 17-09-2024 4.30 ಘಂಟೆ. ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ:18-09-2024 05.00 ಘಂಟೆ & ಸನ್ 2023-24ನೇ ಸಾಲಿನ 15ನೇ ಹಣಕಾಸು ಯೋಜನೆಯ ಇಂಡೆಂಟ್ ನಂಬರ: DMA/2024-25/EL/WORK_INDENT29262 Rs.4.00 L ಆನಲೈನ್‌ನಲ್ಲಿ ಅರ್ಜಿ ಸಲ್ಲಿಸಿ ದರವಾರು ಸಲ್ಲಿಸಲು ಕೊನೆಯ ದಿನಾಂಕ:19-09-2024 4.30 ಘಂಟೆ. ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ:20-09-2024 05.00 ಘಂಟೆ.

ಸಹಿ/- ಅಧ್ಯಕ್ಷರು,ಪುರಸಭೆ, ಹಾನಗಲ್ಲ
ಸಹಿ/- ಮುಖ್ಯಾಧಿಕಾರಿ, ಪುರಸಭೆ, ಹಾನಗಲ್ಲ

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಜಯನಗರ ವಾಣಿಜ್ಯ ಸಂಕೀರ್ಣ ಮಳಿಗೆ, ಜಯನಗರ, ಬೆಂಗಳೂರು-560011.

ಸಂಖ್ಯೆ: ಕಾಇಂ/ಸನೀತು/ಸ.ಇಂ-1,2,5/ಟೆಂಡರು ಪ್ರಕಟಣೆ ಸಂ.04/2024-25 ದಿನಾಂಕ: 09.09.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಅರ್ಹ ಗುತ್ತಿಗೆದಾರರಿಂದ 2024-25 ನೇ ಸಾಲಿನ ಲೆಕ್ಕ ಶೀರ್ಷಿಕೆ: 4702-ವಿಶೇಷ ಘಟಕ ಯೋಜನೆ, 4702- ಪ್ರಧಾನ ಕಾಮಗಾರಿಗಳು ಅಣೆಕಟ್ಟುಗಳ ಮತ್ತು ಬಂಡಾರುಗಳ ನಿರ್ಮಾಣ, ಮತ್ತು 4702 ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು ಯೋಜನೆಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗೆ ಕೆಟಿಪಿಪಿ ಸ್ಟಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW-1 2, 3 4 ಹಾಗೂ KC-5 ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಈ ಕಾಮಗಾರಿಗಳಿಗೆ ಕೆಪಿಪಿಪಿ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಹಾಗೂ ಮೇಲಿನ ವೆಬ್ ಸೈಟ್‌ನಲ್ಲಿ ಮಾಹಿತಿ ಪಡೆಯಬಹುದು.

ಕಾಮಗಾರಿಯ ಹೆಸರು :-ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ, ದೊಡ್ಡಬಳ್ಳಾಪುರ ತಾಲ್ಲೂಕು, ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಕನಕಪುರ ತಾಲ್ಲೂಕುಗಳಲ್ಲಿ ಕೋಡಿ ಕಾಲುವೆಗೆ ಬಾಕ್ಸ್ ಕಲ್ವರ್ಟ್ ನಿರ್ಮಾಣ, ಇಂಗು ಕೆರೆ ನಿರ್ಮಾಣ ಕಾಮಗಾರಿಯ ಡಿ.ಪಿ.ಆರ್ ತಯಾರಿಸಲು ಕನ್ಸಲ್ಟೆನ್ಸಿ ಸರ್ವಿಸ್, ಕೆರೆ ಕೋಡಿ ದುರಸ್ಥಿ, ನಾಲಾ ಅಭಿವೃದ್ಧಿ ಕಾಮಗಾರಿ, ಜಮೀನಿನಲ್ಲಿ ಕೊಳವೆಬಾವಿ ಕೊರೆದು ನಿರಾವರಿ ಸೌಲಭ್ಯ, ಹರಿಯುವ ಹಂದಿ ಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ, ಕೆರೆ ಹೊಳೆಗೆ ಚೆಕ್‌ಡ್ಯಾಂ ನಿರ್ಮಾಣ, ಹಳ್ಳಕ್ಕೆ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿಗಳನ್ನು ಒಳಗೊಂಡಂತೆ **ಒಟ್ಟು 08 ಕಾಮಗಾರಿಗಳನ್ನು ಆಹ್ವಾನಿಸಲಾಗಿದೆ.**

ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : **ರೂ.0.99 (ಕನಿಷ್ಠ) & ರೂ.127.01 (ಗರಿಷ್ಠ)**
ಇಎಂಡಿ: **ರೂ.2,500 (ಕನಿಷ್ಠ) & ರೂ.2,00,000 (ಗರಿಷ್ಠ).**

ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 01 ರಿಂದ 09 ತಿಂಗಳು ಮಳೆಗಾಲ ಸೇರಿದಂತೆ.
(ಟೆಂಡರ್‌ಗಿಟ್ಟ ಮೊತ್ತ, ಇಎಂಡಿ, ಕಾಮಗಾರಿಯ ಅವದಿ ಆಯಾ ಕಾಮಗಾರಿಗಳಿಗೆ ಅನುಗುಣವಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಇದ್ದಂತೆ)

(1) ಟೆಂಡರ್ ದಾಸ್ತಾ ವೇಜುಗಳನ್ನು ವೆಬ್‌ಸೈಟ್ ಪ್ರಕಟಿಸುವ ದಿನಾಂಕ : **10.09.2024 ಬೆಳಗ್ಗೆ 11.30** ಗಂಟೆಯ ನಂತರ, (2) ಅವಶ್ಯ ಟೆಂಡರ್ ಮಾಹಿತಿ/ಸ್ಪಷ್ಟೀಕರಣವನ್ನು (ಪ್ರೀ ಬಿಡ್) ಪಡೆಯಲು ದಿನಾಂಕ ಮತ್ತು ವಿಳಾಸ: ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಬೆಂಗಳೂರು. ದಿನಾಂಕ : **13.09.2024 ಬೆಳಗ್ಗೆ 11.30** ಗಂಟೆಯವರೆಗೆ. **(3) ಭರ್ತಿಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 17.09.2024 ಸಂಜೆ 5.00 ಗಂಟೆಯವರೆಗೆ, (4) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 18.09.2024 ಸಂಜೆ 05.05 ಗಂಟೆಗೆ,** (5) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **20.09.2024 ಬೆಳಗ್ಗೆ 11.30** ಗಂಟೆಯವರೆಗೆ.

ಷರತ್ತುಗಳು: 1) ಹೆಚ್ಚಿನ ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ವೆಬ್‌ಸೈಟ್ ವಿಳಾಸ: **https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ. ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು. 2) ಗುತ್ತಿಗೆ ಪಡೆಯಲು ಕನಿಷ್ಟ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಐ ಟಿ ಟಿ ನಿಬಂಧನೆ- 1,2,3,4 ಹಾಗೂ **KC-5** ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. 3) ಗುತ್ತಿಗೆದಾರರು ಜಿಎಸ್‌ಟಿ ಹೊರತುಪಡಿಸಿ ದರಗಳನ್ನು ನಮೂದಿಸಬೇಕು. 4) ಎಲ್ಲಾ ಟೆಂಡರ್‌ನ್ನು ಅಥವಾ ಯಾವುದಾದರೂ ಟೆಂಡರ್‌ನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ

ವಾಸಾಸಂಇ/ವಾ.ಪ್ರ/1897/2024-25

ದರ್ಶನ್, ಗ್ಯಾಂಗ್‌ಗೆ ಸೆ.12ರವರೆಗೆ ಜೈಲೇ

← ಮೊದಲಪುಟದಿಂದ

ಈ ವೇಳೆ ಚಾರ್ಜ್‌ಶೀಟ್‌ನ ಆರೋಪಿಗಳ ಪ್ರತಿ ತೆಗೆದುಕೊಂಡು ಬಂದಿದ್ದಾರಾ? ಎಂದು ನ್ಯಾಯಾಧೀಶರು ಪ್ರಶ್ನೆ ಮಾಡಿದಾಗ, ಎಸ್‌ಪಿಪಿ ಪ್ರಸನ್ನ ಕುಮಾರ್ ಎರಡು ದಿನಗಳಲ್ಲಿ ನೀಡುತ್ತೇವೆ ಎಂದರು. ಆಗ ಆರೋಪಿಗಳ ಪರ ವಕೀಲರು ಡಿಜಿಟಲ್ ಸಾಕ್ಷಿಗಳು ತಡವಾಗಿ ಬೇಕಾದರೂ ನೀಡಲಿ, ಆದರೆ ಚಾರ್ಜ್ ಶೀಟ್ ನೀಡಲಿ ಎಂದು ಮನವಿ ಮಾಡಿದರು. ಹೀಗಾಗಿ ಪೇಪರ್ ಚಾರ್ಜ್‌ಶೀಟ್ ಅನ್ನು ನೀಡಿ, ಡಿಜಿಟಲ್ ಸಾಕ್ಷಿಗಳನ್ನು ಎರಡು ವಾರಗಳಲ್ಲಿ ಆರೋಪಿಗಳ ಕಾಪಿ ನೀಡುವಂತೆ ಎಸ್‌ಪಿಪಿ ಪ್ರಸನ್ನ ಕುಮಾರ್‌ಗೆ ನ್ಯಾಯಾಧೀಶರು ಸೂಚನೆ ನೀಡಿದರು.

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ
ಮೆಸ್ಕಾಂ MESCOM
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಪೊರೇಟ್ ಕಛೇರಿ, ಮೆಸ್ಕಾಂ ಭವನ, ಬಿಜೈ, ಮಂಗಳೂರು-575004
ದೂರವಾಣಿ: 0824-2885795, CIN: U40109 KA 2002 SGC 030425

ಸಂಖ್ಯೆ: ಮ.ವಿ.ಸ.ಕಂ/ ಅ.ಇಂ(ಖ)/ ಕಾನಿಇಂ(ಕಾ)/ ಸಕಾನಿಇಂ/l/106281/2024 ದಿನಾಂಕ: 31.08.2024

ಅಲ್ಪಾವಧಿ ಟೆಂಡರು ಪ್ರಕಟಣೆ (ಕೆ.ಪಿ.ಪಿ.ಪಿ. ಮಾದರಿಯಲ್ಲಿ ಮಾತ್ರ)

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಯು ಬಂಟ್ವಾಳ ವಿಭಾಗದ ಬೆಳ್ತಂಗಡಿ ಉಪವಿಭಾಗ ವ್ಯಾಪ್ತಿಯಲ್ಲಿ 110/33/11 ಕೆ.ವಿ. ಗುರುವಾಯನಕೆರೆ ವಿದ್ಯುತ್ ಉಪಕೇಂದ್ರದಿಂದ 33/11 ಕೆ.ವಿ. ಬೆಳ್ತಂಗಡಿ ವಿದ್ಯುತ್ ಉಪಕೇಂದ್ರಕ್ಕೆ ಸುಮಾರು 5.8 ಕಿ.ಮೀ. ಉದ್ದದ 3CX400 ಚ.ಮೀ. ಭೂಗತ ಕೇಬಲನ್ನು ಅಳವಡಿಸಿ 33 ಕೆ.ವಿ ಲಿಂಕ್ ಲೈನ್ ನಿರ್ಮಾಣ ಮಾಡುವ ಕಾಮಗಾರಿಯನ್ನು ಪೂರ್ಣ ಗುತ್ತಿಗೆ ಆಧಾರದಲ್ಲಿ ಕೈಗೆತ್ತಿಕೊಳ್ಳಲು ಬಿಡ್ ವಿಚಾರಣಾ ಸಂಖ್ಯೆ: MESCOM/2024-25/EL/WORK_INDENT244 ರಲ್ಲಿ ಟೆಂಡರ್‌ಗಳನ್ನು ಆಹ್ವಾನಿಸುತ್ತಿದೆ.
ಆಸಕ್ತಿಯುಳ್ಳ ಅರ್ಹ ಬಿಡ್ಡುದಾರರು ವೆಬ್‌ಸೈಟ್ https://kppp.karnataka.gov.in ಗೆ ದಿನಾಂಕ 10.09.2024 ಅಥವಾ ನಂತರ ಲಾಗ್ ಆನ್ ಮಾಡಬಹುದು.

DIPR / MNG / 585/ MPL / 24-25 ಸಹಿ/- ಅಧೀಕ್ಷಕ ಇಂಜಿನಿಯರ್ (ವಿ) (ಖರೀದಿ) ಕಾರ್ಪೊರೇಟ್ ಕಛೇರಿ

ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ : 1912ಕ್ಕೆ ಕರೆ ಮಾಡಿ

ಮಾಲೂರು ನಗರ ಯೋಜನಾ ಪ್ರಾಧಿಕಾರ
ಮಾಲೂರು, ಮಾರುತಿ ಬಡಾವಣೆ 2ನೇ ಹಂತ, ಮಾಡ್ರನ್ ಶಾಲೆ ಹತ್ತಿರ, ತಿರುಮಲ ಕಲ್ಯಾಣ ಮಂಟಪ ರಸ್ತೆ, ಮಾಲೂರು-563 130, ಕೋಲಾರ ಜಿಲ್ಲೆ, ಕಛೇರಿ ದೂರವಾಣಿ ಸಂಖ್ಯೆ: 08151-299920,
Web Site: www.malur.tpa.gov.in,
Email: ms.malur.planning.authority@gmail.com

ಸಂಖ್ಯೆ: ಮಾಯೋಪ್ರಾ/ಭೂ.ಬ/2023-24/496 ದಿನಾಂಕ:05.09.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರಾದ ಶ್ರೀ.ಎ.ವಿನೋದ್ ಕುಮಾರ್‌ರೆಡ್ಡಿ ಮಾಲೂರು ತಾಲ್ಲೂಕು, ಕಸಬಾ ಹೋಬಳಿ, ಬೆಳ್ಳಾವಿ ಗ್ರಾಮದ ಸ.ನಂ.112 ರಲ್ಲಿ 2-16 ಎಕರೆ ಮತ್ತು 143 ರಲ್ಲಿ 2-04 ಎಕರೆ ಜಮೀನುಗಳನ್ನು "ವ್ಯವಸಾಯ" ವಲಯದಿಂದ "ವಾಣಿಜ್ಯ" ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಕೋರಿದ್ದು,

ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗವಕಾಶ ಸೃಷ್ಠಿಯಾಗುತ್ತದೆ. ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡಿದಂತಾಗುತ್ತದೆ. ಇದರಿಂದ ನಗರ ಪ್ರದೇಶದ ಸಮಗ್ರ ಅಭಿವೃದ್ಧಿ ಹೊಂದುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ವಸತಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಚಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ಸದಸ್ಯ ಕಾರ್ಯದರ್ಶಿ,
ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:230/ಕೆಎಸ್‌ಎಂಸಿಎ/2024-25

ನಾಡಿದ್ದೇ ಫೈನಲ್

← ಮೊದಲಪುಟದಿಂದ

ಪತ್ನಿ ಆಸ್ತಿಯನ್ನು ಪತಿಯ ಆಸ್ತಿ ಎಂದು ಪರಿಗಣಿಸಿ: ಸ್ನೇಹಮಯಿ ಕೃಷ್ಣ ಪರ ವಕೀಲೆ ಲಕ್ಷ್ಮಿ ಅಯ್ಯಂಗಾರ್ ವಾದ ಮಂಡಿಸಿ, 1996-1999 ಅವಧಿಯಲ್ಲಿ ಸಿದ್ದರಾಮಯ್ಯ ಅವರು ಡಿಸಿಎಂ ಆಗಿದ್ದಾಗ ಡಿನೋಟಿಫಿಕೇಷನ್ ಮಾಡಲಾಗಿದೆ. 2004-2007ರಲ್ಲಿ ಡಿಸಿಎಂ ಆಗಿದ್ದಾಗ ಭೂ ಪರಿವರ್ತನೆ ಮಾಡಲಾಗಿದೆ. 2013 - 2018 ವರೆಗೆ ಸಿಎಂ ಆಗಿದ್ದಾಗ ಪರಿಹಾರದ ಸೈಟ್‌ಗೆ ಅರ್ಜಿ ಸಲ್ಲಿಸಲಾಗಿದೆ. 2018-2022 ವರೆಗೆ ಸಿದ್ದರಾಮಯ್ಯ ಶಾಸಕರಾಗಿದ್ದರು. ಸರಕಾರಿ ಗೆಸ್ಟ್ ಹೌಸ್‌ನಲ್ಲಿ ಮುಡಾದಿಂದ ಸೇಲ್ ಡೀಡ್ ಮಾಡಿಕೊಡಲಾಗಿದೆ. ಸಬ್ ರಿಜಿಸ್ಟ್ರಾರ್ ಕಚೇರಿಗೆ ಹೋಗದೇ ಸೇಲ್ ಡೀಡ್ ಮಾಡಲಾಗಿದೆ. ಅಧಿಕಾರ ದುರುಪಯೋಗಪಡಿಸಿಕೊಂಡು ಹೀಗೆ ಮಾಡಲಾಗಿದೆ. ಸಿದ್ದರಾಮಯ್ಯ ಅಧಿಕಾರದಲ್ಲಿದ್ದಾಗಲೇ ಈ ಎಲ್ಲ ಚಟುವಟಿಕೆ ನಡೆದಿವೆ. ಪತ್ನಿಗೆ ಬೇರೆ ಆದಾಯದ ಮೂಲಗಳಿರಲಿಲ್ಲ. ಆದಾಯ ತೆರಿಗೆ ರಿಟರ್ನ್ ಅನ್ನು ಸಿದ್ದರಾಮಯ್ಯ ಪತ್ನಿ ಫೈಲ್ ಮಾಡಿಲ್ಲ. ಹೀಗಾಗಿ ಪತ್ನಿಯ ಆಸ್ತಿಯನ್ನು ಪತಿಯ ಆಸ್ತಿ ಎಂದೇ ಪರಿಗಣಿಸಬೇಕು. ಸಿದ್ದರಾಮಯ್ಯ ಮೇಲಿನ ಆರೋಪಗಳಿಗೆ ಪುರಾವೆಗಳಿವೆ ಎಂದು ವಾದ ಮಂಡನೆ ಪೂರ್ಣಗೊಳಿಸಿದರು.

ಸಿಎಂ ಪರ ಹಿರಿಯ ವಕೀಲ ರವಿ ವರ್ಮಕುಮಾರ್ ಅವರು, ದೂರುದಾರರು ಕೆಸರೆ ಗ್ರಾಮನೇ ಇಲ್ಲ ಎಂದು ಆರೋಪಿಸಿದ್ದಾರೆ. ಅವರು ಗ್ರಾಮ ನುಂಗಿಬಿಟ್ಟಿದ್ದಾರೆ, ಗ್ರಾಮ ಎಲ್ಲಿದೆ, ಸರ್ವೆ ನಂಬರ್ ಎಲ್ಲಿದೆ ನಾನು ತೋರಿಸುತ್ತೇನೆ ಎಂದರು. ಬಳಿಕ ಸೆಪ್ಟೆಂಬರ್ 12ರಂದು ವಾದಿಸುವುದಾಗಿ ಸಿದ್ದರಾಮಯ್ಯನವರ ಪರ ವಕೀಲ ಅಭಿಷೇಕ್ ಸಿಂಘ್ವಿ ಕೋರ್ಟ್‌ಗೆ ಮನವಿ ಮಾಡಿದರು.

ಸುದ್ದಿಮನೆಯ ಸ್ಥಿತಪ್ರಜ್ಞ ನಾಡಿಗೇರ

ಹಿರಿಯ ಪತ್ರಕರ್ತರಾದ ವಸಂತ್ ನಾಡಿಗೇರ್ ಅವರ ನಿಧನವಾರ್ತೆ ನೋವುಂಟು ಮಾಡಿದೆ. ವಿಜಯ ಕರ್ನಾಟಕದಲ್ಲಿ ಹಿರಿಯ ಸಹಾಯಕ ಸಂಪಾದಕರಾಗಿ, ವಿಶ್ವವಾಣಿಯಲ್ಲಿ ಕಾರ್ಯನಿರ್ವಾಹಕ ಸಂಪಾದಕರಾಗಿ, ಸಂಯುಕ್ತ ಕರ್ನಾಟಕದಲ್ಲಿ ಸಂಪಾದಕರಾಗಿ ದಶಕಗಳಿಂದ ಪತ್ರಿಕಾರಂಗದಲ್ಲಿ ಸೇವೆ ಸಲ್ಲಿಸುತ್ತಿದ್ದ ವಸಂತ್ ನಾಡಿಗೇರ್ ಅವರ ಅಗಲಿಕೆಯಿಂದ ಪತ್ರಿಕಾರಂಗಕ್ಕೆ ಬಹುದೊಡ್ಡ ನಷ್ಟವಾಗಿದೆ. ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುತ್ತೇನೆ. ಅವರ ದುಃಖತಪ್ತ ಕುಟುಂಬ ವರ್ಗಕ್ಕೆ ನನ್ನ ಸಂತಾಪಗಳು.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಹಿರಿಯ ಪತ್ರಕರ್ತ ವಸಂತ್ ನಾಡಿಗೇರ್ ಅವರ ನಿಧನದ ಸುದ್ದಿ ಕೇಳಿ ಬೇಸರವಾಗಿದೆ. ಅವರ ಅಗಲಿಕೆ ಪತ್ರಿಕಾರಂಗಕ್ಕೆ ಒಂದು ದೊಡ್ಡ ನಷ್ಟ. ಹೆಡ್‌ಲೈನ್‌ಗಳ ದಾದಾ ಎಂದೇ ವಸಂತ್ ಅವರು ಪತ್ರಿಕಾ ವಲಯದಲ್ಲಿ ಹೆಸರಾಗಿದ್ದರು. ಸಂಯುಕ್ತ ಕರ್ನಾಟಕ ಪತ್ರಿಕೆಯ ಮೂಲಕ ವೃತ್ತಿಯನ್ನು ಆರಂಭಿಸಿ ಇದೀಗ ಅದೇ ಪತ್ರಿಕೆಯ ಸಂಪಾದಕ ಹುದ್ದೆಗೆ ಏರಿದ್ದರು. ವಿಜಯ ಕರ್ನಾಟಕ, ಕನ್ನಡ ಪ್ರಭ, ವಿಶ್ವವಾಣಿ ಪತ್ರಿಕೆಗಳಲ್ಲಿ ಕಾರ್ಯ ನಿರ್ವಹಿಸಿದ್ದರು. ಹಲವಾರು ಯುವ ಪತ್ರಕರ್ತರನ್ನು ಬೆಳೆಸಿದ ನಾಡಿಗೇರ್ ಅವರ ಆತ್ಮಕ್ಕೆ ಶಾಂತಿ ಸಿಗಲಿ.

- ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ



ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕರಾಗಿದ್ದ ವಸಂತ್ ನಾಡಿಗೇರ್ ಅವರ ನಿಧನದ ಸುದ್ದಿ ಕೇಳಿ ಮನಸ್ಸಿಗೆ ಅತ್ಯಂತ ಆಘಾತ ವಾಯಿತು. ಸದಾ ಹಸನ್ಮುಖಿಯಾಗಿದ್ದ ಅವರು ನನಗೆ ಅತ್ಯಂತ ಆತ್ಮೀಯರು ಸ್ನೇಹಪರ ವ್ಯಕ್ತಿಯಾಗಿದ್ದರು. ಅವರ ಅಗಲಿಕೆಯಿಂದ ಪತ್ರಿಕಾ ರಂಗಕ್ಕೆ ದೊಡ್ಡ ನಷ್ಟ ಉಂಟಾಗಿದೆ. ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ಅವರ ಕುಟುಂಬ ವರ್ಗ ಹಾಗೂ ಅವರ ಅಭಿಮಾನಿಗಳಿಗೆ ನೀಡಲಿ, ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

-ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ

ಹಿರಿಯ ಪತ್ರಕರ್ತರು, ಸಂಯುಕ್ತ ಕರ್ನಾಟಕ ಪತ್ರಿಕೆ ಸಂಪಾದಕರೂ ಆಗಿದ್ದ ವಸಂತ್ ನಾಡಿಗೇರ್ ಅವರ ನಿಧನದ ವಾರ್ತೆ ಕೇಳಿ ಬಹಳ ದುಃಖವಾಯಿತು. ಪ್ರತಿಭಾನ್ವಿತರು ಮತ್ತು ಪ್ರಯೋಗಶೀಲರಾಗಿದ್ದ ಶ್ರೀಯುತರು ಕನ್ನಡಪ್ರಭ, ವಿಜಯ ಕರ್ನಾಟಕ, ವಿಶ್ವವಾಣಿ ಹಾಗೂ ಸಂಯುಕ್ತ ಕರ್ನಾಟಕ ಪತ್ರಿಕೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಅವರು ಮಾಧ್ಯಮ ಮೌಲ್ಯಗಳ ಪ್ರತೀಕವಾಗಿದ್ದರು. ವಸಂತ್ ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ಅವರ ಕುಟುಂಬಕ್ಕೆ ನೀಡಲಿ.

-ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

ಹಿರಿಯ ಪತ್ರಕರ್ತ ವಸಂತ್ ನಾಡಿಗೇರ್ ಅವರು ವಿಧಿವಶರಾದ ಸುದ್ದಿ ಅತ್ಯಂತ ದುಃಖವನ್ನು ಉಂಟುಮಾಡಿದೆ. ವಿಜಯ ಕರ್ನಾಟಕ, ಸಂಯುಕ್ತ ಕರ್ನಾಟಕ ಸೇರಿದಂತೆ ಹಲವು ಮಾಧ್ಯಮ ಸಂಸ್ಥೆಗಳಲ್ಲಿ ಅವರು ಅಪಾರ ಸೇವೆ ಸಲ್ಲಿಸಿದ್ದರು. ಅಗಲಿದ ಅವರ ಚೇತನಕ್ಕೆ ಚಿರಶಾಂತಿ ಪ್ರಾರ್ಥಿಸುತ್ತಾ ಅವರ ಕುಟುಂಬದವರಲ್ಲಿ ಸಂತಾಪಗಳನ್ನು ಸಲ್ಲಿಸುತ್ತೇನೆ.

- ಬಿ.ಎಸ್. ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ

ಸಂಯುಕ್ತ ಕರ್ನಾಟಕ ಪತ್ರಿಕೆ ಸಂಪಾದಕ ವಸಂತ್ ನಾಡಿಗೇರ್ ಅವರ ನಿಧನಕ್ಕೆ ತೀವ್ರ ಸಂತಾಪ. ಪತ್ರಿಕೋದ್ಯಮದಲ್ಲಿ ಪ್ರಯೋಗಶೀಲತೆ ಹಾಗೂ ಹೊಸತನಕ್ಕೆ ಹೆಸರಾಗಿದ್ದ ವಸಂತ್ ನಾಡಿಗೇರ್ ಪತ್ರಿಕಾ ರಂಗದ ಮೌಲ್ಯಗಳ ಎತ್ತಿ ಹಿಡಿದಿದ್ದರು. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ.

-ಜಮೀರ್ ಅಹ್ಮದ್, ಸಚಿವ

ಹಲವು ಮಾಧ್ಯಮ ಸಂಸ್ಥೆಗಳಲ್ಲಿ ಅಪಾರ ಸೇವೆ ಸಲ್ಲಿಸಿ ನೂರಾರು ಯುವ ಪತ್ರಕರ್ತರನ್ನು ಬೆಳೆಸಿದ್ದ ವಸಂತ್ ನಾಡಿಗೇರ್ ಅವರು ಅನೇಕ ಪತ್ರಕರ್ತರಿಗೆ ಗುರು ಸಮಾನರಾಗಿದ್ದರು. ತಮ್ಮ ಸಜ್ಜನಿಕೆ, ವೃತ್ತಿಪರತೆ, ಪ್ರಾಮಾಣಿಕತೆಯಿಂದ ಪತ್ರಿಕೋದ್ಯಮಕ್ಕೆ ಮಾದರಿಯಾಗಿದ್ದರು.

-ಆರ್. ಅಶೋಕ್, ಪ್ರತಿಪಕ್ಷ ನಾಯಕ

ಸುದ್ದಿಮನೆಯ PUNಡಿತ ಇನ್ನಿಲ್ಲ

ಸುದ್ದಿ ಮನೆಗೆ ಭೂಷಣರಾಗಿದ್ದ ಪತ್ರಕರ್ತ ವಸಂತ ನಾಡಿಗೇರ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿಶ್ವವಾಣಿಯ ಕಾರ್ಯನಿರ್ವಾಹಕ ಸಂಪಾದಕರಾಗಿ, ಸಂಯುಕ್ತ ಕರ್ನಾಟಕದಲ್ಲಿ ಸಂಪಾದಕರಾಗಿದ್ದ ಹಿರಿಯ ಪತ್ರಕರ್ತ ವಸಂತ್ ನಾಡಿಗೇರ್ ಅವರು ಸೋಮವಾರ ಮುಂಜಾನೆ ಕೊನೆಯುಸಿರು ಎಳೆದಿದ್ದಾರೆ.

ಸಂಯುಕ್ತ ಕರ್ನಾಟಕದಲ್ಲಿ ವೃತ್ತಿ ಜೀವನವನ್ನು ಆರಂಭಿಸಿದ್ದ ವಸಂತ ನಾಡಿಗೇರ್, ಕನ್ನಡಪ್ರಭ ಪತ್ರಿಕೆಯ ಸಂಪಾದಕೀಯ ವಿಭಾಗದಲ್ಲಿ ಹತ್ತು ವರ್ಷ ಸೇವೆ ಸಲ್ಲಿಸಿದ್ದರು. ಆನಂತರ ವಿಜಯ ಕರ್ನಾಟಕದಲ್ಲಿ ದಶಕಗಳ ಕಾಲ ಸುದ್ದಿ ಸಂಪಾದಕ ಸೇರಿದಂತೆ ವಿವಿಧ ಹುದ್ದೆಗಳನ್ನು ಅಲಂಕರಿಸಿದರು.

ವಸಂತ ನಾಡಿಗೇರ್ ತಮ್ಮ ಚುರುಕಾದ ಶೀರ್ಷಿಕೆಗಳಿಗಾಗಿ ಖ್ಯಾತರಾಗಿದ್ದರು. ಸುದ್ದಿಮನೆಯ ನಾನಾ ವಿಭಾಗಗಳ ಕಾರ್ಯನಿರ್ವಹಣೆಯನ್ನು ಬಲ್ಲವರಾಗಿದ್ದ ಅವರು, ಭಾಷೆಯ ಸರಿಯಾದ ಬಳಕೆ ಹಾಗೂ ಸುದ್ದಿಗಳ ಚುರುಕಾದ ವಿನ್ಯಾಸಕ್ಕೆ ಒತ್ತು ನೀಡುತ್ತಿದ್ದರು. ಅವರು ನೀಡಿದ ಅನೇಕ ಶೀರ್ಷಿಕೆಗಳನ್ನು ಪತ್ರಕರ್ತರು ಇಂದಿಗೂ ನೆನೆಯುತ್ತಾರೆ. ವಿಜಯಕರ್ನಾಟಕ ಪತ್ರಿಕೆಯಲ್ಲಿ ಅವರು ನೀಡಿದ ಶೀರ್ಷಿಕೆಗಳು ಮನೆ ಮಾತಾಗಿದ್ದವು. ವಿಶ್ವವಾಣಿಯಲ್ಲಿ ಅವರು 'ನಾಡಿಮಿಡಿತ' ಎಂಬ ಹೆಸರಿನ ಅಂಕಣವನ್ನು ಬಹುಕಾಲ ಬರೆದಿದ್ದರು

ಸಂಯುಕ್ತ ಕರ್ನಾಟಕದಿಂದ ವೃತ್ತಿ ಜೀವನ ಆರಂಭ

ವಸಂತ್ ನಾಡಿಗೇರ್ ಅವರು ಮೂಲತಃ ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನವರು. ಅಲ್ಲಿಯೇ ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ ಪಡೆದು ಧಾರವಾಡದಲ್ಲಿ ಬಿಎಸ್‌ಸಿ, ಎಂಎಸ್‌ಸಿ ಪದವಿ ಪಡೆದವರು. ರಸಾಯನ ಶಾಸ್ತ್ರ ಪದವೀಧರರಾದ ವಸಂತ್ ನಾಡಿಗೇರ್ ಎಂಬತ್ತರ ದಶಕದಲ್ಲಿ ಸಂಯುಕ್ತ ಕರ್ನಾಟಕದಿಂದ ವೃತ್ತಿ ಜೀವನ ಆರಂಭಿಸಿದವರು. ಆನಂತರ ಕನ್ನಡ ಪ್ರಭ ಸೇರಿ ಅಲ್ಲಿ ಒಂದೂವರೆ ದಶಕ ಕಾಲ ಕೆಲಸ ಮಾಡಿದರು. ಬಳಿಕ ವಿಜಯ ಕರ್ನಾಟಕ ಪತ್ರಿಕೆಯ ಆರಂಭದಿಂದಲೂ ಮುಖ್ಯ ಉಪಸಂಪಾದಕರಾಗಿ ಸೇರಿ ಅಲ್ಲಿಯೇ ಬಹುಕಾಲ ಸುದ್ದಿ ಸಂಪಾದಕರಾಗಿದ್ದರು. ವಿಶ್ವವಾಣಿ ಪತ್ರಿಕೆಯ ಕಾರ್ಯ ನಿರ್ವಾಹಕ ಸಂಪಾದಕರಾಗಿ ಸದ್ಯ ಸಂಯುಕ್ತ ಕರ್ನಾಟಕ ಸಂಪಾದಕರಾಗಿ ಕೆಲಸ ಮಾಡುತ್ತಿದ್ದರು. ಉತ್ತಮ ಬರಹಗಾರರೂ ಆಗಿದ್ದ ವಸಂತ ನಾಡಿಗೇರ್ ಅವರು ಕನ್ನಡಪ್ರಭದಲ್ಲಿ ಆರ್ಥಿಕ ವಿಶ್ಲೇಷಣೆ ಬರೆಯುತ್ತಿದ್ದರು. ಲತಾ ಮಂಗೇಶ್ಕರ್ ಕುರಿತಾದ ಕೃತಿಯನ್ನು ಕನ್ನಡದಲ್ಲಿ ಬರೆದಿದ್ದರು. ವಿಜಯ ಕರ್ನಾಟಕದಲ್ಲಿ ಅವರ 'ಬಡಿಗೇರ್ ಹಾಗೂ ನಾಡಿಗೇರ್' ಎನ್ನುವ ಕಾಮಿಕ್ ಅಂಕಣವೂ ಜನಪ್ರಿಯವಾಗಿತ್ತು.

ವಾಚ್‌ಗಳ ಬಗ್ಗೆ ಕ್ರೇಜ್

ನಾಡಿಗೇರ್ ಅವರಿಗೆ ಸಿನಿಮಾ, ಕ್ರಿಕೆಟ್, ಸಂಗೀತ, ರಾಷ್ಟ್ರೀಯ-ಅಂತಾರಾಷ್ಟ್ರೀಯ ವಿದ್ಯಮಾನಗಳ ಬಗ್ಗೆ ಅಪಾರ ಆಸಕ್ತಿಯನ್ನು ಹೊಂದಿದ್ದರು. ಆದರೆ ಈ ಎಲ್ಲದರೊಂದಿಗೆ ಅವರಿಗೆ ವಾಚ್‌ಗಳನ್ನು ಸಂಗ್ರಹಿಸುವ ವಿಭಿನ್ನ ಕ್ರೇಜ್ ಇತ್ತು. ಹಳೇ ಕಾಲದ ವಾಚ್‌ಗಳಿಂದ ಹಿಡಿದು, ಇಂದಿನ ಸ್ಮಾರ್ಟ್ ವಾಚ್‌ಗಳು ಅವರ ಸಂಗ್ರಹದಲ್ಲಿದ್ದವು. ಕಚೇರಿಗೆ ಬರುವಾಗ ದಿನಕ್ಕೊಂದು ವಾಚ್ ಕಟ್ಟಿಕೊಂಡು ಬರುತ್ತಿದ್ದ ಅವರು, ಯಾವುದೇ ವಾಚಿನ ಬಗ್ಗೆ ಕೇಳಿದರೂ, ಅದರ ಇತಿಹಾಸವನ್ನು ಹೇಳುತ್ತಿದ್ದರು.



ವಸಂತ್, ಈ ಬರಹಕ್ಕೆ ನೀವೇ ಹೆಡ್‌ಲೈನ್ ಹಾಕಿಕೊಳ್ಳಿ!

← ಮೊದಲಪುಟದಿಂದ

ಡೆಡ್‌ಲೈನ್ ಮೀರುತ್ತಿದೆ ಎಂದು ಸಹೋದ್ಯೋಗಿ ಗಳು ಕಿರುಚಿದರೂ, ಪುಟದ ಮೇಲೆ ಒಂದು ಸಲವಾದರೂ ಕಣ್ಣಾಡಿಸದೇ ಅವರು ಮುದ್ರಣಕ್ಕೆ ಕಳಿಸು ತ್ತಿರಲಿಲ್ಲ. ಅವರಿಗೆ ಒಪ್ಪಿಸಿದ ಕೆಲಸವನ್ನು ಮತ್ತೊಬ್ಬರು ನೋಡಬೇಕಾದ, ಕೇಳಿ ವಿಚಾರಿಸಬೇಕಾದ, ಆಗಾಗ ನೆನಪಿಸಬೇಕಾದ ಪ್ರಮೇಯವೇ ಬರುತ್ತಿರ ಲಿಲ್ಲ. ಅವರ ಶ್ರದ್ಧೆ, ಅಚ್ಚುಕಟ್ಟುತನವನ್ನು ಪರೀಕ್ಷಿಸ ಬೇಕಾದ ಪ್ರಸಂಗ ನನಗೆ ಒಮ್ಮೆಯೂ ಬರಲಿಲ್ಲ. ವಸಂತ್ ವೃತ್ತಿಬದ್ಧತೆ ಅಂಥದ್ದು.

ವಸಂತ್ ಹೆಡ್ ಲೈನ್ ಬರೆಯುವುದರಲ್ಲಿ ನಿಸ್ಸೀಮರು. ಸುದ್ದಿ ಬ್ರೇಕ್ ಆಗುತ್ತಿದ್ದಂತೆ, ಯಾವ ಹೆಡ್ ಲೈನ್ ಬರೆಯಬೇಕು ಎಂದು ಯೋಚಿಸಲಾರಂಭಿಸುತ್ತಿದ್ದರು. ಒಂದೇ ಸುದ್ದಿಗೆ ಹತ್ತು ಹೆಡ್ ಲೈನ್ ಬರೆದು ನನಗೆ ಹಿಡಿಯುತ್ತಿದ್ದರು. ಆ ಪೈಕಿ ಎಲ್ಲವೂ ಚೆನ್ನಾಗಿಯೇ ಇರುತ್ತಿದ್ದವು. ಒಮ್ಮೆ ಒಂದೇ ಸುದ್ದಿಗೆ ಪ್ರಯೋಗಾರ್ಥವಾಗಿ, ಎಂಟು ಹೆಡ್ ಲೈನ್‌ಗಳನ್ನೂ ಪ್ರಕಟಿಸಿದ್ದೆವು. ಹುಲಿ ಸಂರಕ್ಷಣೆಯಲ್ಲಿ ಕರ್ನಾಟಕ ಮೊದಲ ಸ್ಥಾನ ಪಡೆದ ಸುದ್ದಿಗೆ, 'ಸಂರಕ್ಷಣೆಯಲ್ಲಿ ಕರ್ನಾಟಕವೇ ಹುಲಿ', ಬ್ರಿಯಾನ್ ಲಾರ 400 ರನ್ ಹೊಡೆದಾಗ, 'ದಾಖಲೆ ಇಲ್ಲದೇ ಇರ'ಲಾರ', ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸುವುದು ಕಷ್ಟ ಎಂಬ ಸುದ್ದಿಗೆ, 'ಭಾಗ್ಯದ ಲಕ್ಷ್ಮೀ ಭಾರಮ್ಮ', ಚುನಾವಣೆಯ ಅಂಕಿ-ಅಂಶಗಳ ಕುರಿತ ಕಿರು ಅಂಕಣಕ್ಕೆ 'ಮತಮ್ಯಾಟಿಕ್ಸ್', ಹರಭಜನ್ ಸಿಂಗ್ (ಬಜ್ಜಿ) ಶ್ರೀಶಾಂತ್ ಕೆನ್ನೆಗೆ ಬಾರಿಸಿದಾಗ, 'ಶ್ರೀಶಾಂತ್ ಕೆನ್ನೆಗೆ ಬಿಸಿ ಬಜ್ಜಿ' ... ಇವೆಲ್ಲ ಟಿಪಿಕಲ್ ವಸಂತ ನಾಡಿಗೇರ್ ಶೀರ್ಷಿಕೆಗಳು. ಕೆಲವೊಮ್ಮೆ ನಾನು ಪುಟಗಟ್ಟಲೆ ಬರೆದು, ಒಂದು ಸಾಲಿನ ಹೆಡ್ ಲೈನ್‌ಗಾಗಿ ಯೋಚಿಸಿ, ಕೊನೆಗೂ ಅದು ಹೊಳೆ ಯದೇ, ಕಾಪಿಯನ್ನು ವಸಂತ್ ಮುಂದೆ ಹಿಡಿದಿದ್ದುಂಟು. ಅಂಥ ಸಂದರ್ಭಗಳಲ್ಲಿ ಅವರು ನನ್ನನ್ನು ನಿರಾಸೆಗೊಳಿಸಿದ್ದೇ ಇಲ್ಲ.

ವಸಂತ್ ವಯಸ್ಸಿನಲ್ಲಿ ನನಗಿಂತ ಎರಡು ವರ್ಷ ಹಿರಿಯರು. ಧಾರವಾಡದ ಕರ್ನಾಟಕ ವಿಶ್ವ ವಿದ್ಯಾಲಯದಲ್ಲಿ ಅವರು ಸ್ನಾತಕೋತ್ತರ ಅಂತಿಮ ವರ್ಷದಲ್ಲಿದ್ದಾಗಿನಿಂದ (1987ರಲ್ಲಿ) ನನಗೆ ಅವರ ಪರಿಚಯ ಮತ್ತು ಒಡನಾಟ. ನಾನು ಬೆಂಗಳೂರಿನಲ್ಲಿ 'ಸಂಯುಕ್ತ ಕರ್ನಾಟಕ' ಸೇರುವ ಹೊತ್ತಿಗೆ, ಅವರು ಅದೇ ಪತ್ರಿಕೆಯಲ್ಲಿ ಎರಡು ವರ್ಷ ಕೆಲಸ ಮಾಡಿ, 'ಕನ್ನಡಪ್ರಭ' ಸೇರಿದ್ದರು. ನಾನು 'ಕನ್ನಡ ಪ್ರಭ' ಸೇರುವ ಹೊತ್ತಿಗೆ ಅವರು ಅಲ್ಲಿ ಹಿರಿಯ ಉಪಸಂಪಾದಕರಾಗಿ, ನಾನು ಬರೆದ ಕಾಪಿಗಳನ್ನು ತಿದ್ದುತ್ತಿದ್ದರು. ನಂತರ ನಾನು 'ವಿಜಯ ಕರ್ನಾಟಕ' ಪತ್ರಿಕೆಗೆ ಪ್ರಧಾನ ಸಂಪಾದಕನಾಗಿ ಸೇರಿಕೊಳ್ಳುವ ಹೊತ್ತಿಗೆ ಅವರು ಡೆಪ್ಯುಟಿ ನ್ಯೂಸ್ ಎಡಿಟರ್ ಆಗಿದ್ದರು. ಸುದ್ದಿ ಸಂಪಾದಕ ಹುದ್ದೆ ಖಾಲಿಯಿತ್ತು. ವಸಂತ್ ಅವರಿಗೆ ಬಡ್ತಿ ನೀಡಿ, ಆ ಹುದ್ದೆ ಭರ್ತಿ ಮಾಡಿದೆ.

> **ಪತ್ರಿಕೆಯ ಸುದ್ದಿ ಸಂಪಾದಕ (News Editor) ರಾದವರು, ಸಂಪಾದಕರ ಜತೆಯೇ ಹೆಜ್ಜೆ ಹಾಕಬೇಕು. ಅವರು ಬಾಯಿಬಿಟ್ಟು ಹೇಳದೇ ಇರುವುದನ್ನು ಗ್ರಹಿಸಿ, ಹೇಳಿದ್ದನ್ನು ಸರಿಯಾಗಿ ಅರ್ಥ ಮಾಡಿಕೊಂಡು, ಪತ್ರಿಕೆಯ ಪುಟಗಳಲ್ಲಿ ಸಾಕಾರಗೊಳಿಸುವುದು ಸಣ್ಣ ಸಂಗತಿಯಲ್ಲ. ಆದರ್ಶ ಸುದ್ದಿಮನೆಯ ಲಕ್ಷಣಗಳಲ್ಲಿ ಸಂಪಾದಕ ಮತ್ತು ಸುದ್ದಿ ಸಂಪಾದಕನ ಮಧ್ಯೆ ಏರ್ಪಡುವ ಉತ್ತಮ ಕೆಮಿಸ್ಟ್ರಿಯೂ ಒಂದು. ನನ್ನ ಮತ್ತು ವಸಂತ್ ಮಧ್ಯೆ ಅಂಥ ಅದ್ಭುತ ತಾಳ-ಮೇಳವಿತ್ತು. ಒಂದು ಸಲವೂ ನಮ್ಮಿಬ್ಬರ ಮಧ್ಯೆ ಭಿನ್ನಾಭಿ ಪ್ರಾಯ, ತಪ್ಪು ಕಲ್ಪನೆ, ಏರಿಳಿತ ಮೂಡಿದ್ದು ಇಲ್ಲವೇ ಇಲ್ಲ. ನಾನೂ ಸಹ ಅವರನ್ನು ಎಂದೂ ಲಘುವಾಗಿ ನಡೆಸಿಕೊಳ್ಳಲಿಲ್ಲ.**

ಐಎಎಸ್ ಮತ್ತು ಪೊಲೀಸ್ ಇಲಾಖೆಗಳಲ್ಲಿದ್ದಂತೆ, ಪತ್ರಕರ್ತರಲ್ಲೂ ಸೀನಿಯರ್ - ಜೂನಿಯರ್ ಭೇದ-ಭಾವ ಇದ್ದ ದಿನಗಳವು. 'ವಿಜಯ ಕರ್ನಾಟಕ'ಕ್ಕೆ ನಾನು ಸೇರಿಕೊಂಡ ಆರಂಭದ ಒಂದು ದಿನ ವಸಂತ್‌ಗೆ, 'ನಿಮಗಿಂತ ಜೂನಿಯರ್ ಆದ ನನ್ನನ್ನು ಸಂಪಾದಕನನ್ನಾಗಿ ಒಪ್ಪಿಕೊಂಡು ಜತೆಗೆ ಕೆಲಸ ಮಾಡಲು ನಿಮಗೆ ಯಾವ ಅಭ್ಯಂತರ, ಮುಜುಗರ ಇಲ್ಲ ತಾನೇ?' ಎಂದು ಕೇಳಿದ್ದೆ. ಇದಕ್ಕೆ ಕಾರಣವೂ ಇತ್ತು. ಕೆಲ ದಿನಗಳ ಹಿಂದಷ್ಟೇ, 'ಪ್ರಜಾ ವಾಣಿ'ಯಲ್ಲಿ ಸುಮಾರು ಮೂರು ದಶಕಗಳ ಕಾಲ ಕೆಲಸ ನಿರ್ವಹಿಸಿ, ನಾನು ಬರುವ ಮುನ್ನವೇ 'ವಿಜಯ ಕರ್ನಾಟಕ ಸೇರಿದ್ದ ಹಿರಿಯ ಪತ್ರಕರ್ತ ಯೊಬ್ಬರು, ನಾನು ಬರುತ್ತಿದ್ದಂತೆ, 'ನನಗಿಂತ ಕಿರಿಯನೊಂದಿಗೆ ಕೆಲಸ ಮಾಡುವುದಿಲ್ಲ' ಎಂದು ರಾಜೀನಾಮೆ ಪತ್ರ ಬಿಸಾಡಿ ಹೋಗಿದ್ದರು.

'ವಯಸ್ಸಿನಲ್ಲಿ ನೀವು ನನಗಿಂತ ಚಿಕ್ಕವರಿರ ಬಹುದು, ಅನುಭವದಲ್ಲಿ ಅಲ್ಲ. ನೀವೇ ನನ್ನ ಸಂಪಾದಕರು' ಎಂದು ಆಗ ವಸಂತ್ ಹೇಳಿದ್ದರು. ಮುಂದಿನ ಹತ್ತು ವರ್ಷಗಳ ಕಾಲ ಅವರು ನನ್ನೊಂದಿಗೆ ಆ ಪತ್ರಿಕೆಯಲ್ಲಿ ಜತೆಜತೆಯಾಗಿ ಅದೇ ವಿಶ್ವಾಸದಲ್ಲಿ ನಡೆದರು. ಆ ಅವಧಿಯಲ್ಲಿ ನಾವಿಬ್ಬರೂ ನಮ್ಮ-ನಮ್ಮ ಹೆಂಡತಿ-ಮಕ್ಕಳ ಜತೆ ಕಳೆದಿದ್ದಕ್ಕಿಂತ ಹೆಚ್ಚು ಸಮಯವನ್ನು 'ವಿಕ' ಸುದ್ದಿಮನೆಯಲ್ಲಿ ಕಳೆದಿದ್ದನ್ನು ಮರೆಯುವಂತೆಯೇ ಇಲ್ಲ. ನನಗೆ ಅಮೆರಿಕದ ಸಂಸ್ಥೆಯೊಂದು ಆಮಂತ್ರಣ ನೀಡಿದಾಗ, ನಾನು ವಸಂತ್ ಅವರನ್ನೂ ಜತೆಯಲ್ಲಿ ಹದಿನೈದು ದಿನಗಳ ಕಾಲ ಕರೆದುಕೊಂಡು ಹೋಗಿದ್ದೆ. ಅದು ಅವರಿಗೆ ಮೊದಲ ವಿದೇಶ ಪ್ರವಾಸವಾಗಿತ್ತು.

'ವಿಜಯ ಕರ್ನಾಟಕ'ದಲ್ಲಿ ನನ್ನ ಜತೆಯಲ್ಲಿದ್ದ ವರೆಲ್ಲ ಬರೆಯುತ್ತಿದ್ದರು. ಆದರೆ ವಸಂತ್‌ಗೆ ಬೇರೆ ಯವರು ಬರೆದಿದ್ದನ್ನು ತಿದ್ದುವುದೇ ಕಾಯಕವಾಗಿತ್ತು. ಒಂದು ದಿನ ಅವರನ್ನು ಕರೆದು, ಲತಾ ಮಂಗೇಶ್ಕರ್ ಕುರಿತು ನಾಲ್ಕು ಪುಸ್ತಕಗಳನ್ನು ಕೊಟ್ಟು, ಇವನ್ನು ಪೂರ್ತಿ ಓದಿ, ಆ 'ಸ್ವರ ಸಾಮ್ರಾಜ್ಞಿ'ಯ ಕುರಿತು ಅರವತ್ತು ಕಂತುಗಳ ಧಾರಾವಾಹಿ ಬರೆದುಕೊಡಿ ಎಂದು ಹೇಳಿದೆ. ಅದಕ್ಕೆ ವಸಂತ್ ಮಾನಸಿಕವಾಗಿ ಸಿದ್ಧರಿರಲಿಲ್ಲ. ನಾನು ಎಡಬಿಡದೇ ಆರು ತಿಂಗಳು ಹಿಂದೆ ಬಿದ್ದೆ. ನಂತರ ಅವರು ಆ ಧಾರಾವಾಹಿಯನ್ನು ಸೊಗಸಾಗಿ ನಿರೂಪಿಸಿ, ತಾವೊಬ್ಬ ಉತ್ತಮ ಬರಹಗಾರ ಎಂಬುದನ್ನೂ ಸಾಬೀತುಪಡಿಸಿದ್ದರು. ನಂತರ ಅದನ್ನು ಪುಸ್ತಕವಾಗಿ ಪ್ರಕಟಿಸಿ, ಮತ್ತೊಬ್ಬ 'ಸ್ವರ ಸಾಮ್ರಾಟ' ಎಸ್.ಪಿ.ಬಾಲಸುಬ್ರಮಣ್ಯ ಅವರಿಂದ ಬಿಡುಗಡೆ ಮಾಡಿಸಿದ್ದನ್ನು ಅನೇಕ ಸಲ ವಸಂತ್ ಅಭಿಮಾನ ಮತ್ತು ಕೃತಜ್ಞತೆಯಿಂದ ನೆನಪಿಸಿಕೊಂಡಿದ್ದುಂಟು. ನಿಸ್ಸಂದೇಹವಾಗಿ, 'ವಿಜಯ ಕರ್ನಾಟಕ'ದ ಯಶಸ್ಸಿನಲ್ಲಿ ವಸಂತ್ ಗೂ ಪಾಲು ಸಿಗಬೇಕು, ಕ್ರೆಡಿಟ್ಟು ಕೊಡಬೇಕು.

ನಾನು 'ವಿಶ್ವವಾಣಿ' ಪತ್ರಿಕೆಯನ್ನು ಆರಂಭಿಸಿ, ಐದು ವರ್ಷಗಳ ಬಳಿಕ, ನಾವಿಬ್ಬರೂ ಮತ್ತೊಮ್ಮೆ ಜತೆಯಾಗುತ್ತೇವೆ ಎಂದುಕೊಂಡಿರಲಿಲ್ಲ. ಆ ವೇಳೆಗೆ ಅವರೂ 'ವಿಜಯ ಕರ್ನಾಟಕ' ಬಿಟ್ಟಿದ್ದರು. ನಾನು 'ವಿಶ್ವವಾಣಿ'ಗೆ ಅವರನ್ನು 'ಕಾರ್ಯನಿರ್ವಾಹಕ ಸಂಪಾದಕ' ಹೊಣೆಗಾರಿಕೆಯನ್ನು ವಹಿಸಿದೆ. ವಸಂತ್ ಅವರ ಕಾರ್ಯವೈಖರಿ, ಬದ್ಧತೆಯಲ್ಲಿ ಗುಲಗುಂಜಿಯಷ್ಟೂ ವ್ಯತ್ಯಾಸವಾಗಿರಲಿಲ್ಲ. ಆದರೆ ಕೊನೆಕೊನೆಗೆ ಅವರಲ್ಲಿ ಬಳಲಿಕೆ ಕಾಣುತ್ತಿತ್ತು. ಒಂದು ದಿನ ನನ್ನನ್ನು ಭೇಟಿಯಾಗಿ, 'ನನ್ನ ಆರೋಗ್ಯದಲ್ಲಿ ಏರುಪೇರಾಗಿದೆ. ಸಕ್ಕರೆ ಕಾಯಿಲೆ ನನ್ನನ್ನು ಕಾಡುತ್ತಿದೆ. ಕಣ್ಣಿನ ಸಮಸ್ಯೆ ಇದೆ. ಹೃದಯ ಪರೀಕ್ಷೆ ಮಾಡಿಸಿಕೊಳ್ಳಬೇಕಿದೆ. ಮೂರು-ನಾಲ್ಕು ತಿಂಗಳಲ್ಲಿ ಸಂಪೂರ್ಣ ಚೆಕ್ ಅಪ್ ಮಾಡಿಸಿಕೊಂಡು, ಆರೋಗ್ಯ ಸುಧಾರಿಸಿಕೊಂಡು ವಾಪಸ್ ಬರುತ್ತೇನೆ. ನನಗೆ ನೀವು ರಜೆ ನೀಡಬೇಕು' ಎಂದು ಹೇಳಿದರು. ನಾನು ಒಲ್ಲದ ಮನಸ್ಸಿನಿಂದ ಒಪ್ಪಿದೆ.

ಅದಾಗಿ ಆರು ತಿಂಗಳ ಬಳಿಕ ಒಂದು ದಿನ ನನಗೆ ಫೋನ್ ಮಾಡಿ, 'ನಿಮ್ಮ ಜತೆಗೆ ಕೆಲಸ ಮಾಡುವ ವೇಗ ಮತ್ತು ಓಘ ನನ್ನಲ್ಲಿ ಈಗ ಇಲ್ಲ. ನಾನು ಸಂಯುಕ್ತ ಕರ್ನಾಟಕ ಸೇರುತ್ತೇನೆ. ನಿಮ್ಮ ಒಪ್ಪಿಗೆಯಿದೆ ಎಂದು ಭಾವಿಸುವೆ' ಎಂದರು. ನಾನು ಆಗಲೂ ಮರು ಮಾತಾಡಲಿಲ್ಲ. ತಮ್ಮಲ್ಲಿ ಕಳೆದು ಹೋದ ಏನನ್ನೋ ವಸಂತ್ ಹುಡುಕುತ್ತಿದ್ದಾರೆ ಎನಿಸುತ್ತಿತ್ತು. ಐದು ದಿನಗಳ ಹಿಂದಷ್ಟೇ ಅವರು ತಮ್ಮ ಅನಾರೋಗ್ಯದ ತೀವ್ರತೆಯನ್ನು ನನಗೆ ವಾಟ್ಸಾಪ್‌ನಲ್ಲಿ ಸವಿವರವಾಗಿ ನಿವೇದಿಸಿಕೊಂಡಾಗಲೇ ಪರಿಸ್ಥಿತಿ ಕೈಮೀರಿ ಹೋಗುತ್ತಿದೆ ಎಂಬುದರ ಸಣ್ಣ ಸುಳಿವು ಸಿಕ್ಕಿದ್ದು.

> **ನನಗೆ ಇವೆಲ್ಲಕ್ಕಿಂತ ಮುಖ್ಯವಾಗಿ ವಸಂತ್ ವ್ಯಕ್ತಿತ್ವದಲ್ಲಿ ಕಾಣುವ ಇನ್ನೊಂದು ಪ್ರಮುಖ ಸಂಗತಿ ಅಂದರೆ, ಪತ್ರಿಕೆಯ ನಿತ್ಯ ಕರ್ಮದ ಜತೆಗೆ ತಮ್ಮ ಸರೀಕರನ್ನು, ಕಿರಿಯರನ್ನು ಮತ್ತು ಒಂದೆರಡು ತಲೆಮಾರಿನ ಪತ್ರಕರ್ತರನ್ನು ತಿದ್ದಿದ, ಬರೆಯಿಸಿದ, ಭಾಷೆ ಕಲಿಸಿದ, ಕಸುಬನ್ನು ಹೇಳಿಕೊಟ್ಟ ಗುರು ಅಥವಾ ದೊಡ್ಡಣ್ಣನ ಜವಾಬ್ದಾರಿಯನ್ನು ಅತ್ಯಂತ ನಿಸ್ಪೃಹರಾಗಿ, ನಿರಪೇಕ್ಷಿತರಾಗಿ ನಿರ್ವಹಿಸಿದ್ದು. ಇದು ಸುದ್ದಿಮನೆಯ ಹಿರಿಯರು ಮಾಡಲೇಬೇಕಾದ, ಮನೆಯ ಅಜ್ಜ ಮಾಡುವ ಕೆಲಸಕ್ಕೆ ಸಮನಾದ ಜವಾಬ್ದಾರಿ. ಹೀಗಾಗಿ ಇಂದು ಕರ್ನಾಟಕದ ಪತ್ರಿಕೆ-ಟಿವಿ ಚಾನೆಲ್ಲುಗಳ ಪ್ರತಿ ಸುದ್ದಿಮನೆಯಲ್ಲೂ ವಸಂತ್ ಅವರಿಂದ 'ಪಾಠ' ಹೇಳಿಸಿಕೊಂಡ ಹಲವಾರು ಪತ್ರಕರ್ತರು ಸಿಗುತ್ತಾರೆ.**

ಮೂಲತಃ ಸಂಕೋಚದ ಸ್ವಭಾವದವರಾದ ವಸಂತ್, ತಮ್ಮ ಖಾಸಗಿ ವಿಷಯಗಳನ್ನು ಯಾರ ಮುಂದೆಯೂ ಹೇಳಿಕೊಂಡಿದ್ದು ಇಲ್ಲವೇ ಇಲ್ಲ. ತಮ್ಮ ಅನಾರೋಗ್ಯವನ್ನೂ ಬಚ್ಚಿಟ್ಟುಬಿಟ್ಟರು. ಸುಮಾರು ಹದಿಮೂರು ವರ್ಷಗಳ ಕಾಲ ಒಟ್ಟಿಗೆ ಕೆಲಸ ಮಾಡಿದ ಸಹೋದ್ಯೋಗಿ, ಮೂವತ್ತೇಳು ವರ್ಷಗಳ ಆಪ್ತ ಸ್ನೇಹಿತ ಈ ರೀತಿ ಸುಮ್ಮನೆ ತಿರುಗಿ ಬಾರದ ಲೋಕಕ್ಕೆ ಎದ್ದು ಹೋಗುವ ನೋವನ್ನು, ಅವರೊಂದಿಗೆ ಕಳೆದ ಸವಿನೆನಪುಗಳೂ ಶಮನ ಮಾಡಲಾರವು.

ವಸಂತ್, ನಿಮ್ಮ ಕುರಿತ ಈ ಬರಹಕ್ಕೆ ನೀವೇ ಹೆಡ್ ಲೈನ್ ಹಾಕಿಕೊಳ್ಳಿ!

ಸುದ್ದಿಮನೆಯ ನಿತ್ಯವಸಂತ

ಲೋಕೇಶ್ ಕಾಯರ್ಗ



ಸುದ್ದಿ ಪತ್ರಿಕೆಯೊಂದರ ಹಿಂದೆ ನೂರೆಂಟು ಕೈಗಳ ಶ್ರಮವಿರುತ್ತದೆ. ಎಲ್ಲರ ಶ್ರಮವೂ ವಿಭಿನ್ನ. ವರದಿಗಾರರರು ಸುದ್ದಿ ಸಂಗ್ರಹಿಸಿ ಕೊಡುವವರಾದರೆ, ಅದನ್ನು ಒಪ್ಪ,ಓರಣಗೊಳಿಸಿ,, ಕಾಗುಣಿತ ದೋಷಗಳನ್ನು ಸರಿಪಡಿಸಿ, ಆಕರ್ಷಕವಾದ ಶೀರ್ಷಿಕೆ ಕೊಡುವುದು ಡೆಸ್ಕ್ ಪತ್ರಕರ್ತರ ಕೆಲಸ. ಅಂದವಾದ ಪುಟ ವಿನ್ಯಾಸದೊಂದಿಗೆ ಜೀವ ತುಂಬುವುದು ಪುಟ ವಿನ್ಯಾಸಕಾರರ ಕೆಲಸ.

ಕನ್ನಡಪ್ರಭ ಪತ್ರಿಕೆಯಲ್ಲಿ ವೃತ್ತಿಯ ಆರಂಭಿಕ ಮಜಲು ಆರಂಭಿಸಿದ್ದ ವಸಂತ ನಾಡಿಗೇರ್, ಸಂಪಾದಕ ವೈಎನ್ಕೆ ಅವರ 'ಪನ್'ಗಳಿಂದ ಪ್ರಭಾವಿತರಾಗಿದ್ದವರು. 2000ನೇ ಇಸವಿಯಲ್ಲಿ ವಿಜಯ ಕರ್ನಾಟಕ ಪತ್ರಿಕೆಗೆ ಸೇರಿದ ಬಳಿಕ ಅವರ ಸೃಜನಶೀಲತೆಗೆ ಪೂರ್ಣ ಸ್ವಾತಂತ್ರ್ಯ ದೊರೆಯಿತು. ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು ಪತ್ರಿಕೆಯ ಹೆಡ್ಡಿಂಗ್ ಮತ್ತು ಪುಟವಿನ್ಯಾಸಕ್ಕೆ ವಿಶೇಷ ಒತ್ತು ನೀಡುತ್ತಿದ್ದರು. ಇದಕ್ಕೆ ಪೂರಕವಾಗಿ ಸ್ಪಂದಿಸಿ ವಿಡಂಬನೆ, ಹಾಸ್ಯ, ಮೊನಚು,ಗೂಢಾರ್ಥ ಸೇರಿಸಿ ಶೀರ್ಷಿಕೆ ಕೊಡುವುದರಲ್ಲಿ ವಸಂತ ನಾಡಿಗೇರ್ ಎತ್ತಿದ ಕೈ ಆಗಿದ್ದರು. ಹೊರ ನೋಟಕ್ಕೆ ಗಂಭೀರವದನರಾಗಿ ಇರುತ್ತಿದ್ದ ನಾಡಿಗೇರ್, ತನ್ನೊಳಗಿನ ವಿಡಂಬನೆ, ಹಾಸ್ಯ ಪ್ರವೃತ್ತಿಗೆ ಶೀರ್ಷಿಕೆಗಳ ಮೂಲಕ ಜೀವ ತುಂಬುತ್ತಿದ್ದರು. ಪ್ರಜಾವಾಣಿ ಮತ್ತು ಉಳಿದ ಪತ್ರಿಕೆಗಳ ಪ್ರಾಬಲ್ಯದ ನಡುವೆ ವಿಜಯ ಕರ್ನಾಟಕ ತನ್ನ ಹೆಡ್ಡಿಂಗ್‌ಗಳಿಂದಲೇ ಮನೆ ಮಾತಾಯಿತು. ನಿಂತ ನೀರಾಗಿದ್ದ ಪತ್ರಿಕೋದ್ಯಮ ಹೊಸ ಹರಿವನ್ನು ಕಂಡಿತು. ಇದರ ಶ್ರೇಯಸ್ಸು ನಾಡಿಗೇರ್ ಅವರಿಗೆ ಸಲ್ಲಬೇಕು. ಕಾಗುಣಿತ ದೋಷಗಳನ್ನು ಹುಡುಕಿ, ಅದನ್ನು ಬರೆದ ಪತ್ರಕರ್ತನಿಗೆ ಮನದಟ್ಟಾಗುವಂತೆ ವಿವರಿಸುತ್ತಿದ್ದ ನಾಡಿಗೇರ್, ಆ ತಪ್ಪು ಮತ್ತೊಮ್ಮೆ ಮರುಕಳಿಸದಂತೆ ಎಚ್ಚರಿಕೆ ವಹಿಸುತ್ತಿದ್ದರು. ವಿ.ಕ. ಯುವಜನರನ್ನು ಮನಸ್ಸಲ್ಲಿಟ್ಟುಕೊಂಡು ಆರಂಭಿಸಿದ ತನ್ನ ನಿಯತಕಾಲಿಕೆಗೆ, 'ಕ್ಯಾಚಿ' ಶೀರ್ಷಿಕೆ ಬೇಕೆಂದಾಗ 'ಲವಲvk' ಎಂದು ಕ್ಷಣಾರ್ಧದಲ್ಲಿ ಎಂದು ಶೀರ್ಷಿಕೆ ಹೆಸರು ಸೂಚಿಸಿದ್ದರು.

ಪ್ರಶ್ನೆ ಅದಲ್ಲ, ಎನ್ನುತ್ತಲೇ ಉತ್ತರಿಸುತ್ತಿದ್ದ ನಾಡಿಗೇರರು

ರಂಜಿತ್ ಎಚ್. ಅಶ್ವತ್ಥ

ತಲೆಯ ಹಿಂದಕ್ಕೆ ಕೈ ಹೋಗಿ 'ಪ್ರಶ್ನೆ ಅದಲ್ರಿ'...! ಇದು ಪಕ್ಕಾ ವಸಂತ್ ನಾಡಿಗೇರ್ ಅವರ ಶೈಲಿ. ಈ ರೀತಿ ಒಂದು ವೇಳೆ ರಾಗಾ ಎಳೆದರೂ ಎಂದರೆ ಮುಂದಿದ್ದ ವ್ಯಕ್ತಿಗೆ ಏನೋ ಕಾದಿದೆ ಎಂದರ್ಥ. ಯಾವುದೇ ತಪ್ಪಾಗಿದ್ದರೂ ಅದನ್ನು ತಿಳಿ ಹೇಳುವ ಪ್ರಯತ್ನ ಮಾಡುತ್ತಿದ್ದರು. ಎಂದೂ ಜೋರು ಧ್ವನಿಯಲ್ಲಿ ಮಾತನಾಡದಿದ್ದರೂ, ಅವರ ಸರಣಿ ಪ್ರಶ್ನೆಗಳಿಗೆ ಉತ್ತರಿಸಲು ಹಲವು ಬಾರಿ ನಮ್ಮ ಬಳಿ ಉತ್ತರ ವಿರುತ್ತಿರಲಿಲ್ಲ. ಸುದ್ದಿಮನೆಯ ಅಂಗಳದಲ್ಲಿ ಈ ಉತ್ತರ ಹುಡುಕಾಟದಲ್ಲಿ ಅವರೊಂದಿಗೆ ಕಳೆದ ಸುಮಾರು ಮೂರು ವರ್ಷ ಮರೆಯಲಾಗದ ನೆನಪುಗಳು.

ವಿಶ್ವವಾಣಿಯ ಕಾರ್ಯನಿರ್ವಾಹಕ ಸಂಪಾದಕರಾಗಿ ಸುಮಾರು ಮೂರರಿಂದ ಮೂರುವರೆ ವರ್ಷ ಕಾರ್ಯ ನಿರ್ವಹಿಸಿದ ನಾಡಿಗೇರ್ ಅವರಲ್ಲಿನ ಪದ ಪ್ರೀತಿ ಹಾಗೂ ಪ್ರತಿಯೊಂದರಲ್ಲಿಯೂ ಪನ್ ಮಾಡುವ, ಹೊಸಬರಿಗೆ ಪತ್ರಿಕೋದ್ಯಮ ಕಲಿಸುವ ರೀತಿ ಈಗಲೂ ನೆನಪಿದೆ. ಪ್ರತಿಯೊಂದು ಸುದ್ದಿಯನ್ನು ತಮ್ಮದೇ ಯಾದ ವಿಶ್ಲೇಷಣೆಯೊಂದಿಗೆ ನೋಡುತ್ತಿದ್ದ ಅವರು, ಎಂದಿಗೂ ಸುಲಭಕ್ಕೆ ಯಾವುದನ್ನು ಒಪ್ಪುತ್ತಿರಲಿಲ್ಲ. ನಿತ್ಯ ಕಚೇರಿಗೆ ಕಾಲಿಡುವಾಗಲೇ, ವಿಶೇಷವೇನಿದೆ ಎನ್ನುವುದನ್ನು ಯೋಚಿಸಿಕೊಂಡು ಕಾಲಿಡುತ್ತಿದ್ದರು. ಯಾವುದನ್ನೂ ಸುಲಭಕ್ಕೆ ಒಪ್ಪದೇ, 'ಪ್ರಶ್ನೆ ಅದು ಅಲ್ಲರೀ' ಎನ್ನುತ್ತಲೇ ಸುದ್ದಿಮನೆಯ ನೂರಾರು ಪ್ರಶ್ನೆಗಳಿಗೆ ಉತ್ತರ ನೀಡಿದ 'ಗೈಡ್' ಆಗಿದ್ದರು.

ನನ್ನ ಅಂಕಣಕ್ಕೆ ನಾಮಕರಣ ಮಾಡಿದ್ದೇ ಅವರು

ಕಳೆದ ಮೂರು ವರ್ಷಗಳ ಹಿಂದೆ ವಿಶ್ವವಾಣಿ ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್ ಅವರು ನನಗೆ ಅಂಕಣ ಬರೆಯಲು ಅವಕಾಶ ಕೊಟ್ಟರು. ಪ್ರತಿವಾರದ ಅಂಕಣಕ್ಕೆ ಮೊದಲ ಎರಡು ವಾರ ಬೇರೆ ಅಂಕಣದ ಹೆಸರಲ್ಲಿ ಪ್ರಕಟವಾಗಿತ್ತು. ಮೂರನೇ ವಾರದ ಹೊತ್ತಿಗೆ, ವಸಂತ್ ನಾಡಿಗೇರ್ ಅವರೇ ಕರೆದು, 'ನಿಮ್ಮ ಅಂಕಣಕ್ಕೊಂದು ಹೆಸರಿಡಿ' ಎಂದರು. ನೀವೇ ಒಂದೆರೆಡು ಹೆಸರು ಕೊಡಿ ಸರ್, ಆಮೇಲೆ ಒಂದು ಫೈನಲ್ ಮಾಡೋಣ ಎಂದು ಹೇಳಿ ನನ್ನ ಕುರ್ಚಿ ಬರುವ ಹೊತ್ತಿಗೆ ಕೊಟ್ಟ ಹೆಸರೇ 'ಅಶ್ವತ್ಥಕಟ್ಟೆ'. ಇದರೊಂದಿಗೆ ಇನ್ನು ಎರಡು ಹೆಸರಲ್ಲಿ ಹೇಳಿದ್ದರು. ಆದರೆ ಕೊನೆಗೆ ಅಶ್ವತ್ಥಕಟ್ಟೆಯೇ ಇರಲಿ ಎಂದು ಅಂತಿಮಗೊಳಿಸಿದ್ದರು.

ಇನ್ನು ಅವರಲ್ಲಿ ನಾನು ಕಂಡ ಮತ್ತೊಂದು ಗುಣವೆಂದರೆ, ಸುದ್ದಿಮನೆಗೆ ಬರುವ ಹೊಸ ಪತ್ರಕರ್ತರಿಗೆ ಕಲಿಸುವ ರೀತಿ. ಪತ್ರಿಕೋದ್ಯಮದ ಬಗ್ಗೆ ಗೊತ್ತಿಲ್ಲದೇ, ಕನ್ನಡದ ಬಗ್ಗೆ ಗೊತ್ತಿದ್ದರೆ ಅಂತಹವರನ್ನು ಆರು ತಿಂಗಳಲ್ಲಿ ಟ್ರೇನ್ ಮಾಡಬಹುದು ಎನ್ನುವ ಮಾತನ್ನು ಹೇಳುತ್ತಿದ್ದ ಅವರು, ತಮ್ಮ ಸುದೀರ್ಘ ಪತ್ರಿಕೋದ್ಯಮದಲ್ಲಿ ನೂರಾರು ಮಂದಿಗೆ ಕಲಿಸುವ ಮೂಲಕ ಹಲವರಿಗೆ 'ಗುರು'ವಾಗಿದ್ದಾರೆ.

ನಾಡಿಗೇರ್ ಅವರಲ್ಲಿ ಸಾಮಾಜಿಕ ಕಳಕಳಿಯಿತ್ತು. ಹ್ಯೂಮನ್ ಇಂಟರೆಸ್ಟ್ ಸ್ಟೋರಿಗಳು ಸಿಕ್ಕರೆ ಅದಕ್ಕೆ ಚೆಂದದ ಇಂಟ್ರೋ, ಹೆಡ್‌ಲೈನ್ ಕೊಟ್ಟು ಅದಕ್ಕೊಂದು ಆ್ಯಂಗಲ್ ಕೊಟ್ಟು ಸುದ್ದಿಗೊಂದು ಮೌಲ್ಯವನ್ನು ಕೊಡುತ್ತಿದ್ದರು. ಇದರೊಂದಿಗೆ ರಾಷ್ಟ್ರೀಯ, ಕ್ರೀಡೆ, ಸಿನಿಮಾ ವಿಷಯಗಳ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿದ್ದರು. ಊರಿನ ಹೆಸರು, ಬೇರೆ ರಾಜ್ಯಗಳ ಜನರ ಹೆಸರುಗಳನ್ನು ಬರೆಯುವ ವಿಷಯದಲ್ಲಿ ಎಂದಿಗೂ ರಾಜಿಯಾಗಿದ್ದೇ ಇಲ್ಲ.

ಮೂರು ವರ್ಷದಲ್ಲಿ ನೂರು ಪ್ರಯೋಗ: ಹಾಗೇ ನೋಡಿದರೆ ನಾಡಿಗೇರ್ ಸರ್ ಜತೆ ವಿಶ್ವವಾಣಿಯಲ್ಲಿ ಕಳೆದ ಮೂರು ವರ್ಷದಲ್ಲಿ ನೂರಾರು ಹೊಸ ಹೊಸ ಪ್ರಯೋಗಗಳನ್ನು ಮಾಡಿದ್ದಾಯಿತು. ಪ್ರಮುಖವಾಗಿ ಕರೋನಾ ಸಮಯದಲ್ಲಿ ಟೈಮ್ಲಿ ಎಂದು ನಿತ್ಯ ಸಂಜೆ ಆರು ಗಂಟೆಗೆ ಇ-ಪೇಪರ್ ಅನ್ನು ಪ್ರಕಟಿಸುವುದು ಇರಬಹುದು, ಅಯೋಧ್ಯೆ, ರಾಮಮಂದಿರದ ಶಂಕುಸ್ಥಾಪನೆಯ ದಿನ ಇಡೀ ಸಂಪುಟವನ್ನು ರಾಮ ಮಂದಿರದ ವಿಶೇಷ ಸಂಚಿಕೆಯನ್ನಾಗಿ ರೂಪಿಸಿದ್ದಿರಬಹುದು. ಮಹಾತ್ಮ ಗಾಂಧಿ ಅವರ 151ನೇ ವರ್ಷ ಜನ್ಮದಿನದ ನಿಮಿತ್ತ ಗಾಂಧಿ ಕುರಿತಾದ 151 ಪ್ರಸಂಗಗಳು ಎನ್ನುವ ಐದು ಪುಟಗಳ ವಿಶೇಷ ಸಂಚಿಕೆ, ದೇವೇಗೌಡರು ಪ್ರಧಾನಿಯಾಗಿ 25 ವರ್ಷ ಸಂದ ಹಿನ್ನಲೆಯಲ್ಲಿ ವಿಶೇಷ ಸಂಪುಟ ಸೇರಿದಂತೆ ಹತ್ತು ಹಲವು ಪ್ರಯೋಗಗಳು ಮುಂದಿನ ಹಲವು ವರ್ಷಗಳ ಕಾಲ ನೆನಪಿನಲ್ಲಿ ಉಳಿಯಲಿದೆ ಎಂದರೆ ತಪ್ಪಾಗುವುದಿಲ್ಲ.

ಕೆಲಸದ ವಿಷಯದಲ್ಲಿ ಅವರೊಂದಿಗೆ ವಾದ ಮಾಡಿದ್ದು ಒಂದೆರಡು ಬಾರಿಯಲ್ಲ. ಹಾಗೆಂದು, ಎಂದಿಗೂ ಈ ವಾದಗಳನ್ನು ವೈಯಕ್ತಿಕವಾಗಿ ಕ್ಯಾರಿ ಫಾರ್ವರ್ಡ್ ಮಾಡಿದ ಉದಾಹರಣೆ ವಸಂತ್ ನಾಡಿಗೇರ್ ಅವರ ಬಳಿಯಿರಲಿಲ್ಲ. ಅನೇಕ ಬಾರಿ, ಕೋಪಿಸಿಕೊಂಡು ಅವರ ಕ್ಯಾಬಿನ್‌ನಿಂದ ಎಂದು ಬಂದರೂ, ಕೆಲ ಹೊತ್ತಿನ ಬಳಿಕ ಟೀಗೆ ಕರೆದುಕೊಂಡು ಹೋಗಿ ಆ ಕ್ಷಣದ ಬೇಸರವನ್ನು ಮರೆಸುವ ವ್ಯಕ್ತಿತ್ವ

ಅವರದ್ದಾಗಿತ್ತು. ಈ ಎಲ್ಲವನ್ನು ಮೀರಿ ನಾಡಿಗೇರ್ ಅವರಲ್ಲಿ ನಾನು ಕಂಡ ಶ್ರೇಷ್ಠ ಗುಣವೆಂದರೆ, ಮತ್ತೊಬ್ಬರನ್ನು ಬೆಳೆಸುವುದಾಗಿತ್ತು. ಜತೆಯಲ್ಲಿ ಕೆಲಸ ಮಾಡುತ್ತಿರಲಿ, ಮಾಡದೇ ಇರಲಿ ಸಂಬಂಧಗಳನ್ನು ಉಳಿಸುವ ಶ್ರೇಷ್ಠ ಗುಣವಿತ್ತು. ತಮ್ಮ ಸಮಸ್ಯೆಯನ್ನು ಮತ್ತೊಬ್ಬರ ಮೇಲೆಂದು ಹಾಕದೇ, ತಪ್ಪನ್ನು ತಿದ್ದುವಾಗಲೂ ಎದುರಿಗಿದ್ದ ವ್ಯಕ್ತಿಗೆ ಬೇಸರವಾಗದಂತೆ ಮಾತನಾಡುತ್ತಿದ್ದರು. ಕೊನೆಗೂ ತಮ್ಮ ಅನಾರೋಗ್ಯದ ಬಗ್ಗೆ ಯಾರೊಂದಿಗೂ ಹಂಚಿಕೊಳ್ಳದೇ ಕೊನೆಯವರೆಗೂ ಖುಷಿಯನ್ನೇ ಹಂಚಿ, ಚಿರನಿದ್ರೆಗೆ ಜಾರಿದ್ದಾರೆ.

ವ್ಯಕ್ತಿ, ಊರಿನ ಹೆಸರಿನ ಬಗ್ಗೆ ವಿಶೇಷ ಆಸಕ್ತಿ

ಇನ್ನು ನಾಡಿಗೇರ್ ಅವರಿಗೆ ವ್ಯಕ್ತಿ, ಊರುಗಳ ಬಗ್ಗೆ ವಿಶೇಷ ಪ್ರೀತಿಯಿತ್ತು. ಯಾವುದೇ ಊರು, ಹೆಸರು ಹಾಗೂ ಸರ್‌ನೇಮ್‌ಗಳು ಸುಮ್ಮನೆ ಬಂದಿರುವುದಿಲ್ಲ. ಅದಕ್ಕೊಂದು ಹಿನ್ನಲೆಯಿರುತ್ತದೆ. ಆದ್ದರಿಂದ ಯಾವುದೇ ಕಾರಣಕ್ಕೂ ಅದರಲ್ಲಿ ತಪ್ಪು ಮಾಡಬಾರದು ಎನ್ನುವುದು ಅವರ ನಿಲುವಾಗಿತ್ತು. ಒಮ್ಮೆ 'ಬಸನಗೌಡ ಪಾಟೀಲ್' ಬರೆಯಲು ಹೋಗಿ 'ಬಸವನ ಗೌಡ ಪಾಟೀಲ್' ಎಂದು ಬರೆಯಲಾಗಿತ್ತು. ಸುದ್ದಿಯಲ್ಲಿ ವ್ಯಾಕರಣ ಹೋದರೂ ತಪ್ಪಿಲ್ಲ. ಆದರೆ ಯಾವುದೇ ಕಾರಣಕ್ಕೂ ಹೆಸರನ್ನು ತಪ್ಪು ಬರೆಯಬಾರದು. ಹೆಸರು ತಪ್ಪು ಬರೆದರೆ, ಆ ವ್ಯಕ್ತಿಗೆ ಮಾತ್ರವಲ್ಲದೇ ವ್ಯಕ್ತಿತ್ವಕ್ಕೆ ಅಪಮಾನ ಮಾಡಿದಂತೆ ಎನ್ನುವುದು ಅವರ ಗಟ್ಟಿ ನಿಲುವು. ಇನ್ನು ಕರ್ನಾಟಕದ ರಾಜ್ಯಪಾಲರಾಗಿ ಥಾವರ್ ಚಂದ್ ಗೆಹ್ಲೋಥ್ ಅಥವಾ ಗೆಹ್ಲೋಟ್ ಎನ್ನುವ ವಿಷಯಕ್ಕೆ ಸುಮಾರು ಒಂದು ಗಂಟೆ ಚರ್ಚೆ ನಡೆಸಿದ್ದು, ಅವರಿಗೆ ಹೆಸರುಗಳ ಮೇಲಿದ್ದ ವಿಶೇಷ ಪ್ರೀತಿಗೆ ಒಂದು ಉದಾಹರಣೆ!

ವಿಶ್ವವಾಣಿ

ಸಂಪಾದಕೀಯ

ಪ್ಯಾರಾ ಒಲಿಂಪಿಕ್ಸ್ ಸಾಧನೆ ಎಲ್ಲರಿಗೂ ಸ್ಫೂರ್ತಿಯಾಗಲಿ

ಪ್ಯಾರಿಸ್‌ನಲ್ಲಿ ನಡೆದ ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತ ಅತ್ಯುತ್ತಮ ಸಾಧನೆ ಮೆರೆದಿದೆ. ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲಲಾಗದ ದೇಶದ ನಿರಾಶೆಯನ್ನು ಪ್ಯಾರಾ ಅಥ್ಲೀಟ್‌ಗಳು ದೂರ ಮಾಡಿದ್ದಾರೆ. ವಿಶ್ವ ಕ್ರೀಡಾಕೂಟಗಳಲ್ಲಿ ಅತ್ಯುತ್ತಮ ಸಾಧನೆ ತೋರಲು ವಿಫಲರಾಗುತ್ತಿದ್ದ ಭಾರತೀಯ ಕ್ರೀಡಾಪಟುಗಳು,ಸರಿಯಾದ ತರಬೇತಿ, ಪ್ರೋತ್ಸಾಹ ದೊರೆತರೆ ತಾವು ಯಾವುದೇ ದೇಶದ ವಿರುದ್ಧ ಸ್ಪರ್ಧಿಸಲು ಸಿದ್ಧ ಎಂಬ ಸಂದೇಶ ರವಾನಿಸಿದ್ದಾರೆ. ಟೋಕಿಯೋದಲ್ಲಿ ನಡೆದ ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತ 19 ಪದಕಗಳನ್ನು ಜಯಿಸಿತ್ತು. ಈ ಬಾರಿ ಏಳು ಚಿನ್ನ, 9 ಬೆಳ್ಳಿ ಮತ್ತು 13 ಕಂಚಿನ ಪದಕಗಳೊಂದಿಗೆ 29 ಪದಕಗಳನ್ನು ಜಯಸುವ ಮೂಲಕ ದ. ಕೊರಿಯಾ, ಅರ್ಜೆಂಟಿನಾ ಮೊದಲಾದ ಕ್ರೀಡಾ ಬಲಿಷ್ಠ ರಾಷ್ಟ್ರಗಳನ್ನು ಹಿಂದಿಕ್ಕಿ 18 ನೇ ಸ್ಥಾನ ಗಳಿಸಿದೆ. ಇದುವರೆಗೆ ನಡೆದ 12 ಪ್ಯಾರಾ ಒಲಿಂಪಿಕ್ಸ್‌ಗಳಲ್ಲಿ ಭಾರತ ಕೇವಲ 31 ಪದಕಗಳನ್ನು ಗೆದ್ದಿತ್ತು. ಈ ಬಾರಿ ಒಂದೇ ಕ್ರೀಡಾಕೂಟದಲ್ಲಿ 29 ಪದಕಗಳನ್ನು ಗೆದ್ದಿದೆ ಎಂದರೆ ಈ ಸಾಧನೆಯ ಮಹತ್ವ ಅರ್ಥ ಮಾಡಿಕೊಳ್ಳಬಹುದು. ಈ ಬಾರಿ ಪದಕ ಗೆದ್ದವರಲ್ಲಿ ಬಡತನದ ಕುಲುಮೆಯಲ್ಲಿ ಬೆಂದು ತಮ್ಮ ಬದುಕನ್ನು ತಾವೇ ರೂಪಿಸಿಕೊಂಡ ಹಲವು ಸಾಧಕರಿದ್ದಾರೆ. ದೇಶದ ಯಾವುದೋ ಮೂಲೆಯಿಂದ ಬಂದ ಕ್ರೀಡಾಪಟುಗಳು ತಮ್ಮ ದೈಹಿಕ ಸಮಸ್ಯೆಗಳನ್ನು ಮೆಟ್ಟಿ ನಿಂತು ಒಲಿಂಪಿಕ್ಸ್ ತನಕ ಪಯಣ ಬೆಳೆಸಿರುವುದು ಅವರ ಛಲ, ಪರಿಶ್ರಮ ಮತ್ತು ಬದ್ಧತೆಗೆ ಸಾಕ್ಷಿಯಾಗಿದೆ. ಸರಕಾರವೂ ಇವರ ಬೆನ್ನಿಗೇ ನಿಲ್ಲುವ ಮೂಲಕ ಈ ಸಾಧನೆಗೆ ಸಹಾಯ ಹಸ್ತ ಚಾಚಿದೆ. ಈ ಹಿಂದೆ ಪದಕ ಗೆದ್ದ ಬಳಿಕ ಆಟಗಾರರಿಗೆ ನಗದು ಬಹುಮಾನ ಘೋಷಿಸಲಾಗುತ್ತಿತ್ತು. ಈಗ ಕೇಂದ್ರ ಸರಕಾರ ಟಾರ್ಗೆಟ್ ಒಲಿಂಪಿಕ್ಸ್ ಪೋಡಿಯಂ ಯೋಜನೆಯಡಿ ಕ್ರೀಡಾಳುಗಳಿಗೆ ತರಬೇತಿ ನೀಡುತ್ತಿದೆ. ಕ್ರೀಡಾಪಟುಗಳ ತರಬೇತಿ ಮತ್ತು ಸವಲತ್ತುಗಳಿಗಾಗಿ ಸಾಕಷ್ಟು ಹಣ ಖರ್ಚು ಮಾಡುವ ಜತೆಗೆ ವಿದೇಶಿ ಕೋಚ್‌ಗಳ ನೆರವನ್ನೂ ನೀಡುತ್ತಿದೆ. ಕೆಲವರಿಗೆ ವಿದೇಶಗಳಲ್ಲಿಯೇ ತರಬೇತಿ ನೀಡಿದೆ. ರಾಜ್ಯ ಸರಕಾರಗಳು ತಮ್ಮದೇ ರೀತಿಯಲ್ಲಿ ಕ್ರೀಡಾಳುಗಳ ಬೆಂಬಲಕ್ಕೆ ನಿಂತಿವೆ. ಇದೆಲ್ಲದರ ಒಟ್ಟು ಫಲವಾಗಿ ಭಾರತದ ಕ್ರೀಡಾ ಸಾಧನೆಗೆ ಹೊಸ ಹೊಳಪು ಬಂದಿದೆ. 2047ರ ಹೊತ್ತಿಗೆ ನಾವು ಒಲಿಂಪಿಕ್ಸ್ ಕ್ರೀಡಾಕೂಟ ಸಂಘಟಿಸಬೇಕಾದರೆ ವಿಶ್ವದ ಟಾಪ್ 10 ಕ್ರೀಡಾ ಸಾಧಕ ರಾಷ್ಟ್ರಗಳ ಸಾಲಿಗೆ ನಾವು ಸೇರಬೇಕು.

ಸೊಂಪಾದಕೀಯ

ಭಾವಿ ಕಪ್ಪೆಗಳು

ರಾಜಕೀಯ ರಂಗದಲ್ಲಿ ಎಲ್ಲರೂ ಅವಕಾಶವಾದಿಗಳೇ. ಯಾರು ಯಾರಿಗೆ ಎಷ್ಟು ಆಪ್ತರಾಗಿದ್ದರೂ, ಅವರ ಹಿಂದೆ ನಿಂತು ತಮ್ಮ ಸರದಿ ಗೋಸ್ಕರ ಕಾಯುತ್ತಿರುತ್ತಾರೆ ಅನ್ನೋದು ಸತ್ಯ. ಈಗ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿಷಯದಲ್ಲೂ ಅದೇ ಆಗುತ್ತಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಸ್ತಿತ್ವಕ್ಕೆ ಬಂದಾಗ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಇವರಿಬ್ಬರಲ್ಲಿ ಯಾರು ಸಿಎಂ ಆಗುತ್ತಾರೆ ಎಂದು ದೊಡ್ಡ ಮಟ್ಟದ ಚರ್ಚೆಯಾಗಿತ್ತು. ಸಿದ್ದರಾಮಯ್ಯ ಅವರ ಜತೆ ನಾನು ಇದ್ದೇನೆ ಎಂದು ಹೇಳುತ್ತಲೇ ಡಿಕೆಶಿ ಅವರು ಸಿಎಂ ಆಗಲು ಸಕಲ ಪ್ರಯತ್ನಗಳನ್ನು ಮಾಡಿದ್ದರು. ಆದರೆ ಕೈ ಪಕ್ಷದ ಹೈಕಮಾಂಡ್‌ನಿಂದಾಗಿ ಅವರ ಆಸೆ ಕೈಗೂಡಲಿಲ್ಲ. ಆದರೂ ಡಿಕೆಶಿ ಒಂದಲ್ಲ ಒಂದು ದಿನ ಸಿಎಂ ಆಗುತ್ತಾರೆ ಎಂದು ಅವರ ಆಪ್ತರು ನಂಬಿಕೆ ಇಟ್ಟುಕೊಂಡಿದ್ದಾರೆ. ಇದರ ನಡುವೆ ಈಗ ಸಿದ್ದರಾಮಯ್ಯ ಅವರ ಹೆಸರು ಮುಡಾ ಕೇಸಿನಲ್ಲಿ ಕೇಳಿ ಬಂದ ನಂತರ ಮುಖ್ಯಮಂತ್ರಿ ಬದಲಾವಣೆಯ ವಿಷಯ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ. ಸಿದ್ದರಾಮಯ್ಯ ಅವರನ್ನು ಶೀಘ್ರದಲ್ಲಿ ಕೆಳಗಿಳಿಸಲಾಗುತ್ತದೆ, ಮುಂದಿನ ಮುಖ್ಯಮಂತ್ರಿ ನಾನೇ ಎಂದು ಹಲವಾರು ಜನರು ಈಗಾಗಲೇ ಕಾಯುತ್ತಿದ್ದಾರೆ. ಹಾಗಾಗಿ ಕರ್ನಾಟಕದ ಭಾವಿ ಮುಖ್ಯಮಂತ್ರಿ ಆಗುತ್ತೇನೆ ಅನ್ನೋದು ಈಗ ಹಲವಾರು ರಾಜಕಾರಣಿಗಳ ಕನಸು. ಅಂದ ಹಾಗೆ ಈ ಪಟ್ಟಿಯಲ್ಲಿ ಹಿರಿಯರು ಕಿರಿಯರು ಎಂಬ ಭೇದಭಾವವಿಲ್ಲದೆ ಎಲ್ಲ ವಯಸ್ಸಿನ, ಎಲ್ಲ ವರ್ಗದ ರಾಜಕಾರಣಿಗಳು ಇದ್ದಾರೆ ಅನ್ನೋದು ವಿಶೇಷ. ಹಿರಿಯರಾದ ಮಲ್ಲಿಕಾರ್ಜುನ ಖರ್ಗೆ, ಪರಮೇಶ್ವರ್ ರವರಿಂದ ಹಿಡಿದು ಎಂ.ಬಿ.ಪಾಟೀಲ್, ಸತೀಶ್ ಜಾರಕಿಹೊಳಿ ಅವರವರೆಗೆ ಎಲ್ಲರೂ ಭಾವಿ ಮುಖ್ಯಮಂತ್ರಿಗಳೇ ಆಗಿದ್ದಾರೆ. ಆದರೆ ಅಧಿಕಾರ ಹಿಡಿದ ಮೊದಲ ದಿನದಿಂದ ಇಲ್ಲಿಯವರೆಗೂ 'ಇನ್ನು 5 ವರ್ಷ ನಾನೇ ಮುಖ್ಯಮಂತ್ರಿ' ಅಂತ ಸಿದ್ದರಾಮಯ್ಯ ಅನ್ನೋ ಟಗರು ಇನ್ನೂ ಗುಟುರು ಹಾಕುತ್ತಿದೆ. ಅವರ ಈ ಆತ್ಮವಿಶ್ವಾಸದ ಮಾತಿಗೆ ಅವರ ಎದುರಿಗೆ ನಿಂತು 'ಹೌದು ಹುಲಿಯಾ' ಎನ್ನುತ್ತಲೇ ಅನೇಕರು ಅವರ ಗಾದಿ ಏರಲು ಉತ್ಸುಕರಾಗಿ ಕಾಯುತ್ತಿರುವುದಂತೂ ವಿಶೇಷವೇ ಸರಿ.

ಸಂಪಾದಕರ ಸದ್ಯಶೋಧನೆ

ಲಾಂಫೇಲೋರ್ಳಲೋಉಳಲೋಗು ಲೊಳುಲೆಪಲುಳೊಳಲೆ

ಯಾವ ದೇಶದಲ್ಲಿ ಅತಿ ಹೆಚ್ಚು ಪ್ರಾದೇಶಿಕ ಭಾಷೆಗಳಿರುವವೋ, ಆ ದೇಶದ ಊರುಗಳ ಹೆಸರುಗಳು ಮತ್ತು ಅವುಗಳ ಅರ್ಥಗಳು ಬಹಳ ವಿಚಿತ್ರವಾಗಿರುತ್ತವೆ ಎಂಬುದು ಸಾಮಾನ್ಯ ನಿಯಮ. ನಮ್ಮ ದೇಶವೂ ಸೇರಿದಂತೆ, ಇದಕ್ಕೆ ಉತ್ತಮ ಉದಾಹರಣೆ ಅಂದ್ರೆ, ಯುರೋಪ್. ನನ್ನ ಆತ್ಮೀಯ ಸ್ನೇಹಿತರೊಬ್ಬರು ಕೆಲಕಾಲ ಪೋಲ್ಯಾಂಡಿನ ವಿಚಿತ್ರ ಹೆಸರಿನ ಊರಿನಲ್ಲಿದ್ದರು. ಅವರು 2-3 ಸಲ ತಾವಿರುವ ಊರಿನ ಹೆಸರನ್ನು ಹೇಳಿದರೂ ನನಗೆ ಮರೆತುಹೋಗುತ್ತಿತ್ತು. ನಾನು ಅವರಿಗೆ ಫೋನ್ ಮಾಡಿದಾಗಲೆಲ್ಲ, ತಾವಿರುವ ಊರಿನ ಹೆಸರನ್ನು ಹೇಳಿ ಮಾತು ಆರಂಭಿಸುತ್ತಿದ್ದರು. ಹೀಗಾಗಿ ನನಗೆ ಆ ಊರಿನ ಹೆಸರು ಈಗ ಬಾಯಿಪಾಠವಾಗಿದೆ. ಅಂದ ಹಾಗೆ, ಆ ಊರಿನ ಹೆಸರನ್ನು Niemyje-Zabki- ನಿಮಿಜ್ ಝಬ್ಕಿ ಎಂದು ಉಚ್ಚರಿಸುತ್ತಾರೆ. ಈ ಊರು ಬಹಳ ದೊಡ್ಡದೇನಲ್ಲ. ಹೆಚ್ಚೆಂದರೆ ಅಲ್ಲಿ 400 ಜನರಿರಬಹುದು. ಆ ಊರಿನ ಹೆಸರಿನ ಅರ್ಥದಲ್ಲಿ ಒಂದು ತಮಾಷೆಯಿದೆ. ಸ್ಥಳೀಯ ಭಾಷೆಯಲ್ಲಿ ಅದರ ಅರ್ಥ- 'ನಾನು ನನ್ನ ಹಲ್ಲುಗಳನ್ನು ಉಜ್ಜುವುದಿಲ್ಲ'. ಈ ಕಾರಣಕ್ಕಾಗಿಯೇ ಈ ಊರಿನಲ್ಲಿ ಹೆಚ್ಚು ಜನರು ಇರಲಿಕ್ಕಿಲ್ಲ ಎಂಬುದು ನನ್ನ ವಾದ. ಇದು ಎಷ್ಟರಮಟ್ಟಿಗೆ ಸತ್ಯವೋ ಗೊತ್ತಿಲ್ಲ. ಕೆಲವು ವರ್ಷಗಳ ಹಿಂದೆ, ನಾನು ಸ್ಪೇನ್‌ಗೆ ಹೋದಾಗ, ಪೂ (Poo) ಎಂಬ ನಗರಕ್ಕೆ ಹೋಗಿದ್ದೆ. ಇಲ್ಲಿನ ಬೀಚ್ ಹೆಸರುವಾಸಿ. ಅದನ್ನು ನೋಡಲು ಜನ ಜಗತ್ತಿನೆಲ್ಲೆಡೆಯಿಂದ ಬರುತ್ತಾರೆ. ಆದರೆ ಯಾರಾದರೂ ಎಲ್ಲಿಗೆ ಹೋಗಿದ್ದೆ ಅಥವಾ ಎಲ್ಲಿಂದ ಬಂದಿರಿ ಎಂದು ಕೇಳಿದರೆ, ಈ ಊರಿನ ಹೆಸರನ್ನು ಹೇಳಲು ಯೋಚಿಸಬೇಕು. ಕಾರಣ ಇಂಗ್ಲಿಷಿನಲ್ಲಿ 'ಪೂ' ಅಂದ್ರೆ unpleasant smell ಅಥವಾ dog poo ಅಥವಾ ಮಲ ಎಂದರ್ಥ. ಇಷ್ಟು ಸುಂದರವಾದ ಊರಿಗೆ ಯಾಕಿಷ್ಟು ಹೊಲಸು ಹೆಸರನ್ನು ಇಟ್ಟಿದ್ದಾರೋ ಎಂದು ಎಂಥವರಿಗಾದರೂ ಅನಿಸದೇ ಇರದು. ಇದೇ ಅರ್ಥ ಕೊಡುವ ಊರು ಫಿನ್‌ಲ್ಯಾಂಡಿನಲ್ಲೂ ಇದೆ. ಫಿನ್ನಿಷ್ ಭಾಷೆಯಲ್ಲಿ ಲೆಮು (Lemu) ಅಂದ್ರೆ ಹೊಲಸುನಾತ ಎಂದರ್ಥ. ಆದರೂ ಆ ಊರಿಗೆ ಆ ಹೆಸರನ್ನೇ ಇಟ್ಟಿದ್ದಾರೆ. ನಾನು ವೇಲ್ಸ್ ರಾಜಧಾನಿ ಕಾರ್ಡಿಫ್‌ನಲ್ಲಿದ್ದಾಗ, ಯುರೋಪಿನಲ್ಲಿಯೇ ಅತಿ ಉದ್ದವಾದ ಮತ್ತು ಜಗತ್ತಿನಲ್ಲಿ ಎರಡನೇ ಅತಿ ಉದ್ದವಾದ ಹೆಸರಿರುವ ಊರಿಗೆ ಹೋಗಿದ್ದೆ. ಆ ಊರಿನ ಸ್ಪೆಲ್ಲಿಂಗ್‌ನಲ್ಲಿ 58 ಅಕ್ಷರಗಳಿವೆ. ಇದನ್ನು ತಪ್ಪಿಲ್ಲದೇ ಆ ಊರಿನಲ್ಲಿರುವವರ ಪೈಕಿ ಎಷ್ಟು ಜನ ಬರೆಯುತ್ತಾರೋ ಗೊತ್ತಿಲ್ಲ. ಅಂದ ಹಾಗೆ ಆ ಊರಿನ ಹೆಸರು-Llanfairpwllgwyngyllgogerychwyrndrobwllllantysiliogogogoch. ಆ ಊರಿನಲ್ಲಿ ಸುಮಾರು 3,000 ಜನರಿದ್ದಾರೆ. ವರ್ಷದಿಂದ ವರ್ಷಕ್ಕೆ ಅಲ್ಲಿನ ಜನಸಂಖ್ಯೆ ಕಮ್ಮಿಯಾಗುತ್ತಿದೆಯಂತೆ. ಅದಕ್ಕೆ ಊರಿನ ಹೆಸರು ಕಾರಣವಿರಲಿಕ್ಕಿಲ್ಲ. ಅಲ್ಲಿನ ಜನಸಂಖ್ಯೆಯಲ್ಲಿ ಸುಮಾರು 70ರಷ್ಟು ಮಂದಿ ವೆಲ್ಷ್ ಭಾಷಿಕರು. ಇವರಿಗೆ ಇಂಗ್ಲಿಷ್ ಮಾತಾಡಿದರೂ ಅರ್ಥವಾಗುವುದಿಲ್ಲ. ಅಷ್ಟು ಉದ್ದದ ಹೆಸರನ್ನು ಹೇಳುವುದು, ಬರೆಯುವುದು ಕಷ್ಟವೆಂದು Llanfairpwllgwyngyll ಅಥವಾ Llanfair Pwllgwyngyll ಎಂದು ಕಿರಿದುಗೊಳಿಸಲಾಗಿದೆ. ಇತ್ತೀಚೆಗೆ ಮತ್ತಷ್ಟು ಕಿರಿದುಗೊಳಿಸಿ, Llanfairpwll ಅಥವಾ Llanfair PG ಎನ್ನುತ್ತಾರೆ. ಮೊದಲ ಹತ್ತಾರು ಅಕ್ಷರಗಳನ್ನು ಹೇಳಿ, ಮುಂದಿನದನ್ನು ಉಚ್ಚರಿಸಲಾಗದೇ, ತಮಾಷೆಗೆ ಒಳಬಾಯಲ್ಲಿ 'ಲಾಂಫೇಲೆರ್ಳಲೋಉಳಲೋಗುಲೊಳುಲೆಪಲುಳೊಳಲೆಸ್ಲೋಳಲೆ' ಎಂದು ಬೇಕಾಬಿಟ್ಟಿ ಹೇಳಿ ನಗುತ್ತಾರೆ. ಈ ಊರಿಗೆ ಪ್ರತಿವರ್ಷ ಏನಿಲ್ಲವೆಂದರೂ 2 ಲಕ್ಷ ಪ್ರವಾಸಿಗರು ಆಗಮಿಸುತ್ತಾರೆ. ಅಲ್ಲಿನ ಪ್ರಮುಖ ಆಕರ್ಷಣೆಗಳಲ್ಲಿ ಊರಿನ ರೈಲು ನಿಲ್ದಾಣದ ಬೋರ್ಡ್ ಸಹ ಒಂದು. ಅಷ್ಟು ಉದ್ದದ ಹೆಸರಿರುವ ಬೋರ್ಡಿನ ಮುಂದೆ ಎಲ್ಲರೂ ಫೋಟೋ ತೆಗೆಸಿಕೊಳ್ಳುತ್ತಾರೆ. ಈಗಂತೂ ಆ ಜಾಗ 'ಇನ್ಸ್ಟಾಗ್ರಾಮ್ ಹಾಟ್‌ಸ್ಪಾಟ್' ಆಗಿಬಿಟ್ಟಿದೆ. ಸುಮಾರು 20 ವರ್ಷಗಳ ಹಿಂದೆ, ಈ ಊರಿನ ವೆಬ್‌ಸೈಟ್ the longest URL on the Internet ಎಂಬ ಅಗ್ಗಳಿಕೆಗೆ ಪಾತ್ರವಾಗಿತ್ತು. ಕೆಲವರು ಈ ಊರಿನ ಹೆಸರನ್ನು ಕಿರಿದುಗೊಳಿಸಬೇಕು ಎಂದು ಆಗ್ರಹಿಸಿದರೆ, ಯಾವ ಕಾರಣಕ್ಕೂ ಅಂಥ ಪ್ರಯತ್ನ ಮಾಡಬಾರದು, ಅದು ನಮ್ಮೂರಿನ ಹೆಮ್ಮೆಯ ಪ್ರತೀಕ ಎಂದು ಇನ್ನು ಕೆಲವರು ವಾದಿಸುತ್ತಾರೆ. ಹೀಗಾಗಿ ಆ ಹೆಸರು ಹಾಗೇ ಉಳಿದಿದೆ.

ನೀರಾವರಿ ಯೋಜನೆಗಳ ಸುತ್ತಮುತ್ತ

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ

vveditoped@gmail.com

ಯಾವುದೇ ರಾಜ್ಯದ ಅಭಿವೃದ್ಧಿಯಲ್ಲಿ ನೀರಾವರಿ ಇಲಾಖೆಯ ಪಾತ್ರ ಮಹತ್ವದ್ದಾಗಿರುತ್ತದೆ. ಅದರಲ್ಲಿಯೂ ಬಯಲುಸೀಮೆಯ ಭಾಗದಲ್ಲಿ ಹನಿ ನೀರಿಗೂ ಹಪಹಪಿಸುವ ಜನರಿಗೆ ಈ ಯೋಜನೆಗಳು 'ಅಮೃತ'ದ ರೀತಿಯಲ್ಲಿರುತ್ತವೆ. ಅಂಥ ಬಯಲುಸೀಮೆಯ ಏಳು ಜಿಲ್ಲೆಗಳಿಗೆ 'ಭಗೀರಥ'ನ ರೀತಿಯಲ್ಲಿ ನೀರು ತರುವಲ್ಲಿ ಕೊನೆಗೂ ಕರ್ನಾಟಕ ಸರಕಾರ ಯಶಸ್ವಿಯಾಗಿದೆ. ಗೌರಿ ಹಬ್ಬದಂದು ಗಂಗೆಯನ್ನು ಹರಿಸುವ ಮೂಲಕ, ದಶಕದ ನಿರೀಕ್ಷೆಯಾಗಿದ್ದ ಎತ್ತಿನಹೊಳೆ ಯೋಜನೆಯ ಮೊದಲ ಹಂತಕ್ಕೆ ಅದು ಚಾಲನೆ ನೀಡಿದೆ. ಮುಂದಿನ 2-3 ವರ್ಷದಲ್ಲಿ ಈ ನೀರಾವರಿ ಯೋಜನೆಯನ್ನು ಪೂರ್ಣಪ್ರಮಾಣದಲ್ಲಿ ಮುಗಿಸುವ ಮೂಲಕ ಸುಮಾರು 75 ಲಕ್ಷ ಜನರಿಗೆ ನೀರುಣಿಸುವ ಮಹತ್ವದ ಉಪಕ್ರಮವನ್ನು ಕಾರ್ಯರೂಪಕ್ಕೆ ತರುವ ಭರವಸೆಯನ್ನು ಸರಕಾರ ನೀಡಿದೆ.

ಎತ್ತಿನಹೊಳೆ ಯೋಜನೆಯ ಮೊದಲ ಹಂತ ಯಶಸ್ವಿಯಾದ ಸಮಯದಲ್ಲಿ ಇಡೀ ರಾಜ್ಯ ಖುಷಿಪಟ್ಟರೆ, ಬಯಲುಸೀಮೆಯ ಏಳು ಜಿಲ್ಲೆಯ ಜನ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ಎತ್ತಿನಹೊಳೆಯ ಆರಂಭದಲ್ಲಿ 'ಎತ್ತು ನೀರು ಕುಡಿಯುವಷ್ಟು ಇರುವ ತೊರೆಯಿಂದ ಏಳು ಜಿಲ್ಲೆಗೆ ನೀರು ಕೊಡಲು ಸಾಧ್ಯವೇ?' ಎಂದು ಬಹುತೇಕರು ಮೂಗುಮುರಿದಿದ್ದರು. ಆದರೀಗ ಮೊದಲ ಹಂತ ಮುಕ್ತಾಯವಾಗಿದ್ದು, 2027ಕ್ಕೆ ಇಡೀ ಕಾಮಗಾರಿಯನ್ನು ಪೂರ್ಣಗೊಳಿಸುವುದಾಗಿ ಸರಕಾರ ಹೇಳಿಕೊಂಡಿದೆ. ಹಾಗೆ ನೋಡಿದರೆ, ಈ ಯೋಜನೆಯಲ್ಲಿ 24.01 ಟಿಎಂಸಿ ನೀರನ್ನು ಕುಡಿಯುವ ನೀರಿಗಾಗಿ ಹಾಗೂ ಕೆರೆಗಳನ್ನು ತುಂಬಿಸಲು ಬಳಸಿಕೊಳ್ಳಲಾಗುವುದರಿಂದ ಸುಮಾರು 29 ತಾಲೂಕುಗಳ 6,657 ಗ್ರಾಮಗಳ 75.59 ಲಕ್ಷ ಜನರ ಬಯಕೆ ಈಡೇರಲಿದೆ. ಈ ಎಲ್ಲ ಅಂಕಿ-ಅಂಶಗಳನ್ನು ನೋಡುವಾಗ ಎತ್ತಿನಹೊಳೆ ಯೋಜನೆಯ ಬಗ್ಗೆ ಅಭಿಮಾನ ಮೂಡದೇ ಇರುವುದಿಲ್ಲ.

ಆದರೆ ಈ ಯೋಜನೆ ಆರಂಭಗೊಂಡ ಸಮಯದಲ್ಲಿನ ಅಂದಾಜು ವೆಚ್ಚ ಹಾಗೂ ಈಗ ಖರ್ಚಾಗಿರುವ ಹಣವನ್ನು ಗಮನಿಸಿದರೆ, 'ಬೆಚ್ಚಿಬೀಳುವುದು' ಖಚಿತ. 2011ರಲ್ಲಿ ಡಿಪಿಆರ್ ಆಗುವ ಸಮಯದಲ್ಲಿ ಈ ಯೋಜನೆಯ ಒಟ್ಟು ಅಂದಾಜುವೆಚ್ಚ ಇದ್ದದ್ದು ಎಂಟು ಸಾವಿರ ಚಿಲ್ಲರೆ ಕೋಟಿ ರುಪಾಯಿ. 2014ರಲ್ಲಿ ಆರಂಭಗೊಂಡಾಗ ಭೂಸ್ವಾಧೀನ ಪ್ರಕ್ರಿಯೆ ಸೇರಿದಂತೆ ವಿವಿಧ ಕಾರಣಕ್ಕೆ 12 ಸಾವಿರ ಕೋಟಿಗೆ ಅದು ಏರಿತ್ತು. ಆದರೆ ಇಡೀ ಯೋಜನೆ ಪೂರ್ಣಗೊಳ್ಳುವ ವೇಳೆಗೆ ಇದರ ಮೊತ್ತ 23 ಸಾವಿರ ಕೋಟಿ ರು. ದಾಟಲಿದೆ ಎಂದು ಅಂದಾಜಿಸಲಾಗಿದೆ. ಅಂದರೆ ಮೂಲ ವೆಚ್ಚಕ್ಕೆ ಹೋಲಿಸಿದರೆ ಬರೋಬ್ಬರಿ ಮೂರು ಪಟ್ಟು ಹೆಚ್ಚು ಖರ್ಚಾಗಲಿದೆ!

ಹಾಗೆ ನೋಡಿದರೆ, ಕರ್ನಾಟಕದಲ್ಲಿರುವ ಬಹುತೇಕ ನೀರಾವರಿ ಯೋಜನೆಗಳ ಹಣೆಬರಹ ಇದೇ ಆಗಿದೆ. ಮೈಸೂರು ಅರಸರ ಕಾಲದಲ್ಲಿ ಸಿದ್ಧಪಡಿಸಿದ ಕಾವೇರಿ ನೀರಾವರಿ ಯೋಜನೆಗಳನ್ನು ಹೊರತುಪಡಿಸಿದರೆ, ಉಳಿದೆಲ್ಲ ಯೋಜನೆಗಳ ಪಾಡು 'ಒಂದಕ್ಕೆ ಮೂರರಷ್ಟು' ಎಂದರೆ ತಪ್ಪಾಗುವುದಿಲ್ಲ. ನೀರಾವರಿ ಯೋಜನೆಗಳನ್ನು ಘೋಷಿಸುವಾಗ ಇರುವ ಉತ್ಸಾಹ, ಹುಮ್ಮಸ್ಸು ಅವುಗಳನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುವ ಸಮಯದಲ್ಲಿ ಬಹುತೇಕ ಸರಕಾರಗಳಿಗೆ ಇರುವುದಿಲ್ಲ. ಆರಂಭಗೊಂಡ ಯೋಜನೆಗಳು 'ಟೇಕಾಫ್' ಆಗದೇ ಇರುವುದಕ್ಕೆ ಬಹುತೇಕ ಸಮಯದಲ್ಲಿ ಭೂಸ್ವಾಧೀನ ಪ್ರಕ್ರಿಯೆಯಲ್ಲಿನ ವಿಳಂಬ, ಕಾನೂನಾತ್ಮಕವಾಗಿ ಎದುರಾಗುವ ಸಮಸ್ಯೆಗಳು ಕಾರಣ. ಇದರೊಂದಿಗೆ ಅರಣ್ಯ ಭೂಮಿ ವಲಯದಲ್ಲಿ ಸಣ್ಣ ಪ್ರಮಾಣದಲ್ಲಿ ಯೋಜನೆ ಹಾದುಹೋದರೂ, ಅದಕ್ಕೆ ಅನುಮತಿ ಪಡೆಯಲು ನಡೆಸಬೇಕಾದ ಕಸರತ್ತುಗಳು, ಅನುಭವಿಸಬೇಕಾದ ಪೀಕಲಾಟ ಒಂದೆರಡಲ್ಲ. ಈ ಎಲ್ಲವನ್ನೂ ಇತ್ಯರ್ಥಪಡಿಸಿಕೊಂಡು ಮುಂದೆ ಸಾಗುವ ವೇಳೆಗೆ ನಾಲ್ಕು ವರ್ಷದ ಯೋಜನೆ ದಶಕಕ್ಕೆ ಬಂದು ಕೂತಿರುತ್ತದೆ ಎಂದರೆ ತಪ್ಪಾಗುವುದಿಲ್ಲ.

ಈ ವಿಷಯದಲ್ಲಿ, ರಾಜ್ಯದ ಇತರೆ ನೀರಾವರಿ ಯೋಜನೆಗಳಿಗೆ ಹೋಲಿಸಿದರೆ ಎತ್ತಿನಹೊಳೆ ಯೋಜನೆ ಕೊಂಚ 'ವೇಗ'ವಾಗಿಯೇ ನಡೆದಿದೆ ಎನ್ನಬಹುದು. ಅದರಲ್ಲಿಯೂ ಕಳೆದೊಂದು ವರ್ಷದ ಅವಧಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ 'ವಿಶೇಷ ಕಾಳಜಿ'ಯ ಫಲವಾಗಿ ಈ ಯೋಜನೆಗೆ ವೇಗ ಸಿಕ್ಕಿತ್ತು. ಹಾಗೆ ನೋಡಿದರೆ, 2014ರಲ್ಲಿ ಸಿದ್ದರಾಮಯ್ಯ ಅವರು ಈ ಯೋಜನೆಗೆ ಶಂಕುಸ್ಥಾಪನೆ ಮಾಡಿದ ಬಳಿಕ ಬಂದ ಸಮ್ಮಿಶ್ರ ಸರಕಾರವಾಗಲಿ, ಬಿಜೆಪಿ ಸರಕಾರವಾಗಲಿ 'ಆಸಕ್ತಿ' ತೋರಿದ್ದಕ್ಕಿಂತ ಈ ಯೋಜನೆ ಕಾರ್ಯಸಾಧುವಲ್ಲವೆಂದು ಹೇಳಿದ್ದೇ ಹೆಚ್ಚು. ಆದರೆ ಹಳೇ ಮೈಸೂರು ಭಾಗದಲ್ಲಿ ಮೈಲೇಜ್ ದಕ್ಕಿಸಿಕೊಳ್ಳಲೆಂದೋ ಅಥವಾ ಬಯಲುಸೀಮೆಗೆ ನೀರು ಹರಿಸಲೇಬೇಕು ಎನ್ನುವ ಸದುದ್ದೇಶದಿಂದಲೋ, ಕಾಂಗ್ರೆಸ್ ಸರಕಾರ ನೀಡಿದ ವೇಗದಿಂದ ಎತ್ತಿನಹೊಳೆಯ ಮೊದಲ ಹಂತವಂತೂ ಮುಗಿದಿದೆ. ಮೂಲವೆಚ್ಚಕ್ಕೆ ಮೂರು ಪಟ್ಟು ಹೆಚ್ಚಾದರೂ, ನೀರಾದರೂ ಸಿಕ್ಕಿದೆಯಲ್ಲ ಎನ್ನುವುದೇ ನೆಮ್ಮದಿ!

ಕೃಷ್ಣಾ ಮೇಲ್ದಂಡೆ, ಭದ್ರಾ ಮೇಲ್ದಂಡೆ ಸೇರಿದಂತೆ ಕರ್ನಾಟಕದ ಸಾಕಷ್ಟು ನೀರಾವರಿ ಯೋಜನೆಗಳು ಆರಂಭಗೊಂಡು 2-3 ದಶಕ ಕಳೆದರೂ, ಮುಗಿಯುವುದು ಯಾವಾಗ ಎಂದು ಈಗಲೂ ನೋಡುವ ಪರಿಸ್ಥಿತಿಯಿದೆ. ಈ ಯೋಜನೆಗಳ ಆರಂಭದಲ್ಲಿ 'ತರಬೇತಿ'ಗೆಂದು ಕೆಲಸಕ್ಕೆ ಸೇರಿದ ಅದೆಷ್ಟೋ ಎಂಜಿನಿಯರ್‌ಗಳು ಅಲ್ಲಿಯೇ ನಿವೃತ್ತಿ ಪಡೆದು, ಅವರ ಮಕ್ಕಳನ್ನು ಕೆಲಸಕ್ಕೆ ಸೇರಿಸಲು ಓಡಾಡುತ್ತಿದ್ದಾರೆ. ಇನ್ನು ಮಹಾದಾಯಿ, ಕಳಸ ಬಂಡೂರಿಯಂಥ ಯೋಜನೆಗಳಿಗೆ ಕೇಂದ್ರ ಸರಕಾರದ 'ಅನುಮತಿ'ಗಾಗಿಯೇ ಕಾದು ಕೂರುವಂತಾಗಿದೆ.

ಯಾವುದೇ ನೀರಾವರಿ ಯೋಜನೆಗಳು, ಕೇವಲ ಯಾವುದೇ ಒಂದು ಇಲಾಖೆ, ಅನುದಾನ ಅಥವಾ ಯೋಜನೆಗಳ ರೀತಿಯಲ್ಲಿರುವುದರಿಂದ ಲಕ್ಷಾಂತರ ಜನರ ಜೀವನವನ್ನು ಬದಲಾಯಿಸುವ ಶಕ್ತಿ ಅವಕ್ಕೆ ಇರುತ್ತದೆ. ನೀರಾವರಿ ಯೋಜನೆಗಳಿಂದ ಆ ಭಾಗದ ಜನರ ಜೀವನಕ್ರಮವೇ ಬದಲಾಗಿರುವ ಹತ್ತಾರು ಉದಾಹರಣೆಗಳು ನಮ್ಮ ಮುಂದಿವೆ. ಇಷ್ಟಾದರೂ, ನಮ್ಮ ರಾಜ್ಯದಲ್ಲಿ ಬಹುತೇಕ ನೀರಾವರಿ ಯೋಜನೆಗಳು ಆಮೆಗತಿಯಲ್ಲಿ ಸಾಗುವುದೇಕೆ ಎನ್ನುವುದು ಅನೇಕರ ಪ್ರಶ್ನೆಯಾಗಿದೆ. ಬಹುತೇಕ ಯೋಜನೆಗಳು ಮೊದಲಿಗೆ ಹೇಳಿದಂತೆ ಕಾನೂನಾತ್ಮಕ, ಭೂಸ್ವಾಧೀನ ಪ್ರಕ್ರಿಯೆ ಹಾಗೂ ಪರಿಸರ ಇಲಾಖೆಯ ಕಾರಣಗಳಿಂದ ತಡವಾಗುತ್ತವೆ. ಇವುಗಳೊಂದಿಗೆ ಪ್ರಮುಖವಾಗಿ ಕಾಡುವ ಮತ್ತೊಂದು ಸಮಸ್ಯೆಯೆಂದರೆ, ಅನುದಾನ ಹಂಚಿಕೆ ಎನ್ನುವುದು ಎಲ್ಲರಿಗೂ ಗೊತ್ತಿರುವ ನಗ್ನಸತ್ಯ.

ಅನುದಾನ ಹಂಚಿಕೆಯಲ್ಲಿ ಸರಿಯಾದ 'ಪ್ಲಾನ್' ಇಲ್ಲದೆ ಯೋಜನೆಗಳನ್ನು ಘೋಷಿಸುವುದೇ ಕರ್ನಾಟಕದಲ್ಲಿ ಬಹುತೇಕ ನೀರಾವರಿ ಯೋಜನೆಗಳು ಹಿನ್ನಡೆ ಅನುಭವಿಸುವುದಕ್ಕಿರುವ ಪ್ರಮುಖ ಕಾರಣ. ಉದಾಹರಣೆಗೆ ಈ ಹಿಂದಿನ ಬಿಜೆಪಿ ಸರಕಾರದ ಅವಧಿಯಲ್ಲಿ ನೀರಾವರಿ ಇಲಾಖೆಗೆ 20 ಸಾವಿರ ಕೋಟಿ ರು. ಅನುದಾನ ನೀಡಿ, 40 ಸಾವಿರ ಕೋಟಿ ರು. ಮೊತ್ತದ ಯೋಜನೆಗಳನ್ನು ಘೋಷಣೆ ಮಾಡಲಾಗಿತ್ತು. ಪ್ರತಿವರ್ಷ ಈ ರೀತಿ ಮಾಡಿದರೆ, ಐದು ವರ್ಷಕ್ಕೆ ಹೆಚ್ಚುವರಿ 40 ಸಾವಿರ ಕೋಟಿ ರು. ಹೊರೆ ಸರಕಾರದ ಮೇಲೆ ಬೀಳುತ್ತದೆ. ಇದು ಕೇವಲ ಬಿಜೆಪಿ ಸರಕಾರದ ಅವಧಿಯಲ್ಲಿ ಆಗಿರುವ ಕಾರ್ಯವಲ್ಲ, ಬಹುತೇಕ ಸರಕಾರಗಳು ನೀರಾವರಿ ಇಲಾಖೆಗೆ ಮೀಸಲಿಡುವ ಮೊತ್ತದ ಮೂರು ಪಟ್ಟು ಯೋಜನೆಗಳನ್ನು ಘೋಷಿಸುತ್ತವೆ. ಘೋಷಿಸಿದ ಎಲ್ಲ ಯೋಜನೆಗಳಿಗೆ ಶಂಕುಸ್ಥಾಪನೆ ಮಾಡುವ ಉದ್ದೇಶದಿಂದ ಎಲ್ಲವಕ್ಕೂ ಸಾವಿರ, ಎರಡು ಸಾವಿರ ಕೋಟಿ ರು. ಅನುದಾನ ಹಂಚಿಕೆ ಮಾಡುತ್ತಾ ಸಾಗುತ್ತವೆ. ಇದರಿಂದಾಗಿ ಯಾವುದೇ ಯೋಜನೆ ಪೂರ್ಣಗೊಳ್ಳುವುದಿಲ್ಲ. ಬದಲಿಗೆ ವರ್ಷದಿಂದ ವರ್ಷಕ್ಕೆ ಪರಿಷ್ಕೃತ ಮೊತ್ತ ಹೆಚ್ಚಾಗುತ್ತಾ ಸಾಗುವುದರೊಂದಿಗೆ, ಯೋಜನೆಯೂ ಮುಗಿಯುವುದಿಲ್ಲ, ಸರಕಾರದ ಮೇಲಿನ ಹೊರೆಯೂ ಕಡಿಮೆಯಾಗುವುದಿಲ್ಲ, ಈ ರೀತಿ ಪ್ರತಿವರ್ಷ ಒಂದೊಂದು ಯೋಜನೆ ಜೋಡಿಸುತ್ತಾ ಸಾಗಿರುವುದರಿಂದ ಕರ್ನಾಟಕದಲ್ಲಿ ಮೂರು ಲಕ್ಷ ಕೋಟಿ ರು. ಗೂ ಹೆಚ್ಚಿನ ನೀರಾವರಿ ಯೋಜನೆಗಳು ಬಾಕಿ ಉಳಿದಿವೆ.

ಈ ಸಮಯದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ (ಯುಕೆಪಿ) ಬಗ್ಗೆ ಪ್ರಸ್ತಾಪಿಸಲೇಬೇಕು. ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಕಾಲದಲ್ಲಿ ಆರಂಭಗೊಂಡ 'ಯುಕೆಪಿ' ಆಗಿನ ಕಾಲಕ್ಕೆ ಕೆಲ ಸಾವಿರದ ಲೆಕ್ಕದಲ್ಲಿತ್ತು. ಆದರೀಗ ಈ ಯೋಜನೆಗೆಂದು ಲಕ್ಷಾಂತರ ಕೋಟಿ ರು. ಖರ್ಚು ಮಾಡಲಾಗಿದೆ. ಆದರೂ, ಯೋಜನೆ ಮಾತ್ರ ಮುಗಿದಿಲ್ಲ. ಇದೇ ರೀತಿ ತುಂಗಭದ್ರಾ ಜಲಾಶಯಕ್ಕೆ ಸಮನಾಂತರವಾಗಿ ನವಲಿ ಜಲಾಶಯ ನಿರ್ಮಿಸಬೇಕು ಎನ್ನುವುದು ಆರೇಳು ವರ್ಷದ ಕನಸು. ಪ್ರತಿವರ್ಷ ಈ ಯೋಜನೆಯ ಡಿಪಿಆರ್ ಅಥವಾ ಇನ್ನಿತರೆ ಕಾರಣಕ್ಕೆ ಸಾವಿರಾರು ಕೋಟಿ ನೀಡಲಾಗುತ್ತಿದೆಯೇ ಹೊರತು, ಇನ್ಯಾವುದೇ ಪ್ರಗತಿಯಂತೂ ಕಂಡಿಲ್ಲ.

ರಾಜ್ಯ ಸರಕಾರಗಳು ಇನ್ನಾದರೂ ಈ ವಿಷಯದಲ್ಲಿ ಜಾಗ್ರತೆ ವಹಿಸುವ ಅಗತ್ಯವಿದೆ. ನೀರಾವರಿ ಇಲಾಖೆಗೆ ಸಂಬಂಧಿಸಿದ ಹೊಸ ಯೋಜನೆಗಳನ್ನು ಘೋಷಿಸುವ ಮೊದಲು, ಈಗಿರುವ ಯೋಜನೆಗಳನ್ನು ಮುಗಿಸುವ ನಿಟ್ಟಿನಲ್ಲಿ ಯೋಚಿಸಬೇಕಾಗಿದೆ. ಹಳೇ ಯೋಜನೆ ಮುಗಿಯುವ ಮೊದಲೇ, ಹೊಸ ಯೋಜನೆಗಳನ್ನು ಘೋಷಿಸಿಕೊಂಡು ಹೋದರೆ, ಅತ್ತ ಆ ಯೋಜನೆಗಳಿಗೂ ಮುಕ್ತಿ ಸಿಗದೇ, ಇತ್ತ ಈ ಯೋಜನೆಗಳೂ ಟೇಕಾಫ್ ಆಗದೇ ಕೇವಲ ರಾಜಕೀಯ ಕಾರಣಕ್ಕಾಗಿ ನೀರಾವರಿ ಯೋಜನೆಗಳನ್ನು ಆರಂಭಿಸಿದಂತಾಗುತ್ತದೆ.

ಒಂದು ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ನೀರಾವರಿ ಯೋಜನೆಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಕುಡಿಯುವ ನೀರು, ಕೈಗಾರಿಕೆ, ಕೃಷಿ ಸೇರಿದಂತೆ ಹಲವು ಕಾರಣಗಳಿಗೆ ನೀರಾವರಿ ಯೋಜನೆಗಳು ಅತ್ಯಗತ್ಯವಾಗಿರುತ್ತವೆ. ಬಹುತೇಕ ಸಮಯದಲ್ಲಿ ಸರಕಾರಗಳು ಯಾವುದೋ 'ಒತ್ತಡ', ಚುನಾವಣಾ ಕಾರಣಗಳಿಗೆ ಯೋಜನೆಗಳನ್ನು ಆರಂಭಿಸುತ್ತವೆ. ಆದರೆ ಬಳಿಕ ಆ ಯೋಜನೆಗಳಿಗೆ ನೀಡಬೇಕಾದ ಅನುದಾನದ ಬಗ್ಗೆ ಸ್ಪಷ್ಟತೆ ಇಲ್ಲದಿರುವುದೇ ಬಹುತೇಕ ಯೋಜನೆಗಳ ಇಂಥ ಪರಿಸ್ಥಿತಿಗೆ ಕಾರಣ ಎನ್ನುವುದರಲ್ಲಿ ಅನುಮಾನವಿಲ್ಲ. ಇನ್ನಾದರೂ, ಯಾವುದೇ ಯೋಜನೆಗಳನ್ನು ಘೋಷಣೆ ಮಾಡುವ ಮೊದಲು ಅನುದಾನದ ಮೂಲದ ಬಗ್ಗೆ ಯೋಚಿಸಬೇಕಿದೆ. ಇಲ್ಲವಾದರೆ ಈಗಿರುವ ಮೂರು ಲಕ್ಷ ಕೋಟಿ ರು. ಮೊತ್ತದ ಬಾಕಿ ಕಾಮಗಾರಿಗೆ ಇನ್ನಷ್ಟು ಸೇರುತ್ತಾ ಹೋಗುತ್ತವೆ ಎನ್ನುವುದರಲ್ಲಿ ಅನುಮಾನವಿಲ್ಲ.

ಬಸವ ಮೂಲ, ಸನಾತನ ಶೈವಮೂಲ!

ಬಸವ ಮಂಟಪ

ರವಿ ಹಂಜ್

vveditoped@gmail.com

"ಷಣ್ಮುಖನಿಗೆ ಪ್ರಸಾದ ಕೊಡುವುದನ್ನು ಮರೆತ ವೃಷಭನೆನ್ನುವ ಗಣನನ್ನು ಶಿವನು 'ಬಸವನಾಗಿ ಭೂಮಿಯಲ್ಲಿ ಜನಿಸಿ ಶಿವಭಕ್ತ ಜಂಗಮರಿಗೆ ಪ್ರಸಾದ ವಿನಿಯೋಗಿಸಿ ಪ್ರಾಯಶ್ಚಿತ್ತ ಮಾಡಿಕೊಂಡು ಕೈಲಾಸಕ್ಕೆ ಹಿಂದಿರುಗು' ಎಂದು ಶಪಿಸುತ್ತಾನೆ. ಹೀಗೆ ವೃಷಭನು ಬಸವನಾಗಿ ಬಾಗೇವಾಡಿ ಅಗ್ರಹಾರದ (ಸಂದಣಿಪ ವಿಪ್ರಸಂತಾನದಿಂಡಿದಿಡಿರ್ಪ, ಶಿವಪುರಾಣಾಗವ ೦ಕುಲಂಗಳಿಂದೆಸೆದಿರ್ಪ ಶಿವಶಾಸ್ತ್ರಘೋಷ ಸಂಗೀತ ದಿಂದಿಡಿದಿರ್ಪ ಅಗ್ರೇಶ್ವರಂ ಕಮ್ಮೆ ಕುಲದಿಂದೆ ಮೆರೆದಿರ್ಪ ವಿಪ್ರನಿರ್ಪಂ ಮಾದಿರಾಜ) ಮಾದಿರಾಜನ ಪತ್ನಿ ಮಾದಲಾಂಬೆಯ ಗರ್ಭದಲ್ಲಿ ಜನ್ಮವೆತ್ತಿ ಜಂಗಮ ಸೇವೆ ಕೈಗೊಂಡು ಪ್ರಾಯಶ್ಚಿತ್ತಕ್ಕೆ ಅನುವಾದನು" ಎಂಬುದು 'ಬಸವರಾಜ ದೇವರ ರಗಳೆ'ಯ ಸಂಕ್ಷಿಪ್ತ ಬಸವಮೂಲ.

ಬಸವನಂತೆಯೇ ರೇಣುಕ, ನಂಬಿಯಣ್ಣ, ಮಹಾದೇವಿ ಯಕ್ಕರೂ ಶಾಪಗ್ರಸ್ತರಾಗಿ ಭೂಲೋಕದಲ್ಲಿ ಜನ್ಮವೆತ್ತಿದರು ಎಂಬ ಪೌರಾಣಿಕ ಕತೆಗಳು ಈ ರಗಳೆಯಂತೆಯೇ ರಚಿತಗೊಂಡಿವೆ. ಈ ರಗಳೆಯು ಸಾಹಿತ್ಯಕ ಅಂಶಗಳಿಂದ ಮಹತ್ವದ್ದೆನ್ನಿಸಬಹುದೇ ಹೊರತು ಕಥನದಿಂದಲ್ಲ. ಇದರ ಕಥನವು ಅತ್ಯಂತ ಕಾಲ್ಪನಿಕವೂ ರೋಚಕವೂ ಮತ್ತು ಪವಾಡ ಮಹಿಮೆಯನ್ನೂ ಒಳಗೊಂಡ ಭಾರತದ ಅನೇಕ ಪುರಾಣ ಪುಣ್ಯಕತೆಗಳಂತೆಯೇ ಇದೆ. ಅದಲ್ಲದೆ ಈ ರಗಳೆಯ ಸಾಹಿತ್ಯಕ ತಂತ್ರವು ಭೋಗಣ್ಣ, ನಂಬಿಯಣ್ಣ, ಮಹಾದೇವಿಯಕ್ಕನ ಪುರಾಣಗಳಲ್ಲಿಯೂ ಕಾಣುವುದರಿಂದ ಇಂಥ ಕಥಾತಂತ್ರವು ಅಂದಿನ ಕಾಲದಲ್ಲಿ ಮೇಲ್ಪಂಕ್ತಿಯಾಗಿತ್ತೆನಿಸುತ್ತದೆ. ಹಾಗೆ ನೋಡಿದರೆ, ಈ ರೀತಿಯ ಕಥಾತಂತ್ರ, ಮಾದರಿಯನ್ನು ಇತ್ತೀಚಿನವರೆಗಿನ ಪುರಾಣ-ಹರಿಕಥೆಗಳಲ್ಲದೆ ಪೌರಾಣಿಕ ನಾಟಕ, ಸಿನಿಮಾಗಳಲ್ಲಿಯೂ ಕಾಣಬಹುದು. ಅಂಥ ಒಂದು ಜನಪ್ರಿಯ ಮಾದರಿಯನ್ನು ಹರಿಹರ ಸೃಷ್ಟಿಸಿದ್ದಾನೆ. ಅಥವಾ ಆಗಲೇ ಜಾರಿಯಿದ್ದ ಒಂದು ಸಿದ್ಧ ಮಾದರಿಯನ್ನು ರಗಳೆಯ ತಂತ್ರಕ್ಕೆ ಅಳವಡಿಸಿಕೊಂಡಿದ್ದಾನೆ.

ಬಿ.ಎಲ್.ರೈಸ್ ಅವರು 'ಮೈಸೂರು ಗೆಜೆಟಿಯರ್'ನಲ್ಲಿ "ಬಸವಣ್ಣ ಆರಾಧ್ಯನೊಬ್ಬನ ಮಗ. ಬಿಜ್ಜಳನ ಮಹಾಮಂತ್ರಿಯ ಮಗಳನ್ನು ಮದುವೆಯಾಗಿ ಮಂತ್ರಿಯ ಅಳಿಯನೆನಿಸಿಕೊಂಡಿದ್ದನು. ಅವನ ಸೋದರಿ ಪದ್ಮಾವತಿ ಓರ್ವ ಅನುಪಮ ಸುಂದರಿ. ಆಕೆಯನ್ನು ಮೋಹಿಸಿ ಮದುವೆಯಾದ ಬಿಜ್ಜಳ, ಬಸವಣ್ಣನನ್ನು ತನ್ನ ಮಹಾಮಂತ್ರಿಯಾಗಿಸಿ ಕಾಲಾಂತರದಲ್ಲಿ ದಂಡನಾಯಕನನ್ನಾಗಿಯೂ ಮಾಡಿಕೊಂಡಿದ್ದನು. ಸುಂದರ ಹೆಂಡತಿಯ ಮೋಹದಲ್ಲಿ ಬಿಜ್ಜಳನು ಮೈಮರೆತಿರುವಾಗ ಎಲ್ಲಾ ಆಡಳಿತವನ್ನು ವಹಿಸಿಕೊಂಡಿದ್ದ ಬಸವಣ್ಣನು ಹಳೆಯ ಅಧಿಕಾರಿಗಳನ್ನು ತೆಗೆದು ತನ್ನ ನಿಷ್ಠರನ್ನು ಆಯಕಟ್ಟಿನ ಜಾಗಗಳಲ್ಲಿ ಕೂರಿಸಿದನು. ಅದಲ್ಲದೆ ತನ್ನ ಅಳಿಯ ಯುವ ರಾಜಕುಮಾರನನ್ನು ತನ್ನ ಪಂಥದ ಶ್ರದ್ಧಾಳುವಾಗಿ ಮಾರ್ಪಾಡಿಸಿ ಅಧಿಕಾರವನ್ನು ಮತ್ತಷ್ಟು ಕೈವಶಮಾಡಿಕೊಂಡಿದ್ದನು. ಬಿಜ್ಜಳನಿಗೆ ಇದೆಲ್ಲವೂ ಅರಿವಾಗಿ ಬಸವನನ್ನು ಬಂಧಿಸಿ ವಿಚಾರಣೆಗೆ ಗುರಿಪಡಿಸಲು ಯತ್ನಿಸಿದನು. ಆದರೆ ಬಸವಣ್ಣನಿಗಿದ್ದ ಬೆಂಬಲವನ್ನು ಗ್ರಹಿಸಿ ಅವನನ್ನು ದಂಡನಾಯಕ ಪದವಿಯಿಂದ ತೆಗೆದು ಕೇವಲ ಮಂತ್ರಿಸ್ಥಾನಕ್ಕೆ ಸೀಮಿತಗೊಳಿಸಿದನು. ಮುಂದೆ ಬಸವಣ್ಣನು ಬಿಜ್ಜಳನನ್ನು ಕೊಲ್ಲಿಸಿದನು. ಬಿಜ್ಜಳನ ಹಿರಿಯ ಮಗನು ತನ್ನ ತಂದೆಯ ಕೊಲೆಯ ಸೇಡು ತೀರಿಸಿಕೊಳ್ಳಲು ಬಸವಣ್ಣನನ್ನು ಬೆಂಬತ್ತಿ ಬಂದಾಗ ಬಸವಣ್ಣನು ಆತ್ಮಹತ್ಯೆ ಮಾಡಿಕೊಂಡನು. ಆದರೆ ಲಿಂಗಾಯತರ 'ಬಸವ ಪುರಾಣ'ವು ಅವನು ಕೂಡಲಸಂಗಮದ ಲಿಂಗದಲ್ಲಿ ಐಕ್ಯನಾಗಿ ಮಾಯವಾದನು ಎನ್ನುತ್ತದೆ" ಎಂಬುದಾಗಿ ಜೈನರ ಬಿಜ್ಜಳಾಂಕ ಕಾವ್ಯ/ಬಿಜ್ಜಳರಾಯ ಚರಿತ ಮತ್ತು ಬಸವ ಪುರಾಣಗಳ ಆಧಾರದಲ್ಲಿ ದಾಖಲಿಸಿದ್ದಾರೆ (ಪುಟ 332, ಮೈಸೂರು ಗೆಜೆಟಿಯರ್, ಸಂಪುಟ-1). ರೈಸ್ ಅವರು ಬಸವಣ್ಣನನ್ನು ಓರ್ವ ಆರಾಧ್ಯನ ಮಗ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಪುರಾಣಗಳ ಮತ್ತು ಮೌಖಿಕ ಇತಿಹಾಸದ ಹಿನ್ನೆಲೆಯ ಈ ಗೆಜೆಟಿಯರ್ ಸಂಕಥನದಲ್ಲಿ ಬಸವಣ್ಣನು 'ಆರಾಧ್ಯ'ನಾಗಿದ್ದನು ಮತ್ತು 'ದಂಡನಾಯಕ'ನಾಗಿದ್ದನು ಎಂಬುದು ಗಮನಿಸಬೇಕಾದ ಅಂಶ. ಈ ಆರಾಧ್ಯರೇ ಲಿಂಗಿ ಬ್ರಾಹ್ಮಣರು, ಜಂಗಮರು ಎಂದು ಪ್ರೊ. ಎಂ.ಎಂ. ಕಲಬುರ್ಗಿಯವರು ಒತ್ತಿ ಒತ್ತಿ ಪ್ರತಿಪಾದಿಸಿದ್ದಾರೆ ಎಂಬುದು ಇನ್ನೂ ವಿಶೇಷವಾಗಿ ಗಮನಿಸಬೇಕಾದ ಅಂಶ.

ಉತ್ಖನನ ತಜ್ಞರಾದ ಜೆ.ಎಫ್.ಫ್ಲೀಟ್ ಅವರು 1899ರಲ್ಲಿ 'ಭಾರತದ ಇತರೆ ಪ್ರದೇಶಗಳಿಗಿಂತ ಕರ್ನಾಟಕವು ಹೆಚ್ಚಿನ ಸಂಖ್ಯೆಯ ಶಿಲಾಶಾಸನಗಳನ್ನು ಹೊಂದಿದೆ. ಇಲ್ಲಿನ ಉತ್ಖನನವು ಅತ್ಯಂತ ಆಶಾದಾಯಕವಾಗಿದೆ' ಎಂದಿದ್ದಾರೆ. ಇದನ್ನು ಪುಷ್ಟೀಕರಿಸುವಂತೆ ಕರ್ನಾಟಕದಲ್ಲಿ ಆ ಕಾಲಘಟ್ಟದಲ್ಲಿ 26 ಸಾವಿರ ಶಾಸನಗಳು ಸಿಕ್ಕಿದ್ದವು. ಆದರೆ ಇವುಗಳಲ್ಲಿ ಬಸವಣ್ಣ ಅಥವಾ ಮತ್ಯಾವುದೇ ಶರಣರ ಕುರಿತು ಒಂದೇ ಒಂದು ಶಾಸನ ಸಿಕ್ಕಿರಲಿಲ್ಲ. ಹಾಗಾಗಿ ಬಸವಣ್ಣನೆಂಬಾತ ಕಾಲ್ಪನಿಕ ವ್ಯಕ್ತಿ ಎನಿಸಿತ್ತು. ಕೆಲವು ವಿದ್ವಾಂಸರು, 'ಬಿಜ್ಜಳನ ಮಂತ್ರಿಯಾಗಿದ್ದ ಕಾಸಪ್ಪಯ್ಯನೇ ಬಸವಣ್ಣ' ಎಂಬುವ ವಾದವನ್ನೂ ಮಂಡಿಸಿ ದ್ದರು. ಆದರೆ ಕಾಸಪ್ಪಯ್ಯ ಅತ್ಯಂತ ಕ್ರೂರಿಯಾಗಿದ್ದನು. ಇನ್ನು ಕೆಲವರು ಬಸವಣ್ಣನು ನಾಥಪಂಥದ ಅನುಯಾಯಿ ಎಂದೂ ಅನುಮಾನಿಸಿದ್ದರು. ಆದರೆ ಇವೆಲ್ಲವೂ ಊಹಾತ್ಮಕ ಸಂಕಥನಗಳೇ ಹೊರತು ಯಾವುದೇ ಆಧಾರಯುಕ್ತ ಸಂಶೋಧನೆಗಳೆನಿಸಿಕೊಳ್ಳಲು ಅರ್ಹವಾದವುಗಳಲ್ಲ. ಅದಕ್ಕೆ ಯಾವುದಾದರೂ ಒಂದು ಪೂರಕ ಶಾಸನದ ಪುರಾವೆಯ ಬಲ ಬೇಕಿತ್ತು. ಆಗ ಈ ಎಲ್ಲಾ ಊಹಾಪೋಹಗಳಿಗೆ ತೆರೆಯೆಳೆವಂತೆ ಬಸವಣ್ಣನ ಕುರಿತು 1928ರಲ್ಲಿ ಫ.ಗು. ಹಳಕಟ್ಟಿಯವರು ಕ್ರಿ.ಶ. 1260ರ ಅರ್ಜುನವಾಡದ ಶಿಲಾಶಾಸನವನ್ನು ಬೆಳಕಿಗೆ ತಂದರು.

ಈ ಶಾಸನದ ಪ್ರಕಾರ "ಬಾಗೇವಾಡಿಯಲ್ಲಿ ಮಾದರಸ ಮತ್ತು ಮಾದಲಾಂಬಿಕೆಯರ ಮಗನಾಗಿ ಬಸವ ಉರ್ಫ್ ಸಂಗನಬಸವನು ಜನಿಸಿದ್ದನು.

ಇವನ ತಂದೆಯು ಬಾಗೇವಾಡಿಯ 'ಪುರವರಧೀಶ್ವರ'ನಾಗಿದ್ದನೆಂದು ತಿಳಿದುಬ ರುವುದಲ್ಲದೇ ಇದೇ ರೀತಿಯಲ್ಲಿ ಬಸವಣ್ಣನ ಅಣ್ಣ ಹಾಲಬಸವಿದೇವನು ಕವಿಳಾಸ(ಪುರ)ದ ಪುರವರಧೀಶ್ವರನಾ ಗಿದ್ದನೆಂದೂ ತಿಳಿದುಬರುತ್ತದೆ. ಹಾಲಬಸವಿದೇವನನ್ನು ಮಾನವದೇವ, ಯತಿರಾಯ ಮತ್ತು ಮಹಾಮಾಹೇಶ್ವರ ಎಂದೆಲ್ಲಾ ಹೇಳಲಾಗಿದೆ". ಹೀಗೆಂದು ಅರ್ಜುನವಾಡದ ಶಿಲಾಶಾಸನದ ವಿವರಗಳನ್ನು ಸಂಶೋಧಕರಾದ ಕೆ. ಈಶ್ವರನ್ ಅವರು ಸಂಕ್ಷಿಪ್ತವಾಗಿ ತಮ್ಮ Speaking Of Basava: Lingayat Religion And Culture In South Asia (Chapter & Inscriptions) ಕೃತಿಯಲ್ಲಿ ವಿವರಿಸಿದ್ದಾರೆ. ಇಲ್ಲಿ ಬಸವಣ್ಣನ ಅಣ್ಣನನ್ನು 'ಮಹಾಮಾಹೇಶ್ವರ' ಎಂದಿರುವುದು ಗಮನಿಸಬೇಕಾದ ಸಂಗತಿ!

ಇನ್ನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪ್ರಕಟಿಸಿರುವ 'ಮಧುರಚೆನ್ನರ ಲೇಖನಗಳು' (ಸಂ: ಗುರುಲಿಂಗ ಕಾಪಸೆ) ಕೃತಿಯಲ್ಲಿ ಅರ್ಜುನವಾಡ ಶಿಲಾಶಾಸನದ ಪೂರ್ಣಪಾಠವನ್ನು ಕೊಟ್ಟಿದ್ದಾರೆ. ಆಸಕ್ತರು ಗಮನಿಸಬಹುದು. ಅದೇ ರೀತಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ 'ಶಾಸನ ಸಂಗ್ರಹ' (ಸಂ: ಎ.ಎಂ. ಅಣ್ಣಿಗೇರಿ) ಕೃತಿಯಲ್ಲಿ ಸಹ ಈ ಶಾಸನದ ಪೂರ್ಣಪಾಠವಿದೆ. ಇರಲಿ, ಇಲ್ಲಿ ಬಸವಣ್ಣನ ಪರಿವಾರದ ಕುರಿತಾದ ಬಹುಮುಖ್ಯ ಸಾಲುಗಳು ಹೀಗಿವೆ:

"ಸಂಗನ ಬಸವನ ಅಗ್ರ*
***ಂಗೈಕ್ಯಂ ದೇವರಾಜಮುನಿಪನ ತನಯಂ।**
ಜಂಗಮ ಪರಸುಂ ***ರ
ಸಂಗಂ ಪ್ರಿಯಸುತನೆನಿಪ್ಪ ಕಲಿದೇವರಸಂ ॥"

ಇಲ್ಲಿ * ಇರುವ ಅಕ್ಷರಗಳು ಲುಪ್ತಗೊಂಡಿರುವುದರಿಂದ ಅನೇಕ ವಿದ್ವಾಂಸರು ಸಹಮತದಿಂದ ಕೆಳಗಿನಂತೆ ಲುಪ್ತ ಅಕ್ಷರಗಳನ್ನು ತುಂಬಿದ್ದಾರೆ:

"ಸಂಗನ ಬಸವನ ಅಗ್ರಜ ಲಿಂಗೈಕ್ಯಂ ದೇವರಾಜಮುನಿಪನ ತನಯಂ।
ಜಂಗಮ ಪರಸುಂ ಕಾವ (ಬಸವ)ರ
ಸಂಗಂ ಪ್ರಿಯಸುತನೆನಿಪ್ಪ ಕಲಿದೇವರಸಂ ॥
ಕಲಿದೇವಮುನಿಪನಾತ್ಮಜ
ಸಲೆ ಮೂಜಗದೊಳಗೆ ಮೆರೆದ ಮಾನವದೇವಂ।
ಗೆಲಿದಂ ಅಶನ ಬೆಸನವ
ಛಲರಧಿಕಂ ಹಾಲಬಸವಿದೇವ ಮುನೀಶಂ ॥"

ಇಲ್ಲಿ ಲುಪ್ತವಿರದೆ ಸ್ಪಷ್ಟವಾಗಿರುವ 'ಜಂಗಮ ಪರಸು' ಎಂಬುದು ಗಮನಿಸಬೇಕಾದ ಸಂಗತಿ!

ಈ ಶಾಸನದ ಪ್ರಕಾರ ಬಸವಣ್ಣ ಓರ್ವ ಜಂಗಮನೆನಿಸಿಕೊಳ್ಳುತ್ತಾನೆ. ಅದನ್ನು ಅನುಮೋದಿಸುವಂತೆ ಮಹಾಮಾಹೇಶ್ವರ ಎಂಬ ಪದವೂ ಇದೆ. ಈ ಮಹಾಮಾಹೇಶ್ವರ (ವೀರ ಮಾಹೇಶ್ವರ, ಪರಮ ಮಾಹೇಶ್ವರ) ಪದಗಳು ಕಾಳಾಮುಖರನ್ನು ಗುರುತಿಸುತ್ತಿದ್ದ ಪದಗಳಲ್ಲದೇ ಶರಣರು ಸಹ ಮಾಹೇಶ್ವರ ಪದವನ್ನು 525 ಕಡೆ 355 ವಚನಗಳಲ್ಲಿ ಬಳಸಿದ್ದಾರೆ. ಕಾಳಾಮುಖರು ವೀರಮಾಹೇಶ್ವರರೆಂದೂ ಜಂಗಮರೆಂದೂ ಗುರುತಿಸಿಕೊಂಡಿದ್ದರು.

ಹಾಗಿದ್ದರೆ ಬಸವಣ್ಣನು ಜಂಗಮ ಎನ್ನಲು ಇದೊಂದೇ ಶಾಸನವೇ ಆಧಾರವೇ? ಇದಕ್ಕೆ ಸಂಬಂಧಿಸಿದಂತೆ ಬೇರೇನಾದರೂ ಪುರಾವೆಗಳಿವೆಯೇ ಎಂದು ನೋಡಿದಾಗ ಸಿಗುವುದು ಮುನವಳ್ಳಿಯ ಶಾಸನ. ಕಾಳಾಮುಖರ ಕುರಿತು ಸಾಕಷ್ಟು ಸಂಶೋಧನೆ ಮಾಡಿರುವ ಡೇವಿಡ್ ಲೊರೆಂಜನ್, ಕಾಳಾಮುಖರ ಕುರಿತಾದ ತಮ್ಮ ಕೃತಿಯಲ್ಲಿ ಈ ಶಾಸನದ ಬಗ್ಗೆ ದಾಖಲಿಸಿದ್ದಾರೆ. ಈಗ ಆ ಶಾಸನ ಬಸವಣ್ಣನಿಗೆ ಹೇಗೆ ಸಂಬಂಧಿಸುತ್ತದೆ ಎಂದು ನೋಡೋಣ.

ಕ್ರಿ.ಶ. 1252ರ ಜಗದೀಶ್ವರ ದೇವರ ಕುರಿತಾದ ಶಾಸನವು ಕಾಳಾಮುಖರ ಸರ್ವೇಶ್ವರ ಯತಿಯ ಮಗ ಕ್ರಿಯಾಶಕ್ತಿಯ ಮಗನಾದ ಸೋಮೇಶ್ವರನನ್ನು ಕೊಂಡಾಡಿ ಉಂಬಳಿ ದಾನವನ್ನು ಕೊಟ್ಟ ಶಾಸನವಾಗಿದೆ. ಇದನ್ನು ಕೊಟ್ಟವರು "ಶ್ರೀಪತು ಪರಮಮಾಹೇಶ್ವರ ದಂಣನಾಯಕ ಬಸವಿದೇವನ ಮುದ್ದು ಶ್ರೀ ಕಲಿದೇವರ ದಾಸ ಬೊಮ್ಮರಸ" ಎಂದಿದೆ. ಇದೇ ರೀತಿ ಅರ್ಜುನವಾಡದ ಶಾಸನದಲ್ಲಿಯೂ ಬಸವಣ್ಣ ದಂಣನಾಯಕ ಅಲ್ಲದೆ ಬಸವಿದೇವ ಪದವೂ ಇದೆ. ಹಾಗಾಗಿ ಇವೆರಡೂ ಶಾಸನಗಳು ಬಸವಣ್ಣನನ್ನು ಕುರಿತಾಗಿವೆ ಎಂಬ ವಿವರವು 'ಕನ್ನಡ ಶಾಸನ ಸಾಹಿತ್ಯ' (ಸಂ: ಎಂ.ಎಂ. ಕಲ್ಬುರ್ಗಿ, ಪ್ರಕಾಶನ: ಚೇತನಾ ಬುಕ್ ಹೌಸ್) ಕೃತಿಯಲ್ಲಿನ ಅಧ್ಯಾಯವಾದ 'ಅರ್ಜುನವಾಡ ಶಾಸನದ ತ್ರುಟಿತಪದ್ಯ' ಪುಟ 270ರಿಂದ 277ರಲ್ಲಿದೆ.

ಹಾಗಿದ್ದಾಗ ಬಸವಣ್ಣ ನಿಸ್ಸಂಶಯವಾಗಿ ಕಾಳಾಮುಖ ಪರಂಪರೆಯ ಜಂಗಮನೆನ್ನಬಹುದು.

(ಮುಂದುವರಿಯುವುದು)

(ಲೇಖಕರು ದಾವಣಗೆರೆ ಮೂಲದ ಶಿಕಾಗೊ ನಿವಾಸಿ ಮತ್ತು ಸಾಹಿತಿ)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಆಸೆ ಓಕೆ, ದುರಾಸೆ ಯಾಕೆ?

ಪ್ರೊ. ಸಿ.ಶಿವರಾಜು ಅವರ 'ಆಸೆಯ ಮಿತಿಯೇ ಸುಖದ ಮೂಲ' ಎಂಬ ಲೇಖನವು (ವಿಶ್ವವಾಣಿ ಸೆ.7) ಆಸೆ ಮತ್ತು ದುರಾಸೆಯ ಬಗ್ಗೆ ಅತ್ಯಂತ ವಿಸ್ತೃತವಾಗಿ, ಸ್ಪಷ್ಟವಾಗಿ ಹಾಗೂ ಮನಮುಟ್ಟುವಂತೆ ವಿವರಿಸಿದೆ. ಇದನ್ನೇ ಡಿ.ವಿ.ಜಿ.ಯವರು, 'ಇರುವ ಭಾಗ್ಯವ ನೆನೆದು, ಬಾರೆನೆಂಬುದ ಬಿಡು, ಹರುಷಕಿದುವೆ ದಾರಿ' ಎಂದು ಅತ್ಯಂತ ಮಾರ್ಮಿಕವಾಗಿ ತಿಳಿಸಿಕೊಟ್ಟಿದ್ದಾರೆ. ಇಡೀ ಪ್ರಪಂಚದಲ್ಲಿ ಇಂದು ಕಾಣಬರುತ್ತಿರುವ ಸಹಸ್ರಾರು ಸಮಸ್ಯೆಗಳಿಗೆ ಮನುಷ್ಯನ ದುರಾಸೆಯೇ ಕಾರಣ. ಇದು ಗೊತ್ತಿದ್ದರೂ ಯಾರೂ ಬದಲಾಗುತ್ತಿಲ್ಲ. ಆಸೆ ಓಕೆ, ದುರಾಸೆ ಯಾಕೆ?!

– ಸಿ.ಡಿ.ಮುರಳೀಧರ, ಬೆಂಗಳೂರು

ವ್ಯವಸ್ಥೆಯ ಅವ್ಯವಸ್ಥೆ

ಆತ್ಮಹತ್ಯೆ ನಿಜಕ್ಕೂ ಸಾಮಾಜಿಕ ಪಿಡುಗೇ ಅಥವಾ ಇಂದು ಸಮಾಜದಲ್ಲಿ ಕಾಣಬರುತ್ತಿರುವ ಅತಿರೇಕದ ಪರಿಣಾಮವೇ? ಒಬ್ಬ ವಿದ್ಯಾರ್ಥಿಯನ್ನೇ ತೆಗೆದುಕೊಂಡರೂ, ಆತ ಆತ್ಮಹತ್ಯೆಗೆ ಶರಣಾಗುವುದು ಪ್ರಾಯಶಃ ತನ್ನ ತಪ್ಪಿಗಾಗಿ ಅಲ್ಲ; ಬದಲಿಗೆ ಅವನಿರುವ ಸಮಾಜದ, ಪಾಲಕರ, ಶಿಕ್ಷಕರ ಅತಿಯಾದ ಒತ್ತಡವೂ ಇದಕ್ಕೆ ಕಾರಣವಾಗಿದ್ದಿರಬಹುದು. ಅಂದರೆ, ಸದಾ ಉನ್ನತ ಶ್ರೇಣಿಯನ್ನೇ ಅಪೇಕ್ಷಿಸುವುದು, ಇನ್ನೊಬ್ಬರ ಜತೆ ಹೋಲಿಸುವುದು, ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಬಂದಿಲ್ಲವೆಂದರೆ ಜೀವನವೇ ವ್ಯರ್ಥ ಎನ್ನುವುದು- ಹೀಗೆ ಹಲವು ಅನವಶ್ಯಕ ವಿಚಾರಗಳನ್ನು ಮಕ್ಕಳ ಮನಸ್ಸಿಗೆ ತುಂಬುವುದು ಕೂಡ ಅವರು ಆತ್ಮಹತ್ಯೆಗೆ ಮುಂದಾಗುವುದಕ್ಕೆ ಕಾರಣವಾಗಬಹುದು.

ಮಕ್ಕಳ ಮನಸ್ಸು ಇನ್ನೂ ಪರಿಪಕ್ವವಾಗಿರುವುದಿಲ್ಲ, ಹೀಗಾಗಿ, ಯಾವುದು ಸರಿ, ಯಾವುದು ತಪ್ಪು ಎಂಬುದರ ಸ್ಪಷ್ಟ ಕಲ್ಪನೆಯೂ ಅವರಿಗೆ ಇರದು. ಇಂಥ ಸಂದರ್ಭದಲ್ಲಿ ಸಮಾಜ ಅವರೊಂದಿಗೆ ಯಾವ ರೀತಿ ನಡೆದುಕೊಳ್ಳುತ್ತದೆ ಎಂಬುದು ಮುಖ್ಯವೇ ಹೊರತು, ಇದೆಂದೂ ಪಿಡುಗಲ್ಲ. ಅನವಶ್ಯಕ ಮಾನಸಿಕ ಒತ್ತಡವನ್ನು ಸಹಿಸಿಕೊಳ್ಳುವ ಶಕ್ತಿ ಎಲ್ಲ ಮಕ್ಕಳಲ್ಲೂ ಇರಲು ಸಾಧ್ಯವಿಲ್ಲ, ಹೀಗಾಗಿ ಮುಂದಿನ ದಾರಿ ಕಾಣದೇ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ.

ಇದಕ್ಕೆ ಇನ್ನೊಂದು ಉದಾಹರಣೆ ಎಂದರೆ ರೈತರ ಆತ್ಮಹತ್ಯೆ. ಇದೂ ಪಿಡುಗಲ್ಲ. ಆದರೆ ಕೆಲ ಆರ್ಥಿಕ ಸಂಸ್ಥೆಗಳು ಹಿಂದು-ಮುಂದು ಪರಿಶೀಲಿಸದೆ ಅಥವಾ ತಮ್ಮ ಹಿತಾಸಕ್ತಿ ಕಾಯ್ದುಕೊಳ್ಳಲು, ಬೆಳೆ ಸಾಲ, ಗೊಬ್ಬರ ಸಾಲ, ಸಲಕರಣೆ ಸಾಲ ಎಂಬ ಹಲವಾರು ಹೆಸರಿನಲ್ಲಿ ಸಾಲ ಕೊಟ್ಟು, ಅವನ್ನು ಹಿಂಪಡೆಯುವ ಯಾವ ದಾರಿಯೂ ಇಲ್ಲದಾಗ ರೈತರ ಮೇಲೆ ಇನ್ನಿಲ್ಲದ ಒತ್ತಡ ಹೇರುತ್ತವೆ. ಇದರಿಂದಾಗಿ, ಸಾಲದ ಶೂಲದಿಂದ ಬಿಡಿಸಿಕೊಳ್ಳಲು ರೈತ ಆತ್ಮಹತ್ಯೆಗೆ ಶರಣಾಗುತ್ತಾನೆ. ಇನ್ನು, ಆಧುನಿಕತೆ, ವೈಭವ, ತೋರಿಕೆಯ ಹೆಸರಿನಲ್ಲಿ ಏನೇನೆಲ್ಲಾ ನಡೆಯುತ್ತವೆ. ಮಕ್ಕಳನ್ನು ಚಿಕ್ಕಂದಿನಲ್ಲೇ ಸರಿಯಾಗಿ ರೂಪಿಸದೆ, ಅವರು 'ಬೇಕು' ಎಂದಿದ್ದನ್ನೆಲ್ಲ ಕೊಡಿಸುತ್ತಿದ್ದಾಗ, ಅವರಿಗೆ ಯಾವುದೋ ಒಂದು ವಸ್ತು ಸಿಗಲಿಲ್ಲ ಎಂದರೆ ಅಲ್ಲೂ ಆತ್ಮಹತ್ಯೆ!

ಆತ್ಮಹತ್ಯೆ ಎಂಬುದು ಮೊದಲೆಲ್ಲ ಅತ್ಯಂತ ವಿರಳ ಸಂಗತಿಯಾಗಿತ್ತು, ಆದರೀಗ ದಿನನಿತ್ಯ ಕೇಳುವಂತಾಗಿದೆ. ಪ್ರೀತಿ-ಪ್ರೇಮದ ಸಂಬಂಧಗಳಲ್ಲಿನ ತಪ್ಪುಗ್ರಹಿಕೆ ಕೂಡ ಆತ್ಮಹತ್ಯೆಗೆ ಎಡೆಮಾಡಿಕೊಡುತ್ತಿದೆ. ಒಟ್ಟಿನಲ್ಲಿ, ಈಗ ಪ್ರತಿಯೊಂದಕ್ಕೂ ಆತ್ಮಹತ್ಯೆಯೇ ಉಳಿದಿರುವ ದಾರಿ ಎಂಬಂತಾಗಿದೆ. ಇದನ್ನು ಪಿಡುಗು ಎನ್ನುವುದಕ್ಕಿಂತ ವ್ಯವಸ್ಥೆಯ ಅವ್ಯವಸ್ಥೆ ಎಂದರೇ ಹೆಚ್ಚು ಒಪ್ಪೀತು.

– ಶಂಕರನಾರಾಯಣ ಭಟ್, ಮಾಡಗೇರಿ

ಸೂಕ್ತ ನ್ಯಾಯ ಸಿಗಲಿ

ಮುಡಾ ನಿವೇಶನಗಳ ಹಂಚಿಕೆ ವಿಷಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ತಲೆದಂಡ ನಿಶ್ಚಿತವೆನ್ನುವ ರೀತಿಯಲ್ಲಿ ಕಾಂಗ್ರೆಸ್‌ನ ಕೆಲ ಮುಖಂಡರು ಮುಖ್ಯಮಂತ್ರಿಯ ಕುರ್ಚಿಗಾಗಿ ಪೈಪೋಟಿ ನಡೆಸುತ್ತಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಸಿಎಂ ಗಾದಿ ಅಪ್ಪುವುದಕ್ಕೆ ಸಂಬಂಧಿಸಿದಂತೆ ಪ್ರಭಾವಿ ಸಚಿವರು ಹಾಗೂ ಪಕ್ಷದ ಹಿರಿಯ ಶಾಸಕರು ಹೈಕಮಾಂಡ್ ಕದ ತಟ್ಟಿದ್ದರೆ, ಮುಖ್ಯಮಂತ್ರಿ ಸ್ಥಾನವು ತಮಗೇ ಸಿಗಲಿದೆ ಎಂಬ ಆಶಾಭಾವನೆಯಲ್ಲಿದ್ದಾರೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್.

'ಬಿಜೆಪಿಯು ಅಲ್ಪಸಂಖ್ಯಾತರ ಮತ್ತು ದಲಿತರ ವಿರೋಧಿ' ಎಂದು ಅವಕಾಶ ಸಿಕ್ಕಾಗಲೆಲ್ಲಾ ಹೇಳುತ್ತಿದ್ದ ಕಾಂಗ್ರೆಸ್ ಪಕ್ಷದ ನಾಯಕರುಗಳು ಇದೀಗ ಕರ್ನಾಟಕದಲ್ಲಿ ಅಲ್ಪಸಂಖ್ಯಾತ ಅಥವಾ ಪರಿಶಿಷ್ಟ ಜಾತಿಯ ನಾಯಕರ (ಇವರಲ್ಲೂ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳಿದ್ದಾರೆ) ಹೆಸರನ್ನು ಮುಖ್ಯಮಂತ್ರಿಯ ಸ್ಥಾನಕ್ಕೆ ಸೂಚಿಸುವ ಬದಲು, ಆ ಪಟ್ಟಕ್ಕೆ ನಾಮುಂದು, ತಾಮುಂದು ಎಂದು ಹೇಳಿಕೊಳ್ಳುವ ಮೂಲಕ ದ್ವಿಮುಖ ನೀತಿಯನ್ನು ತೋರುತ್ತಿದ್ದಾರೆ. ಒಂದು ವೇಳೆ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯುವ ಪ್ರಸಂಗ ಬಂದಲ್ಲಿ, ಅಲ್ಪಸಂಖ್ಯಾತ ಅಥವಾ ದಲಿತ ಸಮುದಾಯದ ಅರ್ಹ ನಾಯಕನನ್ನು ಮುಖ್ಯಮಂತ್ರಿಯನ್ನಾಗಿಸುವ ಮೂಲಕ ಕಾಂಗ್ರೆಸ್ ಪಕ್ಷವು ಅವರಿಗೂ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡಬೇಕಾಗಿದೆ.

– ಜಿ.ನಾಗೇಂದ್ರ, ಕಾವೂರು, ಸಂಡೂರು

ಪುಣ್ಯ ಕಟ್ಟಿಕೊಳ್ಳಿ

ಮಾರಾಟದ ಉದ್ದೇಶವಿರುವ ಹಲವು ಅನಪೇಕ್ಷಿತ ಕರೆಗಳು ಮೊದಲೆಲ್ಲ ಸ್ಥಿರ ದೂರವಾಣಿಯಲ್ಲಿ, ಮೊಬೈಲ್ ಫೋನ್‌ಗಳಲ್ಲಿ ಕಿರಿಕಿರಿ ಉಂಟುಮಾಡುತ್ತಿದ್ದವು. ಇದನ್ನು ಗಂಭೀರವಾಗಿ ಪರಿಗಣಿಸಿದ ದೂರವಾಣಿ ನಿಯಂತ್ರಕ ಪ್ರಾಧಿಕಾರವು ಕಠಿಣ ಕ್ರಮಗಳನ್ನು ಕೈಗೊಂಡ ಬಳಿಕ ಈ ಸಮಸ್ಯೆಯು ಈಗ ಸಾಕಷ್ಟು ಕಡಿಮೆಯಾಗಿದೆ. ಆದರೆ ಹೀಗೆ ಕಿರಿಕಿರಿ ಮಾಡುತ್ತಿದ್ದವರು ಈಗ ಹೊಸತೊಂದು ಕಳ್ಳಮಾರ್ಗವನ್ನು ಕಂಡುಕೊಂಡಿದ್ದಾರೆ- ಅದುವೇ ವಾಟ್ಸ್ಯಾಪ್ ಸಂದೇಶಗಳು!

ಡಿಪಾರ್ಟ್‌ಮೆಂಟಲ್ ಸ್ಟೋರ್‌ಗಳಿಗೆ, ಮಾಲ್‌ಗಳಲ್ಲಿರುವ ಯಾವುದಾದರೂ ಮಳಿಗೆಗೆ ಹೋದಾಗ, ಖರೀದಿಯ ವೇಳೆ ಗ್ರಾಹಕರ ಮೊಬೈಲ್ ಸಂಖ್ಯೆಯನ್ನು ಪಡೆದುಕೊಳ್ಳುತ್ತಾರೆ. ಕೆಲ ಕಾಲದ ನಂತರ, ಕಂಪನಿಗಳು ವಾಟ್ಸ್ಯಾಪ್ ಮೂಲಕ ತಮ್ಮ ಉತ್ಪನ್ನಗಳ ಮಾರಾಟಗಾರಿಕೆಗೆ ಸಂಬಂಧಿಸಿದ ಸಂದೇಶಗ ಳನ್ನು ಕಳಿಸುತ್ತಲೇ ಇರುತ್ತವೆ. ಇಂಥ ಅನಪೇಕ್ಷಿತ ಸಂದೇಶಗಳೇ ಮೊಬೈಲ್‌ನಲ್ಲಿ ತುಂಬಿಕೊಂಡಾಗ, ನಮಗೆ ಅಗತ್ಯವಿರುವ ಕೆಲವೊಂದು ಮುಖ್ಯ ಸಂದೇಶಗಳು ತಪ್ಪಿಹೋಗುವ ಅಪಾಯವಿರುತ್ತದೆ. ಆದ್ದರಿಂದ ದೂರವಾಣಿ ನಿಯಂತ್ರಕ ಪ್ರಾಧಿಕಾರವು, ರಂಗೋಲಿ ಕೆಳಗೆ ನುಸುಳುವ ಇಂಥ ಸಂಸ್ಥೆಗಳ ಕಿವಿ ಹಿಂಡಿ, ಸಾರ್ವಜನಿಕರಿಗೆ ಆಗುವ ತೊಂದರೆಗಳನ್ನು ದೂರ ಮಾಡಿ ಪುಣ್ಯ ಕಟ್ಟಿಕೊಳ್ಳಲಿ.

ಬಿ.ಎನ್.ಭರತ್, ಬೆಂಗಳೂರು

ಈಕೆ ದುರಂತ ನಾಯಕಿ

ಕಿರಣ್ ಉಪಾಧ್ಯಾಯ ಅವರು 'ವಿದೇಶವಾಸಿ' ಅಂಕಣದಲ್ಲಿ 2 ಭಾಗಗಳಲ್ಲಿ ಕಟ್ಟಿಕೊಟ್ಟ ದಾದಿ ಅರುಣಾ ಶಾನ್‌ಬಾಗ್

ಅವರ ದುರಂತದ ಸಾವಿನ ಕಥನ ಕಣ್ಣುಗಳನ್ನು ಒದ್ದೆಯಾಗಿಸಿತು. ರೋಗಿಗಳ ಆರೈಕೆ ಮತ್ತು ಸೇವೆಯನ್ನೇ ಉಸಿರಾಗಿಸಿಕೊಂಡಿದ್ದ ಈ ನಿಸ್ವಾರ್ಥಿಯ ಮೇಲೆ ಅತ್ಯಾಚಾರದಂಥ ಘೋರಕೃತ್ಯ ಎಸಗಿದ್ದೂ ಅಲ್ಲದೆ, ಆಕೆ ನರಳುತ್ತ ನರಳುತ್ತ ಸಾಯುವುದಕ್ಕೆ ಕಾರಣನಾದ ವ್ಯಕ್ತಿ ಅದಿನ್ನೆಷ್ಟು ಕ್ರೂರಿಯಾಗಿರಬೇಕು? ಥೂ...!

– ರಾಮಚಂದ್ರ, ಉಡುಪ, ಮಂಗಳೂರು

ಭಟ್ಟರ್ ಸ್ಕಾಚ್

● **ಸತೀಶ್ ಎಲ್.ವಿ., ಮೈಸೂರು**
ಭಟ್ರೇ, ಗೌರಿ–ಗಣೇಶ ಹಬ್ಬಕ್ಕೆ ಎಲ್ಲೂ ಡ್ರೋನ್ ಹಾರಿಸಲಿಲ್ಲವೇ?
– ಹಬ್ಬ ಹರಿದಿನಗಳಲ್ಲಿ ಮಾತ್ರ ಡ್ರೋನ್ ಹಾರಿಸುವುದಾದರೆ, ಹೋಳಿಹಬ್ಬ ಪ್ರಶಸ್ತ!

● **ಡಾ.ಆನಂದ ಕುಲಿಗೋಡ, ಧಾರವಾಡ**
ಭಟ್ರೇ, ಮಂಡ್ಯ ಸಾಹಿತ್ಯ ಸಮ್ಮೇಳನಕ್ಕೆ ಮೊಯಿಲಿ ಅಧ್ಯಕ್ಷರಾದರೆ?
– ಸುಮ್ಮನೆ ಏನೇನೋ ಐಡಿಯಾ ಕೊಡಬೇಡ, ಆನಂದು!

● **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಗಾಢವಾದ ಪ್ರೀತಿ ಸಾವಿನ ನಂತರವೂ ಬದುಕಿರುತ್ತೆ ಅಲ್ವಾ?
– ಅದು ಗಾಢ ಅಲ್ಲ... ನಿಗೂಢ ಪ್ರೀತಿ!

● **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ನಾನು ಸಿಎಂ ರೇಸಿನಲ್ಲಿ ಇಲ್ಲ ಅಂತ ತಿಮ್ಮಾಪುರ ಹೇಳಿದರೆ?
– ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ನನಗೆ ಬೇಡ ಅಂತ ಟೆನಿಸ್ ಕೃಷ್ಣ ಹೇಳಿದಂತೆ!

● **ರವಿಶಂಕರ ಜೋಶಿ, ಬೆಂಗಳೂರು**
ಭಟ್ರೇ, ಸಾಹಿತಿಗೂ, ಸಿನಿಮಾ ನಟನಿಗೂ ಏನು ವ್ಯತ್ಯಾಸ?
– ಜೈಲಲ್ಲಿ ಪುಸ್ತಕ ಕೊಡಿ ಅಂತ ಸಾಹಿತಿ ಹೇಳ್ತಾನೆ. ಟಿವಿ ಕೊಡಿ ಅಂತ ನಟ ಅಂತಾನೆ!

● **ಜಿ.ಪ್ರದೀಪ ಕೊಡಂಚ, (ಇಮೇಲ್ ಮೂಲಕ)**
ಭಟ್ರೇ, ನಾನು ಸಿಎಂ ರೇಸಿನಲ್ಲಿ ಇಲ್ಲ ಅಂತ ಹೇಳಿದ ಬಿ.ಕೆ.ಹರಿಪ್ರಸಾದ್ ಈಗ ಎಲ್ಲಿದ್ದಾರೆ?
– ರೇಸಿನಲ್ಲೇ ಇಲ್ಲ ಎಂದ ಮೇಲೆ ಅವರು ಎಲ್ಲಿದ್ದರೆ ಏನಂತೆ?!

● **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ಜಾಸ್ತಿ ನುಡಿದರೂ ಮುತ್ತಿನ ಹಾರದಂತಿರಬೇಕು, ಜಾಸ್ತಿ ಕುಡಿದರೆ?
– ಮತ್ತೇರಿ ಗಟಾರಕ್ಕೆ ಬೀಳದಂತಿರಬೇಕು!

● **ಮಹಾನಂದ ಪಾಟೀಲ, (ಇಮೇಲ್ ಮೂಲಕ)**
ಭಟ್ರೇ, ‘ನನ್ನಂಥ ಯಂಗ್ ಬ್ಲಡ್ ರಾಜ್ಯಕ್ಕೆ ಬೇಕಿದೆ’ ಎಂದು ನಿಮ್ಮ ಶಿಷ್ಯ ಹೇಳಿದ್ದಾನಲ್ಲ?
– ‘ಬಿಜೆಪಿ ಅಂದ್ರೆ ಬ್ಲಡ್ ಬ್ಯಾಂಕ್ ಅಲ್ಲ’ ಅಂತ ವಿಜಯೇಂದ್ರ ಗೊಣಗಬಹುದು!

● **ಸಂದೇಶ ಕೆ.ಎಲ್.,(ಇಮೇಲ್ ಮೂಲಕ)**
ಭಟ್ರೇ, ರಾಂಗ್ ಕಾಂಬಿನೇಷನ್ ಅಂದ್ರೆ ಯಾವುದು?
– ಕಾಫಿ ಕುಡೀತಾ ‘ಕುಡಿಯೋಣು ಬಾರಾ’ ಓದೋದು!

● **ಭಾವನಾ ಹೆಗಡೆ, ಸಿದ್ದಾಪುರ**
ಭಟ್ರೇ, ನೀವು ಆಗಾಗ ಕನಸಿನಲ್ಲಿ ಬರ್ತೀರಲ್ಲ?
– ಯಾರ ಕನಸಿನಲ್ಲಿ ಎನ್ನುವುದನ್ನು ಸ್ಪಷ್ಟಪಡಿಸಬೇಕಿತ್ತು!

ಮನಿ-ಮ್ಯಾಟರ್: ಹೆಣ್‌ಮಕ್ಳೇ ಸ್ಟ್ರಾಂಗು ಗುರು!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಜಗತ್ತಿನಾದ್ಯಂತ ಹೆಣ್ಣು ಮತ್ತು ಗಂಡಿನ ನಡುವಿನ ಅಂತರ, ತಾರತಮ್ಯ ಬಹಳವಿದೆ. ಹೀಗೆ ಹೆಣ್ಣು ಮತ್ತು ಗಂಡಿನ ನಡುವಿನ ವರ್ಗೀಕರಣವಿರುವುದು ಭಾರತದಲ್ಲಿ ಅಥವಾ ಮುಂದುವರಿಯುತ್ತಿರುವ ಅಥವಾ ಹಿಂದುಳಿದ ದೇಶಗಳಲ್ಲಿ ಮಾತ್ರ ಎಂದುಕೊಂಡಿದ್ದರೆ ಅದು ನಿಮ್ಮ ತಪ್ಪುಗ್ರಹಿಕೆ. ಅಮೆರಿಕ, ಯುರೋಪ್, ಜಪಾನ್, ಸ್ವಿಸ್ ಹೀಗೆ ಎಲ್ಲಾ ದೇಶಗಳಲ್ಲಿ ಇಂದಿಗೂ ಅಸಮಾನತೆ ಇದೆ. ಕೆಲವೊಂದು ಹುದ್ದೆಗೆ ಕೇವಲ ಗಂಡಸರೇ ನೇಮಕವಾಗುತ್ತಾರೆ, ಆ ಕೆಲಸವನ್ನ ಹೆಣ್ಣು ಕೂಡ ಅಷ್ಟೇ ದಕ್ಷತೆಯಿಂದ ನಿರ್ವಹಿಸುವ ಕ್ಷಮತೆ ಹೊಂದಿದ್ದರೂ ಅಲ್ಲಿಗೆ ಆಕೆ ನೇಮಕವಾಗುತ್ತಿಲ್ಲ. ಇದರ ಜತೆಗೆ ವೇತನ ತಾರತಮ್ಯ ಕೂಡ ಜಾಗತಿಕ. ಇವತ್ತಿನ ಬರಹದಲ್ಲಿ, ಹೂಡಿಕೆಯ ಜಗತ್ತಿನಲ್ಲಿ ಮಹಿಳೆಯರು ಎಷ್ಟರ ಮಟ್ಟಿಗೆ ತೊಡಗಿಸಿಕೊಂಡಿದ್ದಾರೆ ಎನ್ನುವುದರ ಬಗ್ಗೆ ಒಂದಷ್ಟು ತಿಳಿದುಕೊಳ್ಳುವ ಪ್ರಯತ್ನ ಮಾಡೋಣ.

ಮೊದಲಿನ ಸಾಲುಗಳಲ್ಲಿ ಹೇಳಿದಂತೆ ಇಂದು ಮಹಿಳೆ ಎಲ್ಲಾ ಕಾರ್ಯಕ್ಷೇತ್ರಗಳಲ್ಲೂ ಪುರುಷನಿಗೆ ಸಮವಾಗಿ, ಭುಜಕ್ಕೆ ಭುಜ ಕೊಟ್ಟು ದುಡಿಯಲು ಶುರುಮಾಡಿದ್ದಾಳೆ. ಶತಮಾನಗಳಿಂದ ತನ್ನ ಹಿಡಿತದಲ್ಲಿರುವ ಹಣಕಾಸು ಪ್ರಪಂಚಕ್ಕೂ ಮಹಿಳೆ ಕಾಲಿಟ್ಟಿರುವುದನ್ನು ಪುರುಷ ಸಮಾಜ ಸುಲಭವಾಗಿ ಅರಗಿಸಿಕೊಳ್ಳುವುದಿಲ್ಲ. ಆದರೆ ನಿಮಗೊಂದು ರಹಸ್ಯವನ್ನ ಹೇಳಬೇಕಿದೆ- ಪುರುಷನಿಗಿಂತ ಮಹಿಳೆಯೇ ಉತ್ತಮ ಹೂಡಿಕೆದಾರಳು ಎನ್ನುವುದೇ ಆ ರಹಸ್ಯ. ಹೂಡಿಕೆಯಲ್ಲಿ ಪುರುಷನಿಗಿಂತ ಮಹಿಳೆ ಅದೇಕೆ ಉತ್ತಮ ಎನ್ನುವುದಕ್ಕೆ ಒಂದಷ್ಟು ಕಾರಣಗಳಿವೆ, ಅವುಗಳನ್ನ ತಿಳಿದುಕೊಳ್ಳೋಣ; ಅವನ್ನ ಪುರುಷರು ಅಳವಡಿಸಿಕೊಂಡು ತಮ್ಮ ತಪ್ಪನ್ನ ತಿದ್ದಿಕೊಂಡು ಉತ್ತಮ ಹೂಡಿಕೆದಾರರಾಗುವ ಅವಕಾಶವಿದೆ. ಹೆಣ್ಣು ಮತ್ತು ಗಂಡು ಇಬ್ಬರೂ ಕುಟುಂಬ ವ್ಯವಸ್ಥೆಯ ಎರಡು ಚಕ್ರಗಳು. ಇಲ್ಲಿ ‘ನಾನು-ನೀನು’ ಎನ್ನುವುದಕ್ಕಿಂತ ಯಾರು ಯಾವುದರಲ್ಲಿ ಉತ್ತಮರೋ ಅದರ ನಾಯಕತ್ವವನ್ನು ಅವರಿಗೆ ನೀಡುವುದು ಜಾಣತನ, ಇರಲಿ.

● ಅಪಾಯದ ವಾಸನೆ ಹೆಂಗಸರಿಗೆ ಬೇಗ ತಿಳಿಯುತ್ತದೆ

ನೀವು ಇದನ್ನ ಪ್ರಕೃತಿ ಎನ್ನಿ ಅಥವಾ ಅವರ ಹುಟ್ಟುಗುಣ ಎನ್ನಿ, ಮಹಿಳೆಯರಿಗೆ ಅಪಾಯದ ವಾಸನೆ ಬೇಗ ತಿಳಿಯುತ್ತದೆ. ಮನೆಯ ಹಣಕಾಸು ನಿರ್ವಹಣೆ ಇರಬಹುದು ಅಥವಾ ಹೊರಗಿನ ಪ್ರಪಂಚದಲ್ಲಿ ಮಾಡಬೇಕಾದ ಹೂಡಿಕೆ ಇರಬಹುದು, ಯಾವುದು ಹೆಚ್ಚು ಅಪಾಯಕಾರಿ ಅಥವಾ ಅಲ್ಲ ಎನ್ನುವುದು ಮಹಿಳೆಗೆ ಸಹಜವಾಗೇ, ಹೆಚ್ಚಿನ ಶ್ರಮವಿಲ್ಲದೆ ಗೊತ್ತಾಗುತ್ತದೆ. ಈ ಮಾತುಗಳನ್ನ ಸುಮ್ಮನೆ ಹೇಳುತ್ತಿಲ್ಲ, ಇದಕ್ಕೆ ಸಾಕಷ್ಟು ಪುರಾವೆಗಳಿವೆ. ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿರುವ ಹೆಣ್ಣು ಮತ್ತು ಗಂಡು ಹೂಡಿಕೆದಾರರ ಪೋರ್ಟ್‌ಫೋಲಿಯೋಗಳನ್ನ ಅಧ್ಯಯನ ಮಾಡಿ ಈ ಒಂದು ಮಾತನ್ನ ಹೇಳಲಾಗಿದೆ. ಇಂದು ಭಾರತದಲ್ಲಿ 100 ಜನ ಕ್ರಿಪ್ಟೋ ಹೂಡಿಕೆದಾರರಿದ್ದರೆ ಅದರಲ್ಲಿ 85 ಜನ ಗಂಡಸರು, ಉಳಿದ 15 ಜನ ಮಹಿಳೆಯರು! ಹೆಚ್ಚು ಅಪಾಯ ಎನ್ನಿಸಿದ ಯಾವುದೇ ಕ್ಷೇತ್ರದಲ್ಲೂ ಮಹಿಳೆ ಹೂಡಿಕೆ ಮಾಡುವುದಿಲ್ಲ.

● ಸುರಕ್ಷತೆಗೆ ಹೆಚ್ಚಿನ ಆದ್ಯತೆ

ಕ್ರಿಪ್ಟೋ ಮಾತ್ರವಲ್ಲ, ಈಕ್ವಿಟಿ ಮಾರುಕಟ್ಟೆಯಲ್ಲಿ ಕೂಡ ಇಂಟ್ರಾ ಡೇ ಟ್ರೇಡಿಂಗ್‌ನಂಥ ಕ್ಷೇತ್ರದಲ್ಲಿ ಬೆರಳೆಣಿಕೆಯಷ್ಟು ಮಹಿಳೆಯರು ಸಿಕ್ಕಬಹುದು; ದಿನನಿತ್ಯ ಅಥವಾ ಪುರುಷರು ಕೊಂಡು ಮಾರುವಷ್ಟು ವೇಗವಾಗಿ ಮಹಿಳೆ ಕೊಳ್ಳುವುದು ಮತ್ತು ಮಾರುವುದು ಮಾಡುವುದಿಲ್ಲ. ಅಂದರೆ ಆಕೆ ನಿಜವಾದ ಹೂಡಿಕೆದಾರಳು. ಪುರುಷರಲ್ಲಿ ಬಹಳಷ್ಟು ಜನ ಟ್ರೇಡರ್ಸ್ ಸಿಗುತ್ತಾರೆ. ಮಹಿಳೆಯರಲ್ಲಿ ಟ್ರೇಡರ್ಸ್ ಕಡಿಮೆ. ಕುಟುಂಬದ ರಕ್ಷಣೆ ಮತ್ತು ಸುರಕ್ಷತೆ ಬಗ್ಗೆ ಮಹಿಳೆಯರಲ್ಲಿ ಸಹಜವಾಗಿ ಇರುವ ಪ್ರೊಟೆಕ್ಟಿವ್ ಭಾವನೆ ಇಲ್ಲಿಯೂ ಕೆಲಸ ಮಾಡುತ್ತದೆ. ಹೀಗಾಗಿ ಮಹಿಳೆಯರು ನಷ್ಟ ಮಾಡಿಕೊಳ್ಳುವ ಸಾಧ್ಯತೆ ಕೂಡ ಕಡಿಮೆ.

● ನಿರ್ಧಾರಗಳನ್ನ ತೆಗೆದುಕೊಳ್ಳುವುದರಲ್ಲಿ ನಿಧಾನ ಮಾಡುತ್ತಾರೆ

ಮಹಿಳೆಯರು ಹೂಡಿಕೆಯ ನಿರ್ಧಾರದಲ್ಲಿ ಬಹಳ ಸಮಯ ತೆಗೆದುಕೊಳ್ಳುತ್ತಾರೆ. ಒಂದೇ ವಿಷಯವನ್ನ ಹತ್ತಾರು ರೀತಿಯಲ್ಲಿ ಗುಣಿಸಿ ಭಾಗಿಸಿ ನಿರ್ಧಾರ ತೆಗೆದುಕೊಳ್ಳುತ್ತಾರೆ. ನಿರ್ಧಾರ ತೆಗೆದುಕೊಳ್ಳುವುದು ನಿಧಾನವಾದರೂ ತೆಗೆದುಕೊಂಡ ನಿರ್ಧಾರಕ್ಕೆ ಬದ್ಧರಾಗಿರುತ್ತಾರೆ. ಇದಕ್ಕೂ ಪುರಾವೆಗಳಿವೆ. ‘ಸಿಪ್’ ಅಂದರೆ ‘ಸಿಸ್ಟಮ್ಯಾಟಿಕ್ ಇನ್ವೆಸ್ಟ್‌ಮೆಂಟ್ ಪ್ಲಾನ್’ನಲ್ಲಿ ಹೂಡಿಕೆ ಮಾಡುವ ಹೆಣ್ಣು-ಗಂಡುಗಳಲ್ಲಿ ಒಂದಷ್ಟು ತಿಂಗಳು ಕಟ್ಟಿ ನಂತರ ಬಿಟ್ಟುಬಿಡುವ ಹೆಂಗಸರಿಗಿಂತ ಗಂಡಸರ ಸಂಖ್ಯೆ ಹೆಚ್ಚು. ಒಟ್ಟಾರೆ ಈಕ್ವಿಟಿ ಮಾರುಕಟ್ಟೆಯಲ್ಲಿ ಶೇ.16ರಷ್ಟು ಇದ್ದ ಮಹಿಳೆಯರ ಸಂಖ್ಯೆ ಕಳೆದೆರಡು ವರ್ಷದಲ್ಲಿ ಶೇ.25ಕ್ಕೆ ಏರಿಕೆ ಕಂಡಿದೆ. ಪುರುಷರ ಸಂಖ್ಯೆಗಿಂತ ಇದು ಬಹಳ ಕಡಿಮೆ. ಮಹಿಳೆಯರು ಹೂಡಿಕೆಯಲ್ಲಿ ಸಂಖ್ಯೆಯ ದೃಷ್ಟಿಯಲ್ಲಿ ಕಡಿಮೆಯಿದ್ದಾರೆ ಎನ್ನುವುದು ವೇದ್ಯ. ಆದರೆ ಇದ್ದವರಲ್ಲಿ, ಹೋಲಿಕೆಯಲ್ಲಿ ಅವರು ಉತ್ತಮ ಹೂಡಿಕೆದಾರರು ಎನ್ನುವುದು ಕೂಡ ಅಷ್ಟೇ ಸತ್ಯ.

● ಸಾಲ ಪಡೆಯುವಲ್ಲಿ, ಮರುಪಾವತಿಯಲ್ಲಿ ಕೂಡ ಮಹಿಳೆಯರೇ ಮುಂದು

‘ಸಿಬಿಲ್ ರೇಟಿಂಗ್’ ಎನ್ನುವುದು ನಿಮ್ಮ ಕ್ರೆಡಿಟ್ ವರ್ದಿನೆಸ್ ಏನು ಎನ್ನುವುದನ್ನ ಹೇಳುವ ಪಾಯಿಂಟ್ ಬೇಸ್ಡ್ ಸಿಸ್ಟಮ್. ಈ ರೇಟಿಂಗ್ 720 ಅಥವಾ 750ಕ್ಕೂ ಮೇಲಿದ್ದರೆ ಸಾಲವನ್ನ ಕೊಡುವುದಿಲ್ಲ ಎಂದು ಯಾರೂ ಹೇಳಲು ಬರುವುದಿಲ್ಲ. ಹೀಗಾಗಿ 720 ಅಥವಾ ಅದಕ್ಕೂ ಹೆಚ್ಚಿನ ಪಾಯಿಂಟ್ ಹೊಂದಿದ್ದರೆ ಅದು ಉತ್ತಮ ರೇಟಿಂಗ್ ಎನ್ನಲು ಅಡ್ಡಿಯಿಲ್ಲ. ನೂರು ಮಹಿಳೆಯರಲ್ಲಿ 61 ಜನ 720ಕ್ಕೂ ಹೆಚ್ಚಿನ ರೇಟಿಂಗ್ ಹೊಂದಿದ್ದಾರೆ. ಪುರುಷರಲ್ಲಿ ಇದು 56 ಪ್ರತಿಶತ. ಹೀಗಾಗಿ ಸಾಲ ಮಾಡುವುದರಲ್ಲಿ ಮತ್ತು ಅದನ್ನ ಮರುಪಾವತಿ ಮಾಡುವುದರಲ್ಲೂ ಮಹಿಳೆಯರೇ ಬೆಸ್ಟ್ ಎನ್ನುತ್ತದೆ ಅಂಕಿ-ಅಂಶ.

● ಕಾನೂನು ನಿಯಮಾವಳಿಗಳ ಪಾಲನೆಯಲ್ಲೂ ಮಹಿಳೆಯೇ ಉತ್ತಮ

ಇನ್‌ಕಮ್ ಟ್ಯಾಕ್ಸ್ ರಿಟರ್ನ್ಸ್ ಅಥವಾ ಇನ್ನಾವುದೇ ರೀತಿಯ ಕಂಪ್ಲೇಯನ್ಸ್ ಇರಬಹುದು, ಅದನ್ನ ಮಹಿಳೆ ಕೊನೆಯ ದಿನದವರೆಗೆ ಉಳಿಸಿಕೊಳ್ಳುವುದಿಲ್ಲ. ಹೀಗೆ ಕಾನೂನು ನಿಯಮಾವಳಿಗಳನ್ನ ಕೊನೆಯ ದಿನದವರೆಗೆ ಎಳೆದುಕೊಂಡು ಹೋಗುವ ಅಥವಾ ವಾಯಿದೆ ಮೀರಿದ ನಂತರ ಅದನ್ನ ಪಾಲಿಸಲು ದಂಡವನ್ನ ಕಟ್ಟುವ ಪುರುಷರ ಸಂಖ್ಯೆ 68 ಪ್ರತಿಶತ ಎನ್ನುತ್ತದೆ ಲೆಕ್ಕಾಚಾರ. ಹೀಗೆ ವಾಯಿದೆ ಮೀರುವ ಮಹಿಳೆಯರ ಸಂಖ್ಯೆ ಕೇವಲ 32 ಪ್ರತಿಶತ. ಅಂದರೆ ಎಷ್ಟು ಪ್ರತಿಶತ ಪುರುಷರು ಇದನ್ನ ಪಾಲಿಸುವುದಿಲ್ಲ ಅಷ್ಟೇ ಪ್ರತಿಶತ ಮಹಿಳೆಯರು ಇದನ್ನ ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಹೀಗಾಗಿ ಇವರು ಪುರುಷರಿಗಿಂತ ಉತ್ತಮ ಹೂಡಿಕೆದಾರರು ಎನ್ನಲು ಅಡ್ಡಿಯಿಲ್ಲ.

● ಕೋವಿಡ್ ಕಲಿಸಿದ ಪಾಠವನ್ನ ಮಹಿಳೆಯರು ಚೆನ್ನಾಗಿ ಕಲಿತಿದ್ದಾರೆ

ಕೋವಿಡ್ ಸಾಂಕ್ರಾಮಿಕ ಜಗತ್ತಿನಾದ್ಯಂತ ಜನರಿಗೆ ಖರ್ಚು ವೆಚ್ಚದ, ಉಳಿಕೆಯ, ಹೂಡಿಕೆಯ ಮಹತ್ವವನ್ನ ತಿಳಿಸಿಕೊಟ್ಟಿದೆ. ಆದರೆ ಅದರಿಂದ ನಿಜವಾಗಿ ಕಲಿತವರೆಷ್ಟು ಎನ್ನುವುದು ಪ್ರಶ್ನೆ. ಐದು ಜನ ಮಹಿಳೆಯರಲ್ಲಿ ಒಬ್ಬರು ಹೂಡಿಕೆ ಮಾಡಲು ಶುರುಮಾಡಿದ್ದಾರೆ. 45 ಪ್ರತಿಶತ ಮಹಿಳೆಯರು ಖರ್ಚನ್ನ ಕಡಿಮೆ ಮಾಡಿದ್ದಾರೆ. 30ಕ್ಕೂ ಹೆಚ್ಚು ಪ್ರತಿಶತ ಮಹಿಳೆಯರು ವೈಯಕ್ತಿಕ ಹಣಕಾಸು ನಿರ್ವಹಣೆಯ ಬಗ್ಗೆ ಹೆಚ್ಚಿನ ಜ್ಞಾನವನ್ನ ಈ ಎರಡು ವರ್ಷದಲ್ಲಿ ಪಡೆದುಕೊಂಡಿದ್ದಾರೆ ಎನ್ನುತ್ತದೆ ಅಂಕಿ-ಅಂಶ. ಒಟ್ಟಾರೆ 70 ಪ್ರತಿಶತ ಮಹಿಳೆಯರು ಒಂದಲ್ಲ ಒಂದು ರೀತಿಯಲ್ಲಿ ಹಣಕಾಸು ವ್ಯವಹಾರದ ನಿರ್ಧಾರಗಳಲ್ಲಿ ತೊಡಗಿಸಿಕೊಂಡಿದ್ದಾರೆ ಎನ್ನುವುದು ತಿಳಿದುಬಂದಿದೆ. ಹತ್ತಿರತ್ತಿರ 20 ಪ್ರತಿಶತ ಮಹಿಳೆಯರು ಅಪ್ಪ ಅಥವಾ ಗಂಡನ ಮೇಲೆ ಅವಲಂಬಿಯಾಗಿದ್ದರೆ, 31 ಪ್ರತಿಶತ ಮಹಿಳೆಯರು ಸ್ವತಃ ನಿರ್ಧಾರಗಳನ್ನ ತೆಗೆದುಕೊಳ್ಳುತ್ತಾರೆ; 38 ಪ್ರತಿಶತ ಮಹಿಳೆಯರು ಜತೆಯಾಗಿ ನಿರ್ಧಾರಗಳನ್ನ ತೆಗೆದುಕೊಳುತ್ತಾರೆ, ಉಳಿದವರು ಇದಕ್ಕೂ ನಮಗೂ ಸಂಬಂಧವಿಲ್ಲ ಎನ್ನುವಂತೆ ಇದ್ದಾರೆ. ಒಟ್ಟಿನಲ್ಲಿ ಕೋವಿಡ್ ಸಾಂಕ್ರಾಮಿಕದಿಂದಾಗಿ ಮಹಿಳೆಯರು ಪುರುಷರಿಗಿಂತ ಹೆಚ್ಚು ಕಲಿತಿದ್ದಾರೆ, ಹೆಚ್ಚು ಜಾಗೃತರಾಗಿದ್ದಾರೆ.

● ನಿವೃತ್ತಿ, ಮಕ್ಕಳ ವಿದ್ಯಾಭ್ಯಾಸ ಮಹಿಳೆಯರ ಹೂಡಿಕೆಯ ಪ್ರಮುಖ ಅಂಶಗಳು

ಪುರುಷನು ಮಾರುಕಟ್ಟೆಯಲ್ಲಿ ಕೆಲವೊಮ್ಮೆ ಚಾನ್ಸ್ ತೆಗೆದುಕೊಳ್ಳುತ್ತಾನೆ. ಆದರೆ ಮಹಿಳೆಗೆ ತನಗೇನು ಬೇಕು ಎನ್ನುವುದು ಗೊತ್ತಿದೆ. ಆಕೆಯ ಹೂಡಿಕೆಯ ಲಿಸ್ಟ್‌ನಲ್ಲಿ ಪ್ರಮುಖವಾಗಿ ಅಲಂಕರಿಸುವ ಎರಡು ವಿಷಯಗಳು- ಒಂದನೆಯದು ನಿವೃತ್ತಿ, ಎರಡನೆಯದು ಮಕ್ಕಳ ವಿದ್ಯಾಭ್ಯಾಸ ಅಥವಾ ಮದುವೆ. ನೂರರಲ್ಲಿ 40ಕ್ಕೂ ಹೆಚ್ಚು ಮಹಿಳೆಯರ ಗುರಿ ಇದೇ ಆಗಿರುತ್ತದೆ. 14 ಪ್ರತಿಶತ ಹೆಂಗಸರು ಮಾತ್ರ ಹೆಚ್ಚಿನ ಹಣ ಮಾಡುವ ಉದ್ದೇಶದಿಂದ ಹೂಡಿಕೆ ಮಾಡುತ್ತಾರೆ.

ಭಾರತದಲ್ಲಿಂದು ಹೂಡಿಕೆ ಕ್ಷೇತ್ರದಲ್ಲಿ ಕೂಡ ಮಹಿಳೆಯರ ಪಾಲುದಾರಿಕೆ ಹೆಚ್ಚಾಗಿದೆ ಎನ್ನುವುದು ಅಂಕಿ-ಅಂಶದಿಂದ ತಿಳಿದುಬರುತ್ತದೆ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೊಂದಿದೆ. ಹೀಗೆ ಫೈನಾನ್ಷಿಯಲ್ ಜ್ಞಾನವನ್ನ ಪಡೆಯಲು ಇರುವ ಪ್ರಮುಖ ಮೂಲ ಇಂಟರ್ನೆಟ್ ಎನ್ನುವುದೇ ಆ ಅಂಶವಾಗಿದೆ. ಹತ್ತಿರತ್ತಿರ 30 ಪ್ರತಿಶತ ಜನ ಇನ್‌ವೆಸ್ಟ್‌ಮೆಂಟ್ ಪೋರ್ಟಲ್‌ಗಳು ಹೇಳುವುದನ್ನ ನಂಬುತ್ತಾರೆ. 20 ಪ್ರತಿಶತ ಜನ ಸ್ನೇಹಿತರು ಮತ್ತು ಬಂಧುಗಳು ಹೇಳಿದ್ದನ್ನ ನಿಜವೆಂದು ನಂಬುತ್ತಾರೆ. ಹೀಗೆ ಹಲವಾರು ಇನ್ನಿತರ ಮಾರ್ಗಗಳ ಮೂಲಕ ಹೂಡಿಕೆಯ ಬಗ್ಗೆ ಜ್ಞಾನವನ್ನ ಪಡೆದುಕೊಳ್ಳುತ್ತಾರೆ. 13 ಪ್ರತಿಶತ ಜನ ಮಾತ್ರ ಕಲಿತ ಹಣಕಾಸು ಸಲಹೆಗಾರರ ಮಾರ್ಗದರ್ಶನವನ್ನ ಪಡೆಯುತ್ತಾರೆ ಎನ್ನುತ್ತದೆ ಅಂಕಿ-ಅಂಶ. ಸ್ವಂತ ಕಲಿಕೆ ಎಂದಿಗೂ ಒಳ್ಳೆಯದು; ಆದರೆ ಮಾರುಕಟ್ಟೆ ಜ್ಞಾನವಿರುವ ಪರಿಣತರ ಸಲಹೆ ಕೂಡ ಅತ್ಯಂತ ಮುಖ್ಯವಾಗುತ್ತದೆ. ಅದರಲ್ಲೂ ಹೂಡಿಕೆಯ ಹಣದ ಮೊತ್ತ ಹೆಚ್ಚಾಗಿದ್ದರೆ ಸಲಹೆ ಪಡೆಯುವುದು ಅತ್ಯಗತ್ಯ. ಉದಾಹರಣೆಗೆ ತಲೆನೋವು, ನೆಗಡಿಗೆ ವೈದ್ಯರ ಬಳಿ ಹೋಗದೆ ಮಾತ್ರೆ ತೆಗೆದುಕೊಳ್ಳುವುದು ಅಷ್ಟೇನೂ ದೊಡ್ಡ ಅಪರಾಧ ಎನಿಸುವುದಿಲ್ಲ; ಆದರೆ ತಿಳಿಯದ ಕಾಯಿಲೆಗೆ ಕೂಡ ಸ್ವಯಂವೈದ್ಯ ಮಾಡಿಕೊಳ್ಳುವುದು ತಪ್ಪು. ಇದು ಅಷ್ಟೇ ಅಪಾಯಕಾರಿ. ಒಂದರಲ್ಲಿ ಜೀವ ಹೋಗುತ್ತದೆ, ಇನ್ನೊಂದರಲ್ಲಿ ಹಣ.

ಇಂದಿಗೂ 30ಕ್ಕೂ ಹೆಚ್ಚು ಪ್ರತಿಶತ ಮಹಿಳೆಯರಿಗೆ ಫೈನಾನ್ಷಿಯಲ್ ವಿಷಯಗಳ ಬಗ್ಗೆ ಯಾವುದೇ ರೀತಿಯ ಜ್ಞಾನವಿಲ್ಲ ಎನ್ನುವುದು ಕೂಡ ಚಿಂತಿಸಬೇಕಾದ ಅಂಶ. 12 ಪ್ರತಿಶತ ಮಹಿಳೆಯರಿಗೆ ಪುರುಷ ಪ್ರಧಾನ ಸಮಾಜದಲ್ಲಿನ ರೀತಿನೀತಿಗಳನ್ನ ಮೀರಲು ಸಾಧ್ಯವಾಗುತ್ತಿಲ್ಲ, ಅವರಲ್ಲಿ ಅವರ ಬಗ್ಗೆಯೇ ನಂಬಿಕೆಯ ಕೊರತೆ ಕಾಣುತ್ತಿದೆ. 70 ಪ್ರತಿಶತ ಮಹಿಳೆಯರಿಗೆ ಎಲ್ಲಾ ಗೊತ್ತು ಎನ್ನುವಂತಿಲ್ಲ, ಆದರೆ ಒಮ್ಮೆ ಕಲಿತ ನಂತರ ಹೂಡಿಕೆಯಿರಲಿ ಅಥವಾ ಉಳಿತಾಯವಿರಲಿ, ಮಹಿಳೆಯು ಪುರುಷನಿಗಿಂತ ಉತ್ತಮವಾಗಿ ಕಾರ್ಯನಿರ್ವಹಿಸುತ್ತಾಳೆ ಎನ್ನುವುದನ್ನ ಸಾಧಿಸಿ ತೋರಿಸಿದ್ದಾಳೆ.

ಕೊನೇಮಾತು: ಮಹಿಳೆಯು ಮಾರುಕಟ್ಟೆಯಲ್ಲಿ ಹೇಗೆ ಪಾತ್ರವಹಿಸುತ್ತಾಳೆ ಎನ್ನುವುದರ ಬಗ್ಗೆ ಈ ಬರಹದ ಉದ್ದಕ್ಕೂ ಹೇಳಲಾಗಿದೆ. ಮಹಿಳೆಯರಲ್ಲಿ ಹೂಡಿಕೆದಾರಳಾಗಿ ಇರುವ ಕೊರತೆಗಳನ್ನ ಕೂಡ ಒಂದಷ್ಟು ಪಟ್ಟಿ ಮಾಡಲಾಗಿದೆ.
ಅಂದ ಮಾತ್ರಕ್ಕೆ ಪುರುಷನಿಗೆ ಎಲ್ಲವೂ ಗೊತ್ತು ಎನ್ನುವಂತಿಲ್ಲ. ಅಲ್ಲದೆ ಕಲಿತ ಮಹಿಳೆ ಕಲಿತ ಪುರುಷನಿಗಿಂತ ಉತ್ತಮವಾಗಿ ಹೂಡಿಕೆ ಕ್ಷೇತ್ರದಲ್ಲೂ ಕಾರ್ಯ ನಿರ್ವಹಿಸಬಲ್ಲಳು ಎನ್ನುವುದು ಸಾಬೀತಾಗಿದೆ. ಶತಮಾನಗಳಿಂದ ಬಂದ ‘ಸ್ಟೀರಿಯೊಟೈಪ್’ ಹೆಣ್ಣು ಅಡುಗೆ ಮನೆಗೆ ಸೀಮಿತ ಎನ್ನುವ ಮನಸ್ಥಿತಿಯಿಂದ ಹೊರಬರಬೇಕಾಗಿದೆ. ಹೆಣ್ಣು-ಗಂಡು ಇಬ್ಬರೂ ಇಂದಿನ ದಿನದಲ್ಲಿ ಒಟ್ಟಾಗಿ ದುಡಿದರೆ ಮಾತ್ರ ಬಾಳನೌಕೆ ಸಲೀಸಾಗಿ ಸಾಗುತ್ತದೆ. ಹೀಗಾಗಿ ಯಾರು ಯಾವುದರಲ್ಲಿ ಉತ್ತಮರೋ ಅವರಿಗೆ ಆ ಕ್ಷೇತ್ರದ ನಾಯಕತ್ವ, ಹೊಣೆಗಾರಿಕೆ ನೀಡುವುದು ಎಲ್ಲಾ ರೀತಿಯಿಂದ ಒಳ್ಳೆಯದು. ಕುಟುಂಬಗಳು ಆರ್ಥಿಕವಾಗಿ ಸಬಲವಾಗುತ್ತ ಬಂದರೆ ಅದು ದೇಶದ ಪ್ರಬಲ ಆರ್ಥಿಕತೆಗೂ ನಾಂದಿಯಾಗುತ್ತದೆ.

ಪ್ರತಿಸ್ಪಂದನ

ರಾಘವೇಂದ್ರ ರಾಯಲಪಾಡು

ಅತ್ಯಂತ ಖೇದಕರ ಸಂಗತಿ

ಸಂಸ್ಕೃತ ಕಲಿಕೆಗೆ ಒದಗಿರುವ ದಯನೀಯ ಸ್ಥಿತಿಯ ಬಗ್ಗೆ ಎಸ್.ಶ್ರೀನಿವಾಸ್ ಅವರು ‘ಅಭಿಮತ’ ವಿಭಾಗದಲ್ಲಿ (ವಿಶ್ವವಾಣಿ ಸೆ.9) ಹೇಳಿರುವುದು ಸರಿಯಾಗೇ ಇದೆ. ಸಂಸ್ಕೃತ ಭಾಷೆಯ ಕಲಿಕೆಗೆ ಸಂಬಂಧಿಸಿ ನಮ್ಮ ವಿವಿಧ ಶಾಲಾ-ಕಾಲೇಜುಗಳಲ್ಲಿ ಚಾಲ್ತಿಯಲ್ಲಿರುವ ಪದ್ಧತಿಯನ್ನು ಅವರು ಮನಮುಟ್ಟುವಂತೆ ವಿವರಿಸಿದ್ದಾರೆ. ಯಾವ ಭಾಷೆಯಲ್ಲಿ, ವಿಶ್ವದ ಬೇರಾವ ಭಾಷೆಯಲ್ಲಿಯೂ ಲಭ್ಯವಿರದಷ್ಟು ವೈವಿಧ್ಯಮಯ ಮತ್ತು ವಿಪುಲ ಸಾಹಿತ್ಯ, ಅನನ್ಯ ಮಾಹಿತಿಗಳು ಲಭ್ಯವಿವೆಯೋ ಆ ಭಾಷೆಯ ಕಲಿಕೆಯನ್ನು, ಅದರಲ್ಲೂ ಆ ಭಾಷೆಯ ನೆಲೆವೀಡಾದ ಭಾರತದಲ್ಲೇ ಇಂಥದೊಂದು ದಯನೀಯ ಸ್ಥಿತಿಗೆ ತಂದಿರುವುದು ಅತ್ಯಂತ ಖೇದಕರ ಸಂಗತಿ. ಸಂಸ್ಕೃತ ಕ್ಷೇತ್ರಕ್ಕೆ ಸಂಬಂಧಪಟ್ಟ ಮಹನೀಯರು ಈ ಕೂಡಲೇ ಸೂಕ್ತ ಕ್ರಮಕ್ಕೆ ಮುಂದಾಗಲಿ ಹಾಗೂ ಸಂಸ್ಕೃತ ಭಾಷಾ ಕಲಿಕೆಯು ವಿದ್ಯಾರ್ಥಿಗಳಲ್ಲಿ ಉಳಿದು ಬೆಳೆಯುವ ರೀತಿಯಲ್ಲಿ ಅದನ್ನು ರೂಪಿಸಲು ಮುಂದಾಗಲಿ. ಜ್ಞಾನ ಮತ್ತು ಪ್ರಾವೀಣ್ಯದ ಸಂಪಾದನೆಯ ಉದ್ದೇಶವನ್ನು ಬದಿಗೆ ಸರಿಸಿ, ಅಂಕಗಳಿಕೆಯ ಸಲುವಾಗಿ ಮಾತ್ರವೇ ಸಂಸ್ಕೃತ ಭಾಷೆಯನ್ನು ಕಲಿಯುವುದು ಸ್ವಾರ್ಥದ ಪರಮಾವಧಿ; ಆದ್ದರಿಂದ ಈ ಪರಿಪಾಠ ಅಂತ್ಯವಾಗಲಿ ಎಂದು ಹೇಳಬಯಸುತ್ತೇನೆ.



ಸಂಸ್ಕೃತ ಭಾಷೆಯು ಹಲವು ದೇಶೀಯ ಮತ್ತು ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಕಲಿಕೆಯ ವಿಷಯವಾಗಿದೆ. ಈ ವಿಶ್ವವಿದ್ಯಾಲಯಗಳಿಂದ ಪ್ರತಿವರ್ಷವೂ ಸಾವಿರಾರು ಪದವೀಧರರು/ವಿದ್ವಾಂಸರು ಹೊರಬರುತ್ತಿದ್ದಾರೆ. ಇಷ್ಟಾಗಿಯೂ ಸುಲಲಿತವಾಗಿ ಸಂಸ್ಕೃತ ಭಾಷೆಯಲ್ಲಿ ಮಾತನಾಡುವ ನಾಲಗೆಗಳ ಕೊರತೆಯಿದೆ, ಅದರಿಂದಾಗಿ ಭಾಷೆಯು ಸೊರಗುತ್ತಲೇ ಇದೆ ಎಂದರೆ, ಕಲಿಕಾ ಪದ್ಧತಿಯಲ್ಲಿರುವ ದೋಷವೇ ಅದಕ್ಕೆ ಕಾರಣ ಎಂಬುದರಲ್ಲಿ ಎರಡು ಮಾತಿಲ್ಲ.

ಸಂಸ್ಕೃತ ಭಾಷೆಯನ್ನು ವಿಶ್ವ ಸಮುದಾಯದ ಸಂವಹನ ಮಾಧ್ಯಮವನ್ನಾಗಿ ಮಾಡಬೇಕೆಂಬ ಸಂಕಲ್ಪದಿಂದಲೇ 1981ರಲ್ಲಿ ಜನ್ಮ ತಳೆದ ‘ಸಂಸ್ಕೃತ ಭಾರತೀ’ ಸಂಸ್ಥೆಯು ಈ ದಿಸೆಯಲ್ಲಿ ಮಹತ್ತರವಾದ ಕಾರ್ಯಸಾಧನೆಯನ್ನು ಮಾಡಿದೆ. ಸ್ವಯಂಸೇವಕರ ಕಾರ್ಯಪಡೆ ಮತ್ತು ಹಲವು ಆಯಾಮಗಳ ಚಟುವಟಿಕೆಯ ಮೂಲಕ ಈವರೆಗೆ 90 ಲಕ್ಷಕ್ಕೂ ಅಧಿಕ ಮಂದಿಗೆ ಸಂಸ್ಕೃತದಲ್ಲಿ ಮಾತನಾಡಲು ಸಂಸ್ಥೆಯ ವತಿಯಿಂದ ತರಬೇತಿ ನೀಡಲಾಗಿದೆ. ಇಲ್ಲಿ ಕಲಿಕೆಯು ಯಾವುದೇ ಮತ, ಸಂಪ್ರದಾಯ, ಲಿಂಗ ಮುಂತಾದ ಭೇದಗಳ ಹಂಗಿಲ್ಲದೆ ಎಲ್ಲರಿಗೂ ಮುಕ್ತವಾಗಿದೆ ಎಂಬುದು ಗಮನಿಸಬೇಕಾದ ಸಂಗತಿ.

‘ಸಂಸ್ಕೃತ ಭಾಷೆಯಲ್ಲಿರುವ ಸುಭಾಷಿತಗಳು ಜೀವನದಲ್ಲಿ ಬಹಳ ಉಪಯುಕ್ತವಾಗಿವೆ’ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಹೆಮ್ಮೆಯಿಂದ ಹೇಳಿದ್ದರೆ, ಸಂವಿಧಾನಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಬಹಳ ವರ್ಷಗಳ ಹಿಂದೆಯೇ, ‘ಸಂಸ್ಕೃತವು ದೇಶದ ರಾಷ್ಟ್ರಭಾಷೆಯಾಗಬೇಕು, ಅದರಲ್ಲಿ ದೇಶದ ಹಿತವಿದೆ’ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಹಾಗಾಗಿ ಆಸಕ್ತ ಜನರು ಸಂಸ್ಕೃತ ಭಾಷೆಯನ್ನು ಸರಿಯಾದ ರೀತಿಯಲ್ಲಿ ಕಲಿಯಲು ಮುಂದಾಗಲಿ ಹಾಗೂ ಸಂಸ್ಕೃತ ಭಾಷೆಯನ್ನು ಜನಮಾನಸದಲ್ಲಿ ಪ್ರತಿಷ್ಠಾಪನೆಗೊಳಿಸುವ ನಿಟ್ಟಿನಲ್ಲಿ ಸರಕಾರಗಳು ಕಟಿಬದ್ಧವಾಗಲಿ ಎಂದು ಆಶಿಸುತ್ತೇನೆ.

(ಲೇಖಕರು ಹವ್ಯಾಸಿ ಬರಹಗಾರರು)

ವಿದ್ಯಾರ್ಥಿಗಳಿಗೆ ಸಾಫ್ಟ್ ಸ್ಕಿಲ್ ಏಕೆ ಅಗತ್ಯ?

ನಿಜಕೌಶಲ
ಪ್ರೊ. ಆರ್.ಜಿ.ಹೆಗಡೆ
vveditoped@gmail.com

ಹಲವು ಕೌಶಲಗಳನ್ನು ಒಳಗೊಂಡಿರುವಂಥದ್ದು ‘ಸಾಫ್ಟ್ ಸ್ಕಿಲ್ಸ್’ ಅಥವಾ ‘ಲೈಫ್ ಸ್ಕಿಲ್ಸ್’ ಎಂಬ ಪಠ್ಯಕ್ರಮ. ಈ ಕೌಶಲಗಳನ್ನು ವಿದ್ಯಾರ್ಥಿಗಳಿಗೆ ಏಕೆ ಕಲಿಸಬೇಕು ಎಂಬುದನ್ನು ಹೇಳುವುದಕ್ಕೂ ಮುನ್ನ, ನಮ್ಮ ಶಿಕ್ಷಣ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿನ ಕೆಲವು ನ್ಯೂನತೆಗಳನ್ನು ವಿವರಿಸಬೇಕು. ಏಕೆಂದರೆ ಇಂಥ ನ್ಯೂನತೆಗಳನ್ನು ನಿವಾರಿಸಲೆಂದೇ ಹುಟ್ಟಿಕೊಂಡಿರುವಂಥದ್ದು ‘ಸಾಫ್ಟ್ ಸ್ಕಿಲ್ಸ್’ ಪಠ್ಯಕ್ರಮ.

ಈಗ ಒಂದೊಂದೇ ನ್ಯೂನತೆಯನ್ನು ಅವಲೋಕಿಸೋಣ. ತಾಂತ್ರಿಕ ಶಿಕ್ಷಣವನ್ನು ಬಿಟ್ಟು ಇಡೀ ಶಿಕ್ಷಣ ವ್ಯವಸ್ಥೆ ಮುಖ್ಯವಾಗಿ ತೊಡಗಿಸಿಕೊಂಡಿರುವುದು ಮಾಹಿತಿಯ ನೀಡುವಿಕೆಯಲ್ಲಿ (ಈ ಮಾಹಿತಿಯನ್ನೇ ಸ್ಫೂರ್ತಿದಾಯಕವಾಗಿಸುವ ಶಿಕ್ಷಕರು ಇಲ್ಲವೆಂದೇನಲ್ಲ, ಆದರೆ ಅಂಥವರ ಸಂಖ್ಯೆ ಕಡಿಮೆ). ವಿಶೇಷವೆಂದರೆ, ಈ ಮಾಹಿತಿಯದ್ದು ‘ಏಕಮುಖ ಸಂಚಾರ’. ಅಂದರೆ, ಮಾಹಿತಿಯು ಶಿಕ್ಷಕರಿಂದ ವಿದ್ಯಾರ್ಥಿಗಳಿಗೆ ಹರಿಯುತ್ತದೆ; ಆದರೆ ಮಾಹಿತಿಯು ಹರಿಯುವ ವಿಧಾನವನ್ನು, ಅದರ ವಸ್ತುನಿಷ್ಠತೆಯನ್ನು ವಿದ್ಯಾರ್ಥಿಗಳು ಪ್ರಶ್ನಿಸುವಂತಿಲ್ಲ ಮತ್ತು ಮಾಹಿತಿ ಶೇಖರವಾದ ಅಳತೆ ಆಧರಿಸಿ ವಿದ್ಯಾರ್ಥಿಗೆ ಅಂಕಗಳು ಸಿಗುತ್ತವೆ! ವಿಷಾದವೆಂದರೆ, ಇದು ತುಂಬ ಸಾರ್ವತ್ರಿಕವಾದ, ಫೋಕಸ್ ಇಲ್ಲದ, ಪರೀಕ್ಷೆ ಮುಗಿಯುತ್ತಿದ್ದಂತೆ ಅಪ್ರಸ್ತುತವಾಗಿ ಹೋಗುವ ಮಾಹಿತಿಯಾಗಿರುತ್ತದೆ. ಉದಾಹರಣೆಗೆ, ಇತಿಹಾಸದ ಕಲಿಕೆಯಲ್ಲಿ, ಒಂದು ಕಾಲದಲ್ಲಿದ್ದ ಬಟ್ಟೆ ನೇಯುವಿಕೆ, ನೀರು ಬಳಸಿಕೊಳ್ಳುವಿಕೆ, ಬಣ್ಣಗಾರಿಕೆ, ಲೋಹ ತಯಾರಿಕೆ, ಕಟ್ಟಡ ನಿರ್ಮಾಣ, ಆಹಾರ ಪದ್ಧತಿ, ಗಿಡಮೂಲಿಕೆ ಔಷಧಿಗಳ ತಯಾರಿಕೆ ಇತ್ಯಾದಿ ವಿಷಯಗಳು ಯಾವ ಹಂತದಲ್ಲೂ ಬರುವುದಿಲ್ಲ. ಬರೀ ಒಂದು ಕಥೆ ಹೇಳುವಿಕೆಯೇ ಬಹುತೇಕವಾಗಿ ಇತಿಹಾಸದ ಬೋಧನೆಯಾಗಿಬಿಟ್ಟಿದೆ. ಮಾತ್ರವಲ್ಲ, ವಿಜ್ಞಾನ ಮತ್ತು ವಾಣಿಜ್ಯ ಶಾಸ್ತ್ರಗಳು, ಭಾಷೆಗಳನ್ನು ಅವನ್ನು ಹೇಳುವಿಕೆಯ ವಿಧಾನದಲ್ಲಿ ಕಥೆಗಳನ್ನಾಗಿಸಿಬಿಟ್ಟಿದ್ದೇವೆ. ಅಂದರೆ, ಕೇಳಿಸಿಕೊಂಡ ನಂತರ ವಿದ್ಯಾರ್ಥಿಯು ಆ ಜ್ಞಾನವನ್ನು ಎಲ್ಲಿ ಬಳಸಿಕೊಳ್ಳಬಹುದು ಎಂಬ ಪ್ರಶ್ನೆ ಅಲ್ಲಿ ಮೂಡುವುದೇ ಇಲ್ಲ. ಕ್ರಿಟಿಕಲ್ ಥಿಂಕಿಂಗ್, ಕ್ರಿಯೇಟಿವ್ ಥಿಂಕಿಂಗ್, ಅನಲಿಟಿಕಲ್ ಥಿಂಕಿಂಗ್ ಮತ್ತು ‘ಔಟ್ ಆಫ್ ದಿ ಬಾಕ್ಸ್’ ಥಿಂಕಿಂಗ್ ಪ್ರಕ್ರಿಯೆಗಳು ಅಲ್ಲಿ ನಡೆಯುವುದೇ ಇಲ್ಲ. ಅಂಥ ಆಲೋಚನಾ ತಂತ್ರಗಳನ್ನೂ ಅಲ್ಲಿ ಕಲಿಸಲಾಗುವುದಿಲ್ಲ. ಅಂದರೆ, ನಿರ್ದಿಷ್ಟ ಮಾಹಿತಿಯನ್ನು ಜ್ಞಾನವನ್ನಾಗಿ, ಕೌಶಲವನ್ನಾಗಿ ಬಳಸಿಕೊಳ್ಳುವುದು ಹೇಗೆ ಎಂಬುದನ್ನು ಹೇಳುವುದೇ ಇಲ್ಲ. ಈ ಪರಿಪಾಠವು ವಿದ್ಯಾರ್ಥಿಗಳ ಸಹಜ ಕುತೂಹಲ, ಪ್ರಶ್ನಿಸುವ ಗುಣ, ಸೃಜನಶೀಲ ಹುಡುಗಾಟಿಕೆ ಮತ್ತು ಚಟುವಟಿಕೆಗಳನ್ನು ನಾಶಮಾಡಿ, ಅವರನ್ನು ‘ನಿಷ್ಕ್ರಿಯ’ ವ್ಯಕ್ತಿಗಳನ್ನಾಗಿಸಿಬಿಡುತ್ತದೆ. ವಿದ್ಯಾರ್ಥಿಗಳ ಮನಸ್ಸನ್ನು ಹತ್ತಿಕ್ಕಿಬಿಡುತ್ತದೆ. ಏಕೆಂದರೆ ಅವರು ಪ್ರಶ್ನೆ ಕೇಳುವಂತಿಲ್ಲ, ಶಿಕ್ಷಕರು ಹೇಳಿದ್ದನ್ನು ಸುಮ್ಮನೆ ಕೇಳಿಸಿಕೊಂಡು ಅದನ್ನೇ ಬರೆಯಬೇಕು. ಹೀಗೆ ಶಿಕ್ಷಣವು ವಿದ್ಯಾರ್ಥಿಗಳ ಮನಸ್ಸನ್ನು ಒಂದು ರೀತಿಯಲ್ಲಿ ದಾಸ್ಯಕ್ಕೆ ದೂಡುತ್ತದೆ, ಆತ್ಮವಿಶ್ವಾಸವನ್ನು ನಾಶಮಾಡಿಬಿಡುತ್ತದೆ. ಮುಖ್ಯವಾಗಿ, ಜನರಲ್ ಪದವಿ ಮುಗಿಸಿದ ನಮ್ಮ ವಿದ್ಯಾರ್ಥಿಗಳಲ್ಲಿ ಹಲವರಿಗೆ ಸೃಜನಶೀಲತೆ ಮತ್ತು ಆತ್ಮವಿಶ್ವಾಸವೇ ಇಲ್ಲದಿರುವುದರ ಕಾರಣವಿದು.

ನಮ್ಮ ವ್ಯವಸ್ಥೆಗೆ ಮಕ್ಕಳನ್ನು ದೈಹಿಕವಾಗಿ, ಮಾನಸಿಕವಾಗಿ ಸಶಕ್ತರನ್ನಾಗಿಸುವ ಗುರಿ ಇಲ್ಲವೇ ಇಲ್ಲ. ಉದಾಹರಣೆಗೆ, ಮಕ್ಕಳ ಹೃದಯದ ಆಳಕ್ಕಿಳಿದು ಅವರಲ್ಲಿ ಸ್ಫೂರ್ತಿ, ಧೈರ್ಯ, ಚೈತನ್ಯ, ಸಕಾರಾತ್ಮಕತೆ, ಸಂತೋಷ, ಮೌಲ್ಯಗಳನ್ನು ತುಂಬಿ ಹುರಿದುಂಬಿಸಿ, ವೈಯಕ್ತಿಕ ಸವಾಲುಗಳನ್ನು ಎದುರಿಸಬಲ್ಲ, ಸುಸ್ಥಿರ ಸಮಾಜವೊಂದನ್ನು ಕಟ್ಟಬಲ್ಲ ನಾಗರಿಕರನ್ನಾಗಿ ಅವರನ್ನು ಗಟ್ಟಿಗೊಳಿಸುವುದು, ತಂತಮ್ಮ ‘ಕಂಫರ್ಟ್ ಝೋನ್’ನಿಂದ ಹೊರಬಂದು ಬದುಕನ್ನು ವಿಸ್ತರಿಸಿಕೊಳ್ಳುವುದನ್ನು ಅವರಿಗೆ ಕಲಿಸುವುದು ಇತ್ಯಾದಿಗಳು ನಮ್ಮ ವ್ಯವಸ್ಥೆಯಲ್ಲಿಲ್ಲ. ಹಾಗೆಯೇ ಅದು ವಿದ್ಯಾರ್ಥಿಗಳನ್ನು ಬಿಡಿಬಿಡಿಯಾಗಿ ಮಾನವ ಸಂಪನ್ಮೂಲಗಳಂತೆ ನೋಡುವುದೇ ಇಲ್ಲ; ಬದಲಾಗಿ ‘ಮಾಸ್ ಸ್ಕೇಲ್’ನಲ್ಲಿ ತಯಾರಿಸಿದ ಇಟ್ಟಿಗೆಗಳಂತೆ ಅವರನ್ನು ಒಂದೇ ಅಳತೆಯಲ್ಲಿ ನೋಡುತ್ತದೆ. ಪರಿಣಾಮವಾಗಿ ವಿದ್ಯಾರ್ಥಿಗಳು ಮಾನಸಿಕವಾಗಿ ಕುಗ್ಗಿಹೋಗುತ್ತಾರೆ. ಅವರ ಆತ್ಮವಿಶ್ವಾಸ, ಹಾಸ್ಯಪ್ರಜ್ಞೆ, ಚೇತನ, ಉತ್ಸಾಹ ಎಲ್ಲವೂ ಬತ್ತಿಹೋಗುತ್ತವೆ.

ಇತ್ತೀಚೆಗಂತೂ ಶಾಲೆಗಳು ಕೇವಲ ಕೋಚಿಂಗ್ ಸೆಂಟರ್‌ಗಳಾಗಿಬಿಟ್ಟಿವೆ. ವಿದ್ಯಾರ್ಥಿಗಳಿಂದ ಪರೀಕ್ಷೆಯಲ್ಲಿ ಭರ್ಜರಿ ಅಂಕಗಳನ್ನು ತೆಗೆಸುವುದಷ್ಟೇ ಅವುಗಳ ಗುರಿ. ಉತ್ತಮ ಅಂಕಗಳೂ ಬೇಕು ಎಂಬುದರಲ್ಲಿ ಎರಡು ಮಾತಿಲ್ಲ; ಆದರೆ ಮಕ್ಕಳ ಮಾನಸಿಕ ಮತ್ತು ಶಾರೀರಿಕ ಸ್ವಾಸ್ಥ್ಯ ಇಲ್ಲಿ ಮುಖ್ಯ ವಿಷಯವಾಗಬೇಕು. ಇದನ್ನು ನಮ್ಮ ವ್ಯವಸ್ಥೆ ಗಮನಿಸುವುದೇ ಇಲ್ಲ. ಇಡೀ ದಿನ ತರಗತಿಗಳು. ಪಿಯುಸಿ ವಿಜ್ಞಾನ ವಿಭಾಗದ 2ನೇ ವರ್ಷದವರ ಗೋಳನ್ನಂತೂ ಕೇಳುವುದೇ ಬೇಡ- ಬೆಳಗ್ಗೆ 7 ಗಂಟೆಯಿಂದ ಸಾಯಂಕಾಲ 7ರವರೆಗೂ ತರಗತಿಗಳೇ! ಅವರ ಧಾರಣ ಸಾಮರ್ಥ್ಯ ಏನು, ಎಷ್ಟು ಎನ್ನುವ ಕಲ್ಪನೆ ಈ ತರಗತಿಗಳಿಗೆ ಇಲ್ಲ. ಇದೇ ನಮ್ಮ ವ್ಯವಸ್ಥೆಯಾಗಿರುವುದರಿಂದ ಮಕ್ಕಳು ಮತ್ತು ಪಾಲಕರು ಅನಿವಾರ್ಯವಾಗಿ ಅದಕ್ಕೆ ಹೊಂದಿಕೊಳ್ಳಲೇಬೇಕು. ಇಂಥ ಶಿಕ್ಷಣವು ಮಕ್ಕಳಲ್ಲಿನ ‘ಮುಂದಾಳುತನ’, ‘ತೊಡಗಿಸಿಕೊಳ್ಳುವಿಕೆ’, ‘ಉಪಕ್ರಮಶಕ್ತಿ’ ಇತ್ಯಾದಿಗಳನ್ನು ನುಂಗಿಹಾಕಿಬಿಡುತ್ತದೆ. I was born intelligent; But schools ruined me! ಎಂಬ ಬರ್ನಾರ್ಡ್ ಶಾ ಅವರ ಮಾತು ನಮ್ಮ ವ್ಯವಸ್ಥೆಗೆ ಹಿಡಿದ ಕೈಗನ್ನಡಿ ಎಂದರೆ ಅತಿಶಯೋಕ್ತಿಯಲ್ಲ.

ಮತ್ತೊಂದು ವಿಷಯವೆಂದರೆ, ಇಂದು ಬಹುತೇಕ ಕುಟುಂಬಗಳ ಆರ್ಥಿಕ ಸ್ಥಿತಿ ಸುಧಾರಿಸಿದೆ, ಮಕ್ಕಳೂ ಕಡಿಮೆ. ಅವರನ್ನು ಮುದ್ದುಮಾಡಿ ಬೆಳೆಸಿರುತ್ತಾರೆ. ಎಷ್ಟರಮಟ್ಟಿಗೆ ಎಂದರೆ ಅವರಿಗೆ ಮನೆಗೆಲಸವನ್ನು ಹೇಳುವುದೇ ಇಲ್ಲ ಮತ್ತು ಹೊರಜಗತ್ತಿನ ಕಷ್ಟಗಳು-ಕಿರಿಕಿರಿಗಳಿಂದ ಅವರನ್ನು ಸಂಪೂರ್ಣವಾಗಿ ರಕ್ಷಿಸಿ ಬೆಳೆಸಲಾಗುತ್ತದೆ. ಮಕ್ಕಳನ್ನು ಬಿಸಿಲಲ್ಲಿ-ಮಣ್ಣಲ್ಲಿ ಆಡುವುದಕ್ಕೆ, ಮಳೆಯಲ್ಲಿ ನೆನೆಯುವುದಕ್ಕೆ, ಬಸ್ಸುಗಳಲ್ಲಿ ಅಡ್ಡಾಡುವುದಕ್ಕೆ ಬಿಡುವುದಿಲ್ಲ, ಮಾರುಕಟ್ಟೆಗೆ ಕಳಿಸುವುದಿಲ್ಲ. ಮಕ್ಕಳ ಪ್ರತಿಯೊಂದು ಕೆಲಸವನ್ನೂ ಹೆತ್ತವರೇ ಮಾಡಿಕೊಡುತ್ತಾರೆ. ಬ್ಯಾಗ್ ಭಾರವಾದರೆ ಹೊರುತ್ತಾರೆ, ಹೋಂವರ್ಕ್ ಮಾಡಿಕೊಡುತ್ತಾರೆ. ಮನೆಗೆ ಬಂದ ಅತಿಥಿಗಳ ಜತೆ ಉಭಯಕುಶಲೋಪರಿ ಮಾತಿಗಿಳಿಯುವ ಸಂಸ್ಕಾರವನ್ನೂ ಮಕ್ಕಳಿಗೆ ಕಲಿಸುವುದಿಲ್ಲ. ಹೀಗಾಗಿ ಮಕ್ಕಳು ಪಂಜರದ ಗಿಳಿಗಳಂತೆ, ಸಾಕಿದ ಚಿಗರೆ ಮರಿಗಳಂತೆ ಬೆಳೆಯುತ್ತಾರೆ. ಅವರಿಗೆ ಓಡುವುದು, ಹಾರುವುದು, ಜಿಗಿಯುವುದು, ಮುಗ್ಗರಿಸಿ ಬಿದ್ದು ಪೆಟ್ಟು ಮಾಡಿಕೊಳ್ಳುವುದು ತಿಳಿದಿರುವುದಿಲ್ಲ, ಮರಕೋತಿ ಆಟ ಗೊತ್ತಿರುವುದಿಲ್ಲ. ಹಿಂದೆಲ್ಲಾ ಹೆತ್ತವರು ಮಕ್ಕಳನ್ನು ತೋಟಗಳಿಗೆ ಕಳಿಸುತ್ತಿದ್ದರು, ಗದ್ದೆಗಳಲ್ಲಿ ಕೆಲಸ ಮಾಡಿಸುತ್ತಿದ್ದರು, ಸ್ವಂತ ಉದ್ದಿಮೆಯಿದ್ದರೆ ಮಕ್ಕಳನ್ನು ಗಲ್ಲಾಪೆಟ್ಟಿಗೆಯ ಮೇಲೆ ಕೂರಿಸುತ್ತಿದ್ದರು,

ದಿನನಿತ್ಯದ ವ್ಯವಹಾರಗಳಲ್ಲಿ ತೊಡಗಿಸುತ್ತಿದ್ದರು. ಈಗ ಅದೆಲ್ಲಾ ಇಲ್ಲ!

ಇಂಥ ಸಾಮಾಜಿಕ ಸ್ಥಿತಿಯಿಂದಾಗಿ ಮಕ್ಕಳು ಕೇವಲ ಪುಸ್ತಕದ ಹುಳುಗಳಾಗಿ, ಏಕಾಂಗಿಗಳಾಗಿ, ಅಂತರ್ಮುಖಿಗಳಾಗಿ ಬೆಳೆಯುತ್ತಿದ್ದಾರೆ. ಅವರು ಗುಂಪುಗಳಲ್ಲಿ ಬೆರೆಯುವುದಿಲ್ಲ-ಬೆಳೆಯುವುದಿಲ್ಲ. ಮನೆಯಿಂದ ಹೊರಗೆ ಹೆಜ್ಜೆಯಿಟ್ಟು ಜನರ ಜತೆ ಸೇರಿ ಮಾತಾಡುವುದು, ವ್ಯವಹಾರ ಮಾಡುವುದು ಇತ್ಯಾದಿ ತಿಳಿವಳಿಕೆಯಿಂದ ಅವರು ವಂಚಿತರು. ಒಟ್ಟಾರೆಯಾಗಿ ಹೇಳುವುದಾದರೆ, ಸಮಾಜದೊಂದಿಗೆ ಹೇಗೆ ಬದುಕಬೇಕು ಎಂಬ ಪರಿಕಲ್ಪನೆ ಇಂಥ ಮಕ್ಕಳಲ್ಲಿ ಕಡಿಮೆ. ಸಹಜವಾಗಿಯೇ ಅವರಲ್ಲಿ ಹೊಂದಾಣಿಕೆಯ ಸ್ವಭಾವವೂ ಕಾಣದಂತಾಗುತ್ತದೆ. ಸ್ಮಾರ್ಟ್‌ಫೋನ್ ಮತ್ತು ಇಂಟರ್‌ನೆಟ್ ಇಂಥವರ ಸಂಗಾತಿಗಳಾಗುತ್ತವೆ. ಹೀಗಾಗಿ ಚಿಕ್ಕ ತಪ್ಪು ಅಥವಾ ದುರ್ಘಟನೆಯಾದರೂ ಆತ್ಮಹತ್ಯೆಯ ತನಕ ಹೋಗುವವರೆಗಿನ ಮಾನಸಿಕ ದೌರ್ಬಲ್ಯ ಇಂಥ ಮಕ್ಕಳಲ್ಲಿ ಕಂಡುಬರುವುದು ಸಾಮಾನ್ಯವಾಗುತ್ತಿದೆ. ಸೋಲು ಸ್ವೀಕರಿಸುವ, ಮತ್ತೆ ಎದ್ದುನಿಲ್ಲುವ ಮಾನಸಿಕ ಗಟ್ಟಿತನ, ಚಾಲಾಕಿತನ ಅವರಲ್ಲಿ ಕಡಿಮೆಯಾಗುತ್ತಿದೆ. ಕಾರಣ, ವರ್ಷಗಟ್ಟಲೆ ಮಾನಸಿಕವಾಗಿ ಕಟ್ಟಿಹಾಕಲ್ಪಟ್ಟ ಅವರಿಗೆ ಹಳೆಯ ಬಂಧನಗಳಿಂದ ಬಿಡಿಸಿಕೊಳ್ಳಲು ಬರುವುದೇ ಇಲ್ಲ.

ಸಾಫ್ಟ್ ಸ್ಕಿಲ್ ಅಂದರೇನು ಎಂದು ಈಗ ಹೇಳಬೇಕು. ಮೇಲೆ ಉಲ್ಲೇಖಿಸಲಾಗಿರುವ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿನ ಕೊರತೆಗಳನ್ನು ತುಂಬುವುದು ಸಾಫ್ಟ್ ಸ್ಕಿಲ್‌ನ ಉದ್ದೇಶ. ನ್ಯೂನತೆಗಳ ಕುರಿತು ವಿದ್ಯಾರ್ಥಿಗಳಲ್ಲಿ ಅರಿವುಮೂಡಿಸಿ, ನಂತರ ಅವರನ್ನು ಆ ಮನಸ್ಥಿತಿಯಿಂದ ಕ್ರಮೇಣವಾಗಿ ಹೊರತಂದು, ಜೀವನ್ಮುಖಿ ಗುಣ-ವೈಶಿಷ್ಟ್ಯಗಳನ್ನು ತುಂಬುವ ಗುರಿಹೊಂದಿರುವ ಪಠ್ಯಕ್ರಮವೇ ಸಾಫ್ಟ್ ಸ್ಕಿಲ್. ಇದನ್ನು ಕಲಿಸುವುದರ ಹಿಂದೆ ಸಾಕಷ್ಟು ಉದಾತ್ತ ಉದ್ದೇಶಗಳಿವೆ. ವಿದ್ಯಾರ್ಥಿಗಳಲ್ಲಿ ಒಂದು ಹೊಸ ಮನೋಭೂಮಿಕೆಯ (ಮೈಂಡ್‌ಸೆಟ್) ನಿರ್ಮಾಣ ಈ ಪೈಕಿ ಮೊದಲನೆಯದು. ಅಂದರೆ, ಅವರಲ್ಲಿ ಆತ್ಮವಿಶ್ವಾಸ, ತಾಳ್ಮೆ, ಚೈತನ್ಯ, ಲವಲವಿಕೆ, ಉತ್ಸಾಹ, ಸಂವಹನಾ ಕೌಶಲ (ಮಾತನಾಡದಂತೆ ಅವರ ತುಟಿಗಳನ್ನು ನಾವು ಹೊಲಿದುಬಿಟ್ಟಿದ್ದೇವೆ!), ಸಕಾರಾತ್ಮಕ ಚಿಂತನೆ, ಗೆಲುವಿನ ಮನೋಭಾವ ಮತ್ತು ಆತ್ಮಸಂತೋಷದ ಭಾವನೆಗಳನ್ನು ತುಂಬುವುದು. ಹಾಗೆಯೇ, ಮುನ್ನುಗ್ಗುವಿಕೆ, ರಿಸ್ಕ್ ತೆಗೆದುಕೊಳ್ಳುವ ಮನೋಗುಣ, ಅವಕಾಶಗಳನ್ನು ಹುಡುಕುವಿಕೆ ಮತ್ತು ಪಡೆಯುವಿಕೆ ಇಂಥ ಮಾನಸಿಕ ಕೌಶಲಗಳನ್ನು ಕಲಿಸುವುದೂ ಇದರಲ್ಲಿ ಸೇರಿದೆ. ಜತೆಗೆ, ದೊರೆತ ಮಾಹಿತಿಯನ್ನು ಕೌಶಲವಾಗಿ ಪರಿವರ್ತನೆ ಮಾಡಿಕೊಳ್ಳುವುದು ಹೇಗೆ? ವಿಭಿನ್ನವಾಗಿ ಆಲೋಚಿಸುವ ಕ್ರಮಗಳು ಯಾವುವು? ಓದಿದ್ದನ್ನು ಅರ್ಥೈಸಿಕೊಳ್ಳುವುದು, ಮಾನಸಿಕ ಟಿಪ್ಪಣಿಗಳನ್ನು ಮಾಡಿಕೊಳ್ಳುವುದು ಮತ್ತು ವ್ಯವಸ್ಥಿತವಾಗಿ ಹೇಳುವುದು ಹೇಗೆ? ನಾಯಕತ್ವ ಗುಣವನ್ನು ಬೆಳೆಸಿಕೊಳ್ಳುವ, ವ್ಯಕ್ತಿತ್ವದ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವ ಬಗೆ ಯಾವುದು?- ಹೀಗೆ ಶಾಲೆಯಲ್ಲಿ ಕಲಿಸದೇ ಉಳಿದುಹೋದ ಮತ್ತು ಮಕ್ಕಳಿಗೆ ಸಿಗದೇ ಹೋದ, ವಾಸ್ತವಿಕ ಜಗತ್ತಿನ ಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನು ‘ಸಾಫ್ಟ್ ಸ್ಕಿಲ್’ ಹಣೆಪಟ್ಟಿಯಡಿ ಕಲಿಸಲಾಗುತ್ತದೆ.

‘ಸಾಫ್ಟ್ ಸ್ಕಿಲ್’ ಅಡಿಯಲ್ಲಿ ಏನನ್ನು ಕಲಿಸಬೇಕು ಮತ್ತು ಹೇಗೆ ಕಲಿಸಬೇಕು ಎಂಬುದರ ಕುರಿತು ಈಗಾಗಲೇ ಬಹಳ ಸಂಶೋಧನೆಗಳು ನಡೆದಿದ್ದು, ಒಂದು ‘ಚೌಕಟ್ಟು’ ಸಿದ್ಧವಾಗಿದೆ. ಈ ವಲಯಕ್ಕೆ ಸಂಬಂಧಿಸಿದಂತೆ ಐಐಟಿ ಕಾನ್ಪುರ ವತಿಯಿಂದ ‘ಸಾಫ್ಟ್ ಸ್ಕಿಲ್ ಪ್ರೈಮರಿ’ ಮತ್ತು ‘ಸಾಫ್ಟ್ ಸ್ಕಿಲ್ ಅಡ್ವಾನ್ಸ್ಡ್’ ಎಂಬ ಎರಡು ಹಂತದ ಆನ್‌ಲೈನ್ ಕೋರ್ಸ್‌ಗಳು ನಡೆಯುತ್ತಿವೆ. ಮಿಕ್ಕಂತೆ ನೂರಾರು ವೇದಿಕೆಗಳೂ ಸಾಫ್ಟ್ ಸ್ಕಿಲ್ ಬೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ಸಾಫ್ಟ್ ಸ್ಕಿಲ್ ಕುರಿತು ಆಸಕ್ತಿ ಮತ್ತು ಅನುಮಾನ ಎರಡೂ ಇರುವವರು, ಐಐಟಿ ಕಾನ್ಪುರದ ಪ್ರೊ. ರವಿಚಂದ್ರನ್ ಅವರು ವಿಶೇಷವಾಗಿ ವಿನ್ಯಾಸಗೊಳಿಸಿರುವ ಶ್ರವ್ಯರೂಪದ ಕೋರ್ಸ್ ಅನ್ನು ಆಲಿಸಬಹುದು.

(ಲೇಖಕರು ಮಾಜಿ ಪ್ರಾಂಶುಪಾಲರು ಮತ್ತು ಸಂವಹನಾ ಸಮಾಲೋಚಕರು)



ನಾರದ ಸಂಚಾರ

ಕಲಹಪ್ರಿಯ
naadigru@gmail.com

ಕಿಸ್ಸಾ ಕುರ್ಸಿ ಕಾ...!

ಇದು ಬಹಳಷ್ಟು ರಾಜಕೀಯಾಸಕ್ತರಿಗೆ ಹಾಗೂ ಚಲನಚಿತ್ರ ಪ್ರೇಮಿಗಳಿಗೆ ಗೊತ್ತಿರುವ ವಿಷಯವೇ. 1977ರಲ್ಲಿ ‘ಕಿಸ್ಸಾ ಕುರ್ಸಿ ಕಾ’ (ಅಂದರೆ, ‘ಸಿಂಹಾಸನದ ಕಥೆ’ ಎಂದರ್ಥ) ಎಂಬ ಹಿಂದಿ ಚಲನಚಿತ್ರ ಬಿಡುಗಡೆಯಾಗಿತ್ತು. ಉತ್ಪಲ್‌ದತ್ ಮತ್ತು ಶಬಾನಾ ಅಜ್ಮಿಯವರು ಮುಖ್ಯಪಾತ್ರದಲ್ಲಿ ಕಾಣಿಸಿಕೊಂಡಿದ್ದ ಹಾಗೂ ರಾಜಕೀಯ ವಿಡಂಬನೆಯ ಕಥಾವಸ್ತುವಿದ್ದ ಈ ಚಿತ್ರವನ್ನು ನಿರ್ದೇಶಿಸಿದ್ದು ಓರ್ವ ಸಂಸದರೂ ಆಗಿದ್ದ ಅಮೃತ್ ನಹತಾ. ಅಂದಿನ ಪ್ರಧಾನಿ ಇಂದಿರಾ ಗಾಂಧಿ ಮತ್ತು ಅವರ ಮಗ ಸಂಜಯ್ ಗಾಂಧಿಯವರ ರಾಜಕೀಯ ಚಟುವಟಿಕೆಗಳನ್ನು ವಿಡಂಬನಾತ್ಮಕ ಶೈಲಿಯಲ್ಲಿ ಸಾದರಪಡಿಸಿದ್ದ ಈ ಚಿತ್ರವನ್ನು ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಇಂದಿರಾ ಸರಕಾರ ನಿಷೇಧಿಸಿ ಅದರ ಎಲ್ಲಾ ಪ್ರತಿಗಳನ್ನೂ ಮುಟ್ಟುಗೋಲು ಹಾಕಿಕೊಂಡಿತ್ತು ಎನ್ನಿ.

‘ಕಿಸ್ಸಾ ಕುರ್ಸಿ ಕಾ’ ಚಿತ್ರ ಬಿಡುಗಡೆಯಾಗಿದ್ದು, ತದನಂತರ ನಿಷೇಧಕ್ಕೊಳಗಾಗಿದ್ದು, ‘ತುರ್ತು ಪರಿಸ್ಥಿತಿ’ ಹೇರಿಕೆಯಾಗಿದ್ದು ಈ ಎಲ್ಲ ವಿದ್ಯಮಾನಗಳು ಘಟಿಸಿ ದಶಕಗಳೇ ಆಗಿವೆ; ಅದನ್ನು ಈಗ ಪ್ರಸ್ತಾಪಿಸುವ ಕಿಡಿಗೇಡಿ ಬುದ್ಧಿ ಈ ನಾರದರಿಗೇಕೆ ಬಂತು ಅಂತ ಕೇಳ್ತಿದ್ದೀರಾ? ನಿಮ್ಮ ಪ್ರಶ್ನೆ ಸಹಜವೇ. ರಾಜ್ಯದಲ್ಲಾಗಿರುವ ಒಂದು ಬೆಳವಣಿಗೆಯು ಈ ಚಲನಚಿತ್ರದ ಶೀರ್ಷಿಕೆಯನ್ನು ನೆನಪಿಸಿಕೊಳ್ಳುವಂತೆ ಮಾಡಿತಷ್ಟೇ! ಕರ್ನಾಟಕದಲ್ಲಿ ಮುಖ್ಯಮಂತ್ರಿ ಸಿಂಹಾಸನಕ್ಕೆ ‘ನೋ ವೇಕೆನ್ಸಿ’ ಬೋರ್ಡು ತೂಗುಬಿಟ್ಟಿರುವುದು ಗೊತ್ತಿದ್ದರೂ ಹಲವು ಆಕಾಂಕ್ಷಿಗಳು ಆ ಸಿಂಹಾಸನದ ಮೇಲೆ ಟವೆಲ್ ಹಾಕಲು ತವಕಿಸಿದ್ದು ಮಾಧ್ಯಮಗಳಲ್ಲಿ ಸುದ್ದಿಯಾಗಿದೆ. ಸುದ್ದಿಯೇ ಇರಲಿ, ಗಾಳಿಸುದ್ದಿಯೇ ಇರಲಿ ನಾರದರ ಕಿವಿಗಳು ನೆಟ್ಟಗಾಗುತ್ತವೆ ಅಂತ ನಿಮಗೆ ಗೊತ್ತು. ‘ಕೂಸು ಹುಟ್ಟೋಕೆ ಮುಂಚೆಯೇ ಕುಲಾವಿ ಹೊಲಿಸಿದ್ರಂತೆ’ ಅನ್ನೋ ಗಾದೆಮಾತಿನ ಆಧುನಿಕ ರೂಪಾಂತರವಾದ ‘ಸೀಟು ಖಾಲಿಯಾಗೋಕೆ ಮುಂಚೆಯೇ ಟವೆಲ್ ಹಾಕಿದ್ರಂತೆ’ ಅನ್ನೋ ಹಾಗೆ ಈ ನಾಯಕರೆಲ್ಲಾ ಹೀಗೆ ಸಿಎಂ ಗಾದಿಗೆ ಹಪಹಪಿಸಿದ್ದೇಕೆ? ಎಂಬ ಪ್ರಶ್ನೆ ಮುನ್ನೆಲೆಗೆ ಬಂದಾಗ ನಾರದರಿಗೆ ಅಪ್ರಯತ್ನವಾಗಿ ‘ಕಿಸ್ಸಾ ಕುರ್ಸಿ ಕಾ’ ಶೀರ್ಷಿಕೆಯ ನೆನಪಾಯಿತು. ಏಕೆಂದರೆ, ರಾಜ್ಯದಲ್ಲಿ ಕಂಡುಬಂದಿರುವ ಈ ಬೆಳವಣಿಗೆ ಕೂಡ ಒಂಥರಾ ‘ಸಿಂಹಾಸನದ ಕಥೆ’ಯೇ ಅಲ್ಲವೇ?!!

ಪೊರಕೆಯನ್ನು ಹಿಡಿದ ಕೈ

ಆಮ್ ಆದ್ಮಿ ಪಕ್ಷದ ಮೇಲೆ ಕಾಂಗ್ರೆಸ್‌ಗೆ ಇನ್ನಿಲ್ಲದ ಪ್ರೀತಿ ಉಕ್ಕಿ ಹರಿದುಬಿಟ್ಟಿದೆ; ಹರಿಯಾಣ ವಿಧಾನಸಭೆ ಚುನಾವಣೆಯಲ್ಲಿ ‘ಪೊರಕೆ’ ಪಕ್ಷದ ಜತೆಗೆ ಮೈತ್ರಿಗೆ ಮುಂದಾಗಿರುವ ‘ಕೈ’ಪಕ್ಷವು, ‘ಆಮ್ ಆದ್ಮಿ’ಗಳಿಗೆ 5 ವಿಧಾನಸಭಾ ಕ್ಷೇತ್ರಗಳನ್ನು ಬಿಟ್ಟುಕೊಡಲು ‘ದೊಡ್ಡ ಮನಸ್ಸು’ ಮಾಡಿದೆಯಂತೆ! ಸಮಯ ಸಿಕ್ಕಾಗಲೆಲ್ಲಾ ಹಾವು-ಮುಂಗುಸಿಗಳಂತೆ ಸೆಣಸುವ ಈ ಪಕ್ಷಗಳು ಚುನಾವಣೆ ಬಂದಾಕ್ಷಣ ವೈರತ್ವವನ್ನು ಮರೆತು ಹೀಗೆ ಪರಸ್ಪರರ ಹೆಗಲ ಮೇಲೆ ಕೈಹಾಕಿಕೊಂಡು ತಿರುಗುವುದನ್ನು ಕಂಡ ಮತದಾರರಿಗೆ ಗೊಂದಲವಾಗುವುದರಲ್ಲಿ ಸಂದೇಹವಿಲ್ಲ. ಅಷ್ಟಕ್ಕೂ ರಾಜಕೀಯ ಎಂದರೆ ಅವಕಾಶವಾದಿತನದ ಆಡುಂಬೊಲವೇ ಅಲ್ಲವೇ!

ನಾರಾಯಣ ನಾರಾಯಣ!

ಓಲಾ ಆಟೋ ಬುಕ್ಕಿಂಗ್ ಸಂಬಂಧ ಆಟೋ ಚಾಲಕ ಮತ್ತು ಹೊರರಾಜ್ಯದ ಯುವತಿಯ ನಡುವೆ ಬೆಂಗಳೂರಿನಲ್ಲಿ ಇತ್ತೀಚೆಗೆ ವಾಗ್ವಾದವಾಗಿದ್ದು, ಇದಕ್ಕೆ ಸಂಬಂಧಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಆಕ್ರೋಶ ವ್ಯಕ್ತಪಡಿಸಿದ ಹಲವರು ಸದರಿ ಚಾಲಕನ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದು, ಅಂತೆಯೇ ಪೊಲೀಸರು ಕ್ರಮ ಕೈಗೊಂಡಿದ್ದು ನಿಮಗೆ ಗೊತ್ತಿರಬಹುದು. ಆದರೆ ವಾಗ್ವಾದದ ಘಟನೆಯನ್ನು ಖಂಡಿಸುವ ರಭಸದಲ್ಲಿ ಆ ಯುವತಿ, ‘ಬೆಂಗಳೂರು ನಡೀತಿರೋದೇ ನಮ್ಮಿಂದ’ ಎಂಬರ್ಥದಲ್ಲಿ ಮಾತಾಡಿದ್ದು ತಪ್ಪಲ್ಲವೇ? ನೀವೇನಂತೀರಿ?

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 125

ಸಮಾಚಾರ ಸಣ್ಣದಲ್ಲ

ಗಣೇಶ ಪೆಂಡಾಲ್‌ಗೆ ಕಲ್ಲೆಸೆತ; 27 ಮಂದಿ ಸೆರೆ

ಸೂರತ್: ಗುಜರಾತ್ ರಾಜ್ಯದ ಸೂರತ್ ನಗರದಲ್ಲಿ ಸಯ್ಯದ್ ಪುರದಲ್ಲಿನ ಗಣೇಶ್ ಪೆಂಡಾಲ್ ಮೇಲೆ ಕಿಡಿಗೇಡಿಗಳು ಕಲ್ಲು ತೂರಿದ್ದು, ಪರಿಸ್ಥಿತಿ ಉದ್ವಿಗ್ನಗೊಂಡಿತ್ತು. ಕಲ್ಲು ತೂರಿದ 6 ಹುಡುಗರು ಮತ್ತು ಘಟನೆಗೆ ಪ್ರೇರಣೆ ನೀಡಿದ 27 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಕಲ್ಲು ತೂರಾಟ ನಂತರ ಉದ್ವಿಗ್ನ ಉಂಟಾಗಿದ್ದರಿಂದ ಹಾಗೂ ಕಾನೂನು-ಸುವ್ಯವಸ್ಥೆ ಕಾಪಾಡಲು ಸಾವಿರ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ ಎಂದು ಗುಜರಾತ್ ಗೃಹ ಸಚಿವ ಹರ್ಷ ಸಾಂಘ್ವಿ ಹೇಳಿದ್ದಾರೆ.

ಗೋವಾ: ರಷ್ಯಾದ ಪ್ರವಾಸಿ ನೀರುಪಾಲು

ಪಣಜಿ: ಗೋವಾ ಪ್ರವಾಸಕ್ಕೆ ಬಂದಿದ್ದ ರಷ್ಯಾ ಪ್ರಜೆ ಸಮುದ್ರದಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ನೀರುಪಾಲಾಗುತ್ತಿದ್ದ ಆತನ ಗೆಳತಿಯನ್ನು ರಕ್ಷಿಸಲಾಗಿದೆ. ರಷ್ಯಾದ ಡಿಮಿಟ್ರಿ ಎಲ್ಲೊವ್ (33) ರಜೆಯಲ್ಲಿ ಗೆಳತಿ ಜತೆ ಗೋವಾ ತಿರುಗಾಡಲು ಬಂದಿದ್ದರು. ಆತನ ಗೆಳತಿ ಐರಿನಾ ರುಡೆಮ್ಕೊ (28)ರನ್ನು ಸ್ಥಳೀಯರು ರಕ್ಷಣೆ ಮಾಡಿ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ.

ರೈಲ್ವೆಗೆ ವಿನೇಶ್, ಪುನಿಯ ರಾಜೀನಾಮೆ-ಅಂಗೀಕೃತ

ದೆಹಲಿ: ಒಲಿಂಪಿಕ್ ಕುಸ್ತಿಪಟುಗಳಾದ ವಿನೇಶ್ ಫೋಗಟ್ ಮತ್ತು ಬಜರಂಗ್ ಪುನಿಯ ರಾಜೀನಾಮೆಯನ್ನು ಭಾರತೀಯ ರೈಲ್ವೆ ಅಂಗೀಕರಿಸಿದೆ. ಸೆ.6ರಂದು ಪುನಿಯ, ವಿನೇಶ್ ರಾಜೀನಾಮೆ ಪತ್ರ ಸಲ್ಲಿಸಿದ್ದು, ಸಕ್ಷಮ ಪ್ರಾಧಿಕಾರ ತಕ್ಷಣದಿಂದಲೇ ಜಾರಿಗೆ ಬರುವಂತೆ ಅಂಗೀಕರಿಸಿದೆ. ಈ ಪ್ರಕರಣದಲ್ಲಿ 3 ತಿಂಗಳ ನೋಟಿಸ್ ಅವಧಿ ನಿಬಂಧನೆ ಕೈಬಿಡಲಾಗಿದೆ ಎಂದು ಉತ್ತರ ರೈಲ್ವೆ ವಲಯದ ಅಧಿಕಾರಿಗಳು ಸೋಮವಾರ ಹೇಳಿದ್ದಾರೆ. ಇದರಿಂದ ಪುನಿಯ ಮತ್ತು ಫೋಗಟ್ ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡಲು ಅನುಕೂಲವಾಗಿದೆ. ಇಬ್ಬರೂ ಕ್ರೀಡಾಪಟುಗಳು ಇತ್ತೀಚೆಗೆ ಕಾಂಗ್ರೆಸ್ ಸೇರಿದ್ದು, ಚುನಾವಣೆ ಕಣಕ್ಕಿಳಿಯುತ್ತಿದ್ದಾರೆ. ಚುನಾವಣಾ ನಿಯಮಗಳ ಪ್ರಕಾರ ಅ.5ರ ಚುನಾವಣೆ ಸ್ಪರ್ಧೆಗೆ ಅರ್ಹತೆ ಪಡೆಯಲು ಇಬ್ಬರೂ ರೈಲ್ವೆಯಿಂದ ಅಧಿಕೃತವಾಗಿ ಬಿಡುಗಡೆ ಪತ್ರ ಪಡೆಯಬೇಕಿತ್ತು.

ದೆಹಲಿ ಮಾಲಿನ್ಯ ತಡೆಗೆ ಜ.1ವರೆಗೆ ಪಟಾಕಿ ನಿಷೇಧ

ದೆಹಲಿ: ದೇಶದ ರಾಜಧಾನಿ ನಗರ ದೆಹಲಿಯಲ್ಲಿ ಮುಂಬರುವ ಚಳಿಗಾಲದಲ್ಲಿ ವಾಯು ಮಾಲಿನ್ಯ ನಿಯಂತ್ರಿಸಲು ಪಟಾಕಿಗಳ ಉತ್ಪಾದನೆ, ಮಾರಾಟ ಮತ್ತು ಬಳಕೆಯನ್ನು ಮುಂದಿನ ಜ.1ರವರೆಗೂ ನಿಷೇಧಿಸಿ ದೆಹಲಿ ಸರ್ಕಾರ ಸೋಮವಾರ ಆದೇಶ ಹೊರಡಿಸಿದೆ. ಆನ್‌ಲೈನ್‌ನಲ್ಲೂ ಪಟಾಕಿ ಮಾರಾಟ-ವಿತರಣೆ ನಿಷೇಧಿಸಲಾಗಿದೆ ಎಂದು ದೆಹಲಿ ಪರಿಸರ ಸಚಿವ ಗೋಪಾಲ್ ರೈ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ನಿಷೇಧ ಪ್ರಕ್ರಿಯೆ ಕಟ್ಟುನಿಟ್ಟಾಗಿ ಜಾರಿಗೊಳಿಸಲು ದೆಹಲಿ ಪೊಲೀಸರು, ದೆಹಲಿ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆ ಸಹಯೋಗದಲ್ಲಿ ಕ್ರಿಯಾ ಯೋಜನೆ ಸಿದ್ಧಪಡಿಸಲಾಗುವುದು ಎಂದಿದ್ದಾರೆ.

ಉ.ಪ್ರ: ಚಲಿಸುತ್ತಿದ್ದ ಕಾರಲ್ಲಿ ಬಾಲಕಿ ರೇಪ್, ಇಬ್ಬರ ಸೆರೆ

ಗೊಂಡಾ: ಉತ್ತರ ಪ್ರದೇಶದ ಗೊಂಡಾ ಜಿಲ್ಲೆಯಲ್ಲಿ ಬಾಲಕಿ ಎಳೆದೊಯ್ದು ಚಲಿಸುತ್ತಿದ್ದ ಕಾರಿನಲ್ಲಿಯೇ ಅತ್ಯಾಚಾರ ನಡೆಸಲಾಗಿದೆ. ಈ ಸಂಬಂಧ ಇಬ್ಬರನ್ನು ಬಂಧಿಸಲಾಗಿದೆ. ಮೊಹಮ್ಮದ್ ಆರಿಫ್ ಮತ್ತು ಮೊಹಮ್ಮದ್ ರಿಜ್ವಾನ್ ಎಂಬವರು ತಮ್ಮ ಮಗಳನ್ನು ಕಾರಿನಲ್ಲಿ ಎಳೆದೊಯ್ದು ಅತ್ಯಾಚಾರ ಎಸಗಿದ್ದಾರೆ ಎಂದು ಸಂತ್ರಸ್ತೆಯ ತಾಯಿ ಪೊಲೀಸರಿಗೆ ದೂರು ನೀಡಿದ್ದು, ಇಬ್ಬರೂ ಆರೋಪಿಗಳನ್ನು ಬಂಧಿಸಲಾಗಿದೆ. ಚಲಿಸುತ್ತಿದ್ದ ಕಾರಿನಲ್ಲೇ ಅತ್ಯಾಚಾರವೆಸಗುತ್ತಿದ್ದಾಗ ನಿಯಂತ್ರಣ ತಪ್ಪಿದ ಕಾರು ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಆರೋಪಿಗಳು ವಾಹನವನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದಾರೆ. ಬಳಿಕ ಬಾಲಕಿ ಮನೆಗೆ ಓಡಿಹೋಗಿ ಘಟನೆ ಬಗ್ಗೆ ಕುಟುಂಬದವರಿಗೆ ತಿಳಿಸಿದ್ದಾಳೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಬಿಹಾರ ಬಿಜೆಪಿ ಮುಖಂಡ ದುಷ್ಕರ್ಮಿ ಗುಂಡಿಗೆ ಬಲಿ

ಪಟನಾ: ಬಿಹಾರದ ರಾಜಧಾನಿ ಪಟನಾದಲ್ಲಿ ಸೋಮವಾರ ಬೆಳಗ್ಗೆ ಬಿಜೆಪಿ ಮುಖಂಡರೊಬ್ಬರ ಹತ್ಯೆಯಾಗಿದೆ. ಪಟನಾ ನಗರದ ಮಂಗಲ್ ತಲಾಬ್ ಬಳಿಯ ಮನೋಜ್ ಕಮಾಲಿಯಾ ಗೇಟ್ ಬಳಿ ದುಷ್ಕರ್ಮಿಗಳು ಬಿಜೆಪಿ ಮುಖಂಡ ಶ್ಯಾಮ್ ಸುಂದರ್ ಅಲಿಯಾಸ್ ಮುನ್ನಾ ಶರ್ಮಾ ಅವರಿಗೆ ಗುಂಡಿಕ್ಕಿದ್ದಾರೆ. ಮುಂಜಾನೆ 4 ಗಂಟೆಗೆ ಘಟನೆ ನಡೆದಿದ್ದು, ರಾಜಧಾನಿಯ ಜನರನ್ನು ಬೆಚ್ಚಿಬೀಳಿಸಿದೆ.

{ರಾಹುಲ್ ಗಾಂಧಿ} ಲೋಕಸಭೆ ಪ್ರತಿಪಕ್ಷ ನಾಯಕ

ಭಾರತ, ಅಮೆರಿಕ, ಪಶ್ಚಿಮ ದೇಶಗಳಲ್ಲಿ ನಿರುದ್ಯೋಗ ಸಮಸ್ಯೆಯಿದೆ. ಆದರೆ ಉತ್ಪಾದನಾ ಕ್ಷೇತ್ರದಲ್ಲಿ ಪ್ರಾಬಲ್ಯ ಸಾಧಿಸಿರುವ ಚೀನಾದಲ್ಲಿ ಈ ಸಮಸ್ಯೆ ಇಲ್ಲ. ಭಾರತವೂ ಉತ್ಪಾದನೆಯತ್ತ ಗಮನ ಹರಿಸಬೇಕಿದೆ. ಭಾರತದಲ್ಲಿ ಕೌಶಲಕ್ಕೆ ಕೊರತೆಯಿಲ್ಲ. ವೃತ್ತಿಪರ ತರಬೇತಿ ಪ್ರೋತ್ಸಾಹಿಸಬೇಕಿದೆ.

ಕೋಲ್ಕತ್ತ ಕಿರಿ ವೈದ್ಯೆ ಹತ್ಯಾಚಾರ ಪ್ರಕರಣ | ತ್ರಿಸದಸ್ಯ ಪೀಠದಲ್ಲಿ ಸು ಮೊಟೊ ಕೇಸ್ | ಸಿಬಿಐಗೆ ಸುಪ್ರೀಂ ಕೋರ್ಟ್ ಸ್ಪಷ್ಟ ಆದೇಶ

ತನಿಖೆ ಸ್ಥಿತಿಗತಿ ಹೊಸ ವರದಿ 17ರೊಳಗೆ ಸಲ್ಲಿಸಿ

ದೆಹಲಿ: ಕೋಲ್ಕತ್ತದ ಸರಕಾರಿ ಆರ್‌ಜಿ ಕರ್ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ಕಿರಿಯ ವೈದ್ಯೆ ಅತ್ಯಾಚಾರ-ಹತ್ಯೆ ಪ್ರಕರಣದ ತನಿಖೆಯ ಸ್ಥಿತಿಗತಿ ಕುರಿತ ಹೊಸ ವರದಿಯನ್ನು ಸೆ.17ರೊಳಗೆ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ)ಗೆ ಸೋಮವಾರ ಆದೇಶ ನೀಡಿದೆ.

ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾ. ಜೆ.ಬಿ.ಪರದಿವಾಲಾ, ನ್ಯಾ.ಮನೋಜ್ ಮಿಶ್ರಾ ಅವರನ್ನೊಳಗೊಂಡ ತ್ರಿಸದಸ್ಯ ಪೀಠ ವಿಚಾರಣೆ ನಡೆಸುತ್ತಿದೆ.

ಸಿಬಿಐ ಅಧಿಕಾರಿಗಳು ಕಿರಿಯ ವೈದ್ಯೆ ಹತ್ಯಾಚಾರ ಪ್ರಕರಣದಲ್ಲಿ ಈವರೆಗೆ ತನಿಖೆಯಿಂದ ಹೊರಬಿದ್ದ ಅಂಶಗಳ ವರದಿಯನ್ನು ನ್ಯಾಯಾಲಯಕ್ಕೆ ಸೋಮವಾರ ಸಲ್ಲಿಸಿದರು. ಆ ಬಳಿಕ ಪೀಠ ತನಿಖಾ ವರದಿಯಲ್ಲಿ ಪ್ರಗತಿಯೇನೂ ಕಾಣುತ್ತಿಲ್ಲ. ತನಿಖೆ ಚುರುಕುಗೊಳಿಸಿ ತನಿಖೆಯ ಸ್ಥಿತಿ ಗತಿ ಕುರಿತ ಹೊಸ ವರದಿಯನ್ನು ಆದಷ್ಟು ಬೇಗ ಸಲ್ಲಿಸಿ ಎಂದು ಸಿಬಿಐಗೆ ಆದೇಶಿಸಿ, ವಿಚಾರಣೆಯನ್ನು ಸೆ.17ಕ್ಕೆ ಮುಂದೂಡಿತು.

ಅಲ್ಲದೆ, ಆರ್‌ಜಿ ಕರ್ ವೈದ್ಯಕೀಯ ಕಾಲೇಜು-ಆಸ್ಪತ್ರೆಯ ಭದ್ರತಾ ಕಾರ್ಯಕ್ಕೆ ಕೇಂದ್ರ ಸರಕಾರ ನಿಯೋಜಿಸಿರುವ ಕೇಂದ್ರ ಕೈಗಾರಿಕಾ ಭದ್ರತಾ ಪಡೆ(ಸಿಐಎಸ್‌ಎಫ್) ಸಿಬ್ಬಂದಿಗೆ ಅಗತ್ಯವಿರುವ ಎಲ್ಲಾ ಸೆಕ್ಯುರಿಟಿ ಗ್ಯಾಜೆಟ್‌ಗಳನ್ನು ತಕ್ಷಣ ಹಸ್ತಾಂತರಿಸುವಂತೆಯೂ, ಸಿಐಎಸ್‌ಎಫ್‌ನ ಎಲ್ಲಾ 3 ತುಕಡಿಗಳ ಸಿಬ್ಬಂದಿಗೂ ವಸತಿ ವ್ಯವಸ್ಥೆ ಮಾಡಿಕೊಡುವಂತೆಯೂ ಪಶ್ಚಿಮ ಬಂಗಾಳ ಸರಕಾರದ ಗೃಹ ಇಲಾಖೆಗೆ ಪೀಠ ನಿರ್ದೇಶನ ನೀಡಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಇರುವ ಸಂತ್ರಸ್ತೆಯ ಛಾಯಾಚಿತ್ರಗಳನ್ನು ತಕ್ಷಣ ತೆಗೆದುಹಾಕುವಂತೆ ಪೀಠ ಆದೇಶಿಸಿದೆ.

ವೈದ್ಯರ ಸುರಕ್ಷತೆಗಾಗಿ ಪ್ರತ್ಯೇಕ ಕರ್ತವ್ಯ ಕೊಠಡಿ, ಶೌಚಾಲಯ ವ್ಯವಸ್ಥೆ, ಸಿಸಿಟಿವಿ ಕ್ಯಾಮೆರಾ ಅಳವಡಿಕೆ ಸೇರಿದಂತೆ ವೈದ್ಯರ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ರಾಜ್ಯದ ಪೊಲೀಸರಿಗೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

ರಾಜ್ಯದಲ್ಲಿನ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಗಳಲ್ಲಿ ವೈದ್ಯರ ಸುರಕ್ಷತೆ ಮತ್ತು ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಡಿಸಿ, ಎಸ್‌ಪಿ ಆಗಾಗ್ಗೆ ಪರಿಸ್ಥಿತಿ ಅವಲೋಕಿಸಬೇಕು. ಪುರುಷ-ಮಹಿಳಾ ವೈದ್ಯರಿಗೆ ಪ್ರತ್ಯೇಕ ವಿಶ್ರಾಂತಿ ಕೊಠಡಿ ನಿರ್ಮಿಸಬೇಕು, ಸಿಸಿಟಿವಿ ಅಳವಡಿಸುವುದು ಇದರಲ್ಲಿ ಸೇರಿದೆ. ಹೆಚ್ಚುವರಿ ಸಿಸಿಟಿವಿಗಳಿಗೆ ಹಣವನ್ನು ನಿಗದಿಪಡಿಸಲಾಗಿದೆ ಎಂದು ರಾಜ್ಯ ಪೊಲೀಸ್ ಅಫಿಡವಿಟ್ ದೃಢಪಡಿಸಬೇಕು. ಇದನ್ನು ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಿರಬೇಕು ಎಂದು ಪೀಠ ಆದೇಶಿಸಿದೆ.

ಇದೇ ವೇಳೆ ಪೀಠದ ಗಮನ ಸೆಳೆದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಅಪರಾಧ ಕೃತ್ಯಕ್ಕೆ ಸಂಬಂಧಿಸಿದ ಫೋರೆನ್ಸಿಕ್ ಮಾದರಿಗಳನ್ನು ಪರೀಕ್ಷೆಗಾಗಿ 'ಏಮ್ಸ್' ಸಂಸ್ಥೆಗೆ ಕಳುಹಿಸಲು ಸಿಬಿಐ ನಿರ್ಧರಿಸಿದೆ ಎಂದು ಮಾಹಿತಿ ನೀಡಿದರು.

ಸೇವೆಗೆ ಹಾಜರಾಗಿ; ವೈದ್ಯರಿಗೆ ಸೂಚನೆ

ಕಿರಿಯ ವೈದ್ಯೆಯ ಅತ್ಯಾಚಾರ-ಕೊಲೆ ಖಂಡಿಸಿ ಪ್ರತಿಭಟನೆ ನಡೆಸುತ್ತಿರುವ ಸರಕಾರಿ ಆಸ್ಪತ್ರೆಗಳ ಸೇವಾ ನಿರತ ವೈದ್ಯರು ಕಿರಿಯ ವೈದ್ಯರಿಗೆ ಸುಪ್ರೀಂ ಕೋರ್ಟ್ ಕಠಿಣ ಎಚ್ಚರಿಕೆ ನೀಡಿದೆ. ಮಂಗಳವಾರ ಸಂಜೆ 5 ಗಂಟೆಯೊಳಗೆ ತಪ್ಪದೇ ಕರ್ತವ್ಯಕ್ಕೆ ಹಾಜರಾಗುವಂತೆ ಆದೇಶಿಸಿದೆ. ವೈದ್ಯರು ಆದೇಶ ಪಾಲಿಸದೇ ಇದ್ದರೆ ರಾಜ್ಯ ಸರಕಾರ ಅವರ ವಿರುದ್ಧ ಕಾನೂನು ರೀತಿ ಕ್ರಮ ತೆಗೆದುಕೊಳ್ಳಬಹುದು ಎಂದೂ ಕೋರ್ಟ್ ಹೇಳಿದೆ. ಸರಕಾರಿ ಆಸ್ಪತ್ರೆಗಳ ಸೇವಾ ನಿರತರು ಮತ್ತು ಕಿರಿಯ ವೈದ್ಯರು ಕರ್ತವ್ಯಕ್ಕೆ ಹಾಜರಾಗದೇ ತಿಂಗಳಿಂದ ಮುಷ್ಕರ ಕೈಗೊಂಡಿರುವುದರಿಂದ ಅದೇ ಕಾರಣವಾಗಿ ಸರಕಾರಿ ಆಸ್ಪತ್ರೆಗಳಲ್ಲಿ 23 ರೋಗಿಗಳ ಸಾವಿಗೀಡಾಗಿದ್ದಾರೆ ಎಂದು ರಾಜ್ಯ ಸರಕಾರದ ಪರ ವಕೀಲರು ಪೀಠದ ಗಮನಕ್ಕೆ ತಂದರು. ಆ ಬಳಿಕ ಪೀಠ ವೈದ್ಯರಿಗೆ ಸೇವೆಗೆ ಹಾಜರಾಗಲು ಕಟ್ಟುನಿಟ್ಟಿನ ಸೂಚನೆ ನೀಡಿತು.

ಅಟಾಪ್ಸಿ ವರದಿ ಎಲ್ಲಿ?: ರಾಜ್ಯ ಸರಕಾರಕ್ಕೆ ಪ್ರಶ್ನೆ

ಸಿಬಿಐ ಸಲ್ಲಿಸಿದ ವರದಿಯಲ್ಲಿ ಅಟಾಪ್ಸಿ (ಮರಣೋತ್ತರ ಪರೀಕ್ಷೆ) ವರದಿ ಇಲ್ಲದೇ ಇರುವುದು ಸುಪ್ರೀಂ ಕೋರ್ಟ್ ಪೀಠವನ್ನು ಅಚ್ಚರಿಗೆ ಕೆಡವಿತು. ಈ ಬಗ್ಗೆ ನ್ಯಾಯಮೂರ್ತಿಗಳು ಪ್ರಶ್ನಿಸಿದಾಗ ಸಿಬಿಐ ಪರ ವಕೀಲರು, ಕೃತ್ಯ ನಡೆದ ದಿನ ಸಾಕ್ಷ್ಯಗಳನ್ನು ಸಂಗ್ರಹಿಸಿದವರು ಕೋಲ್ಕತ್ತ ನಗರ ಪೊಲೀಸರು. ಅವರೇ ಮರಣೋತ್ತರ ಪರೀಕ್ಷೆಯನ್ನೂ ನಡೆಸಲು ಶವವನ್ನು ಆಸ್ಪತ್ರೆಗೆ ಕೊಂಡೊಯ್ದಿದ್ದರು. ಮರಣೋತ್ತರ ಪರೀಕ್ಷಾ ವರದಿ ಪೊಲೀಸರ ಬಳಿ ಇದೆ. ಅವರು ಅದನ್ನು ಸಿಬಿಐಗೆ ಹಸ್ತಾಂತರಿಸಿಲ್ಲ ಎಂದು ಮಾಹಿತಿ ನೀಡಿದರು. ಅದಕ್ಕೆ ಪೀಠ, ರಾಜ್ಯ ಸರಕಾರವನ್ನು ಪ್ರಶ್ನಿಸಿದೆ. 'ಅಟಾಪ್ಸಿ ವರದಿ ಏನಾಯಿತು? ಅದನ್ನೇಕೆ ಕೋರ್ಟ್‌ಗೆ ಸಲ್ಲಿಸಿಲ್ಲ? ಕಾರಣ ತಿಳಿಸಿ' ಎಂದು ರಾಜ್ಯ ಸರಕಾರದ ಪರ ವಕೀಲರಿಗೆ ಸೂಚನೆ ನೀಡಿದೆ.

ಕೃತ್ಯಕ್ಕೆ ಕಾರಣ ತಿಳಿಯಲಾಗದೇ ಸಿಬಿಐ ತನಿಖೆಗೆ ಹಿನ್ನಡೆ!: ಕೋಲ್ಕತ್ತ: ಕಿರಿಯ ವೈದ್ಯೆಯ ಅತ್ಯಾಚಾರ-ಹತ್ಯೆ ನಡೆದು ತಿಂಗಳಾದರೂ ಅಪರಾಧಕ್ಕೆ ಮೂಲ ಕಾರಣ ವೇನು ಎಂಬ ಪ್ರಶ್ನೆಗೆ ಸಿಬಿಐ ತನಿಖಾಧಿಕಾರಿಗಳಿಗೆ ಉತ್ತರ ಸಿಕ್ಕಿಲ್ಲ.

ಆ.9ರ ಬೆಳಗ್ಗೆ ಆಸ್ಪತ್ರೆಯ ಸೆಮಿನಾರ್ ಹಾಲ್‌ನಲ್ಲಿ ಕಿರಿಯ ವೈದ್ಯೆ ಶವ ಅರೆನಗ್ನ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಆ.13ರವರೆಗೂ ರಾಜ್ಯ ಪೊಲೀಸರು ತನಿಖೆ ನಡೆಸಿದ್ದರು. ಆ ಬಳಿಕ ಹೈಕೋರ್ಟ್ ಆದೇಶದ ಮೇರೆಗೆ ಸಿಬಿಐ ತನಿಖೆ ಕೈಗೆತ್ತಿಕೊಂಡಿತು. ಆದರೆ ಅಪರಾಧ ಕೃತ್ಯ ನಡೆದ ಸ್ಥಳದಿಂದ ಸಾಕ್ಷ್ಯಾಧಾರಗಳನ್ನು ಕೋಲ್ಕತ್ತ ಪೊಲೀಸರು ಸರಿಯಾಗಿ ಸಂಗ್ರಹಿಸದ ಕಾರಣ ಸಿಬಿಐ ತನಿಖಾ ತಂಡಕ್ಕೆ ಹತ್ಯಾಚಾರಕ್ಕೆ ಕಾರಣ ತಿಳಿಯುವುದು ಕಷ್ಟವಾಗಿದೆ.

ಆಸ್ಪತ್ರೆ ಮಾಜಿ ಪ್ರಾಂಶುಪಾಲ ಡಾ.ಸಂದೀಪ್ ಘೋಷ್ ಆ.10ರಂದೇ ಸೆಮಿನಾರ್ ಹಾಲ್ ಸಮೀಪದ ವೈದ್ಯರ ವಿಶ್ರಾಂತಿ ಕೊಠಡಿ ಮತ್ತು ಶೌಚಾಲಯ ನವೀಕರಣಕ್ಕೆ ಆದೇಶಿಸಿದ್ದರಿಂದಲೂ ಪ್ರಮುಖ ಸಾಕ್ಷ್ಯಾಧಾರಗಳು ನಷ್ಟವಾಗಿವೆ ಎನ್ನಲಾಗಿದೆ. ಅಲ್ಲದೆ, ಶವ ಪತ್ತೆಯಾದ ಕೂಡಲೇ ಸೆಮಿನಾರ್ ಹಾಲ್‌ನಲ್ಲಿ ಜನರು ಕಿಕ್ಕಿರಿದಿದ್ದರಿಂದಲೂ ಸಾಕ್ಷ್ಯಗಳು ನಾಶವಾಗಿವೆ. ಇದೆಲ್ಲವೂ ತನಿಖೆ ಮೇಲೆ ಪರಿಣಾಮ ಬೀರಿದೆ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕೇಂದ್ರ ವಿಧಿ ವಿಜ್ಞಾನ ಪ್ರಯೋಗಾಲಯ ನಡೆಸಿದ ಪರೀಕ್ಷೆಯಲ್ಲಿ ಸಂತ್ರಸ್ತೆ ಮತ್ತು ಬಂಧಿತ ಸಂಜಯ್ ರಾಯ್ ನಡುವಿನ ಡಿಎನ್‌ಎ ಹೊಂದಾಣಿಕೆ ದೃಢಪಟ್ಟಿದೆ.

ಅಮೆರಿಕದಲ್ಲಿನ ಭಾರತೀಯ ಸಮುದಾಯ ಕೋಲ್ಕತ್ತ ಕಿರಿಯ ವೈದ್ಯೆ ಹತ್ಯಾಚಾರ ಪ್ರಕರಣದಲ್ಲಿ ತ್ವರಿತ ನ್ಯಾಯಕ್ಕೆ ಆಗ್ರಹಿಸಿ ಪ್ರತಿಭಟಿಸಿದೆ.

25 ದೇಶ-130 ನಗರಗಳಲ್ಲಿ ಭಾರತೀಯರ ಪ್ರತಿಭಟನೆ

ವಾಷಿಂಗ್ಟನ್: ಕೋಲ್ಕತ್ತದ ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ಆ.9ರಂದು ನಡೆದ ಕಿರಿಯ ವೈದ್ಯೆ ಮೇಲಿನ ಅತ್ಯಾಚಾರ ಮತ್ತು ಹತ್ಯೆ ಪ್ರಕರಣ ಇದೀಗ ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯಲಾರಂಭಿಸಿದೆ. ಕಿರಿಯ ವೈದ್ಯೆಯ ಹತ್ಯಾಚಾರ ಪ್ರಕರಣದಲ್ಲಿ ತ್ವರಿತ ನ್ಯಾಯಕ್ಕಾಗಿ ಒತ್ತಾಯಿಸಿ ಅಮೆರಿಕ ಸೇರಿದಂತೆ ವಿವಿಧ ದೇಶಗಳಲ್ಲಿರುವ ಅನಿವಾಸಿ ಭಾರತೀಯ ಸಮುದಾಯದವರು ದೊಡ್ಡ ಮಟ್ಟದಲ್ಲೇ ಪ್ರತಿಭಟನೆ ನಡೆಸುತ್ತಿದ್ದಾರೆ.

25 ದೇಶಗಳ 130ಕ್ಕೂ ಹೆಚ್ಚು ನಗರಗಳಲ್ಲಿ ಸಾವಿರಾರು ಅನಿವಾಸಿ ಭಾರತೀಯರು ಭಾನುವಾರ ಪ್ರತಿಭಟನಾ ಮೆರವಣಿಗೆ ನಡೆಸಿದ್ದಾರೆ. ಕಿರಿಯ ವೈದ್ಯೆ ಮೇಲಿನ ಘೋರ ಕೃತ್ಯದ ಸುದ್ದಿ ಪ್ರತಿಯೊಬ್ಬರನ್ನು ಬೆಚ್ಚಿಬೀಳಿಸಿದೆ. ಅಮೆರಿಕವೊಂದರಲ್ಲೇ 60ಕ್ಕೂ ಹೆಚ್ಚು ಪ್ರತಿಭಟನೆಗಳು ನಡೆಯಲಿವೆ ಎಂದು ಜಾಗತಿಕ ಪ್ರತಿಭಟನೆ ಸಂಘಟಕಿ ದೀಪ್ತಿ ಜೈನ್ ಹೇಳಿರುವುದಾಗಿ 'ರಾಯಿಟರ್ಸ್' ವರದಿ ಮಾಡಿದೆ.

ಜಪಾನ್, ಆಸ್ಟ್ರೇಲಿಯ, ತೈವಾನ್ ಮತ್ತು ಸಿಂಗಾಪುರ ಹಾಗೂ ಯುರೋಪ್ ಮತ್ತು ಅಮೆರಿಕದ ವಿವಿಧ ನಗರಗಳಲ್ಲಿ ದೊಡ್ಡ ಮತ್ತು ಸಣ್ಣ ಗುಂಪುಗಳಲ್ಲಿ ಪ್ರತಿಭಟನೆ ನಡೆದಿದೆ.

ಮಹಿಳೆಯನ್ನು ಅಡುಗೆಮನೆಗೆ ಸೀಮಿತಗೊಳಿಸುತ್ತದೆ: ರಾಹುಲ್ ಟೀಕೆ

ಆರ್‌ಎಸ್‌ಎಸ್, ಬಿಜೆಪಿ ಸ್ತ್ರೀ ವಿರೋಧಿ ಸಿದ್ಧಾಂತ

ಡಲ್ಲಾಸ್: ಭಾರತೀಯ ಜನತಾ ಪಕ್ಷ(ಬಿಜೆಪಿ) ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ಸಿದ್ಧಾಂತಗಳು ಮಹಿಳೆಯರು ಅಡುಗೆ ಮನೆಯಲ್ಲಷ್ಟೇ ಇರಬೇಕು ಎಂದು ಬಯಸುತ್ತವೆ ಎಂದು ಅಮೆರಿಕ ಪ್ರವಾಸದಲ್ಲಿರುವ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಟೀಕಿಸಿದ್ದಾರೆ.

ಡಲ್ಲಾಸ್ ಮತ್ತು ಟೆಕ್ಸಾಸ್‌ನಲ್ಲಿ ಅನಿವಾಸಿ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದ ಅವರು, ಎಂದಿನ ಶೈಲಿಯಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಬಿಜೆಪಿಯ ಮೂಲ ಬೇರು ಆಗಿರುವ ಆರ್‌ಎಸ್‌ಎಸ್ ಭಾರತ ದೇಶವನ್ನು 'ಒಂದು ಪರಿಕಲ್ಪನೆ' ಎಂದು ಹೇಳುತ್ತದೆ. ಆದರೆ ಕಾಂಗ್ರೆಸ್ ಪಕ್ಷ ಭಾರತ ದೇಶ ಬಹುಸಂಖ್ಯೆಯ ವಿಚಾರಗಳದ್ದಾಗಿದೆ ಎಂದು ಭಾವಿಸುತ್ತದೆ. ಪ್ರತಿಯೊಬ್ಬರಿಗೂ ಭಾಗವಹಿಸಲು ಅವಕಾಶ ಸಿಗಬೇಕು, ಕನಸು ಕಾಣಲು ಅವಕಾಶವಾಗಬೇಕು. ಅವರ ಜಾತಿ, ಭಾಷೆ, ಧರ್ಮ, ಸಂಪ್ರದಾಯ, ಇತಿಹಾಸ ಲೆಕ್ಕಿಸದೇ ಸಮಾನ ಅವಕಾಶ ಸಿಗಬೇಕೆಂಬುದು ಕಾಂಗ್ರೆಸ್‌ನ ನಂಬಿಕೆಯಾಗಿದೆ. ಇದುವೇ ಆರ್‌ಎಸ್‌ಎಸ್ ಮತ್ತು ಬಿಜೆಪಿಗೂ ಕಾಂಗ್ರೆಸ್ ಪಕ್ಷಕ್ಕೂ ಇರುವ ವ್ಯತ್ಯಾಸ ಎಂದು ವಿಶ್ಲೇಷಿಸಿದರು.

ಡಲ್ಲಾಸ್‌ನಲ್ಲಿ ಅನಿವಾಸಿ ಭಾರತೀಯ ಸಮುದಾಯದ ಸಮಾವೇಶದಲ್ಲಿ ರಾಹುಲ್ ಗಾಂಧಿ ಮತ್ತು ಸ್ಯಾಮ್ ಪಿತ್ರೊಡಾ, ಸಿಖ್ ನಾಯಕರೊಬ್ಬರ ಸಮಾಲೋಚನೆ.

ಭಾರತದ ರಾಜಕೀಯದಲ್ಲಿ ಪ್ರೀತಿ, ಗೌರವ ಕಾಣೆ

2024ರ ಲೋಕಸಭೆ ಚುನಾವಣೆ ಫಲಿತಾಂಶ ನಂತರ ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ಬಗ್ಗೆ ಭಾರತೀಯರಲ್ಲಿದ್ದ ಭಯ ದೂರವಾಗಿದೆ. ಭಾರತೀಯರಲ್ಲಿ ಅಭಯಮುದ್ರೆ ಕಾಣುತ್ತಿದೆ. ಆದರೆ ಬಿಜೆಪಿಗೆ ಇದನ್ನು ಸಹಿಸಲು ಸಾಧ್ಯವಾಗುತ್ತಿಲ್ಲ ಎಂದು ರಾಹುಲ್ ಗಾಂಧಿ ಟೀಕಿಸಿದರು.
ಬಿಜೆಪಿ ಬಗ್ಗೆ ಜನರಲ್ಲಿದ್ದ ಭಯ ಮರೆಯಾಗಿದೆ. ಭಾರತದಲ್ಲೀಗ ಯಾರೂ ಬಿಜೆಪಿ ಅಥವಾ ಮೋದಿಗೆ ಹೆದರುವುದಿಲ್ಲ. ಇದು ಪ್ರಜಾಪ್ರಭುತ್ವ ಅರಿತ ಜನರ ದೊಡ್ಡ ಸಾಧನೆ ಎಂದರು.
ಭಾರತದ ರಾಜಕೀಯದಲ್ಲಿ ಪ್ರೀತಿ, ಗೌರವ ಮತ್ತು ನಮ್ರತೆ ಕಾಣೆಯಾಗಿದೆ. ನಾವೆಲ್ಲರೂ ಒಂದು ಎಂಬ ಪರಿಕಲ್ಪನೆ ಇಲ್ಲದಾಗಿದೆ. ಮೋದಿ ಸಂವಿಧಾನದ ಮೇಲೆ ದಾಳಿ ಮಾಡುತ್ತಿದ್ದಾರೆ ಎಂಬುದು ಜನರಿಗೆ ಅರ್ಥವಾಗಿದೆ. ಅದು ಚುನಾವಣೆಯಲ್ಲೂ ಗೊತ್ತಾಗಿದೆ ಎಂದು ರಾಹುಲ್ ನುಡಿದರು.
ಅಮೆರಿಕಕ್ಕೆ ಭಾರತದ ಅಗತ್ಯವಿದೆ, ಭಾರತಕ್ಕೂ ಅಮೆರಿಕದ ಅವಶ್ಯಕತೆ ಇದೆ. ಅನಿವಾಸಿ ಭಾರತೀಯರು ಎರಡೂ ರಾಷ್ಟ್ರಗಳ ನಡುವೆ ಸೇತುವೆಯಾಗಿ ಕರ್ತವ್ಯ ನಿರ್ವಹಿಸುತ್ತಾರೆ. ನನ್ನ ದೃಷ್ಟಿಯಲ್ಲಿ ಅನಿವಾಸಿ ಭಾರತೀಯರು ಭಾರತ ಮತ್ತು ಅಮೆರಿಕ ಮಧ್ಯೆ ಮುಕ್ತವಾಗಿ ಪ್ರಯಾಣಿಸಬೇಕು. ನೀವು ಭಾರತದ ಕಲ್ಪನೆಯನ್ನು ಅಮೆರಿಕಕ್ಕೂ, ಅಮೆರಿಕ ಆಲೋಚನೆಗಳನ್ನು ಭಾರತಕ್ಕೂ ತರಬೇಕು. ನಿಮ್ಮದು ಬಹಳ ಮುಖ್ಯವಾದ ಪಾತ್ರ. ಎರಡೂ ದೇಶಗಳ ಭವಿಷ್ಯವನ್ನು ನಿರ್ಧರಿಸುವಂತಹುದಾಗಿದೆ ಎಂದು ರಾಹುಲ್ ಗಮನ ಸೆಳೆದರು.

ರಾಹುಲ್ ವಿರುದ್ಧ ಸಚಿವ ಗಿರಿರಾಜ್ ಸಿಂಗ್ ಕಿಡಿ

ದೇಶದ್ರೋಹಿಗೆ ಸಂಘದ ಸಿದ್ಧಾಂತ ಅರ್ಥವಾಗದು

ದೆಹಲಿ: ರಾಷ್ಟ್ರೀಯ ಸ್ವಯಂ ಸೇವಕ ಸಂಘದ(ಆರ್‌ಎಸ್‌ಎಸ್) ವಿಚಾರಗಳು ಎಂದಿಗೂ ದೇಶದ್ರೋಹಿಗೆ ಅರ್ಥ ಆಗುವುದಿಲ್ಲ ಎಂದು ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಅವರು ಸೋಮವಾರ ಹೇಳಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅಮೆರಿಕದ ಟೆಕ್ಸಾಸ್ ಮತ್ತು ಡಲ್ಲಾಸ್‌ನಲ್ಲಿ ನೀಡಿದ್ದ ಹೇಳಿಕೆಗೆ ಪ್ರತಿಯಾಗಿ ಸಿಂಗ್ ವಾಗ್ದಾಳಿ ನಡೆಸಿದ್ದಾರೆ. ದೇಶದ್ರೋಹಿಗಳಾದವರು ವಿದೇಶಕ್ಕೆ ಹೋದಾಗೆಲ್ಲ ಭಾರತ ಮತ್ತು ಭಾರತೀಯ ಬಗ್ಗೆ ಟೀಕಿಸುತ್ತಿರುತ್ತಾರೆ ಎಂದು ಕಿಡಿಕಾರಿದ್ದಾರೆ.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಬಗ್ಗೆ ತಿಳಿಯಬೇಕೆಂದರೆ ರಾಹುಲ್ ಮೊದಲು ಭಾರತದ ಇತಿಹಾಸ ಓದಬೇಕು. ಅವರ ಅಜ್ಜಿ ಆರ್‌ಎಸ್‌ಎಸ್ ಬಗ್ಗೆ ಏನು ಹೇಳಿದ್ದರು ಎಂಬುದನ್ನೂ ನೆನಪಿಸಿಕೊಳ್ಳಬೇಕು. ಆಗಷ್ಟೇ ಆರ್‌ಎಸ್‌ಎಸ್ ಅಂದರೆ ಏನು ಎಂಬುದು ಕಾಂಗ್ರೆಸ್ ನಾಯಕನಿಗೆ ನಿಜವಾಗಿ ಅರ್ಥವಾಗುತ್ತದೆ ಎಂದು ಸಚಿವ ಗಿರಿರಾಜ್ ಸಿಂಗ್ ಸಿಟ್ಟಿನಿಂದ ಹೇಳಿದ್ದಾರೆ.

ರಾಹುಲ್ ವಿದೇಶಕ್ಕೆ ಪ್ರಯಾಣಿಸುವುದೇ ಭಾರತದ ಹೆಸರಿಗೆ ಕಳಂಕ ತರಲು. ರಾಹುಲ್ ಇಡೀ ಜೀವಮಾನ ಸವೆಸಿದರೂ ಆರ್‌ಎಸ್‌ಎಸ್ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಿಲ್ಲ. ಆರ್‌ಎಸ್‌ಎಸ್ ಭಾರತದ ಸಂಸ್ಕೃತಿ ಮತ್ತು ಮೌಲ್ಯದ ಪ್ರತೀಕವಾಗಿದೆ ಎಂದು ಗಿರಿರಾಜ್ ಸಿಂಗ್ ಹೇಳಿದ್ದಾರೆ.

ರೈಲು ಹಳಿ ತಪ್ಪಿಸಲು ಸಿಲಿಂಡರ್ ಸಂಚು

ಲಖನೌ: ಉತ್ತರ ಪ್ರದೇಶದಲ್ಲಿ ರೈಲು ಹಳಿ ಮೇಲೆ ಅಡುಗೆ ಅನಿಲ ಸಿಲಿಂಡರ್ ಇಟ್ಟು ರೈಲು ಹಳಿ ತಪ್ಪುವಂತೆ ಮಾಡಲು ಸಂಚು ಹೂಡಿದ್ದ ದುಷ್ಕರ್ಮಿಗಳ ಕೃತ್ಯ ಕಡೆ ಕ್ಷಣದಲ್ಲಿ ವಿಫಲವಾಗಿದೆ.

ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಿಂದ ಭಿವಾನಿಗೆ ಕಾಳಿಂದಿ ಎಕ್ಸ್‌ಪ್ರೆಸ್ ರೈಲು ಸಂಚರಿಸುತ್ತಿದ್ದ ಮಾರ್ಗದಲ್ಲಿ ಶಿವರಾಜಪುರ ಪ್ರದೇಶದಲ್ಲಿ ಹಳಿಗಳ ಮೇಲೆ ದುಷ್ಕರ್ಮಿಗಳು ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಇಟ್ಟಿದ್ದನ್ನು ಕಡೆಕ್ಷಣದಲ್ಲಿ ಲೋಕೋ ಪೈಲಟ್ ಗಮನಿಸಿ ತುರ್ತು ಬ್ರೇಕ್ ಹಾಕಿ ರೈಲು ನಿಲ್ಲಿಸಿ ಅವಘಡ ತಪ್ಪಿಸಿದ್ದಾರೆ. ಹಾಗಿದ್ದೂ ರೈಲಿನ ತುದಿ ತಾಗಿ ಸಿಲಿಂಡರ್ ದೂರಕ್ಕೆ ಚಿಮ್ಮಿದೆ. ಅದೃಷ್ಟವಶಾತ್ ಸ್ಫೋಟಗೊಂಡಿಲ್ಲ. ಪರಿಣಾಮ 20 ನಿಮಿಷ ಕಾಲ ರೈಲು ನಿಲುಗಡೆಯಾಗಿತ್ತು.

ರೈಲು ಅಪಘಾತವಾಗಲೆಂದೇ ದುರುದ್ದೇಶದಿಂದ ಹಳಿ ಮೇಲೆ ಸಿಲಿಂಡರ್ ಇಡಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸುದ್ದಿ ತಿಳಿದ ಕೂಡಲೇ ಹಿರಿಯ ರೈಲ್ವೆ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ, ಪರಿಶೀಲನೆ ನಡೆಸಿದರು. ರೈಲ್ವೆ ರಕ್ಷಣಾ ದಳದ

ವಿಧಿವಿಜ್ಞಾನ ತಂಡವೂ ಸ್ಥಳಕ್ಕೆ ತೆರಳಿ ಸಾಕ್ಷ್ಯ ಸಂಗ್ರಹಿಸಿದೆ. ಗ್ಯಾಸ್ ಸಿಲಿಂಡರ್, ಪೆಟ್ರೋಲ್ ತುಂಬಿದ್ದ ಬಾಟಲಿ, ಬೆಂಕಿಪೊಟ್ಟಣ ವಶಪಡಿಸಿಕೊಳ್ಳಲಾಗಿದೆ.

ಪ್ರಕರಣ ದಾಖಲಿಸಿಕೊಂಡಿರುವ ರೈಲ್ವೆ ಪೊಲೀಸರು, ಸಂಚು ನಡೆಸಿದವರ ಪತ್ತೆಗೆ ಶೋಧ ನಡೆಸಿದ್ದಾರೆ.

---

90 ಕ್ಷೇತ್ರಕ್ಕೂ ಅಭ್ಯರ್ಥಿ: ಎಎಪಿ | 20 ಅಭ್ಯರ್ಥಿಗಳ ಮೊದಲ ಪಟ್ಟಿ

ಹರಿಯಾಣ ಚುನಾವಣೆಗಿಲ್ಲ ಕಾಂಗ್ರೆಸ್-ಎಎಪಿ ಮೈತ್ರಿ

ದೆಹಲಿ: 90 ಸದಸ್ಯ ಬಲದ ಹರಿಯಾಣ ವಿಧಾನಸಭೆ ಚುನಾವಣೆ ಸಂಬಂಧ ಕಾಂಗ್ರೆಸ್ ಮತ್ತು ಆಮ್ ಆದ್ಮಿ ಪಕ್ಷದ(ಎಎಪಿ) ಮೈತ್ರಿ ಮಾತುಕತೆ ಸೋಮವಾರ ಮುರಿದುಬಿದ್ದಿದೆ. ಇದರಿಂದ ಸಿಟ್ಟಾಗಿರುವ ಎಎಪಿ, ಎಲ್ಲಾ 90 ಕ್ಷೇತ್ರಗಳಲ್ಲೂ ಸ್ಪರ್ಧೆ ಮಾಡುವುದಾಗಿ ಘೋಷಿಸಿದೆ. ಅದೇ ನಿಟ್ಟಿನಲ್ಲಿ 20 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನೂ ಸೋಮವಾರ ಬಿಡುಗಡೆ ಮಾಡಿದೆ.

ಅ.5ರಂದು ಒಂದೇ ಹಂತದಲ್ಲಿ ಹರಿಯಾಣ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ನಾಮಪತ್ರ ಸಲ್ಲಿಕೆಗೆ ಸೆ.12 ಕೊನೆ ದಿನವಾಗಿದೆ. ಎಎಪಿ ಹರಿಯಾಣ ಘಟಕ ಉಪಾಧ್ಯಕ್ಷ ಅನುರಾಗ್ ಧಂಡಾ ಅವರಿಗೆ ಕಲಾಯತ್ ಕ್ಷೇತ್ರದಿಂದ, ಇಂದು ಶರ್ಮಾ ಭಿವಾನಿಯಿಂದ ಕಣಕ್ಕಿಳಿಯಲಿದ್ದಾರೆ. ಮೆಹಮ್ ಕ್ಷೇತ್ರದಿಂದ ವಿಕಾಸ್ ನೆಹ್ರಾ, ರೋಹ್ಟಕ್‌ನಿಂದ ಬಿಜೇಂದರ್ ಹೂಡಾ ಸ್ಪರ್ಧಿಸಲಿದ್ದಾರೆ.

ಅರವಿಂದ್ ಕೇಜ್ರಿವಾಲ್ ನೇತೃತ್ವದ ಪಕ್ಷವಾದ ಎಎಪಿ 10 ಸ್ಥಾನಗಳಿಗೆ ಬೇಡಿಕೆ ಇಟ್ಟಿದ್ದರೆ, ಕಾಂಗ್ರೆಸ್ ಪಕ್ಷ ಕೇವಲ ಐದು ಸ್ಥಾನಗಳನ್ನು ಬಿಟ್ಟುಕೊಡುವುದಾಗಿ ಪಟ್ಟು ಹಿಡಿದಿದ್ದೇ ಮೈತ್ರಿ ಮಾತುಕತೆ ಮುರಿದುಬೀಳಲು ಕಾರಣ ಎನ್ನಲಾಗುತ್ತಿದೆ. ಸೀಟು ಹಂಚಿಕೆ ಅಂತಿಮಗೊಳಿಸದೇ ಇದ್ದರೆ 90 ಕ್ಷೇತ್ರಗಳಿಗೂ ಎಎಪಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು ಎಂದು ಎಎಪಿ ರಾಜ್ಯ ಘಟಕದ ಮುಖ್ಯಸ್ಥ ಸುಶೀಲ್ ಗುಪ್ತಾ ಹೇಳಿದ್ದಾರೆ.

ಅಬುಧಾಬಿ ಯುವರಾಜ ಶೇಖ್ ಖಾಲೀದ್ ಬಿನ್ ಝಾಯೆದ್ ಅಲ್ ನಹ್ಯಾನ್ ಅವರು ಎರಡು ದಿನಗಳ ಅಧಿಕೃತ ಪ್ರವಾಸಕ್ಕಾಗಿ ಭಾರತಕ್ಕೆ ಸೋಮವಾರ ಆಗಮಿಸಿದ್ದು, ಅವರನ್ನು ಪ್ರಧಾನಿ ನರೇಂದ್ರ ಮೋದಿ ಆತ್ಮೀಯವಾಗಿ ಬರಮಾಡಿಕೊಂಡರು. ಬಳಿಕ ಇಬ್ಬರೂ ನಾಯಕರು ದೆಹಲಿಯಲ್ಲಿನ ಹೈದರಾಬಾದ್ ಹೌಸ್ ಭಾರತ ಮತ್ತು ಯುಎಇ ನಡುವಿನ ಬಾಂಧವ್ಯ ವೃದ್ಧಿಗಾಗಿ ಹಾಗೂ ಭವಿಷ್ಯದ ಸಹಕಾರ ಕುರಿತು ದ್ವಿಪಕ್ಷೀಯ ಚರ್ಚೆ ನಡೆಸಿದರು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.

ಅಯೋಧ್ಯೆಗೆ ಬರುವ ಭಕ್ತರ ಸಂಖ್ಯೆ ಶೇ.20ರಷ್ಟು ಇಳಿಕೆ

ಅಯೋಧ್ಯೆ: ಭವ್ಯ ಶ್ರೀರಾಮ ಮಂದಿರ ಲೋಕಾರ್ಪಣೆಯಾದಾಗ ಅಪಾರ ಸಂಖ್ಯೆಯ ಭಕ್ತರು ಅಯೋಧ್ಯೆಗೆ ಭೇಟಿ ನೀಡುತ್ತಿದ್ದರು. ಆದರೆ, ಏಪ್ರಿಲ್ ಬಳಿಕ ಭಕ್ತರ ಸಂಖ್ಯೆಯಲ್ಲಿ ಇಳಿಕೆಯಾಗಿದೆ. ಆರಂಭದ ದಿನಗಳಿಗೆ ಹೋಲಿಸಿದರೆ ಭಕ್ತರ ಸಂಖ್ಯೆಯಲ್ಲಿ ಶೇ.20ರಷ್ಟು ಇಳಿಕೆ ಕಂಡುಬಂದಿದೆ ಎಂದು ಅಯೋಧ್ಯೆಯ ಅರ್ಥಶಾಸ್ತ್ರಜ್ಞ ಪ್ರೊ.ವಿನೋದ್ ಶ್ರೀವಾಸ್ತವ ಹೇಳಿದ್ದಾರೆ.

ಉತ್ತರ ಭಾರತದ ಧಾರ್ಮಿಕ ಸ್ಥಳಗಳಿಗೆ ಬರುವ ಭಕ್ತರಲ್ಲಿ ಶೇ.80ರಷ್ಟು ಜನರು ಅಯೋಧ್ಯೆಗೂ ಭೇಟಿ ನೀಡುತ್ತಾರೆ. ಸದ್ಯ ಅಯೋಧ್ಯೆಗೆ ಬರುವ ಭಕ್ತರ ಸಂಖ್ಯೆ 50 ಸಾವಿರದಿಂದ 80 ಸಾವಿರದಷ್ಟು ಇದೆ. ಏಪ್ರಿಲ್ ತಿಂಗಳಿನಿಂದ ಕಡಿಮೆ ಆಗುತ್ತಿದೆ ಎಂದು ಸಮೀಕ್ಷೆಯಿಂದ ತಿಳಿದುಬಂದಿದೆ. ಕೆಲವು ತಿಂಗಳಿಂದ ಸಮೀಕ್ಷೆ ನಡೆಸಿದ್ದು, ಭಕ್ತರು ಅಯೋಧ್ಯೆಗೆ ದರ್ಶನಕ್ಕೆ ಬರುತ್ತಿದ್ದಾರೆ, ಆದರೆ ಬಹಳ ಕಡಿಮೆ ಖರ್ಚು ಮಾಡುತ್ತಿದ್ದಾರೆ ಎಂದು ಶ್ರೀವಾಸ್ತವ ಹೇಳಿದ್ದಾರೆ.

ಪ್ರಾಣಪ್ರತಿಷ್ಠೆ ಬಳಿಕ ಏಪ್ರಿಲ್‌ವರೆಗೆ ನಿತ್ಯವೂ 1.50 ಲಕ್ಷ ಭಕ್ತರು ಅಯೋಧ್ಯೆಗೆ ಬರುತ್ತಿದ್ದರು. ಈಗ ಸಂಖ್ಯೆ ಕಡಿಮೆಯಾಗಿದೆ. ಅಯೋಧ್ಯೆಯ ಒಟ್ಟು ರಾಜ್ಯದ ಆಂತರಿಕ ಉತ್ಪನ್ನಕ್ಕೆ ಪ್ರವಾಸಿಗರು ನೀಡುವ ಆದಾಯದಲ್ಲಿ ಅಲ್ಪಾವಧಿಯ ಕುಸಿತ ಕಂಡುಬಂದಿದೆ ಎಂದಿದ್ದಾರೆ.

ಯುವಕನಲ್ಲಿ ಪಶ್ಚಿಮ ಆಫ್ರಿಕಾದ ಕ್ಲಾಡ್-2ರ ಎಂಪಾಕ್ಸ್ ವೈರಸ್

ದೇಶದ ಎಂಪಾಕ್ಸ್ ಮೊದಲ ಪ್ರಕರಣ ದೃಢ

ದೆಹಲಿ: ಭಾರತದಲ್ಲಿ ಎಂಪಾಕ್ಸ್ ವೈರಸ್ ಸೋಂಕಿನ ಮೊದಲ ಪ್ರಕರಣ ಪತ್ತೆಯಾಗಿದೆ. ಅದನ್ನು ಪ್ರಯಾಣ ಸಂಬಂಧಿತ ಸೋಂಕು ಪ್ರಕರಣ ಎಂದು ಗುರುತಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಸೋಮವಾರ ತಿಳಿಸಿದೆ.

ಮಂಕಿಪಾಕ್ಸ್ ಸೋಂಕು ವ್ಯಾಪಿಸಿರುವ ದೇಶದಿಂದ ಇತ್ತೀಚೆಗಷ್ಟೇ ಆಗಮಿಸಿದ ಯುವಕನೊಬ್ಬನ ರಕ್ತದ ಮಾದರಿಯನು ಪ್ರಯೋಗಾಲಯ ಪರೀಕ್ಷೆಗೆ ಒಳಪಡಿಸಲಾಗಿತ್ತು. ಆತನ ದೇಹದಲ್ಲಿ ಪಶ್ಚಿಮ ಆಫ್ರಿಕಾದ ಕ್ಲಾಡ್-2ರ ಎಂಪಾಕ್ಸ್ ವೈರಸ್ ಇರುವುದು ದೃಢಪಟ್ಟಿದೆ. ಹಾಗಾಗಿಯೇ ಈ ಪ್ರಕರಣವನ್ನು ಪ್ರಯಾಣ ಸಂಬಂಧಿ 'ಎಂಪಾಕ್ಸ್' ಸೋಂಕು ಎಂದು ಪರಿಗಣಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ.

ಆದರೆ, ಈ ಪ್ರಕರಣವನ್ನು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಪ್ರಕಟಿಸಿರುವ 'ಜಾಗತಿಕ ಆರೋಗ್ಯ ತುರ್ತುಸ್ಥಿತಿ'ಯ ಭಾಗವಾಗಿ ಪರಿಗಣಿಸಬೇಕಿಲ್ಲ. ಈ ಪ್ರಕರಣ 2022ರ ಜುಲೈನಲ್ಲಿ ದೇಶದಲ್ಲಿ ವರದಿಯಾದ ಹಿಂದಿನ 30 ಪ್ರಕರಣಗಳಂತೆಯೇ ಪ್ರತ್ಯೇಕ ಪ್ರಕರಣವಾಗಿದೆ.

ಎಂಪಾಕ್ಸ್ ವೈರಸ್ ಸೋಂಕಿಗೆ ಒಳಗಾದ ವ್ಯಕ್ತಿಯ ದೇಹಾರೋಗ್ಯ ಪ್ರಸ್ತುತ ಸ್ಥಿರವಾಗಿದೆ. ಸೋಂಕಿನ ಯುವಕನನ್ನು ಪ್ರತ್ಯೇಕ ಕೊಠಡಿಯಲ್ಲಿ ಪ್ರತ್ಯೇಕಿಸಿ ಇಡಲಾಗಿದೆ ಎಂದೂ ಸಚಿವಾಲಯ ಸ್ಪಷ್ಟಪಡಿಸಿದೆ.

ರಾಜ್ಯಗಳಿಗೆ ಸೂಚನೆ

ಮೊದಲ ಎಂಪಾಕ್ಸ್ ಸೋಂಕಿತ ಪ್ರಕರಣ ದೃಢಪಟ್ಟಿರುವುದರಿಂದ ಕೇಂದ್ರ ಆರೋಗ್ಯ ಸಚಿವಾಲಯ, ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೋಂಕು ಹರಡುವಿಕೆ ತಡೆಗಟ್ಟುವ ಕುರಿತು ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಮಾರ್ಗಸೂಚಿ ಕಳುಹಿಸಿಕೊಟ್ಟಿದೆ. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸಾರ್ವಜನಿಕ ಆರೋಗ್ಯ ಸನ್ನದ್ಧತೆ ಪರಿಶೀಲಿಸಲು ಆರೋಗ್ಯ ಸಚಿವಾಲಯ ಸೂಚಿಸಿದೆ.

14 ವಿಜ್ಞಾನಿ ಸಾವು-40ಕ್ಕೂ ಹೆಚ್ಚು ಮಂದಿಗೆ ಗಾಯ

ಸಿರಿಯ ಮೇಲೆ ಇಸ್ರೇಲ್ ಬಾಂಬ್

ಡಮಾಸ್ಕಸ್: ಇಸ್ರೇಲ್ ಭಾನುವಾರ ರಾತ್ರಿ ಸಿರಿಯಾ ದೇಶದ ಹಲವು ಪ್ರದೇಶಗಳ ಮೇಲೆ ಬಾಂಬ್ ದಾಳಿ ನಡೆಸಿದ್ದು 14 ವಿಜ್ಞಾನಿಗಳು ಸಾವಿಗೀಡಾಗಿದ್ದಾರೆ. 40ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಸಿರಿಯ ಸರಕಾರಿ ಮಾಧ್ಯಮಗಳು ಮಾಹಿತಿ ನೀಡಿವೆ.

ಸಿರಿಯ ದೇಶದ ಮಸ್ಯಾಫ್‌ನಲ್ಲಿರುವ ವೈಜ್ಞಾನಿಕ ಸಂಶೋಧನಾ ಕೇಂದ್ರ ಹಾಗೂ ಸಿರಿಯ ಸೇನೆಗೆ ಶಸ್ತ್ರಾಸ್ತ್ರಗಳನ್ನು ಅಭಿವೃದ್ಧಿಪಡಿಸುತ್ತಿರುವ ವಿವಿಧ ನೆಲೆಗಳನ್ನೇ ಗುರಿಯಾಗಿಸಿ ಭಾನುವಾರ ತಡ ರಾತ್ರಿ ಇಸ್ರೇಲ್ ಬಾಂಬ್ ದಾಳಿ ನಡೆಸಿದೆ. ವೈಜ್ಞಾನಿಕ ಸಂಶೋಧನಾ ಕೇಂದ್ರದಲ್ಲಿದ್ದ 14 ವಿಜ್ಞಾನಿಗಳು ಸಾವಿಗೀಡಾಗಿದ್ದಾರೆ. ಹಮಾಸ್ ಪ್ರಾಂತ್ಯದ ಹೆದ್ದಾರಿ ಹಾನಿಗೊಂಡಿದೆ. ಕಟ್ಟಡಗಳಿಗೆ ಬೆಂಕಿ ಆವರಿಸಿದೆ. ಸೋಮವಾರ ಬೆಳಿಗ್ಗೆ ಬೆಂಕಿ ನಂದಿಸಲು ಅಗ್ನಿಶಾಮಕ ದಳ ಸಿಬ್ಬಂದಿ ಶ್ರಮಿಸಿದರು ಎಂದು ಸಿರಿಯನ್ ಅಬ್ಸರ್ವೇಟರಿ ಫಾರ್ ಹ್ಯೂಮನ್ ರೈಟ್ಸ್ ವರದಿ ಮಾಡಿದೆ.

ದಾಳಿಯಲ್ಲಿ ಗಾಯಗೊಂಡ 40 ಮಂದಿಯನ್ನು ಆಸ್ಪತ್ರೆಗೆ ದಾಖಲಿಸಿಕೊಂಡು ಚಿಕಿತ್ಸೆ ನೀಡಲಾಗುತ್ತಿದೆ ಎಂದು ಪಶ್ಚಿಮ ಹಮಾಸ್ ಪ್ರಾಂತ್ಯದ ಮಸ್ಯಾಫ್ ರಾಷ್ಟ್ರೀಯ ಆಸ್ಪತ್ರೆ ವಿವರ ನೀಡಿದೆ.

ಸಿರಿಯದಲ್ಲಿ ಇರಾನ್ ಪ್ರಭಾವ ಬೀರುವುದನ್ನು ತಡೆಯಲು ಇಸ್ರೇಲ್ ಮುಂದಾಗಿದೆ. ಅದರ ಭಾಗವಾಗಿಯೇ ಈಗಿನ ಬಾಂಬ್ ದಾಳಿ ನಡೆದಿದೆ ಎನ್ನಲಾಗಿದೆ.

ಲೆಬನಾನ್ ಮೂಲದ ಹೆಜ್ಬೊಲ್ಲಾ ಉಗ್ರ ಸಂಘಟನೆಗೆ ಶಸ್ತ್ರಾಸ್ತ್ರಗಳನ್ನು ಕಳುಹಿಸಲು ಇರಾನ್‌ಗೆ ಸಿರಿಯ ಸರಾಗ ದಾರಿಯಾಗಿದೆ. ಇರಾನ್, ಹೆಜ್ಬೊಲ್ಲಾ ಉಗ್ರರನ್ನು ಮುಂದೆ ಬಿಟ್ಟು ಇಸ್ರೇಲ್ ಮೇಲೆ ರಾಕೆಟ್ ದಾಳಿ ಮಾಡುವಂತೆ ಪ್ರಚೋದಿಸುತ್ತಿದೆ. ಇಸ್ರೇಲ್ ಮೇಲೆ ಪರೋಕ್ಷವಾಗಿ ಯುದ್ಧ ನಡೆಸುತ್ತಿದೆ ಎಂಬುದೇ ಯಹೂದಿ ದೇಶದ ಸಿಟ್ಟಿಗೆ ಕಾರಣವಾಗಿದೆ.

ಮುಸ್ತಾಪಾ ಮನೆಗೆ ಬಂದ ಮೋದಕಪ್ರಿಯ

ಅಣ್ಣನ ಜತೆಗೂಡಿ ಗಣೇಶ ಮೂರ್ತಿ ಮನೆಗೆ ತಂದ ಹಜರತ್ ಅಲಿ | ಹಿಂದೂ ಸಂಪ್ರದಾಯದಂತೆ ಗಣೇಶನಿಗೆ ಪೂಜೆ

ಮಾಳಿಂಗರಾಯ ಪೂಜಾರ

ಗದಗ: ಧರ್ಮದ ಹೆಸರಿನಲ್ಲಿ ಅಶಾಂತಿ ಸೃಷ್ಟಿಸುವುದು ದೇವರು, ಧರ್ಮದ ಹೆಸರಿನಲ್ಲಿ ಕೋಮು ಭಾವನೆ ಧಕ್ಕೆ ಉಂಟಾಗುವ ಇಂತಹ ಘಟನೆಗಳನ್ನು ಸಾಕಷ್ಟು ಕೇಳಿರುತ್ತೇವೆ. ಆದರೆ ಇಲ್ಲಿ ಮುಸ್ಲಿಂ ಬಾಂಧವನ ಮನೆಯಲ್ಲಿ ಗಣೇಶ ಪ್ರತಿಷ್ಠಾಪನೆ ಮಾಡುವ ಮೂಲಕ ಮಾದರಿಯಾಗಿದ್ದಾರೆ.

ಜಿಲ್ಲೆಯ ಲಕ್ಷ್ಮೇಶ್ವರ ತಾಲೂಕಿನ ಸೂರಣಗಿ ಗ್ರಾಮದಲ್ಲಿ ಮುಸ್ತಾಪ್ ಮಾಬುಸಾಬ್ ಕೋಲ್ಕಾರ ಎಂಬ ಮೂಲತಃ ಮುಸ್ಲಿಂ ಕುಟುಂಬ ಸಂಪ್ರದಾಯ ಪ್ರಕಾರ ಮೂರ್ತಿ ಪೂಜೆ ಮಾಡುವಂತಿಲ್ಲ ಆದರೆ ತನ್ನ ಮಗನ ಆಸೆ, ಪ್ರೀತಿ, ಹಠಕ್ಕೆ ಕಟ್ಟುಬಿದ್ದು ತನ್ನ ಮನೆಯಲ್ಲಿ ಗಣೇಶ ಪ್ರತಿಷ್ಠಾಪನೆ ಮಾಡುವ ಮೂಲಕ ಭಾವೈಕ್ಯತೆ ಮೆರೆದಿದ್ದಾರೆ.

ಮುಸ್ತಾಪಾ ಮತ್ತು ಯಾಸ್ಮಿನಾಬಾನು ದಂಪತಿಗಳಿಗೆ ಐದು ಜನ ಮಕ್ಕಳು ಅವರ ಕೊನೆಯ ಮಗ 3 ವರ್ಷದ ಹಜರತ್ ಅಲಿಗೆ ಗಣೇಶ ದೇವರ ಮೂರ್ತಿಯೆಂದರೆ ಬಹಳ ಪ್ರೀತಿ ಗಣೇಶ ಮೂರ್ತಿಯನ್ನು ಎಲ್ಲರಂತೆ ಪ್ರತಿಷ್ಠಾಪನೆ ಮಾಡಬೇಕು ಪೂಜಿಸಬೇಕು, ಪಟಾಕಿ ಹೊಡೆಯಬೇಕು ಕುಣಿದು ಕುಪ್ಪಳಿಸಬೇಕೆಂಬ ಎನ್ನುವ್ಯದು ಮಗನ ಹಂಬಲ ಆದರೆ ಮುಸ್ಲಿಂ ಕುಟುಂಬ ಆಗಿರುವದರಿಂದ ನಮ್ಮ ಸಂಪ್ರದಾಯ ಅಲ್ಲ ಎಂದು ತಂದೆ ತಾಯಿ ಎನ್ನುತ್ತಾರೆ.

ಲಕ್ಷ್ಮೇಶ್ವರ ತಾಲೂಕಿನ ಸೂರಣಗಿ ಗ್ರಾಮದ ಮುಸ್ಲಿಂ ಧರ್ಮದ ಮುಸ್ತಾಪಾ ಮಾಬುಸಾಬಕೋಲ್ಕಾರ ಅವರ ಮನೆಯಲ್ಲಿ ಹಿಂದೂ ಸಂಪ್ರದಾಯದಂತೆ ಗಣೇಶನ ಮೂರ್ತಿ ಪ್ರತಿಷ್ಠಾಪಿಸಿ ಪೂಜಿಸಿರುವುದು.

ಏನೇ ಹೇಳಿ ಮರೆಸಿ ಸಮಾಧಾನ ಮಾಡಿದರು ಮಗ ತನ್ನ ಹಠ ಬಿಡದೇ ಗಣೇಶ ಚತುರ್ಥಿ ದಿನ ಎಲ್ಲರೂ ಮನೆಗೆ ಗಣೇಶ ಮೂರ್ತಿ ತರುವುದನ್ನು ಗಮನಿಸಿದ ಹಜರತ್ ಅಲಿ ತನ್ನ ಅಣ್ಣನೊಂದಿಗೆ ಗಣೇಶಮೂರ್ತಿಯನ್ನು ತಂದು ಮನೆಯಲ್ಲಿ ಪ್ರತಿಷ್ಠಾಪನೆ ಮಾಡಿದ್ದಾನೆ. ಇದನ್ನು ಕಂಡು ತಂದೆ ತಾಯಿ ಒಂದು ಕ್ಷಣ ಮೌನವಾಗಿದ್ದಾರೆ. ನಂತರ ಮಗನ ಆಸೆಯಂತೆ ತಮ್ಮ ಮನೆಯಲ್ಲಿಯೇ ಗಣೇಶ ಮೂರ್ತಿ ಪ್ರತಿಷ್ಠಾಪನೆ ಹಿಂದೂ ಸಂಪ್ರದಾಯದಂತೆ ಪೂಜೆ ಕೈಂಕರ್ಯ ಮಾಡುವ ಮೂಲಕ ಭಾವೈಕ್ಯತೆಗೆ ಸಾಕ್ಷಿಯಾಗಿದ್ದಾರೆ

ಗ್ರಾಮೀಣ ಪ್ರದೇಶವೆಂದರೆ ಜಾತಿ, ಮತ, ಧರ್ಮ, ಪಂಥ ಭೇಧ ಭಾವ ಇರುವದು ಕಡಿಮೆ, ಅದರಲ್ಲೂ ಮೊದಲೇ ಗದಗ ಜಿಲ್ಲೆ ಭಾವೈಕ್ಯತೆಗೆ ಹೆಸರು ವಾಸಿಯಾಗಿರುವ ಜಿಲ್ಲೆ ಇಲ್ಲಿ ಗದಗಿನ ತೋಂಟದಾರ್ಯ ಮಠ, ಶಿರಹಟ್ಟಿ ಫಕ್ಕೀರೇಶ್ವರಮಠ,

ಲಕ್ಷ್ಮೇಶ್ವರ ದೂದನಾನಾ ದರ್ಗಾ ಸೇರಿ ಅನೇಕ ಭಾವೈಕ್ಯತೆ ಸಾರುವ ದೇವಸ್ಥಾನ, ಮಠ, ಮಂದಿರ ಸೇರಿ ದರ್ಗಾ ಸಹ ಸುತ್ತಮುತ್ತ ಇವೆ. ಶಿಶುವಿನಹಾಳ ಶರೀಫರು, ಕಳಸದ ಗುರು ಗೋವಿಂದಭಟ್ಟರು ನಡೆದಾಡಿದ ನಾಡು ದೇವನೊಬ್ಬ ನಾಮ ಹಲವು ಎಂಬಂತೆ ಈಶ್ವರ ಅಲ್ಲಾ ನೀನೇ ಎಲ್ಲಾ ಎಂಬಂತೆ ಈ ಕುಟುಂಬ ಭಾವೈಕ್ಯತೆಯ ಸಂದೇಶ ಸಾರಿದ್ದಾರೆ.

ಇಲ್ಲಿ ಜಾತಿ ಧರ್ಮದ ಹಂಗಿಲ್ಲದೇ ಎಲ್ಲರೊಂದಿಗೆ ಸಹೋದರತ್ವ ಭಾವನೆಯಿಂದ ಬದುಕುವುದನ್ನು ನೋಡುತ್ತೇವೆ. ಇದನ್ನು ಈ ಮುಸ್ಲಿಂ ಕುಟುಂಬ ಅರಿತು ಮಗನ ಬಗ್ಗೆ ಒಂದಷ್ಟೂ ಬೇಸರ ಮಾಡಿಕೊಳ್ಳದೇ ಗಣೇಶನ ಮೂರ್ತಿಯಿಂದ ಶೃದ್ಧಾ ಭಕ್ತಿಯಿಂದ ಬರ ಮಾಡಿಕೊಂಡಿದ್ದಾರೆ.

ದೇವರ ಹೆಸರಿನಲ್ಲಿ ಸಮಾಜದಲ್ಲಿ ಶಾಂತಿ-ಸುವ್ಯವಸ್ಥೆ ಕದಡುವವರ ನಡುವೆ ಮುಸ್ಲಿಂ ಧರ್ಮದವರಾದರೂ ತಮ್ಮ ಮಗನ ಆಸೆಯಂತೆ ಮನೆಯಲ್ಲಿ ಗಣೇಶನ ಮೂರ್ತಿಯನ್ನಿಟ್ಟು ಪೂಜಿಸಿ ಸಮಾಜಕ್ಕೆ ಮಾದರಿಯಾಗಿದ್ದಾರೆ.

-ಈರಣ್ಣ ಶೀರನಳ್ಳಿ- ಸೂರಣಗಿ ಗ್ರಾಮಸ್ಥ

ಮಗ ಹಜರತಲಿಗೆ ಗಣೇಶನ ಮೂರ್ತಿಯೆಂದರೆ ತುಂಬಾ ಇಷ್ಟ ಇವನು ಅಂಗನವಾಡಿಯಲ್ಲೂ ರಾಷ್ಟ್ರೀಯ ಹಬ್ಬದ ದಿನ ಹಿಂದೂ ದೇವರ ವೇಷಭೂಷಣ ತೊಡಿಸಿದ್ದೇವೆ. ಮಕ್ಕಳು ದೇವರ ಸಮಾನ ಅಂತಾರೆ. ನನ್ನ ಮಗ ಗಣೇಶ ಮೂರ್ತಿ ತಂದಿದ್ದು, ದೇವರೇ ಮನೆಗೆ ಬಂದಂತಾಗಿದೆ ಮುಂದೆ ನಮ್ಮ ಮನೆಯಲ್ಲಿ ಪ್ರತಿ ವರ್ಷ ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡುತ್ತೇವೆ. ಶೃದ್ಧೆ, ಭಕ್ತಿ, ಸಂಭ್ರಮದಿಂದ ಗಣೇಶನ ಮೂರ್ತಿಯನ್ನು ಪೂಜಿಸುತ್ತೇವೆ.

-ಮುಸ್ತಾಪಾ ಹಜರತಲಿ ತಂದೆ

ಸಮಾಚಾರ ಸಣ್ಣದಲ್ಲ

ಛಾಯಾಗ್ರಾಹಕ ಅಧ್ಯಕ್ಷರಾಗಿ ಸೋಮಲಿಂಗಪ್ಪ ಕರಿಕಟ್ಟಿ

ಕಲಘಟಗಿ: ಕಲಘಟಗಿ ತಾಲೂಕ ಕಾರ್ಯನಿರತ ಛಾಯಾಗ್ರಾಹಕರ ಸಂಘದ ಪದಾಧಿಕಾರಿಗಳ ಆಯ್ಕೆ ಸಭೆಯನ್ನು ಕಲಘಟಗಿ ಪಟ್ಟಣದ ಹನ್ನೆರೆಡು ಮಠದಲ್ಲಿ ನಡೆಯಿತು.

ಜಿಲ್ಲಾಧ್ಯಕ್ಷರಾದ ಪ್ರಭಯ್ಯ ಸ್ವಾಮಿ ಲಕ್ಕುಂಡಿಮಠ ಇವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಅಧ್ಯಕ್ಷರಾಗಿ ಸೋಮಲಿಂಗಪ್ಪ ಕರಿಕಟ್ಟಿ, ಕಾರ್ಯದರ್ಶಿಯಾಗಿ ಶಿವಕುಮಾರ್ ನೂಲ್ವಿ, ಉಪಾಧ್ಯಕ್ಷರಾಗಿ ಮೋಹನ್ ಕಲ್ಲೇದ, ಖಜಾಂಚಿಯಾಗಿ ಗುಳೇಶ್ ಹೂಗಾರ್ ಸಹ ಕಾರ್ಯದರ್ಶಿಯಾಗಿ ನಾಗರಾಜ್ ಅಂಚಟಗೇರಿ ಆಯ್ಕೆ ಗೊಂಡಿದ್ದು ಎಲ್ಲಾ ಸದಸ್ಯರ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಗಣೇಶೋತ್ಸವದಲ್ಲಿ ಪಾಲ್ಗೊಂಡ ಅಂಚಟಗೇರಿ

ಹುಬ್ಬಳ್ಳಿ: ಹುಬ್ಬಳ್ಳಿಯ ರಾಣಿಚೆನ್ನಮ್ಮ ಮೈದಾನದಲ್ಲಿ ಪ್ರತಿಷ್ಠಾಪನೆಗೊಂಡ ಶ್ರೀಗಣೇಶನ ಪೂಜೆಯಲ್ಲಿ ಮಾಜಿ ಮಹಾಪೌರರಾದ ಈರೇಶ ಅಂಚಟಗೇರಿ ಪಾಲ್ಗೊಂಡು ದರ್ಶನಾಶೀರ್ವಾದ ಪಡೆದು ಧಾರವಾಡದ ವಿಶೇಷ ಮೋದಕ ಪ್ರಸಾದ ವಿತರಿಸಿ ಸರ್ವರಿಗೂ ಗಣೇಶ ಹಬ್ಬದ ಶುಭಶಯಗಳನ್ನು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಮೇಯರ್, ನಾನು ಮಹಾಪೌರನಿದ್ದಾಗ ಪ್ರಥಮ ಬಾರಿಗೆ ಕೇಂದ್ರ ಸಚಿವರು ಪ್ರಲ್ಹಾದ ಜೋಶಿಯವರು ಹಾಗೂ ಸಂಘಪರಿವಾರದ ಮಾರ್ಗದರ್ಶನದಲ್ಲಿ ಪ್ರತಿಷ್ಠಾಪನೆಗೊಂಡ ರಾಣಿಚೆನ್ನಮ್ಮ ಮೈದಾನದ ಗಣೇಶನಿಗೆ ಇದು 3 ನೇ ವರ್ಷದ್ ಸಂಭ್ರಮ. ಈ ಸಂಭ್ರಮದಲ್ಲಿ ಪಾಲ್ಗೊಂಡಿರುವುದು ನನಗೆ ಖುಷಿ ತಂದಿದೆ. ನಾಡಿನ ಸಮಸ್ತ ಜನತೆಗೆ ಒಳಿತಾಗಲೆಂದು ಪ್ರಾರ್ಥಿಸಿರುವೆ. ಎಲ್ಲರಿಗೂ ಗೌರಿ ಗಣೇಶ ಹಬ್ಬದ ಶುಭಾಶಯಗಳು ಎಂದರು.

ಈ ಸಂದರ್ಭದಲ್ಲಿ, ಗಜಾನನನ ಮಂಡಳಿ ಅಧ್ಯಕ್ಷರು ಹಾಗೂ ವಕೀಲರಾದ ಸಂಜು ಬಡಸ್ಕರ, ಸಂಜಯ ಕಪಟಕರ , ಸಾಮಾಜಿಕ ಹೋರಾಟಗಾರ ಬಸವರಾಜ ಕೊರವರ, ಸುನೀಲ್ ಮೋರೆ, ಶಕ್ತಿ ಹಿರೇಮಠ ಹಾಗು ಭಕ್ತಾದಿಗಳು ಉಪಸ್ಥಿತರಿದ್ದರು.

ತಂತ್ರಜ್ಞಾನ ಮುಂದಿದ್ದರೂ ಶಿಕ್ಷಕರು ಬೇಕು: ಕರಡೋಣಿ

ಧಾರವಾಡ: ಶಿಕ್ಷಕರು ಆದರ್ಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಕ್ಲಾಸ್‌ರೂಮ್ ನಲ್ಲಿ ಎಷ್ಟೇ ತಂತ್ರಜ್ಞಾನ ಮುಂದುವರೆದರೂ, ಶಿಕ್ಷಕನನ್ನು ಬದಲಿಸಲು ಸಾಧ್ಯವಿಲ್ಲ, ಎಂದು ಕರ್ನಾಟಕ ಕಲಾ ಕಾಲೇಜಿನ ಪ್ರಾಚಾರ್ಯ ಡಾ.ಡಿ.ಬಿ.ಕರಡೋಣಿ ಹೇಳಿದರು. ಕರ್ನಾಟಕ ಕಲಾ ಮತ್ತು ವಿಜ್ಞಾನ ಕಾಲೇಜುಗಳ ಸಹಯೋಗದಲ್ಲಿ ಕಾಲೇಜಿನ ಸ್ಟಾಫ್ ಕ್ಲಬ್ ವತಿಯಿಂದ ಡಾ.ಎಸ್ ರಾಧಾಕೃಷ್ಣನ್ ಜನ್ಮದಿನಾಚರಣೆ ಅಂಗವಾಗಿ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಪ್ರಾಚಾರ್ಯ ಡಾ.ಎಂ.ಎಸ್.ಸಾಳುಂಕೆ ಮಾತನಾಡಿ, ಡಾ.ಎಸ್.ರಾಧಾಕೃಷ್ಣನ್ ಅವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಅವರು ವಿದ್ಯಾರ್ಥಿಗಳಿಗೆ ಆದರ್ಶ್ ಪ್ರಾಧ್ಯಾಪಕರಾಗಿದ್ದರು ಎಂದ ಅವರು ಪ್ರಸ್ತುತ ಶಿಕ್ಷಕರು ಮೌಲ್ಯಗಳನ್ನು ಹೊಂದಬೇಕು ಎಂದು ತಿಳಿಸಿದರು. ಕಾಲೇಜಿನ ಶಿಕ್ಷಕರ ಸ್ಟಾಫ್ ಕ್ಲಬ್ ಕಾರ್ಯದರ್ಶಿ ಡಾ.ಕಿರಣ ಕೋಲ್ಕಾರ, ಡಾ.ಆಯ್.ಸಿ.ಮುಳಗುಂದ, ಡಾ.ಎಮ್.ಎನ್. ಮೇಗೇರಿ ಡಾ.ವಿ.ಬಿ.ಸಾವಿರಮಠ, ಡಾ.ಬಿ.ಎಸ್ .ಭಜಂತ್ರಿ, ಡಾ.ಸತೀಶ್ ಜಾಧವ, ಡಾ.ಎ.ಸಿ.ಕುರಹಟ್ಟಿ, ಡಾ.ಎಸ್.ಅನ್ನಪೂರ್ಣ ಸೇರಿದಂತೆ ಶಿಕ್ಷಕರು ವಿದ್ಯಾರ್ಥಿಗಳು ಹಾಜರಿದ್ದರು.

ಸ್ವಾಮಿ ವಿವೇಕಾನಂದರ ಪುತ್ಥಳಿ ಅನಾವರಣ ನಾಳೆ

ಗದಗ: ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಭಾರತದ ಆಧ್ಯಾತ್ಮಿಕ ಶಕ್ತಿ ಪರಿಚಯಿಸಿದವರು ಸ್ವಾಮಿ ವಿವೇಕಾನಂದರು. ಸ್ವಾಮಿ ವಿವೇಕಾನಂದರ ವಿಶ್ವ ವಿಖ್ಯಾತ ಶಿಕಾಗೊ ಭಾಷಣ ಮಾಡಿದ ದಿನವಾದ ಸೆ. 11 ರಂದು ಜಿಲ್ಲೆಯ ಆರ್.ಡಿ.ಪಿ.ಆರ್. ವಿಶ್ವವಿದ್ಯಾಲಯದ ನಾಗಾವಿಯ ಕ್ಯಾಂಪಸ್‌ನಲ್ಲಿ ವಿಶ್ವಚೇತನ ಸ್ವಾಮಿ ವಿವೇಕಾನಂದರ 39.5 ಅಡಿ ಎತ್ತರದ ಪುತ್ಥಳಿ ಅನಾವರಣಗೊಳಿಸುವ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ವಿಶ್ವ ವಿದ್ಯಾಲಯದ ಕುಲಪತಿ ಡಾ. ಸುರೇಶ್ ನಾಡಗೌಡರ ಅವರು ತಿಳಿಸಿದರು.

ಆರ್.ಡಿ.ಪಿ.ಆರ್.ವಿಶ್ವವಿದ್ಯಾಲಯದ ಕೌಶಲ್ಯ ವಿಕಾಸಭವನದಲ್ಲಿ ಸೋಮವಾರ ಜರುಗಿದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು. ಸ್ನೇಹ ಸಹೋದರತ್ವ ಭಾವನೆಯ ಪ್ರತೀಕವಾಗಿ ವಿಶ್ವದ ಗಮನವನ್ನು ಸೆಳೆದ ಮಹಾನ್ ಚೇತನ, ಭಾರತೀಯ ಚಿಂತನ ಶೈಲಿಯ ಮಹತ್ವವನ್ನು ವಿಶ್ವ ಮಾನ್ಯಗೊಳಿಸಿದವರು ಸ್ವಾಮಿ ವಿವೇಕಾನಂದರು. ಇಂತಹ ಆದರ್ಶ ವ್ಯಕ್ತಿತ್ವದ ಪ್ರತಿಕೃತಿಯನ್ನು ಸ್ಥಾಪಿಸುವುದರ ಮೂಲಕ ವಿಶ್ವವಿದ್ಯಾಲಯದಲ್ಲಿ ಅಧ್ಯಯಿಸುತ್ತಿರುವ ವಿದ್ಯಾರ್ಥಿಗಳಲ್ಲಿ ಅವರ ವಿಚಾರಧಾರೆಗಳನ್ನು ಪುನಶ್ಚೇತನಗೊಳಿಸುವ ಪ್ರಯತ್ನವನ್ನು ಮಾಡುವುದು, ಕರ್ನಾಟಕ ಹಾಗೂ ದೇಶದಲ್ಲಿ ವಿವೇಕಾನಂದರ ಪ್ರಸ್ತುತಿಯನ್ನು ಪ್ರಚುರಪಡಿಸಲು ವಿಶ್ವವಿದ್ಯಾಲಯದ ಆವರಣದಲ್ಲಿ ಸ್ವಾಮಿ ವಿವೇಕಾನಂದರ ಭವ್ಯವಾದ ಕಂಚಿನ ಪುತ್ಥಳಿಯನ್ನು ಕಲ್ಕತ್ತಾದ ಸ್ವಾಮಿ ವಿವೇಕಾನಂದ ರಾಮಕೃಷ್ಣ ಮಿಷನ್ ರವರು ಒದಗಿಸಿದ್ದಾರೆ. ಈ ಪುತ್ಥಳಿಯನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್.ಕೆ.ಪಾಟೀಲ, ಮಾಜಿ ಶಾಸಕರಾದ ಡಿ. ಆರ್.ಪಾಟೀಲ್, ಗದಗಿನ ವಿವೇಕಾನಂದ ರಾಮಕೃಷ್ಣ ಆಶ್ರಮ ಗದಗಿನ ಸ್ವಾಮಿ ನಿರ್ಭಯಾನಂದಜಿ ಇವರುಗಳ ಮಾರ್ಗದರ್ಶನದಲ್ಲಿ ನಿರ್ಮಿಸಲಾಗಿದೆ ಎಂದು ತಿಳಿಸಿದರು. ಅನಾವರಣ ಸಮಾರಂಭ ಸೆ. 11 ರಂದು ಬೆಳಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದ್ದು ಸಮಾರಂಭಕ್ಕೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರಾದ ಪ್ರಿಯಾಂಕ ಖರ್ಗೆ , ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳ, ಸಂಸದೀಯ ವ್ಯವಹಾರಗಳ ಮತ್ತು ಶಾಸನ ಮತ್ತು ಪ್ರವಾಸೋದ್ಯಮ ಮತ್ತು ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಚ್.ಕೆ.ಪಾಟೀಲ್ ವಿವಿಧ ಗಣ್ಯರು ಆಗಮಿಸಲಿದ್ದಾರೆ. ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿನಾನಂದಜೀ, ತೋಂಟದಾರ್ಯ ಮಠದ ಶ್ರೀಸಿದ್ಧರಾಮೇಶ್ವರ ಮಹಾಸ್ವಾಮಿ, ಗದಗನ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ನಿರ್ಭಯಾನಂದ ಸ್ವಾಮಿಯವರು ಸಾನ್ನಿಧ್ಯ ವಹಿಸಲಿದ್ದಾರೆ ಎಂದರು. ಇದೇ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಆವರಣದಲ್ಲಿ ನಿರ್ಮಿಸಿರುವ ಖಾದಿ ಮಳಿಗೆ ಹಾಗೂ ಸ್ವಾಮಿ ವಿವೇಕಾನಂದ ಮತ್ತು ಮಹಾತ್ಮಾ ಗಾಂಧಿಜಿಯವರ ಕುರಿತಾದ ಪುಸ್ತಕಗಳು ಹಾಗೂ ವಿಶ್ವ ವಿದ್ಯಾಲಯದ ಇತರ ಪ್ರಕಟಣೆಗಳ ಪ್ರಚಾರ ಹಾಗೂ ಮಾರಾಟ ಮಳಿಗೆಗಳನ್ನು ಹಾಗೂ ವಿಶ್ವ ವಿದ್ಯಾಲಯದ ಸ್ಪೋರ್ಟ್ಸ್ ಮತ್ತು ವ್ಯಾಯಾಮ ಶಾಲೆ ಕಟ್ಟಡದ ಉದ್ಘಾಟನೆಯನ್ನು ಸಹ ನೆರವೇರಿಸಲಾಗುವುದು ಎಂದು ಕುಲಸಚಿವ ಡಾ.ಸುರೇಶ ವಿ ನಾಡಗೌಡರ ತಿಳಿಸಿದರು.

ಸಹಿಷ್ಣುತೆಯೇ ರಂಗಭೂಮಿಯ ಅವಶ್ಯಕತೆ: ನಟ ಮಂಡ್ಯ ರಮೇಶ

ಧಾರವಾಡ: ಯಾವುದೇ ಸಂದರ್ಭದಲ್ಲೂ ಅವಸರದ ಪ್ರತಿಕ್ರಿಯೆ ಸಂಘರ್ಷಕ್ಕೆ ಎಡೆಮಾಡುತ್ತೆ. ನಾಟಕಾರರಾದ ಜಡಭರತ ಶ್ರೀ ರಂಗರು, ಬೇಂದ್ರೆ, ಮೊದಲಾದವರು ಬರೆದ ನಾಟಕಗಳು ಬಂಡಾಯದ ಪ್ರತೀಕಗಳೇ ಎಂದು ನಟ ಹಾಗೂ ರಂಗಕರ್ಮಿ ಮಂಡ್ಯ ರಮೇಶ ಹೇಳಿದರು.

ಧಾರವಾಡದ ಮನೋಹರ ಗ್ರಂಥಮಾಲಾ ಅಟ್ಟದಲ್ಲಿ ರಂಗಾಸಕ್ತರೊಂದಿಗೆ ನಡೆಸಿದ ಸಂವಾದದಲ್ಲಿ ಮಾತನಾಡಿದ ಅವರು, ಕದಡಿದ ನೀರು ನಾಟಕದ ಹುಚ್ಚ, ರಾಚ್ಯಾ ತಿಳುವಳಿಕೆಯ ಮಾತುಗಳನ್ನೇ ಹೇಳುತ್ತಾನೆ.

ಎಡ ಬಲ ವಿಚಾರಧಾರೆಯ ಅತೀರೇಕಗಳೇ ನೈಜ ರಂಗಭೂಮಿಯ ಸೊಗಡನ್ನು ಕುಂದಿಸಿವೆ. ವೃತ್ತಿರಂಗಭೂಮಿಯ ವೃತ್ತಿ ಪರತೆ, ಹವ್ಯಾಸಿ ರಂಗಭೂಮಿಯ ವಿಚಾರಪರತೆ, ಶಿಸ್ತು ಇವೆಲ್ಲವೂ ನನ್ನನ್ನು ರಂಗಕರ್ಮಿಯನ್ನಾಗಿಸಿವೆ ಎಂದರು.

ಪ್ರೀತಿಯಿಂದ ವಿಶ್ವಾಸದಿಂದ ಯುವಪೀಳಿಗೆಯನ್ನು ರಂಗಭೂಮಿಯ ಕಡೆ ಸೆಳೆಯುವ ಮೂಲಕ ನನ್ನ ನಟನ ರಂಗ ರೆಪರ್ಟ್ರಿಯನ್ನು ಕಳೆದ 22 ವರ್ಷಗಳಿಂದ ನಡೆಸಿಕೊಂಡು ಬಂದಿದ್ದೇನೆ. ಚಲನಚಿತ್ರ, ಕಿರುತೆರೆ ಮೊದಲಾದವುಗಳಲ್ಲಿ ರಂಗಭೂಮಿಯೇ ನನ್ನ ಮೊದಲ ಆದ್ಯತೆ ಎಂದ ರಮೇಶ ಹವ್ಯಾಸಿ ರಂಗಭೂಮಿ ಸಶಕ್ತವಾಗಬೇಕು ಎಂದರು.

ಸಂವಾದವನ್ನು ಹಿರಿಯ ರಂಗಕರ್ಮಿ ಡಾ. ಶಶಿಧರ ನರೇಂದ್ರ ನಡೆಸಿಕೊಟ್ಟರು. ಡಾ ರಮಾಕಾಂತ ಜೋಶಿ, ಪ್ರೊ.ಅರವಿಂದ ಕುಲಕರ್ಣಿ, ಡಾ.ಕೃಷ್ಣ ಕಟ್ಟಿ.ಹರ್ಷ ಡಂಬಳ, ಸಮೀರ ಜೋಶಿ, ಡಾ.ಬಿ.ಎಂ.ಶರಭೇಂದ್ರಸ್ವಾಮಿ, ಜ್ಯೋತಿ ದೀಕ್ಷಿತ, ಅಶೋಕ ಮೊಕಾಶಿ, ಲಕ್ಷ್ಮಿಕಾಂತ ಇಟ್ನಾಳ, ಗಿರೀಶ ದೊಡ್ಡಮನಿ, ಹೊಸಮನಿ.

ರಮೇಶ ನಾಡಗೀರ, ಎಸ್. ಎನ್.ದೇಶಪಾಂಡೆ, ವೀರಣ್ಣ ಪತ್ತಾರ ಮೊದಲಾದ ರಂಗಮಿತ್ರರು ಸಂವಾದದಲ್ಲಿ ಪಾಲ್ಗೊಂಡಿದ್ದರು.

ಹುಬ್ಬಳ್ಳಿಯಲ್ಲಿ 3 ದಿನದ ಗಣಪತಿ ವಿಸರ್ಜನೆ

ಹುಬ್ಬಳ್ಳಿ ರಾಣಿ ಚೆನ್ನಮ್ಮ ಮೈದಾನದಲ್ಲಿ ಪ್ರತಿಷ್ಠಾಪನೆಗೊಂಡ ಗಣಪತಿಯನ್ನು 3 ನೇ ದಿನ ಸೋಮವಾರ ಬೃಹತ್ ಮೆರವಣಿಗೆ ಮೂಲಕ ವಿಸರ್ಜನೆ ಮಾಡಲಾಯಿತು. ಈ ಸಂದರ್ಭದಲ್ಲಿ ಮೇಯರ್ ರಾಮಣ್ಣ ಬಡಿಗೇರ, ಮಾಜಿ ಸಚಿವರಾದ ಶಂಕರ ಪಾಟೀಲ ಮುನೇನಕೊಪ್ಪ, ಶಾಸಕರಾದ ಪ್ರದೀಪ ಶೆಟ್ಟರ್, ಬಿಜೆಪಿ ನಾಯಕರಾದ ಸಿ.ಟಿ.ರವಿ ಶಾಸಕ ಮಹೇಶ ತೆಂಗಿನಕಾಯಿ.ಇತರೆ ನಾಯಕರು ಉಪಸ್ಥಿತರಿದ್ದರು.

ಹುಬ್ಬಳ್ಳಿಯ ಆರ್. ಎಂ. ಲೋಹಿಯಾ ನಗರ ಗೋಕುಲ್ ರೋಡ್, ಹುಬ್ಬಳ್ಳಿಯಲ್ಲಿ ಪ್ರತಿಷ್ಠಾಪನೆ ಆಗಿರುವ ಗಣಪತಿ.

ಮೂರ್ತಿ ವಿಸರ್ಜನೆಗೆ ಸಂಚಾರಿ ವಾಹನ

ಧಾರವಾಡ: ಗಣೇಶ ಚತುರ್ಥಿಯನ್ನು ಅನಾದಿಕಾಲದಿಂದಲೂ ಆಚರಿಸಿಕೊಂಡು ಬರುತ್ತಿರುವ ಸಂಪ್ರದಾಯ ಭಾರತೀಯರಲ್ಲಿ ಇದೆ.

ಪ್ಲಾಸ್ಟರ್ ಆಪ್ ಪ್ಯಾರಿಸ್‌ನಿಂದ ತಯಾರಿಸಿದ ಗಣೇಶ ವಿಗ್ರಹಗಳ ಮಾರಾಟ ಮತ್ತು ವಿಸರ್ಜನೆ ಮಾಡುವುದನ್ನು ಕರ್ನಾಟಕ ಸರಕಾರವು ನಿಷೇಧಿಸಿದೆ. ಗಣೇಶ ವಿಗ್ರಹಗಳನ್ನು ಜಲಮೂಲಗಳಲ್ಲಿ ವಿಸರ್ಜಿಸದಂತೆ ಜಿಲ್ಲಾಡಳಿತ, ಮಹಾನಗರ ಪಾಲಿಕೆ ಸಹಕಾರದಲ್ಲಿ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯು ಸೆ. 11 ರಂದು ಗಣೇಶ ವಿಗ್ರಹಗಳ ವಿಸರ್ಜನೆಗಾಗಿ ತಾತ್ಕಾಲಿಕ ಸಂಚಾರಿ ವಾಹನಗಳನ್ನು ಕಲ್ಪಿಸಿದೆ ಎಂದು ಮಂಡಳಿ ತಿಳಿಸಿದೆ.

ಈ ಕುರಿತು ನೀಡಿರುವ ಪ್ರಕಟಣೆಯಲ್ಲಿ, ಗಣೇಶ ಮೂರ್ತಿಗಳನ್ನು ವಿವಿಧ ಜಲಮೂಲಗಳಲ್ಲಿ ವಿಸರ್ಜಿಸಿ ಪರಿಸರ ಹಾಗೂ ಜಲಮೂಲಗಳಲ್ಲಿ ಆಗುವ ಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲಾಗಿದೆ.

ಸಾರ್ವಜನಿಕ ಹಿತದೃಷ್ಟಿ ಹಾಗೂ ಪರಿಸರ ರಕ್ಷಣೆಯ ಹಿನ್ನೆಲೆಯಲ್ಲಿ ಸಾರ್ವಜನಿಕರ ಸಹ ಬಾಗಿತ್ವದೊಂದಿಗೆ ಮಾಡಿರುವ ಸಂಚಾರಿ ವಿಸರ್ಜನಾ ವಾಹನಗಳನ್ನು ಬಳಸಿಕೊಂಡು ಗಣೇಶ ವಿಗ್ರಹಗಳನ್ನು ವಿಸರ್ಜಿಸಬೇಕು. ಹುಬ್ಬಳ್ಳಿ ಹಾಗೂ ಧಾರವಾಡದಲ್ಲಿ ಪ್ರತ್ಯೇಕವಾಗಿ ಸಂಚಾರಿ ವಿಸರ್ಜನಾ ವಾಹನಗಳನ್ನು ವ್ಯವಸ್ಥೆ ಮಾಡಲಾಗಿದೆ.

ಧಾರವಾಡ ನಗರದ ಗಾಂಧಿನಗರ, ಮಾಳಮಡ್ಡಿ, ರಾಯರಮಠ ಹಾಗೂ ಹೊಸಯಲ್ಲಾಪುರ ಪ್ರದೇಶಗಳಲ್ಲಿ ಸೆಪ್ಟೆಂಬರ್ 11 ರ ಬುಧವಾರದಂದು ಸಂಜೆ 5.30 ಗಂಟೆಯಿಂದ ರಾತ್ರಿ 9.30 ಗಂಟೆಯವರೆಗೆ ಸಂಚಾರಿ ವಿಸರ್ಜನಾ ವಾಹನ ಈ ಮಾರ್ಗದಲ್ಲಿ ಸಂಚರಿಸಲ್ಲಿದೆ.

ಈ ಸಂಚಾರಿ ವಿಸರ್ಜನಾ ವಾಹನಗಳ ಸದುಪಯೋಗ ಮಾಡಿಕೊಂಡು ಸಾರ್ವಜನಿಕರು ತಮ್ಮ ಮನೆಯ ಗಣಪನ್ನು ತಾತ್ಕಾಲಿಕ ಟ್ಯಾಂಕರ್ ವಾಹನಗಳಲ್ಲಿ ವಿಸರ್ಜಿಸಬೇಕು ಮತ್ತು ಈ ಮೂಲಕ ಸಂಚಾರಿ ದಟ್ಟಣೆ, ಪರಿಸರ ಮಾಲಿನ್ಯ, ಜಲಮಾಲಿನ್ಯಗಳನ್ನು ತಪ್ಪಿಸುವ ಮೂಲಕ ಸಹಕಾರ ನೀಡಬೇಕೆಂದು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಹಿರಿಯ ಪರಿಸರ ಅಧಿಕಾರಿ ಜಗದೀಶ ಐ.ಎಚ್. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಆಕರ್ಷಿಸಿದ ಮಂಗಲ ಮೂರ್ತಿ

ಜಿಲ್ಲೆಯಲ್ಲಿ ಒಟ್ಟೂ 1480 ಸಾರ್ವಜನಿಕ ಗಣೇಶ ಪ್ರತಿಷ್ಠಾಪನೆ | ಹಲವು ಕಡೆ ರೂಪಕ ಪ್ರದರ್ಶನ

ಗದಗ: ಕಳೆದ ವರ್ಷ ಮಳೆ ಇಲ್ಲದೆ ಅನಾವೃಷ್ಟಿಯಿಂದ ಬರಗಾಲಕ್ಕೆ ತುತ್ತಾಗಿದ್ದರಿಂದ ಹಬ್ಬಕ್ಕೆ ಅದ್ದೂರಿತನ ಕಡಿಮೆಯಾಗಿತ್ತು. ಆದರೆ ಗಣೇಶೋತ್ಸವ ಈ ಭಾರಿ ಬಹಳ ವಿಜೃಂಭಣೆಯಿಂದ ನಡೆಯುತ್ತಿದೆ.

ಇನ್ನೂ ವಿಘ್ನನಿವಾರಕ ಎಲ್ಲ ಮನೆ ಸೇರಿದಂತೆ ಗಲ್ಲಿಗಳಲ್ಲಿ ಪ್ರತಿಷ್ಠಾಪಿತನಾಗಿದ್ದು, ಎಲ್ಲೆಡೆ ಗಣೇಶ ಹಬ್ಬದ ಸಡಗರ ಸಂಭ್ರಮ ಮನೆ ಮಾಡಿದೆ. ಗಲ್ಲಿ ಗಲ್ಲಿಗಳಲ್ಲೂ ಈ ಬಾರಿ ಗಣೇಶನನ್ನು ಪ್ರತಿಷ್ಠಾಪನೆ ಮಾಡಿ ಭರ್ಜರಿಯಾಗಿ ಗಣೇಶ ಹಬ್ಬ ಆಚರಿಸಲಾಗುತ್ತಿದೆ. ಆದರೆ ಈ ಬಾರಿ ಹಣ್ಣು, ಹಂಪಲ, ಹೂವು ಕಾಯಿ ಬೆಲೆ ಗಗನಕ್ಕೇರಿದ್ದು ಹಬ್ಬದ ಸಂಭ್ರಮಕ್ಕೆ ಬರೆ ಎಳೆದಂತಾಗಿದೆ. ಸಾರ್ವಜನಿಕ ಸ್ಥಳದಲ್ಲಿ ಪ್ರತಿಷ್ಠಾಪನೆ ಮಾಡಲಾಗಿರುವ ವಿವಿಧ ರೂಪದ, ಆಕಾರದ ಗಣೇಶ ಮೂರ್ತಿಗಳು ಜನರನ್ನು ಆಕರ್ಷಿಸುತ್ತಿವೆ.

ಗದಗ ನಗರದಲ್ಲಿ ಗಣೇಶ ಹಬ್ಬದ ಸಂಭ್ರಮಕ್ಕೇನು ಕಡಿಮೆಯಿಲ್ಲ. ಸಾರ್ವಜನಿಕ ಗಣೇಶ ಪ್ರತಿಷ್ಠಾಪನೆ ಮಾಡಿರುವ ಯುವಕರು ವಿವಿಧ ಗಜಾನನ ಮಂಡಳಿಯವರು ಗಣೇಶ ಹಬ್ಬದ ಸಂಭ್ರಮದಲ್ಲಿ ತೊಡಗಿದ್ದಾರೆ.

ಜಿಲ್ಲೆಯ ವಿವಿಧ ನಗರ, ಪಟ್ಟಣ, ಗ್ರಾಮಗಳಲ್ಲಿ ಒಟ್ಟು 1480 ಸಾರ್ವಜನಿಕ ಗಣೇಶ ಪ್ರತಿಷ್ಠಾಪನೆ ಮಾಡಲಾಗಿದ್ದು, ಇದರಲ್ಲಿ ಅತಿ ಸೂಕ್ಷ್ಮ 80, ಸೂಕ್ಷ್ಮ 340, ಸಾಧಾರಣ 1060 ಎಂದು ಪೊಲೀಸ್ ಇಲಾಖೆಯಿಂದ ಗುರುತಿಸಲಾಗಿದ್ದು, ಪೊಲೀಸ್ ಇಲಾಖೆಯು ಯಾವುದೇ ಅಹಿತಕರ ಘಟನೆಗಳು ನಡೆಯಂತೆ ಕ್ರಮ ಕೈಗೊಂಡಿದ್ದು, ಇಲಾಖೆಯಿಂದ ಪೂರ್ವಭಾವಿ ಸಭೆಯನ್ನು ಸಹ ಮಾಡಲಾಗಿದೆ. ಅದಲ್ಲದೆ ಪರಿಸರ ಸ್ನೇಹಿ ಗಣೇಶ ಹಬ್ಬ ಆಚರಣೆಗೆ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ

ಲಕ್ಷ್ಮೇಶ್ವರ ಪಟ್ಟಣದ ಹಾವಳಿ ಹನಮಂತ ದೇವಸ್ಥಾನದ ಮುಂದೆ ಪ್ರತಿಷ್ಠಾಪನೆ ಮಾಡಿರುವ 21 ಅಡಿ ಗಣೇಶ ಮೂರ್ತಿ.

ಹಾಗೂ ಏಕ ಗವಾಕ್ಷಿ ಸಮಿತಿ ರಚನೆ ಮಾಡಲಾಗಿದೆ. ಗದಗ ಬೆಟಗೇರಿ ನಗರದಲ್ಲಿ 500ಕ್ಕೂ ಹೆಚ್ಚು ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡಲಾಗಿದ್ದು, ಗದಗ ಹಾಗೂ ಲಕ್ಷ್ಮೇಶ್ವರ ಸೇರಿ ಅನೇಕ ನಗರ ಬೃಹತ್ ಆಕಾರದ ಮೂರ್ತಿ ಹಾಗೂ ಪರಿಸರ ಸ್ನೇಹಿ ಗಣೇಶ ಪ್ರತಿಷ್ಠಾಪನೆ ಮಾಡಿದ್ದು,. ಮನೆ ಮನೆಗಳಲ್ಲಿ ಗಣೇಶ ಪ್ರತಿಷ್ಟಾಪನೆ ಬಗ್ಗೆ ಲೆಕ್ಕವೇ ಇಲ್ಲ ಈ ಬಾರಿ ಪಿಒಪಿ ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಬ್ರೇಕ್ ಹಾಕಲಾಗಿದೆ.

ಗಜಾನನ ಮಂಡಳಿಯವರು ಯುವಪಡೆಗೆ ಹುರುಪು ತುಂಬವ ಉದ್ದೇಶ, ಜೊತೆಗೆ ಧಾರ್ಮಿಕತೆ ಭಕ್ತಿ ಹಿಂದು ಧರ್ಮ ರಕ್ಷಣೆ ಹೆಸರಲ್ಲಿ ಗಣೇಶನನ್ನು ಪ್ರತಿಷ್ಠಾಪನೆ ಮಾಡಲಾಗುತ್ತಿದೆ. ಗಜಾನನ ಸಂಘದ ಗಣೇಶನನ್ನು ಪ್ರತಿಷ್ಟಾಪನೆ ಮಾಡಿ ಪ್ರತಿ ವರ್ಷ ಗಣೇಶ ಉತ್ಸವವನ್ನು ಭರ್ಜರಿಯಾಗಿ ಮೆರವಣಿಗೆ ಮಾಡಿ ಕುಣಿದು ಕುಪ್ಪಳಿಸಿ ವಿಸರ್ಜನೆ ಮಾಡುತ್ತಾರೆ.

ಜಿಲ್ಲೆಯ ಶಹರ ಹಾಗೂ ಗ್ರಾಮದ ಗಜಾನನ ಉತ್ಸವ ಸಮಿತಿ ಹೆಸರಲ್ಲಿ ಪ್ರತಿ ವರ್ಷ ಐದು ದಿನಗಳ ಕಾಲ ಸಂಘದ ಗಣೇಶನನ್ನು ಪ್ರತಿಷ್ಠಾಪನೆ ಮಾಡಿ ಪೂಜೆ ಪುನಸ್ಕಾರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ. ಕೆಲವು ಕಡೆ ಕೇವಲ ಗಣೇಶ ಉತ್ಸವಕ್ಕಾಗಿ ಮಾತ್ರವಲ್ಲದೇ ಹಿಂದು ಧರ್ಮದ ರಕ್ಷಣಾ ಕೆಲಸ ಮಾಡಲಾಗುತ್ತಿದೆ. ಪ್ರತಿ ದಿನವೂ ಪೂಜೆ ಪ್ರಾರ್ಥನೆ ಭಜನೆ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ.

ಗದಗ ನಗರದ ಎಪಿಎಂಸಿ ಆವರಣದಲ್ಲಿ ವಿಶೇಷವಾಗಿ ಗಣೇಶ ಹಬ್ಬ ಆಚರಣೆ ಮಾಡಲಾಗಿದ್ದು, 1008 ಮೋದಕ ವಿತರಣೆ ಹಾಗೂ ಗಣೇಶ ಮೂರ್ತಿ ಪ್ರತಿಷ್ಠಾಪನೆ ಸಮಯದಲ್ಲಿ ಗೋವು ಪೂಜೆ ಮಾಡಿದ್ದಾರೆ.

ಜಿಲ್ಲೆಯಲ್ಲಿ ಪ್ರತಿ ವರ್ಷ ಕೆಲವು ಐದು ದಿನ, ಏಳು ದಿನ, ಒಂಬತ್ತು ದಿನ ಸೇರಿ 21 ದಿನದವರೆಗೆ ಸಾರ್ವಜನಿಕ ಗಣೇಶ ಮೂರ್ತಿ ವಿಸರ್ಜನೆ ಅದ್ದೂರಿಯಾಗಿ ಮಾಡುತ್ತಾರೆ. ಬೃಹತ್ತಾಕರಾದ ಸಾರ್ವಜನಿಕ ಗಣಪಗಳನ್ನು ಪ್ಲಾಸ್ಟರ್ ಆಪ್ ಪ್ಯಾರಿಸ್ ಮೂಲಕ ತಯಾರಿ ಮಾಡಲಾಗುತ್ತಿತ್ತು. ಇದಕ್ಕೆ ಕಳೆದ ಎರಡು ವರ್ಷಗಳಿಂದ ಸಂಪೂರ್ಣ ಬ್ರೇಕ್ ಹಾಕಲಾಗಿದ್ದು, ಪರಿಸರ ಸ್ನೇಹಿ ಗಣೇಶ ಮೂರ್ತಿ ಮಾಡಲಾಗುತ್ತಿದೆ ಎತ್ತರದ ಗಣಪಗಳನ್ನು ಮಣ್ಣಿನಿಂದ ತಯಾರಿಸೋದು ಅಷ್ಟು ಸುಲಭವಲ್ಲ. ಆದರೆ ಬೃಹತ್ ಗಣೇಶ ಮೂರ್ತಿಗಳನ್ನು ಜೇಡಿ ಮಣ್ಣಿನಿಂದಲೇ ತಯಾರು ಮಾಡಲಾಗುತ್ತಿದೆ. ಇಂತಹ ಮೂರ್ತಿಗಳು ಗದಗ ಬೆಟಗೇರಿ ಹಾಗೂ ಲಕ್ಷ್ಮೇಶ್ವರ ನಗರದಲ್ಲಿ ಹೆಚ್ಚು ಸುಮಾರು 21 ಅಡಿ ಎತ್ತರದ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಲಾಗಿದೆ.

ಗದಗ ನಗರದ ಹಿಂದೂ ಮಹಾ ಗಣಪತಿ, ಕೆ. ಎಚ್ .ಪಾಟೀಲ್ ವೃತ್ತದ ಬಳಿ, ಲಕ್ಷ್ಮೇಶ್ವರದ ಹಾವಳಿ ಹನಮಂತ ದೇವಸ್ಥಾನ 21 ಅಡಿ, ಹಾಗೂ ಸೊಪ್ಪಿನಕೆರೆ 19 ಅಡಿ ಗಣೇಶ ಪ್ರತಿಷ್ಠಾಪನೆ ಮಾಡಲಾಗಿದೆ. ಅದಲ್ಲದೆ ಜಿಲ್ಲೆಯ ರೋಣ, ಗಜೇಂದ್ರಗಡ, ನರಗುಂದ, ಮುಂಡರಗಿ, ಶಿರಹಟ್ಟಿ ಸೇರಿ ಅನೇಕ ಗ್ರಾಮಗಳಲ್ಲಿಯೂ ಪರಿಸರ ಸ್ನೇಹಿ ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಮಾಡಲಾಗಿದೆ.

ಗದಗ ಜಿಲ್ಲೆಯಲ್ಲಿ ಎಲ್ಲಾ ಸಾರ್ವಜನಿಕ ಗಣೇಶ ಮೂರ್ತಿಗಳನ್ನು 9 ದಿನಗಳಲ್ಲಿ ಅದ್ದೂರಿಯಾಗಿ ವಿಸರ್ಜನೆ ಮಾಡಲು ತೀರ್ಮಾನ ಕೈಗೊಳ್ಳಲಾಗಿದೆ. ಗಜಾನನ ಮಂಡಳಿಯ ಸದಸ್ಯರ ಸಭೆ ಸೇರಿ ಮನವಿ ಮಾಡಲಾಗಿದೆ.

-ರಾಜಣ್ಣ ಮಲ್ಲಾಡದ
ಗಜಾನನ ಮಂಡಳಿ ಜಿಲ್ಲಾ ಅಧ್ಯಕ್ಷರು.

ಆತ್ಮಹತ್ಯೆ ತಡೆಗಟ್ಟುವ ದಿನ ಆಚರಣೆ ಇಂದು

ಧಾರವಾಡ: ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆ, ಭಾರತೀಯ ಮನೋವೈದ್ಯಕೀಯ ಸಂಘ, ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ, ವಿದ್ಯಾಗಿರಿಯ ಜನತಾ ಶಿಕ್ಷಣ ಸಮಿತಿ, ಸೃಷ್ಠಿ ವಿಜ್ಞಾನ ಪದವಿಪೂರ್ವ ಕಾಲೇಜು, ಕೆ.ಇ.ಬೋರ್ಡ್ ಪದವಿಪೂರ್ವ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸ್ವಾಮಿ ವಿವೇಕಾನಂದ ಯೂತ್ ಮೂವ್ ಮೆಂಟ್‌ನ ಸಹಯೋಗದಲ್ಲಿ ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆಯ ಅಂಗವಾಗಿ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಸೆಪ್ಟೆಂಬರ್ 10, 2024 ರಂದು ಬೆಳಿಗ್ಗೆ 11 ಗಂಟೆಗೆ ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಬೆಂಗಳೂರಿನ ಸಮಾಧಾನ ಆಪ್ತಸಮಾಲೋಚನೆ ಕೇಂದ್ರ, ಸಂಸ್ಥಾಪಕರು ಹಾಗೂ ನಿಮ್ಹಾನ್ಸ ಮನೋವೈದ್ಯಕೀಯ ವಿಭಾಗದ ನಿವೃತ್ತ ಪ್ರಾಧ್ಯಾಪಕ ಮತ್ತು ಪದ್ಮಶ್ರೀ ಪುರಸ್ಕೃತರಾದ ಪ್ರೊ. ಡಾ. ಸಿ.ಆರ್. ಚಂದ್ರಶೇಖರ ಅವರು ಕಾಯರ್ಕ್ರಮದಲ್ಲಿ ಭಾಗವಹಿಸುವರು.

ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆಯ ನಿರ್ದೇಶಕ ಡಾ.ಅರುಣಕುಮಾರ.ಸಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಕರ್ನಾಟಕ ಶಾಖೆಯ ಭಾರತೀಯ ಮನೋವೈದ್ಯಕೀಯ ಸಂಘ ಹಾಗೂ ಗದಗ ವಿಜ್ಞಾನಗಳ ಸಂಸ್ಥೆಯ ಮನೋವೈದ್ಯಕೀಯ ವಿಭಾಗದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥ ಡಾ. ಸೋಮಶೇಖರ ಜಿಜ್ಜಳ, ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಡಾ. ಡಿ.ಷಣ್ಮುಖ, ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ. ರಾಘವೇಂದ್ರ ನಾಯಕ ಮತ್ತು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಹಾಗೂ ರಾಜ್ಯ ಪ್ರಶಸ್ತಿ ಪುರಸ್ಕೃತ ವೈದ್ಯರು, ಹೆಬ್ಬಳ್ಳಿ ಹಾಗೂ ನಿರ್ವಹಣಾ ಸಮಿತಿ ಸದಸ್ಯ ಡಾ. ವಿ. ಎಮ್. ದೇಶಪಾಂಡೆ ಅವರು ಕಾರ್ಯಕ್ರಮದಲ್ಲಿ ಭಾಗ ವಹಿಸುವರೆಂದು ಪ್ರಕಟಣೆ ತಿಳಿಸಿದೆ.

ಕೊಡುವುದನ್ನು ಕಲಿಯೋಣ..

ನಮಗೆ ಸದಾ ನಮ್ಮ ಬೇಕುಗಳದ್ದೇ ಚಿಂತೆ. ಎಲ್ಲವೂ ಇದ್ದರೂ ಇನ್ನು ಬೇಕು ಬೇಕು ಎಂಬ ಮಂತ್ರವನ್ನು ಜಪಿಸುತ್ತಲೇ ಇರುತ್ತೇವೆ. ಬಯಸಿದ ಒಂದು ವಸ್ತು ದೊರಕಿದರೆ ಕ್ಷಣಕಾಲ ಸಂತಸ ಪಡುತ್ತೇವೆ. ಅದಾದ ಕ್ಷಣಮಾತ್ರದಲ್ಲಿಯೇ ಮತ್ತೆ ಮನಸ್ಸು ಮತ್ತೊಂದಕ್ಕೆ ಬೇಡಿಕೆಯನ್ನು ಮಂಡಿಸುತ್ತದೆ. ಅದು ಸಿಕ್ಕರೆ ಮತ್ತದೇ ಕ್ಷಣ ಕಾಲ ಸಂತಸ. ಸಿಗದಿದ್ದರೆ ನೋವು ನಿರಾಸೆ. ಇದರ ಮಧ್ಯದಲ್ಲಿ ನಾವು ಕೊಡುವುದನ್ನು ಮರತೇಬಿಡುತ್ತೇವೆ. ನಿಜವಾದ ಆನಂದ ಪಡೆಯುದಕ್ಕಿಂತ ಕೊಡುವುದರಲ್ಲಿಯೇ ಇದೆ ಎಂಬ ವಾಸ್ತವಿಕತೆ ನಮಗೆ ಅರ್ಥವಾಗುವುದೇ ಇಲ್ಲ.

ಹಾಗಾಂತ ಬೇಕಾಬಿಟ್ಟಿಯಾಗಿ ಕೊಡುವುದರಲ್ಲಿಯೂ ಯಾವುದೇ ಅರ್ಥವಿಲ್ಲ. ನಮ್ಮ ಕೊಡುವಿಕೆ ಇತರರ ಬೇಕು-ಬೇಡಿಕೆಗಳನ್ನು ಪೂರೈಸುವಂತಿರಬೇಕು. ಪಡೆದುಕೊಂಡವರಲ್ಲಿ ಒಂದಷ್ಟು ತೃಪ್ತಭಾವ ಮೂಡಬೇಕು. ಕೊಡುವ ವಸ್ತುವಿನ ಬೆಲೆಯಾಗಲಿ, ಪರಿಮಾಣವಾಗಲಿ ಇಲ್ಲಿ ಮುಖ್ಯವಲ್ಲ. ಕೊಡುವುದರ ಹಿಂದೆ ಸ್ವಾರ್ಥದ ಭಾವ ಸುಳಿಯದಂತಿರಬೇಕು.

ಶ್ರೀಕೃಷ್ಣನ ಬಾಲ್ಯ ಸ್ನೇಹಿತ ಸುಧಾಮ ಬಡವ. ಒಪ್ಪತ್ತಿನ ಊಟಕ್ಕೂ ಪರದಾಡುವ ಸ್ಥಿತಿ. ಶ್ರೀಕೃಷ್ಣನ್ನು ಕಾಣಲು ನಿರ್ಧರಿಸಿದ. ಆದರೆ ಬರೀಗೈಲಿ ಹೋಗುವುದೆಂತು ಎಂಬ ಚಿಂತೆ. ತನ್ನಲ್ಲಿದ್ದ ಮುಷ್ಟಿಯಷ್ಟು ಅವಲಕ್ಕಿಯನ್ನು ಮಾತ್ರ ತೆಗೆದುಕೊಂಡು ಹೋಗಿದ್ದ. ಪರಿಶುದ್ಧ ಪ್ರೀತಿಯ ಭಾವದಿಂದ ಅದನ್ನು ಶ್ರೀಕೃಷ್ಣನಿಗೆ ಕೊಟ್ಟಿದ್ದ. ಶ್ರೀಕೃಷ್ಣ ಅತ್ಯಂತ ಪ್ರೀತ್ಯಾದರದಿಂದ ಸ್ವೀಕರಿಸಿದ್ದ. ಶ್ರೀಕೃಷ್ಣ ತುಂಬ ಸಂಭ್ರಮ ಪಟ್ಟಿದ್ದ. ನಂತರದ ದಿನಗಳಲ್ಲಿ ಸುಧಾಮನ ಬದುಕಿನಲ್ಲಾದ ಬದಲಾವಣೆಯ ಕಥೆ ನಮಗೆ ಗೊತ್ತಿರುವಂತದ್ದೇ.

ನಾವು ಇತರರಿಗೆ ಕೊಟ್ಟಾಗ ಒಂದಷ್ಟು ಖಾಲಿತನ ಸೃಷ್ಟಿಯಾಗುತ್ತದೆ ಎಂಬುದು ನಿಜವಾದರೂ ನಮಗೆಲ್ಲ ಗೊತ್ತಿರುವಂತೆ ಖಾಲಿತನದತ್ತ ಸೆಳೆತವಿರುವುದು ಪ್ರಕೃತಿಯ ನಿಯಮವೇ ಆಗಿದೆ. ಕೊಟ್ಟಿದ್ದಕ್ಕಿಂತ ಹೆಚ್ಚಿಗೆ ಹರಿದು ಬರುವುದು ಸತ್ಯ ಎಂಬ ಮಾತನ್ನು ಕೃಷ್ಣ-ಸುಧಾಮರ ಕಥೆ ಮತ್ತೆ ಮತ್ತೆ ಸಾಕ್ಷೀಕರಿಸುತ್ತಲೇ ಇರುತ್ತದೆ. ನಿರೀಕ್ಷೆಯನ್ನು ಹೊತ್ತಿರುವ ಕೊಡುಗೆ ನಿರಾಸೆಗೆ ಕಾರಣವಾಗುತ್ತದೆ. ಹಾಗಾಗಿ ನಮ್ಮ ಕೊಡುಗೆಗಳು ಪ್ರಾಮಾಣಿಕವಾಗಿರಬೇಕು. ಅದರಲ್ಲಿ ಕಾಳಜಿ, ಪ್ರೀತಿ ಹೃದಯ ವೈಶಾಲ್ಯತೆ ಇರಬೇಕು. ದಾಸೋಹಭಾವದಿಂದ ಕೂಡಿರಬೇಕು. ಕೊಡುಗೆಗಳು ನಮ್ಮನ್ನು ಅರಸಿ ಬಂದಾಗ ಧನ್ಯತೆಯಿಂದ ಸ್ವೀಕರಿಸೋಣ. ಬರದಿರುವಾಗ ಕಳವಳಕ್ಕೀಡಾಗದಿರೋಣ. ಇಂತಹ ನಮ್ಮ ನಡೆ ನಮಗೆ ಮತ್ತು ನಮ್ಮ ಸುತ್ತಲಿನವರಿಗೆ ಸಂತಸವನ್ನು ಉಟುಮಾಡಬಲ್ಲದು.

● ಮಹಾದೇವ ಬಸರಕೋಡ

ಪ್ರಥಮ ಪೂಜಿತ

ಗಣಪನ ಏಕೆ ಪ್ರಥಮ ಪೂಜೆ
ಎಂದು ಯೋಚಿಸಿತು ಮನ
ಚಂಚಲತೆಯನ್ನು ಮೆಟ್ಟಿ ನಿಂತು
ಇಲಿಯನ್ನು ಸವಾರಿ ಮಾಡಿದನೆಂದೆ
ಮಹಾಬಲಿ ದೈತ್ಯ ದಶಕಂಠನಿಂದ
ಆತ್ಮಲಿಂಗ ರಕ್ಷಿಸಿದನೆಂದೆ
ಚುರುಕು ಬುದ್ಧಿಯಿಂದ ಬಂದ
ದುರಿತಗಳನ್ನು ದೂರ ಮಾಡುವವನೆಂದೆ
ಮತ್ತೆ ಪಾರ್ವತಿಯ ಮಮತೆ
ಪ್ರೀತಿ ಧಾರೆ ಎರೆದು ಜನಿಸಿದವನೆಂದೇ
ಇವೆಲ್ಲಕ್ಕಿಂತ ಇನ್ನೊಂದು ಇದೆ
ಎಂದು ಹೇಳಿತು ಮನ
ತಂದೆ ತಾಯಿಯರೇ ಜಗತ್ತು
ಅವರ ಮುಂದೆ ಇಲ್ಲ ಯಾವುದು ಹೆಚ್ಚು
ಎಂದು ನಂಬಿದವರು ಜಗದ್ವಂದ್ಯರು
ಮೊದಲು ತೋರಿಸಿಕೊಟ್ಟ ಗಣೇಶ
ಪ್ರಥಮ ಪೂಜಿತ

● ಲಕ್ಷ್ಮೀದೇವಿ ಪತ್ತಾರ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ
ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ
ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine@gmail.com

@vishwavaninews
ವಿಶ್ವವಾಣಿ ಆರಾಮ
ಬೆಂಗಳೂರು ಮಂಗಳವಾರ 10|09|2024
ಅನುದಿನವೂ ವಿರಾಮಕ್ಕೆ ಒಂದು ನೆಪ

ಕಲ್ಯಾಣ ಕರ್ನಾಟಕ ಪ್ರದೇಶದ ಹಲವು ಅಭಿವೃದ್ಧಿ ಕೆಲಸಗಳಲ್ಲಿ ಮತ್ತು ಸಮಾಜಮುಖಿ ಸೇವೆಗಳಲ್ಲಿ ಇವರ ಕೊಡುಗೆಗಳು ಹಾಸು ಹೊಕ್ಕಾಗಿವೆ. ಎರಡು ದಶಕಗಳ ಹಿಂದೆ ಬಸವಕಲ್ಯಾಣ ಕ್ಷೇತ್ರದ ಶಾಸಕರಾಗಿ, ಡಾ. ಮುಳೆಯವರು ಶಿಕ್ಷಣ, ಸಂವಹನ, ನೀರಾವರಿ, ಕೃಷಿ, ಗ್ರಾಮೀಣ ಗೃಹ ನಿರ್ಮಾಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ವಿಶೇಷವಾಗಿ ಕೆಲಸ ಮಾಡಿದ್ದನ್ನು ಅಲ್ಲಿಯ ಜನ ಇಂದಿಗೂ ಕೃತಜ್ಞತೆಯಿಂದ ಸ್ಮರಿಸುತ್ತಾರೆ.

ಕಲ್ಯಾಣ ಕರ್ನಾಟಕದ ಸಿದ್ಧಿ ಪುರುಷ ಡಾ. ಎಂ.ಜಿ. ಮುಳೆ

● ರಾಜು ಅಡಕಳ್ಳಿ

ರಾಜಕಾರಣದಲ್ಲಿ ಇಂದು ಸಜ್ಜನ, ಪ್ರಾಮಾಣಿಕ ಮತ್ತು ಭ್ರಷ್ಟತೆಯಿಲ್ಲದ ಮುಖಂಡ ಎಂದು ಕೆಲವರಿಗೆ ಸಂಬೋಧಿಸಿದರೆ ಅದು ನಗೆ ಪಾಟಲಾಗುತ್ತದೆ. ಆದರೆ ಬಸವಕಲ್ಯಾಣದ ಶಾಂತ ಸ್ವರೂಪಿಯಂತಿರುವ ಎಂ.ಎಲ್.ಸಿ. ಡಾ. ಎಂ.ಜಿ. ಮುಳೆಯವರಿಗೆ ಒಟ್ಟರ್ಥದಲ್ಲಿ ಸಜ್ಜನ ಮತ್ತು ಮುತ್ಸದ್ದಿ ಎಂದು ಖಂಡಿತವಾಗಿಯೂ ಕರೆಯಬಹುದು. ಅವರು ದೀರ್ಘ ಕಾಲ ರಾಜಕಾರಣದಲ್ಲಿದ್ದರೂ ತಮ್ಮ ವ್ಯಕ್ತಿತ್ವವನ್ನು ರಾಡಿ ಗೊಳಿಸಿಕೊಂಡಿಲ್ಲ. ಹಣದ ಆಸೆಗೆ ಬಿದ್ದು ಎಲ್ಲಿಯೂ ಹಗರಣಗಳಲ್ಲಿ ಸಿಲುಕಿಕೊಂಡಿಲ್ಲ. ಈ ಮುಳೆಯವರ ಮೈಯಲ್ಲಿ ಹೇಗೆ ಮೂಳೆಗಳು ಹಾಸು ಹೊಕ್ಕಾಗಿವೆಯೋ, ಹಾಗೆಯೇ ಇವರ ವ್ಯಕ್ತಿತ್ವದ ತುಂಬಾ ಸಮಾಜ ಮುಖಿ ಸೇವೆಗಳೇ ತುಂಬಿಕೊಂಡಿರುವುದು ವಿಶೇಷ.

ಡಾ. ಮುಳೆಯವರು 20 ವರ್ಷಗಳ ಹಿಂದೆ ಬೀದರ್ ಜಿಲ್ಲೆಯ ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಒಮ್ಮೆ ಶಾಸಕರಾಗಿದ್ದರು. ಇತ್ತೀಚೆಗಷ್ಟೇ ಇವರು ವಿಧಾನ ಪರಿಷತ್ತಿಗೆ ಆಯ್ಕೆಯಾಗುವ ಮೂಲಕ ಆ ಹಿರಿಯರ ಮನೆಗೆ ಪ್ರಶಸ್ತ ಪ್ರತಿನಿಧಿ ಎಂದೆನ್ನಿಸಿಕೊಂಡಿರುವುದಂತೂ ನಿಜ. ಕಾರಣ ಹಿರಿತನದಲ್ಲೂ ಇವರು ಕಡಿಮೆಯೇನಿಲ್ಲ.

ಡಾ. ಮುಳೆಯವರ ಕರ್ಮಭೂಮಿ ಮುಖ್ಯವಾಗಿ ಉತ್ತರ ಕರ್ನಾಟಕ ಅದರಲ್ಲೂ ವಿಶೇಷವಾಗಿ ಕಲ್ಯಾಣ ಕರ್ನಾಟಕ. ಕಲ್ಯಾಣ ಕರ್ನಾಟಕ ಪ್ರದೇಶದ ಹಲವು ಅಭಿವೃದ್ಧಿ ಕೆಲಸಗಳಲ್ಲಿ ಮತ್ತು ಸಮಾಜಮುಖಿ ಸೇವೆಗಳಲ್ಲಿ ಇವರ ಕೊಡುಗೆಗಳು ಹಾಸು ಹೊಕ್ಕಾಗಿವೆ. ಎರಡು ದಶಕಗಳ ಹಿಂದೆ ಬಸವಕಲ್ಯಾಣ ಕ್ಷೇತ್ರದ ಶಾಸಕರಾಗಿ, ಡಾ. ಮುಳೆಯವರು ಶಿಕ್ಷಣ, ಸಂವಹನ, ನೀರಾವರಿ, ಕೃಷಿ, ಗ್ರಾಮೀಣ ಗೃಹ ನಿರ್ಮಾಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ವಿಶೇಷವಾಗಿ ಕೆಲಸ ಮಾಡಿದ್ದನ್ನು ಅಲ್ಲಿಯ ಜನ ಇಂದಿಗೂ ಕೃತಜ್ಞತೆಯಿಂದ ಸ್ಮರಿಸುತ್ತಾರೆ.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಿಧಿಗಳನ್ನು ಸಮರ್ಪಕವಾಗಿ ಬಳಸಿಕೊಂಡು, ತಮ್ಮ ಕ್ಷೇತ್ರದಲ್ಲಿ ಹಲವಾರು ನೂತನ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಇವರು ಆಗ ಯಶಸ್ವಿ ಜನಪ್ರತಿನಿಧಿ ಎಂಬ ಪ್ರಸಿದ್ಧಿಗೆ ಪಾತ್ರರಾಗಿದ್ದರು.

ಬಸವ ಕಲ್ಯಾಣವು ಜಗಜ್ಯೋತಿ ಬಸವೇಶ್ವರರ ಪುಣ್ಯಭೂಮಿ. ಹೀಗಾಗಿ ಸಹಜವಾಗಿಯೇ ಮುಳೆಯವರು ಅಲ್ಲಿಯ ಶರಣ ತತ್ವದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಹಿರಿಮೆ ಗರಿಮೆಗಳನ್ನು ಉಳಿಸಿ, ಪ್ರಚಾರ ಮಾಡುವುದಕ್ಕೆ ಅನುಕೂಲವಾಗುವಂತೆ ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ ಅಸ್ತಿತ್ವಕ್ಕೆ ಬರಲು ಸ್ವತಹ ರೂವಾರಿಯಾದರು.

ಮುಂದೆ ಸುಮಾರು 610 ಕೋಟಿ ರೂಪಾಯಿಗಳ ಅನುದಾನದೊಂದಿಗೆ ಅನುಭವ ಮಂಟಪದ ನಿರ್ಮಾಣ ಕಾರ್ಯಕ್ಕೂ ಇದರಿಂದಾಗಿ ವರದಾನವಾಯಿತು.

ಮರಾಠಾ ಸಮುದಾಯದ ಪ್ರಮುಖ ನಾಯಕರಾಗಿಯೂ ಡಾ. ಮುಳೆಯವರ ಕೊಡುಗೆ ಅನನ್ಯ. ಕರ್ನಾಟಕ ಮರಾಠಾ ಸಮುದಾಯಗಳ ಅಭಿವೃದ್ಧಿ ನಿಗಮದ ಪ್ರಥಮ ಅಧ್ಯಕ್ಷರಾಗಿ ಇವರು ಪ್ರಮುಖ ಪಾತ್ರ ವಹಿಸಿದ್ದರು. ಮರಾಠಾ ಸಮುದಾಯದವರ ಹಿತರಕ್ಷಣೆಗಾಗಿ ಇವರು ನಡೆಸುತ್ತಿರುವ ಹೋರಾಟಗಳು ಇನ್ನೂ ನಿಂತಿಲ್ಲ. 2- ಎ ಮೀಸಲು ಸೌಲಭ್ಯಗಳನ್ನು ಇವರಿಗೆ ದೊರಕಿಸಿ ಕೊಡಬೇಕೆಂದು ಇವರು ಹಲವು ಬಗೆಯಲ್ಲಿ ಹೋರಾಟ ನಡೆಸುತ್ತಲೇ ಇದ್ದಾರೆ.

ಶಿವಾಜಿ ಪ್ರತಿಮೆ ಸ್ಥಾಪನೆ

ರಾಜ್ಯದಲ್ಲಿ ಪ್ರಸ್ತುತ 50 ಲಕ್ಷದಷ್ಟು ಮಂದಿ ಈ ಸಮುದಾಯದವರಿದ್ದಾರೆ. ತಮ್ಮ ಹಿತಾಸಕ್ತಿಗೆ ಸದಾಕಾಲ ಸ್ಪಂದಿಸುವ ಮುಳೆಯವರಿಂದ ಸಹಜವಾಗಿಯೇ ಅವರು ಹೆಚ್ಚಿನ ಭರವಸೆಗಳನ್ನು, ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದಾರೆ. ರಾಜ್ಯದ ಹಲವು ಕಡೆಗಳಲ್ಲಿ ಇಂದು ಮಹಾನ್ ರಾಷ್ಟ್ರ ಭಕ್ತ ಶಿವಾಜಿಯವರ ಪ್ರತಿಮೆಗಳ ಸ್ಥಾಪನೆಯಾಗಿದ್ದರೆ ಇದಕ್ಕೆ ಮುಳೆಯವರ ಕ್ರಿಯಾಶೀಲ ಪ್ರಯತ್ನಗಳೂ ಸಾಕಷ್ಟಿವೆ.

ಬಸವ ಕಲ್ಯಾಣದಲ್ಲಿ ಶಿವ ಸೃಷ್ಟಿ, ಶಿವಾಜಿಯ ಶಿಲ್ಪ ಸಂಗ್ರಹಾಲಯದ ಸ್ಥಾಪನೆಯಲ್ಲಿಯೂ ಮುಳೆಯವರ ಪ್ರಯತ್ನ ಸಾಕಷ್ಟು ಕೆಲಸ ಮಾಡಿರುವುದು ನಿಚ್ಚಳ. ರಾಜ್ಯ ಸರ್ಕಾರ ಇದಕ್ಕಾಗಿ ಪ್ರತ್ಯೇಕವಾಗಿ ಭೂಮಿ ಒದಗಿಸಿ ಕೊಟ್ಟಿರುವುದು ಕೂಡಾ ವಿಶೇಷ. ಪ್ರಧಾನಿ ನರೇಂದ್ರ ಮೋದಿಯವರ ಪ್ರೇರಣೆಯಿಂದ, ಡಾ. ಮುಳೆಯವರು 2021ರಲ್ಲಿ ಬಿಜೆಪಿಗೆ ಸೇರಿ ರಾಜ್ಯಾದ್ಯಂತ ಪಕ್ಷವನ್ನು ಬಲಪಡಿಸಲು ಪ್ರಾಮುಖ ಪಾತ್ರ ವಹಿಸಿದರು.

2023ರ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ, 2024ರ ಲೋಕಸಭಾ ಚುನಾವಣೆಯಲ್ಲಿ ಮತ್ತು 2021ರ ಬಸವಕಲ್ಯಾಣ ಉಪಚುನಾವಣೆಯಲ್ಲಿಯೂ, ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಲು ಮುಳೆಯವರ ಪ್ರಚಾರ ಮತ್ತಿತರ ಪ್ರಯತ್ನಗಳೂ ದೊಡ್ಡ ಪ್ರಭಾವ ಬೀರಿವೆ ಎಂಬುದು ದೃಢಪಟ್ಟಿವೆ.

ಆತ್ಮ ನಿರ್ಭರ್ ಭಾರತದ ಆಶಯ: ಇವೆಲ್ಲವುಗಳ ಫಲಶ್ರತಿಯಾಗಿ 2024ರಲ್ಲಿ ಇವರು ಬಿಜೆಪಿ ಮೂಲಕ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗುವಂತಾಯಿತು. ಡಾ. ಮುಳೆಯವರು ಪ್ರಧಾನಮಂತ್ರಿ ಮೋದಿಯವರ ಆತ್ಮ ನಿರ್ಭರ್ ಭಾರತದ ಆಶಯದಂತೆ ಹಲವಾರು ಸಾಮಾಜಿಕ-ಆರ್ಥಿಕ ಮತ್ತು ಶೈಕ್ಷಣಿಕ ಯೋಜನೆಗಳ ಯಶಸ್ಸಿಗೆ ಕೆಲಸ ಮಾಡುತ್ತಿದ್ದಾರೆ. ಸಮಾಜ ಸೇವೆಯಲ್ಲಿ ಮುಳೆಯವರಿಗೆ ಎಲ್ಲಿಲ್ಲದ ಸಾರ್ಥಕ ಸಂತೃಪ್ತಿ. ''ಸಬ್ ಕಾ ಸಾಥ್, ಸಬ್ ಕಾ ವಿಕಾಸ್'' ಧ್ಯೇಯದೊಂದಿಗೆ ಬಡವರನ್ನು ಮೇಲಕ್ಕೆತ್ತಲು ಇವರು ಹಲವು ಸ್ವಯಂಸೇವಾ ಸಂಸ್ಥೆಗಳು ಮತ್ತು ಸಹಕಾರಿ ಸಂಸ್ಥೆಗಳೊಂದಿಗೆ ಸಕ್ರಿಯವಾಗಿ, ಶ್ರದ್ಧೆಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

ಮಹಿಳಾ ಸಬಲೀಕರಣವನ್ನು ಉತ್ತೇಜಿಸಲು, ಡಾ. ಮುಳೆಯವರು ಉಚಿತ ಹೊಲಿಗೆ ತರಬೇತಿ ಶಿಬಿರಗಳನ್ನು ಅನೇಕ ಹಿಂದುಳಿದ ಪ್ರದೇಶಗಳಲ್ಲಿ ಆಯೋಜಿಸಿದ್ದರು. ಮತ್ತು ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ಅನೇಕ ಹೊಲಿಗೆ ಯಂತ್ರಗಳನ್ನು ವಿತರಿಸುವ ಮೂಲಕ ಅವರಿಗೆ ಜೀವನಾಧಾರ ಕಲ್ಪಿಸಿ ಅವರ ಪಾಲಿನ ಆಪದ್ಬಾಂಧವನಾದರು.

ಗೌರವಗಳು: ಡಾ. ಮುಳೆಯವರ ಇಂಥ ಅನೇಕ ಅಪರೂಪದ ಸೇವೆಗಳಿಗಾಗಿ ಅವರಿಗೆ ರಾಷ್ಟ್ರೀಯ ಏಕತೆ, ದಲಿತ ಮಿತ್ರ, ವೃಕ್ಷ ಮಿತ್ರ, ಮರಾಠಾ ಭೂಷಣ ಮತ್ತು ಶಿವಶ್ರೀ ಪ್ರಶಸ್ತಿ ಪುರಸ್ಕಾರ ಸಿಗುವಂತಾಗಿದೆ.

ಪ್ರಸ್ತುತ, ಡಾ. ಮುಳೆಯವರು ಹುಮ್ನಾಬಾದ್ ತಾಲ್ಲೂಕಿನ ಘಾಟ್ ಬೋರಲ್ ಎಂಬ ಗ್ರಾಮೀಣ ಪ್ರದೇಶದಲ್ಲಿರುವ ಪ್ರಕಾಶ ವಿದ್ಯಾಲಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಮತ್ತು ಬೀದರ್‌ನಲ್ಲಿ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಪೋಷಕ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಡಾ. ಮುಳೆಯವರು ಬೀದರ್‌ನ ವಿದ್ಯಾ ವಿಕಾಸ್ ಟ್ರಸ್ಟ್‌ನ ಸಂಸ್ಥಾಪಕರಾಗಿದ್ದು, ಇದರ ಅಡಿಯಲ್ಲಿ ಹಲವಾರು ಪ್ರತಿಷ್ಠಿತ ವೃತ್ತಿಪರ ಸಂಸ್ಥೆಗಳು ಈಗಲೂ ಕಾರ್ಯನಿರ್ವಹಿಸುತ್ತಿವೆ.

ಡಾ. ಮುಳೆಯವರು ನಾಡಿನ ಪ್ರಮುಖ ಹಿರಿಯ ಸಹಕಾರಿ ಧುರೀಣರಲ್ಲೊಬ್ಬರಾಗಿದ್ದಾರೆ.

ಬೀದರ್ ಸಕ್ಕರೆ ಕಾರ್ಖಾನೆ, ಹಳ್ಳಿಖೇಡ್, ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆ ಬೀದರ್, ಮಹಾತ್ಮ ಗಾಂಧಿ ಸಕ್ಕರೆ ಕಾರ್ಖಾನೆ ಭಾಲ್ಕಿ ಮತ್ತು ಸರ್ವೋದಯ ಸಹಕಾರಿ ಗೃಹ ನಿರ್ಮಾಣ ಸಂಸ್ಥೆ ಬಸವಕಲ್ಯಾಣದಲ್ಲಿ ಸಕ್ರಿಯವಾಗಿ, ಸದಸ್ಯರಾಗಿ ಕೆಲಸ ಮಾಡುತ್ತಿದ್ದಾರೆ.

ಶಿಕ್ಷಣ ಪ್ರೇಮಿ

ಮುಳೆಯವರು ಬಾಲ್ಯದಿಂದಲೂ ಚಿನ್ನದ ತೊಟ್ಟಿಲಿನಲ್ಲಿ ಬೆಳೆದವರೇನಲ್ಲ. ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ತಿಂಗಳಿಗೆ ಕೇವಲ ರೂ.30 ಸಂಬಳ ಪಡೆದು ಹಿಂದೆ ಕೆಲಸ ಮಾಡಿದ ಅನುಭವವೂ ಇವರಿಗಿದೆ. ತದನಂತರ ಪ್ರೌಢ ಶಾಲೆಯ ಹಾಗೂ ಪದವಿ ಕಾಲೇಜಿನ ಶಿಕ್ಷಕರಾಗಿಯೂ ಇವರು ಸೇವೆ ಸಲ್ಲಿಸಿದ್ದಾರೆ. ಮುಂದೆ ಇವರ ಸಮಾಜ ಸೇವಾ ಚಟುವಟಿಕೆಗಳು ವಿಸ್ತಾರಗೊಂಡಂತೆ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು ಸಮಾಜಮುಖಿ ಕೆಲಸಗಳಿಗೆ ಇವರು ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡರು. ತಮ್ಮ ಬಡತನದಲ್ಲಿಯೂ ಬಿ. ಎ. ಬಿ. ಎಡ್. ಎಂ. ಎ. ಡಿಗ್ರಿಗಳನ್ನು ಸ್ವಂತ ಪರಿಶ್ರಮದಿಂದ ಕೊಲ್ಲಾಪುರ ವಿಶ್ವವಿದ್ಯಾಲಯ ಮತ್ತು ಔರಂಗಾಬಾದಿನ ಮರಾಠವಾಡ ವಿಶ್ವವಿದ್ಯಾಲಯಗಳಿಂದ ಪಡೆದ ಮೇಧಾವಿ ಇವರು. ಕನ್ನಡ ಶಾಲೆಗಳಿಂದ ಹಿಡಿದು ನರ್ಸಿಂಗ್ ಐಟಿಐ ವರೆಗೆ ಅನೇಕ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿರುವ ಸಾಹಸ ಇವರದ್ದು. ಇವರು ಎಲ್ಲಿಯೇ ಇರಲಿ, ಈಗಲೂ ಕೂಡಾ ಇವರ ಕೈಯಲ್ಲಿ ಯಾವುದಾದರೂ ಒಂದು ಪುಸ್ತಕ ಇದ್ದೇ ಇರುತ್ತದೆ. ನಿರಂತರ ಓದು ತಮ್ಮ ಜ್ಞಾನ ಮತ್ತು ಅನುಭವವನ್ನು ಹೆಚ್ಚಿಸಿದೆ ಎಂದು ಸದಾ ಮುಳೆಯವರು ಹೇಳುತ್ತಿರುತ್ತಾರೆ.

ಉಚಿತ ವಿದ್ಯಾರ್ಥಿ ನಿಲಯ

ಕರ್ನಾಟಕ ಕ್ಷತ್ರಿಯ ಮರಾಠಾ ಪರಿಷತ್ತಿಗೆ (ಕೆಕೆಎಂಪಿ) ಅಧ್ಯಕ್ಷರಾಗಿ ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ ಡಾ. ಮುಳೆಯವರು ಆಗ ಬೆಂಗಳೂರಿನಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿಯಿರುವ ಒಂದು ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಲು ಕೂಡಾ ಕಾರಣಕರ್ತರಾದರು. ಮರಾಠಾ ಭವನದ ಸ್ಥಾಪನೆಗೆ ಅವರು ಪ್ರಮುಖ ಕಾರಣಕರ್ತರಾಗಿದ್ದರು. ಬಡತನದಲ್ಲಿರುವ ವಿದ್ಯಾರ್ಥಿಗಳಿಗೆ ಪ್ರತಿವರ್ಷ ಮೆರಿಟ್ ಆಧಾರಿತ ವಿದ್ಯಾರ್ಥಿ ವೇತನಕ್ಕಾಗಿ ಅನುದಾನಗಳ ಸೌಲಭ್ಯ ಕಲ್ಪಿಸಿರುವುದು ಕೂಡಾ ಮುಳೆಯವರ ಸಾಧನೆಗಳಲ್ಲೊಂದು. ಮೋದಿಯವರ ಕನಸಿನ ಹೊಸ ಶಿಕ್ಷಣ ನೀತಿ ನಾಡಿನ ಎಲ್ಲಾ ಕಡೆಗಳಲ್ಲೂ ಸಾಕಾರಗೊಳ್ಳಬೇಕೆಂಬುದು ಮುಳೆಯವರ ಸದಾಶಯವಾಗಿದೆ.

ಅರ್ಥಪೂರ್ಣ ಆಚರಣೆ

ಹಬ್ಬದ ಸಡಗರ ಸಂಭ್ರಮ ನಿಜಕ್ಕೂ ಸಂತಸ ತರುವಂತಹದ್ದು. ಆದರೆ, ಆ ಸಂಭ್ರಮದ ಭರದಲ್ಲಿ ನಮ್ಮ ಪರಿಸರವನ್ನು ಹಾನಿ ಮಾಡದೇ ಇರೋಣ; ಆಚರಣೆಯು ಸದಭಿರುಚಿಯಿಂದ ಕೂಡಿರಲಿ; ಅಲ್ಲವೆ!

● ಎಮ್. ಪರಮೇಶ್ವರ ಮದ್ದಿಹಳ್ಳಿ

ಹಬ್ಬ ಎಂದರೆ ಎಲ್ಲರಿಗೂ ಸಂತಸ; ಅದರಲ್ಲೂ ವಿಘ್ನವಿನಾಯಕ ಗಣೇಶನ ಹಬ್ಬ ಎಂದರೆ ಇನ್ನಷ್ಟು ವಿಶೇಷ; ಮನೆಯಲ್ಲಿ ಗಣಪತಿಯನ್ನಿಡುವುದು, ಮನೆ ಮುಂದಿನ ರಸ್ತೆಯಲ್ಲಿ ಗಣಪತಿಯನ್ನಿಡುವುದು, ಸಾರ್ವಜನಿಕವಾಗಿ ಪೂಜಿಸುವುದು, ಗಣೇಶನ ಮುಂದೆ ಸಂಗೀತ ಹಾಡುವುದು, ಕೀರ್ತನೆ ಹಾಡುವುದು ಎಲ್ಲವೂ ಈ ಹಬ್ಬದ ವಿಶೇಷಗಳು. ಗಣೇಶನ ವಿಗ್ರಹವನ್ನು ಹಲವು ದಿನ ಬೀದಿಯಲ್ಲಿ ಸುಂದರ ಅಲಂಕಾರದೊಂದಿಗೆ ಕೂರಿಸಿ, ಅದರ ಪೆಂಡಾಲ್‌ನಲ್ಲಿ ಪ್ರಖ್ಯಾತ ವಿದುಷಿಗಳ ಸಂಗೀತ, ಶಾಸ್ತ್ರೀಯ ಸಂಗೀತ ಮೊದಲಾದ ಚಟುವಟಿಕೆಗಳು ನಡೆಯುವುದು ಸಹ ನಮ್ಮ ನಾಡಿನ ವಿಶೇಷ.

ಆದರೆ, ಈಚಿನ ವರ್ಷಗಳಲ್ಲಿ ಗಣಪತಿ ಪೆಂಡಾಲ್‌ಗಳಲ್ಲಿ ಅಬ್ಬರದ ಸಂಗೀತ, ಕಿವಿಯನ್ನು ತೂತು ಮಾಡುವಂತಹ ಮೈಕ್‌ಸೆಟ್‌ಗಳು, ಡಿಜೆಗಳು ಸಾಮಾನ್ಯ ಎನಿಸಿವೆ; ಗಣೇಶ ಚತುರ್ಥಿ ಸಂಧರ್ಭದಲ್ಲಿ ಆರ್ಕೆಸ್ಟ್ರಾ ಹಾಕಿಕೊಂಡು ಕುಣಿಯುವುದು, ಅರೆ ಬರೆ ನೃತ್ಯ ಮಾಡುವುದು, ಕೆಲವು ಕಡೆ ಗೊತ್ತಿಲ್ಲದೆಯೋ ಏನೊ ಅಸಹ್ಯವಾಗಿ ವರ್ತಿಸುವುದು ಹೆಚ್ಚಾಗುತ್ತಿದೆ; ಜತೆಗೆ ಈ ರೀತಿಯ ಕಾರ್ಯಕ್ರಮ ಮಾಡಲು ಸಾರ್ವಜನಿಕ ವಂತಿಗೆಯ ಸಂದರ್ಭದಲ್ಲಿ ಒತ್ತಡ ಹಾಕಿ ವಂತಿಗೆ ವಸೂಲು ಮಾಡುವುದು ಅಲ್ಲಲ್ಲಿ ನಡೆದಿರುವುದು ವರದಿಯಾ ಗಿದೆ. ಇದು ಸರಿಯಲ್ಲ ಎಂದು ಎಲ್ಲಾ ಪ್ರಾಜ್ಞರೂ, ಆಸ್ತಿಕರೂ, ಗಣೇಶನ ಭಕ್ತರೂ, ಕಾರ್ಯಕ್ರಮ ಆಯೋಜಕರೂ ಒಪ್ಪಿಯೇ ಒಪ್ಪುತ್ತಾರೆ.

ಸ್ವಾತಂತ್ರ್ಯ ಚಳುವಳಿಯ ಸಮಯದಲ್ಲಿ, ಭಾರತೀಯರು ಗುಂಪಾಗಿ ಸೇರುವುದನ್ನು ಬ್ರಿಟಿಷರು ನಿಷೆಧಿಸಿದ್ದರು. ಆದರೆ ಲೋಕಮಾನ್ಯ ಬಾಲಗಂಗಾಧಾರನಾಥ ತಿಲಕರು ಗಣೇಶನ ವಿಗ್ರಹ ಇಟ್ಟು ಹಬ್ಬವನ್ನು ಆಚರಿಸುವುದನ್ನು ತಂದರು, ಆ ಮೂಲಕ ಜನರನ್ನು ಒಟ್ಟಾಗಿಸಿ, ದೇಶಭಕ್ತಯನ್ನು ಹರಡುತ್ತಿದ್ದರು, ದೇಶವನ್ನು ದಾಸ್ಯದಿಂದ ಹೇಗೆ ಮುಕ್ತಿ ಮಾಡಬೇಕೆಂಬುದನ್ನು ಕುರಿತು ಚಿಂತಿಸಿ ರೂಪುರೇಷೆ ಸಿದ್ದಪಡಿಸುತ್ತಿದರು. ಇದು ಬ್ರಿಟಿಷರಿಗೆ ಗೊತ್ತಾಗುತ್ತಿರಲಿಲ್ಲ. ಈ ಉತ್ಸವದ ನೆಪದಲ್ಲಿ ಕ್ರಾಂತಿಕಾರಿಗಳು ದೇಶಕ್ಕೆ ಸ್ವಾತಂತ್ರ್ಯ ತಂದುಕೊಡುವ ವಿಚಾರಗಳನ್ನು, ಕ್ರಾಂತಿಯ ರೂಪು ರೇಷೆಗಳನ್ನೂ ರೂಪಿಸುತ್ತಿದ್ದರು. ನಂತರದ ದಿನಗಳಲ್ಲಿ ಗಣಪತಿ ಪೆಂಡಾಲ್‌ಗಳಲ್ಲಿ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಭಕ್ತಿ ಗೀತೆಗಳನ್ನು ಹಾಡುವುದು, ಖ್ಯಾತ ಸಂಗೀತಗಾರರನ್ನು ಕರೆಯಿಸಿ ಕಾರ್ಯಕ್ರಮ ನಡೆಸುವುದು ಮಾಮೂಲು ಎನಿಸಿತ್ತು. ಆದರೆ ಇಂದು, ಸದಭಿರುಚಿಯ ಕಾರ್ಯಕ್ರಮಗಳ ನಡುವೆ, ಕುಣಿತದ ಹಾಡುಗಳ ಮೋಜು ಅಲ್ಲಲ್ಲಿ ಕಾಣುತ್ತಿದೆ. ಇದನ್ನು ಬಿಟ್ಟು ಯಾವ ಕಾರಣಕ್ಕೆ ನಮ್ಮ ದೇಶದಲ್ಲಿ ಗಣೇಶ ಉತ್ಸವ ಆಚರಣೆಗೆ ಬಂತು ಎಂಬುದನ್ನು ಮನಗಾಣಲಿ.

ಗಣೇಶನ ವಿಗ್ರಹವನ್ನು ನಿರ್ಮಿಸುವಲ್ಲಿ ಇನ್ನೊಂದು ಅಪಸವ್ಯವೂ ಚಾಲ್ತಿಗೆ ಬಂದಿದೆ; ಅದೇನೆಂದರೆ, ಪರಿಸರಕ್ಕೆ ವಿರೋಧಿ ಎನಿಸುವ ರಾಸಾಯನಿಕ ಬಣ್ಣಗಳನ್ನು ಬಳಸಿ ವಿಗ್ರಹಕ್ಕೆ ಬಣ್ಣ ಹಾಕುವುದು, ಪಿಒಪಿ ಗಣೇಶನನ್ನು ನಿರ್ಮಿಸುವುದು ನಡೆಯುತ್ತಿದೆ. ಇದು ಸಲ್ಲದು. ಪರಿಸರಕ್ಕೆ ಹಾನಿಯಗುವಂತಹ ರಾಸಾಯನಿಕ ಬಣ್ಣದಿಂದ ಮಾಡಿದ ಗಣೇಶನ ಮೂರ್ತಿ ಬಿಟ್ಟು ಬರಿಯ ಜೇಡಿ ಮಣ್ಣಿನಿಂದ ಮಾಡಿದ ಗಣೇಶನ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಿ ಕಾರ್ಯಕ್ರಮ ನಡೆಸುವುದನ್ನು ನಾವೆಲ್ಲರೂ ರೂಢಿಸಿಕೊಳ್ಳಬೇಕು. ಜತೆಗೆ, ಉತ್ತರ ಕರ್ನಾಟಕದಲ್ಲಿ ಪಟಾಕಿ ಹೊಡೆಯುವ ಆಚರಣೆ ಇದೆ; ಇದರಿಂದ ವಾಯು ಮಾಲಿನ್ಯ, ಶಬ್ದ ಮಾಲಿನ್ಯ ಉಂಟಾಗುತ್ತದೆ; ಇದನ್ನು ಸಹ ಕಡಿಮೆ ಮಾಡಿ, ಶಾಂತ ರೀತಿಯ ಹಬ್ಬದ ಆಚರಣೆ ನಡೆಸಬೇಕು.

ಹಬ್ಬ ಎಂದ ಮೇಲೆ ಸಂಭ್ರಮ ಇರಲೇಬೇಕು; ಆ ಸಂಭ್ರಮದಿಂದ ಪರಿಸರಕ್ಕೆ ಹಾನಿ ಉಂಟಾಗದೇ ಇರಲಿ ಎಂಬ ಕಾಳಜಿಯನ್ನು ನಾವೆಲ್ಲರೂ ತೆಗೆದುಕೊಂಡಾಗ, ಗಣೇಶನ ಹಬ್ಬಕ್ಕೆ ಇನ್ನಷ್ಟು ಮೆರುಗು ಬರುತ್ತದೆ, ಇನ್ನಷ್ಟು ಅರ್ಥ ತುಂಬಿ ಬರುತ್ತದೆ.

101 ಗಣೇಶ!

ಬಸವನಗುಡಿಯ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನ ಆರ್ಟ್ ಗ್ಯಾಲರಿಯಲ್ಲಿ ಗುರುವಾರ, ಸೆಪ್ಟೆಂಬರ್ 5 ರಂದು 'ವಕ್ರತುಂಡ ಮಾಹಾಕಾಯ' ಎಂಬ ಗಣೇಶ ಚಿತ್ರಕಲಾ ಪ್ರದರ್ಶನ ಆರಂಭವಾಗಿದೆ. ಈ ಸುಮಾರು 75 ಚಿತ್ರಕಲಾವಿದರು ಬಿಡಿಸಿದ ಗಣೇಶನ ಚಿತ್ರಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ. ವಿಧವಿಧದ ಗಣೇಶನನ್ನು ಎಲ್ಲಾ ಬಣ್ಣಗಳಲ್ಲಿ ನೋಡಬಹುದು. ಶ್ಯಾಮಲಾ ರಮಾನಂದ ಮತ್ತು ಉಷಾ.ಪಿ. ರೈ ಅವರು ಚಿತ್ರಕಲಾವಿದೆಯರನ್ನು ಒಟ್ಟುಗೂಡಿಸಿ ಆರಂಭಿಸಿದ 'ಆಕಾಂಕ್ಷಾ' ಸಂಸ್ಥೆಯ ವತಿಯಿಂದ ಈ ಪ್ರದರ್ಶನವನ್ನು ಆಯೋಜಿಸಲಾಗಿದೆ. ಈ ಕಲಾಪ್ರದರ್ಶನವು ಸೆಪ್ಟೆಂಬರ್ 15 ರವರೆಗೆ ನಡೆಯಲಿದ್ದು, ಇಲ್ಲಿ ಗಣೇಶನ 101 ಚಿತ್ರಗಳ ಪ್ರದರ್ಶನವಿದೆ.

ವಿಶ್ವವಾಣಿ ದೀಪಾವಳಿ ವಿಶೇಷಾಂಕ 2024
ಒದುಗರ ವೇದಿಕೆ

ನಾನೇಕೆ ರೀಲ್ಸ್ ಮಾಡುತ್ತೇನೆ?

ನೀವೇ ಕೇಳಿಕೊಳ್ಳಿ, 'ನಾನೇಕೆ ರೀಲ್ಸ್ ಮಾಡುತ್ತೇನೆ?' ಈಚಿನ ವರ್ಷಗಳಲ್ಲಿ ರೀಲ್ಸ್ ಮಾಡುವುದು, ಸೆಲ್ಫಿ ತೆಗೆಯುವುದು ಎಲ್ಲರ ಹವ್ಯಾಸವಾಗಿದೆ! ರೀಲ್ಸ್ ಮಾಡಲು ನಾನಾ ರೀತಿಯ ಕಸರತ್ತು ಮಾಡುತ್ತಾರೆ, ಸಾಕಷ್ಟು ರಿಸ್ಕ್ ತೆಗೆದುಕೊಳ್ಳುತ್ತಾರೆ! ಬೆಟ್ಟದ ತುದಿಯಲ್ಲಿ, ಸಮುದ್ರದ ಬದಿಯಲ್ಲಿ, ಮರುಭೂಮಿಯ ತುದಿಯಲ್ಲಿ ನಿಂತು ರೀಲ್ಸ್ ಮಾಡುವುದು, ಅದನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡುವುದು - ಇದು ಇಂದಿನ ಟ್ರೆಂಡ್. ನೀವೂ ರೀಲ್ಸ್ ಮಾಡಿದ್ದೀರಾ? ಅದನ್ನು ಏಕೆ ಮಾಡುತ್ತೀರಿ? ಅದರಿಂದ ಏನು ಸಂತೋಷ, ಲಾಭ ದೊರಕುತ್ತದೆ? ರೀಲ್ಸ್ ಮಾಡುವಾಗ ಎಡವಟ್ಟು, ಪೇಚು, ಅಭಾಸವಾಗಿದೆಯೆ? ನಿಮ್ಮ ರೀಲ್ಸ್ ನೋಡಿ ಗೆಳೆಯರು, ಮನೆಯವರು ಏನಂದರು? ನಿಮ್ಮ ರೀಲ್ಸ್ ಅನುಭವವನ್ನು ಚಿಕ್ಕದಾಗಿ ನಮಗೆ ಬರೆದು ಕಳಿಸಿ. (200 ಪದ) ಸೂಕ್ತ ಎನಿಸಿದರೆ ದೀಪಾವಳಿ ವಿಶೇಷಾಂಕದಲ್ಲಿ ಪ್ರಕಟಿಸುತ್ತೇವೆ. ಬರಹ ನಮಗೆ 15.09.2024ರ ಮುಂಚಿತವಾಗಿ ತಲುಪುವಂತಿರಲಿ. ನುಡಿ ಅಥವಾ ಯುನಿಕೋಡ್‌ನಲ್ಲಿ ಟಂಕಿಸಿದ ನಿಮ್ಮ ಬರಹವನ್ನು ಇಲ್ಲಿಗೆ ಕಳಿಸಿ:
specialvishwa@gmail.com

ಸಮಾಚಾರ ಸಣ್ಣದಲ್ಲ

ಇಪಿ ಕ್ಯಾಂಪಿನ ವಿದ್ಯಾರ್ಥಿ ಕಾಣೆ

ಹೊಸಪೇಟೆ: ಟಿಬಿಡ್ಯಾಂನ ಇಪಿ ಕ್ಯಾಂಪಿನ ಮನೆಯಿಂದ ಹೋದವನು ಇದುವರೆಗೆ ಬಾರದೇ ರಮಣ ಎಂಬ 19 ವರ್ಷದ ವಿದ್ಯಾರ್ಥಿಯು ಕಾಣೆಯಾಗಿದ್ದಾನೆ. ರಮಣ ಪಿ, 19 ವರ್ಷ, ತಂದೆಯ ಹೆಸರು ಗಾಲಿರಾಜ್ ಪಿ, ಕಪ್ಪು ಮೈಬಣ್ಣ, 5.5 ಅಡಿ ಎತ್ತರ, ಕೊಲು ಮುಖ, ತೆಳ್ಳನೆಯ ಮೈಕಟ್ಟು. ಕಾಣೆಯಾದ ದಿನ ಕೆಂಪು ಬಣ್ಣದ ಟಿ ಶರ್ಟ್, ಶಾರ್ಟ ಡ್ರಾಯಲ್ ಧರಿಸಿರುತ್ತಾನೆ. ಹೊಟ್ಟೆಯ ಮೇಲೆ ಆಫರೇಷನ್ ಆದ ಗಾಯದ ಗುರುತು ಇದೆ. ಮಾತನಾಡಲು ಬರುವುದಿಲ್ಲ.ಈ ಕಾಣೆಯಾದ ಹುಡುಗನು ಪತ್ತೆಯಾದಲ್ಲಿ ಹೊಸಪೇಟೆ ಕಂಟ್ರೋಲ್ ರೂಂ: 9480805770, ಹೊಸಪೇಟೆ ಟಿ.ಬಿ ಡ್ಯಾಂ ಪೊಲೀಸ್ ಠಾಣೆ ದೂ.ಸಂ: 08394-259233 ಗೆ ಸಂಪರ್ಕಿಸಬಹುದು ಎಂದು ಟಿ.ಬಿ ಡ್ಯಾಂ ಪೊಲೀಸ್ ಠಾಣೆಯ ಸಬ್‌ಇನ್ಸ್ ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅನಧಿಕೃತವಾಗಿ ವಿದ್ಯುತ್ ಬಳಸದಿರಲು ಸೂಚನೆ

ಬಳ್ಳಾರಿ: ಜೆಸ್ಕಾಂ ನಗರ ವ್ಯಾಪ್ತಿಗೆ ಬರುವ ವಿದ್ಯುತ್ ಗ್ರಾಹಕರು ಗಣೇಶ ಹಬ್ಬದ ಪ್ರಯುಕ್ತ, ಗಣೇಶ್ ವಿಗ್ರಹ ಕೂಡಿಸುವುದಕ್ಕೆ ಅನಧಿಕೃತವಾಗಿ ವಿದ್ಯುತ್ ಬಳಸದೆ, ಇಲಾಖೆಯ ನಿಯಮಾನುಸಾರ ಅನುಮೋದನೆ ಪಡೆದು ಅಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆದುಕೊಳ್ಳಬೇಕು ಜೆಸ್ಕಾಂನ ನಗರ ಉಪ ವಿಭಾಗದ 1 ಮತ್ತು 2 ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಸೂಚನೆ ನೀಡಿದ್ದಾರೆ. ನಿಭಂದನೆಗಳು: ಸಾರ್ವಜನಿಕರು ಯಾವುದೇ ಹೆಚ್.ಟಿ ಅಥವಾ ಎಲ್.ಟಿ ವಿದ್ಯುತ್ ಜಾಲಗಳ ಅಡಿಯಲ್ಲಿ ಗಣೇಶ್ ಚತುರ್ಥಿಯ ಪೆಂಡಾಲ್ ನಿರ್ಮಿಸಬಾರದು. ವಿದ್ಯುತ್ ಕಂಬಗಳಿಗೆ ಅಥವಾ ಪರಿವರ್ತಕ ಕೇಂದ್ರದ ಕಂಬಗಳಿಗೆ ಶಾಮಿಯಾನ ಕಟ್ಟುವುದಾಗಲೀ ಅಥವಾ ಬ್ಯಾನರ್‌ಗಳನ್ನು ಕಟ್ಟಬಾರದು. ನಿಯಮಗಳ ಉಲ್ಲಂಘನೆಯ ವಿದ್ಯುತ್‌ನಿಂದ ಆಗುವ ಅನಾಹುತಗಳಿಗೆ ಸಂಘಟನೆಯ ಮುಖ್ಯಸ್ಥರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಜೆಸ್ಕಾಂ ಇಲಾಖೆ ಪ್ರಕಟಣೆ ತಿಳಿಸಿದೆ.

ದಿಶಾ ಸಭೆ: ಅಹವಾಲು ಸಲ್ಲಿಸಲು ಅವಕಾಶ

ಹೊಸಪೇಟೆ: ಬಳ್ಳಾರಿ ಲೋಕಸಭಾ ಕ್ಷೇತ್ರದ ಸಂಸದರಾದ ಇ ತುಕಾರಾಮ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆಯು ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಸೆಪ್ಟೆಂಬರ್ 10ರಂದು ನಡೆಯಲಿದೆ. ಅಂದು ಬೆಳಿಗ್ಗೆ 10 ಗಂಟೆಯಿಂದ ಬೆಳಿಗ್ಗೆ 11 ಗಂಟೆವರೆ ಸಾರ್ವಜನಿಕರು ತಮ್ಮ ಯಾವುದಾದರು ಕುಂದುಕೊರತೆ ಅಹವಾಲುಗಳಿದ್ದಲ್ಲಿ ತಹಸೀಲ್ದಾರರ ಕಚೇರಿ ಹೊಸಪೇಟೆಯಲ್ಲಿ ತಹಶೀಲ್ದಾರ ಅವರಿಗೆ ಖುದ್ದಾಗಿ ಮನವಿ ಸಲ್ಲಿಸಬಹುದು. ಅಂದು ನಡೆಯುವ ದಿಶಾ ಸಭೆಯಲ್ಲಿ ಮಂಡಿಸಿ ಮನವಿಗಳ ಬಗ್ಗೆ ಚರ್ಚಿಸಿ ಸದರಿ ಮನವಿಗಳಿಗೆ ನಿಯಮಾನುಸಾರ ಪರಿಹಾರ ನೀಡಲಾಗುತ್ತದೆ. ಸಾರ್ವಜನಿಕರು ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾಧಿಕಾರಿಗಳಾದ ಎಂ. ಎಸ್. ದಿವಾಕರ ಮನವಿ ಮಾಡಿದ್ದಾರೆ.

ಪತ್ರಿಕೋದ್ಯಮ ಪ್ರಶಸ್ತಿಗೆ ಆಹ್ವಾನ

ಹೊಸಪೇಟೆ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು 2017ನೇ ಸಾಲಿನಿಂದ 2023ನೇ ಸಾಲಿನವರೆಗೆ ಅಭಿವೃದ್ಧಿ ಪತ್ರಿಕೋದ್ಯಮ ಮತ್ತು ಪರಿಸರ ಪತ್ರಿಕೋದ್ಯಮ ಪ್ರಶಸ್ತಿಗಳಿಗೆ ಅರ್ಹ ಪತ್ರಕರ್ತರು / ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರಿಂದ ನಾಮನಿರ್ದೇಶನಗಳನ್ನು ಆಹ್ವಾನಿಸಿದೆ. 2017 ರಿಂದ 2023 ರ ಅವಧಿಯ ಎರಡೂ ವಿಭಾಗಗಳ ಪ್ರಶಸ್ತಿಗಳಿಗೆ ತಲಾ 7 ಅರ್ಹ ಪತ್ರಕರ್ತರನ್ನು ಆಯ್ಕೆ ಮಾಡಲಾಗುವುದು. ಈ ಪ್ರಶಸ್ತಿಯ ಮೊತ್ತ ಒಂದು ಲಕ್ಷ ರೂ. ನಗದು ಪುರಸ್ಕಾರ ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆಯನ್ನು ಹೊಂದಿರುತ್ತದೆ. ಅರ್ಜಿಗಳು / ನಾಮನಿರ್ದೇಶನಗಳನ್ನು ಮಾನ್ಯ ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ನಂ. 17, ವಾರ್ತಾಸೌಧ, ಭಗವಾನ್ ಮಹಾವೀರ ರಸ್ತೆ, ಫೆಂಟ್ರಿ ರಸ್ತೆ), ಬೆಂಗಳೂರು 560001 ಇಲ್ಲಿಗೆ ಅಥವಾ ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಅಧಿಕಾರಿಗಳಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಅಥವಾ ಇ-ಮೇಲ್ ವಿಳಾಸ ಗೆ ದಿನಾಂಕ: 30-09-2024ರ ಸಂಜೆ 5.00 ಗಂಟೆಯ ಒಳಗಾಗಿ ಸಲ್ಲಿಸಬಹುದು ಎಂದು ಇಲಾಖೆಯ ಆಯುಕ್ತರಾದ ಹೇಮಂತ್ ಎಂ. ನಿಂಬಾಳ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಂಬಿಕೆ ಜಗದಂಬಿಕೆ
ಗುರು
ಪ್ರತಿ ಗುರುವಾರ

{ಪ್ರಿಯಾಂಕ್ ಖರ್ಗೆ } ಸಚಿವ

ಸಿಎಂ ಬದಲಾವಣೆ ಕುರಿತ ಚರ್ಚೆ ಸಂಪುಟದಲ್ಲಿ ನಡೆದಿಲ್ಲ. ಅದು ಮಾಧ್ಯಮಗಳಲ್ಲಿ ಮಾತ್ರ ನಡೆದಿದೆ. ಸಚಿವರಾದ ಎಂ.ಬಿ ಪಾಟೀಲ್ ಹಾಗೂ ಶಿವಾನಂದ್ ಪಾಟೀಲರು ಈ ವಿಚಾರದಲ್ಲಿ ಮಾತನಾಡಿರುವುದು ಗೊತ್ತಿದೆ. ಸಿಎಂ ಖುರ್ಚಿ ಖಾಲಿ ಇಲ್ಲ. ಯಾರೇ ಸಿಎಂ ಆದರೂ ಬೆಂಬಲವಿದೆ ಎಂದಷ್ಟೆ ಹೇಳಿದ್ದಾರೆ.

ಆಚರಣೆಗೆ ಸಕಲ ಸಿದ್ಧತೆ ಕೈಗೊಳ್ಳಲು ಅಧಿಕಾರಿಗಳಿಗೆ ಎಡಿಸಿ ಮಹಮ್ಮದ್ ಝುಬೇರ್ ಸೂಚನೆ

ಕಲ್ಯಾಣ ಕರ್ನಾಟಕ ಉತ್ಸವ 17ಕ್ಕೆ

ಬಳ್ಳಾರಿ: ಭಾರತ ಆ. 15 ರಂದು ಸ್ವಾತಂತ್ರ್ಯ ಪಡೆದರೆ, ಕಲ್ಯಾಣ ಕರ್ನಾಟಕ ಭಾಗದ ಪ್ರದೇಶಗಳು ಸೆ.17ರಂದು ವಿಮೋಚನೆಗೊಂಡ ದಿನ. ಹಾಗಾಗಿ ಜಿಲ್ಲಾ ಕೇಂದ್ರದಲ್ಲಿ ಕಲ್ಯಾಣ ಕರ್ನಾಟಕ ಉತ್ಸವ ದಿನವಾಗಿ ಆಚರಿಸಲಾಗುತ್ತಿದ್ದು, ಆಚರಣೆಯು ಹಬ್ಬದಂತಿರಬೇಕು, ಇದಕ್ಕೆ ಬೇಕಾದ ಎಲ್ಲ ರೀತಿಯ ಸಿದ್ಧತೆಗಳನ್ನು ಸಮರ್ಪಕವಾಗಿ ಕೈಗೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಜುಬೇರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ನೂತನ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಕಲ್ಯಾಣ ಕರ್ನಾಟಕ ಉತ್ಸವ ಅಂಗವಾಗಿ ಏರ್ಪಡಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಸೆ. 17 ಹೈದ್ರಾಬಾದ್ ನ ನಿಜಾಮರಿಂದ ಹೈದ್ರಾಬಾದ್ ಕರ್ನಾಟಕ ಪ್ರದೇಶಗಳು ವಿಮುಕ್ತಿ ಪಡೆದ ದಿನವಾಗಿದ್ದು, ಇದನ್ನು ಸರ್ಕಾರದ ಸೂಚನೆಯಂತೆ ಕಲ್ಯಾಣ ಕರ್ನಾಟಕ ಉತ್ಸವ ದಿನವಾಗಿ ಆಚರಿಸಲಾಗುತ್ತಿದೆ. ಸೆ.17 ರಂದು ಬೆಳಿಗ್ಗೆ 9 ಗಂಟೆಗೆ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಸರಕಾರಿ (ಮಾಜಿ ಪುರಸಭೆ) ಪದವಿ ಪೂರ್ವ ಕಾಲೇಜಿನ ಮೈದಾನದ ಆವರಣದಲ್ಲಿ ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆ ಅಂಗವಾಗಿ ಧ್ವಜಾರೋಹಣ ಕಾರ್ಯಕ್ರಮ ನೆರವೇರಲಿದೆ ಎಂದರು.

ಕಲ್ಯಾಣ ಕರ್ನಾಟಕ ಉತ್ಸವ ಅರ್ಥಪೂರ್ಣವಾಗಿ ಆಚರಿಸುವ ನಿಟ್ಟಿನಲ್ಲಿ ವಿವಿಧ ಇಲಾಖೆಗಳಿಗೆ ವಹಿಸಲಾದ ಜವಾಬ್ದಾರಿಯನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಿಸುವಂತೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಶಾಲಾ ಕಾಲೇಜುಗಳಲ್ಲಿ 371 ಜೆ ಕುರಿತು ಪ್ರಬಂಧ ಆಯೋಜಿಸಬೇಕು ಮತ್ತು ಎಲ್ಲಾ ಶಾಲಾ ಕಾಲೇಜುಗಳಿಂದ ವಿದ್ಯಾರ್ಥಿಗಳು ಕಲ್ಯಾಣಕರ್ನಾಟಕ ಉತ್ಸವದಲ್ಲಿ ಭಾಗವಹಿಸುವಂತೆ ನೋಡಿಕೊಳ್ಳಿ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರಿಗೆ ಅಪರ ಜಿಲ್ಲಾಧಿಕಾರಿಗಳು ಈ ಸಂದರ್ಭದಲ್ಲಿ ಸೂಚಿಸಿದರು.

ಕುಡಿಯುವ ನೀರಿನ ವ್ಯವಸ್ಥೆ, ಶ್ಯಾಮಿಯಾನ, ಕುರ್ಚಿ ಮತ್ತು ಲಘು ಉಪಹಾರದ ವ್ಯವಸ್ಥೆ ಹಾಗೂ ಮೈದಾನದ ಸ್ವಚತೆಯ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲೆಯ ಎಲ್ಲಾ ತಾಲೂಕು ಮಟ್ಟದಲ್ಲಿಯೂ ಕಲ್ಯಾಣ ಕರ್ನಾಟಕ ಉತ್ಸವ ಆಚರಿಸಲು ಆಯಾ ತಾಲೂಕು ಮಟ್ಟದ ತಹಸೀಲ್ದಾರರು ಹಾಗೂ ಇಲಾಖಾ ಅಧಿಕಾರಿಗಳು ಕ್ರಮ ವಹಿಸಬೇಕು. ಜಿಲ್ಲಾ ಮಟ್ಟದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು ಕಡ್ಡಾಯವಾಗಿ ಭಾಗವಹಿಸಬೇಕು ಎಂದರು.

ಈ ಸಂದರ್ಭದಲ್ಲಿ ಸಹಾಯಕ ಆಯುಕ್ತ ಪ್ರಮೋದ್, ಬಳ್ಳಾರಿ ನಗರ ಡಿವೈಎಸ್ಪಿ ನಂದಾರೆಡ್ಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಕಲ್ಯಾಣ ಕರ್ನಾಟಕ ಉತ್ಸವ ಅಂಗವಾಗಿ ಏರ್ಪಡಿಸಿದ್ದ ಪೂರ್ವಭಾವಿ ಸಭೆಯಲ್ಲಿ ಎಡಿಸಿ ಮಹಮ್ಮದ್ ಝುಬೇರ್ ಅವರು ಮಾತನಾಡಿದರು.

ಆಂಬ್ಯುಲೆನ್ಸ್ ವ್ಯವಸ್ಥೆ

ಕಲ್ಯಾಣ ಕರ್ನಾಟಕ ಉತ್ಸವ ಕಾರ್ಯಕ್ರಮ ನಡೆಯುವ ಮೈದಾನದಲ್ಲಿ ಆಂಬ್ಯುಲೆನ್ಸ್ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸೂಚಿಸಿದ ಅವರು, ಕಲ್ಯಾಣ ಕರ್ನಾಟಕ ಉತ್ಸವ ದಿನದಂದು ಜರುಗಲಿರುವ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರುವುದರಿಂದ ವಾಹನ ಸಂಚಾರ ಕ್ರಮಬದ್ಧಗೊಳಿಸಲು ಹಾಗೂ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಲು ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ರಿಂಗ್‌ರೋಡ್ ನಿರ್ಮಾಣಕ್ಕೆ ಶಾಸಕರಿಂದ ಸ್ಥಳ ಪರಿಶೀಲನೆ

ಹೊಸಪೇಟೆ: ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ ನಗರದ ಹೊರವಲಯಕ್ಕೆ ಭೇಟಿ ನೀಡಿ ರಿಂಗ್ ರೋಡ್ ನಿರ್ಮಾಣದ ಬಗ್ಗೆ ಸ್ಥಳ ಪರಿಶೀಲನೆ ನಡೆಸಿದರು. ಶಾಸಕರಾದ ಎಚ್. ಆರ್.ಗವಿಯಪ್ಪ ಅವರೊಂದಿಗೆ ಸಂಚಾರ ಕೈಗೊಂಡ ಅವರು, ರಾಷ್ಟ್ರೀಯ ಹೆದ್ದಾರಿ 50ರಿಂದ ಹೊಸಪೇಟೆ ನಗರಕ್ಕೆ ಸಂಪರ್ಕಕ್ಕೆ ಅಗತ್ಯವಿರುವ ರಿಂಗ್ ರೋಡ್ ಮಾರ್ಗದ ಬಗ್ಗೆ ಚರ್ಚಿಸಿದರು.

ದಿನೇದಿನೆ ಜನ ಸಂಪರ್ಕ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ರಿಂಗ್ ರೋಡ್ ನಿರ್ಮಾ ಣಕ್ಕೆ ಅತ್ಯವಿರುವ ಸ್ಥಳ ಗುರುತಿಸುವುದರ ಬಗ್ಗೆ ಜಿಲ್ಲಾಧಿಕಾರಿಗಳು ಶಾಸಕರೊಂದಿಗೆ ಚರ್ಚಿಸಿ ಸ್ಥಳ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ಹೊಸಪೇಟೆ ತಹಸೀಲ್ದಾರರಾದ ಶೃತಿ ಇನ್ನಿತರ ಇಲಾಖೆ ಅಧಿಕಾರಿಗಳು ಇದ್ದರು.

ಜಿಲ್ಲಾಧಿಕಾರಿಗಳ ಆದೇಶದಂತೆ ಮನೆ ಬಾಗಿಲಿಗೆ ಆಡಳಿತದ ಭಾಗವಾಗಿ ಜಿಲ್ಲಾದ್ಯಂತ ಎಲ್ಲಾ ಗ್ರಾಮಗಳಲ್ಲಿ ಪೋತಿ ಆಂದೋಲನಾ ಮಾಡಲಾಗಿದೆ, ಇಲಾಖೆಯ ಅಧಿಕಾರಿಗಳು ಮನೆ ಬಾಗಿಲಿಗೆ ತೆರಳಿ ಪೋತಿ ಖಾತೆಯ ಅಗತ್ಯ ದಾಖಲೆಗಳನ್ನು ಪಡೆದು ಪೌತಿ ಖಾತೆಯನ್ನು ಮಾಡಿಕೊಡಲಾಗುತ್ತಿದೆ. ಈ ಆಂದೋಲನದಲ್ಲಿ ಪೌತಿ ಖಾತೆ ಮಾಡಿಸಿಕೊಳ್ಳುವ ರೈತರು ಭಾಗವಹಿಸಿ ತಮ್ಮ ಪೌತಿ ಖಾತೆ ಬದಲಾವಣೆ ಮಾಡಿಸಿಕೊಳ್ಳುವಂತೆ ಜಿಲ್ಲಾಡಳಿತದಿಂದ ಕೋರಿದೆ.

ಜನನಾಯಕನಾಗಲು ಶಿಕ್ಷಕರೇ ಕಾರಣ

ಹೂವಿನಹಡಗಲಿ ಪಟ್ಟಣದಲ್ಲಿ ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಶಾಸಕ ಕೃಷ್ಣನಾಯ್ಕ ಉದ್ಘಾಟಿಸಿದರು.

ಹೂವಿನಹಡಗಲಿ: ನಾನು ಜವಾಬ್ದಾರಿಯುತ ಜನನಾಯಕನಾಗಿ ಹೊರಹೊಮ್ಮಲು ಶಿಕ್ಷಕರೇ ಕಾರಣ ಎಂದು ಶಾಸಕ ಎಲ್ ಕೃಷ್ಣನಾಯ್ಕ್ ಹೇಳಿದರು.

● ಶಾಸಕರಿಂದ ಶಿಕ್ಷಕರಿಗೆ ಬ್ಯಾಗ್ ವಿತರಣೆ.

ಪಟ್ಟಣದ ಪಂಚಮಸಾಲಿ ಸಮುದಾಯ ಭವನದಲ್ಲಿ ಶಾಲಾ ಶಿಕ್ಷಣ ಇಲಾಖೆಯ ವತಿಯಿಂದ ಆಯೋಜಿಸಿದ್ದ ಡಾ.ಸರ್ವಪಲ್ಲಿ ರಾಧಾ ಕೃಷ್ಣನ್ ಜನ್ಮದಿನಾಚರಣೆ ಅಂಗವಾಗಿ ಆಯೋಜಿಸಿದ್ದ ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಕರು ನಾಯಕತ್ವದ ಗುಣಗಳನ್ನು ಸಾಮಾಜಿಕ ಮೌಲ್ಯಗಳನ್ನು ಬೆಳೆಸಬೇಕು ಎಂದರು. ಶಿಕ್ಷಕರರು ಅನೇಕ ಉತ್ತಮ ಶಿಷ್ಯರನ್ನು ಸಮಾಜಕ್ಕೆ ನೀಡುರುವಿರಿ. ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ಶಿಕ್ಷಕರು ಆದರ್ಶಪ್ರಾಯವಾದ ವ್ಯಕ್ತಿ ಎಂದು ಬಣ್ಣಿಸಿದರು. ಗ್ರಾಮೀಣ ಪ್ರದೇಶದ ಸರಕಾರಿ ಶಾಲೆಗಳ ಮಕ್ಕಳಿಗೆ ಇಂಗ್ಲಿಷ್ ಕಲಿಕೆ ಸುಲಭವಾಗಲು 5 ರಿಂದ 10ನೇ ವರ್ಗದವರಿಗೆ ಕಂಪ್ಯೂಟರ್ ಶಿಕ್ಷಣ ಪರಿಣಾಮವಾಗಿ ಬೋಧಿಸುವ ವ್ಯವಸ್ಥೆ ಮಾಡಲಾಗುವುದು ಎಂದರು. ಮಕ್ಕಳಿಗಾಗಿ ಊಟ ಮಾಡುವ ತಟ್ಟೆಗಳ ಪೂರೈಕೆ, ಊಟದ ಹಾಲ್ ನಿರ್ಮಿಸಲು ಉದ್ದೇಶಿಸಲಾಗಿದೆ. ಶುದ್ಧ ಕುಡಿಯುವ ನೀರು, ಹೈಟೆಕ್ ಶೌಚಾಲಯ ನಿರ್ಮಾಣ ಆರಂಭಿಸುವುದಾಗಿ ಹೇಳಿದರು.

ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ, ಮುಖಂಡರಾದ ವಾರದ ಗೌಸ್ ಮೊಹಿದ್ದೀನ್, ಮೋಹನ್ ರೆಡ್ಡಿ, ಪೂಜಪ್ಪ, ಜ್ಯೋತಿ ಮಹೇಂದ್ರ, ಪುತ್ರೇಶ್, ಪುನೀತ್ ದೊಡ್ಮನಿ, ವೀರಭದ್ರಪ್ಪ ಸೋಗಿ, ಕೋಟೆಪ್ಪ, ದೈಹಿಕ ಅಧೀಕ್ಷಕರಾದ ರಫಿಕ್ ಅಹಮದ್ ಖವಾಸ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಯು.ಆನಂದ್, ಜಿ.ಎಂ.ಕಾಂತೇಶ್, ಸಹ ಶಿಕ್ಷಕರ ಸಂಘದ ಅಧ್ಯಕ್ಷ ಎಂ.ಶಿವಲಿಂಗಪ್ಪ, ಎಂ.ಶೇಕ್ ಅಹಮದ್, ಶಿವಕುಮಾರ್ ಗಡ್ಡಿ, ಕೋರಿ ಹಾಲೇಶ್, ಚಂದ್ರು ಕೊಂಚಿಗೇರಿ, ಪರಶುರಾಮಪ್ಪ, ಬಿಚ್ಚುಗತ್ತಿ ಖಾಜಾ ಹುಸೇನ್,ಪಿ.ಎನ್.ಪಾಟೀಲ್, ಮಮತಾ, ಶ್ರೀಲತಾ, ದ್ವಾರಕೀಶ್ ರೆಡ್ಡಿ ಉಪಸ್ಥಿತರಿದ್ದರು.

ಮಕ್ಕಳಿಗೆ ಹಿರಿಯರೇ ಅತ್ಯುತ್ತಮ ಮಾರ್ಗದರ್ಶಕರು

ವಿಶ್ವ ಹಿರಿಯ ನಾಗರಿಕರ ದಿನಾಚರಣೆಗಾಗಿ ಕ್ರೀಡಾ ಕೂಟಕ್ಕೆ ಶಾಸಕ ಗವಿಯಪ್ಪ ಚಾಲನೆ

ಹೊಸಪೇಟೆ: ಹಿರಿಯ ನಾಗರಿಕರು ಮಕ್ಕಳು ಮತ್ತು ಕುಟುಂಬದ ಜೊತೆಗೆಯೇ ಹೆಚ್ಚಿನ ಸಮಯ ಕಳೆಯಬೇಕು. ಮಕ್ಕಳೊಂದಿಗೆ ಮಾತನಾಡಬೇಕು. ಮಕ್ಕಳಿಗೆ ಹಿರಿಯರೇ ಅತ್ಯುತ್ತಮ ಮಾರ್ಗದರ್ಶಕರು ಎಂದು ವಿಜಯನಗರ ವಿಧಾನಸಭಾ ಕ್ಷೇತ್ರದ ಶಾಸಕ ಎಚ್ ಆರ್ ಗವಿಯಪ್ಪ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಶೇಷ ಚೇತನರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯ ಅಂಗವಾಗಿ ನಗರದ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದ್ದ ಹಿರಿಯ ನಾಗರಿಕರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಪಾರಿವಾಳ ಹಾರಿ ಬಿಡುವುದರ ಮೂಲಕ ಚಾಲನೆ ನೀಡಿ ಮಾತನಾಡಿದರು.

ಹಿರಿಯರಾದವರು ಕೋಪವನ್ನು ಕಡಿಮೆ ಮಾಡಿಕೊಳ್ಳಬೇಕು. ಮಕ್ಕಳ ಜೊತೆಗಿದ್ದಾಗ ಮಕ್ಕಳಂತಿರುವ ದೊಡ್ಡ ಗುಣವನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು. ಮಕ್ಕಳಿರಲಿ, ಮೊಮ್ಮಕ್ಕಳಿರಲಿ ಯಾರಾದರು ಸಿಡಿಮಿಡಿಗೊಂಡಾಗ ಆ ವೇಳೆ ಹಿರಿಯರು ಮೌನ ವಹಿಸಬೇಕು. ಮಾತಿಗೆ ಮಾತು ಬೆಳೆಸಬಾರದು. ಶಾಂತರಾಗಿದ್ದು, ವಾತಾವರಣ ತಿಳಿಯಾದಾಗ ಕಿರಿಯರಿಗೆ ತಿಳಿ ಹೇಳಬೇಕು. ಕುಟುಂಬ ನಡೆಸುವ ಮಹತ್ವದ ಜವಾಬ್ದಾರಿಯ ಬಗ್ಗೆ ಅವರಿಗೆ ಮಾರ್ಗದರ್ಶನ ಮಾಡಬೇಕು. ಏನಾದರು ಅವಘಡಗಳಾದಾಗ ಅದನ್ನು ಎದುರಿಸಿ ಬಾಳಲು ಅವರಿಗೆ ಧೈರ್ಯ ಹೇಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿಗಳಾದ ಅವಿನಾಶ ಎಸ್ ಗೋಟಖಿಂಡಿ, ಹರಪನಹಳ್ಳಿಯ ನಿವೃತ್ತ ನೌಕರರ ಸಂಘದ ಅಧ್ಯಕ್ಷರಾದ ಶೇಖರಗೌಡ ಪಾಟೀಲ್, ಹೊಸಪೇಟೆ ನಿವೃತ್ತ ನೌಕರ ಸಂಘದ ಅಧ್ಯಕ್ಷರಾದ ರಾಮಪ್ಪ, ವಿವಿಧ ಸಂಘಟನೆಗಳ ಪದಾಧಿಕಾರಿಗಳು, ತಾಲೂಕಿನ ಎಂ ಆರ್ ಡಬ್ಲ್ಯು, ಯು ಆರ್ ಡಬ್ಲ್ಯು, ವಿ ಆರ್ ಡಬ್ಲ್ಯು ಹಾಗೂ ಹಿರಿಯ ನಾಗರಿಕರು ಮತ್ತು ಕುಟುಂಬದವರು ಉಪಸ್ಥಿತರಿದ್ದರು.

ವಿವಿಧ ಸ್ಪರ್ಧೆಗಳು: ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಅಂಗವಾಗಿ ಹಿರಿಯ ನಾಗರಿಕರಿಗೆ ಪುರುಷರ ವಿಭಾಗದಲ್ಲಿ ನಡಿಗೆ ಸ್ಪರ್ಧೆ, ಮಹಿಳೆಯರಿಗೆ ಮ್ಯೂಸಿಕಲ್ ಚೇರ್ ಸ್ಪರ್ಧೆ, ಪುರುಷ ಹಾಗೂ ಮಹಿಳೆಯರಿಗೆ ಗಾಯನ ಸ್ಪರ್ಧೆ ಮತ್ತು ಏಕಪಾತ್ರ ಅಭಿನಯ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

ನಗರದಲ್ಲಿ ಹಿರಿಯ ನಾಗರಿಕರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಪಾರಿವಾಳ ಹಾರಿ ಬಿಡುವುದರ ಮೂಲಕ ಚಾಲನೆ ಶಾಸಕ ಎಚ್ ಆರ್ ಗವಿಯಪ್ಪ ನೀಡಿದರು.

ಈ ಹಿಂದೆ ಹಿರಿಯ ನಾಗರಿಕರು ಬಹುತೇಕ ತಮ್ಮ ಸಮಯವನ್ನು ಮನೆಯಲ್ಲಿ ಮಕ್ಕಳ ಜೊತೆಗೆ ಕಳೆಯುತ್ತಿದ್ದರು. ಈಗ ಈ ವಾತಾವರಣ ಕಾಣುತ್ತಿಲ್ಲ. ಹಿರಿಯರಾದವರು ಆಸ್ತಿ ಹಣದ ಬೆನ್ನು ಹತ್ತಿ ಹೋಗಬಾರದು. ಭ್ರಮೆಗಳಿಂದ ಹೊರಬರಬೇಕು. ಚಿಂತೆಗಳನ್ನು ಕೈಬಿಡಬೇಕು. ಹಿರಿಯರೇ ಕುಟುಂಬದ ಗುರು ಮತ್ತು ನಾಯಕ ಇದ್ದಂತೆ. ಹಿರಿಯರು ನಿತ್ಯ ವಾಯುವಿಹಾರದಂತಹ ಚಟುವಟಿಕೆಗಳಲ್ಲಿ ಭಾಗಿಯಾಗಿ ಆರೋಗ್ಯ ಕಾಪಾಡಿಕೊಳ್ಳಬೇಕು.

-ಎಂ.ಎಸ್. ದಿವಾಕರ, ಜಿಲ್ಲಾಧಿಕಾರಿ

ವಕೀಲರ ಸಂಘದಿಂದ ಅದ್ದೂರಿ ಗಣೇಶನ ವಿಸರ್ಜನೆ

ಹರಪನಹಳ್ಳಿ: ಪ್ರತಿವರ್ಷದಂತೆ ಈ ವರ್ಷವೂ ಕೂಡ ಮೂರು ದಿನಗಳ ಕಾಲ ವಕೀಲರ ಸಂಘದಲ್ಲಿ ಗಣೇಶನ ಹಬ್ಬವನ್ನು ಸಡಗರ, ಸಂಭ್ರಮದಿಂದ ವಕೀಲರ ಸಂಘದಲ್ಲಿ ಆಚರಿಸಿ ತಾಲೂಕಿನ ವಕೀಲರ ಸಂಘದ ಅಧ್ಯಕ್ಷರು ಸರ್ವದಸ್ಯರು ಅದ್ದೂರಿಯಾಗಿ ಗಣೇಶನನ್ನು ಸೋಮವಾರ ಸಂಜೆ ವಿಸರ್ಜಿಸಲಾಯಿತು.

ಹಿರಿಯ ಮತ್ತು ಕಿರಿಯ ವಕೀಲರು ಕುಣಿದು ಕುಣಿದು ಕುಪ್ಪಳಿಸಿ ಪಟಾಕಿ ಸಿಡಿಸುತ್ತಾ, ಬತ್ತಿ ಹಚ್ಚುತ್ತಾ,' ಗಣಪತಿ ಬಪ್ಪ ಮೋರಿಯ'ಎಂದು ಕೂಗುತ್ತಾ ಪ್ರವಾಸಿ ಮಂದಿರದ ವೃತ್ತ ಬರುವವರೆಗೂ ಸಡಗರ ಸಂಭ್ರಮದಿಂದ ಅದ್ದೂರಿಯಾಗಿ ದಾರಿಯುದ್ದಕ್ಕೂ ಸಂಭ್ರಮದಿಂದ ವಿಸರ್ಜನೆ ಮಾಡಿದರು.

ವಿವಿಧ ವಾದ್ಯಗಳೊಂದಿಗೆ ಊರಿನ ಪ್ರಮುಖ ಬೀದಿಗಳಲ್ಲಿ ಯುವಕರು ನೃತ್ಯ ಮಾಡುತ್ತಾ, ಪಟಾಕಿ ಸಿಡಿಸುತ್ತಾ ಮೆರವಣಿಗೆ ಮುಖಾಂತರ ಕೆರೆಗೆ ಗಣೇಶನನ್ನು ವಿಸರ್ಜಿಸಲಾಯಿತು.

ಹಿರಿಯ ಸಿವಿಲ್ ನ್ಯಾಯಾಧೀಶರಾದ ಉಷಾರಾಣಿ ಎಸ್.ಪಿ. ವಕೀಲರ ಸಂಘದ ಅಧ್ಯಕ್ಷ ರಾಮನಗೌಡ ಪಾಟೀಲ್, ಉಪಾಧ್ಯಕ್ಷ ಸಿ.ಪೀರ್ ಆಹ್ಮದ್, ಕಾರ್ಯದರ್ಶಿ, ಕೇಶವಮೂರ್ತಿ, ಅಪಾರ ಸರಕಾರಿ ವಕೀಲರಾದ ಕೆ.ಜಗದಪ್ಪ, ನಂದಿಶ್ , ಹಿರಿಯ ಮತ್ತು ಕಿರಿಯ ವಕೀಲರು ಸಂಭ್ರಮಿಸಿದರು.

ಹೊಸಪೇಟೆ ಅನಂತಶಯನಗುಡಿ ತಾಂಡಾದಲ್ಲಿ ಶ್ರೀಸೇವಾಲಾಲ್ ಯುವಕರ ಸಂಘದಿಂದ ಪ್ರತಿಷ್ಠಾಪಿಸಿರುವ ನಲಿ ಕಲಿ ಗಣಪ ಎಲ್ಲರ ಗಮನ ಸೆಳೆದಿದೆ.

ಶೀಘ್ರದಲ್ಲೇ ಗುರುಭವನ ಪೂರ್ಣ: ಶಾಸಕ

ಹೂವಿನಹಡಗಲಿ ಪಟ್ಟಣದಲ್ಲಿ ನೂತನ ಗುರುಭವನ ನಿರ್ಮಾಣಕ್ಕೆ ಶಿಕ್ಷಕರ ದಿನಾಚರಣೆಯಂದು ಶಾಸಕ ಕೃಷ್ಣಾನಾಯ್ಕ ಭೂಮಿ ಪೂಜೆ ನೆರವೇರಿಸಿದರು.

ಹೂವಿನಹಡಗಲಿ: ಶೀಘ್ರದಲ್ಲೇ ಗುರುಭವನ ಕಾಮಗಾರಿ ಪೂರ್ಣಗೊಳಿಸುವುದಾಗಿ ಶಾಸಕ ಕೃಷ್ಣಾನಾಯ್ಕ ಹೇಳಿದರು.

ಪಟ್ಟಣದಲ್ಲಿ ನೂತನ ಗುರುಭವನ ನಿರ್ಮಾಣಕ್ಕೆ ಶಿಕ್ಷಕರ ದಿನಾಚರಣೆಯಂದು ಭೂಮಿ ಪೂಜೆ ನೆರವೇರಿಸಿ ಅವರು ಭರವಸೆ ನೀಡಿದರು. ಪಟ್ಟಣದ ಬೈಪಾಸ್ ರಸ್ತೆಯಲ್ಲಿನ ಹಳೇ ಗುರುಭವನ ಇದ್ದ ಸ್ಥಳದಲ್ಲೇ ನೂತನ ಗುರುಭವನ ನಿರ್ಮಾಣಕ್ಕೆ ಚಾಲನೆ ನೀಡಿದರು.

ಶಾಸಕರ ಅನುದಾನ ಹಾಗೂ ಇತರೆ ಅನುದಾನ ಬಳಸಿ ಶೀಘ್ರದಲ್ಲೇ ಗುರುಭವನ ಕಾಮಗಾರಿ ಪೂರ್ಣಗೊಳಿಸುವುದಾಗಿ ಹೇಳಿದರು.

ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಉಮೇಶ್, ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ವಿ ಪೂಜಾರ, ಕ್ಷೇತ್ರ ಸಮನ್ವಯಾಧಿಕಾರಿ ಎ ಕೋಟೆಪ್ಪ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ವಿ ಹನುಮಂತಪ್ಪ, ದೈಹಿಕ ಅಧೀಕ್ಷಕ ರಫೀಕ್ ಅಹಮದ್ ಖವಾಸ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಯು ಆನಂದ್, ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಎ ಕೊಟ್ರಗೌಡ, ಎಸ್ಸೆಸ್ಸೆಲ್ಸಿ ನೋಡಲ್ ಅಧಿಕಾರಿ ಎಚ್ ಮಲ್ಲಿಕಾರ್ಜುನ, ಪ್ರೌಢಶಾಲಾ ಮುಖ್ಯ ಗುರುಗಳ ಸಂಘದ ಅಧ್ಯಕ್ಷ ಜಿ ಎಂ ಕಾಂತೇಶ್, ಸಹ ಶಿಕ್ಷಕರ ಸಂಘದ ಅಧ್ಯಕ್ಷ ಎಂ ಶಿವಲಿಂಗಪ್ಪ, ರಾಜ್ಯ ಸಹ ಕಾರ್ಯದರ್ಶಿ ಶಿವಕುಮಾರ್ ಗಡ್ಡಿ, ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕೃಷಿ ಭಾಗ್ಯ ಯೋಜನೆ ಸಹಾಯಧನ ಸೌಲಭ್ಯ

ಹೊಸಪೇಟೆ: ಪ್ರಸ್ತುತ ವರ್ಷದಲ್ಲಿ ಜಿಲ್ಲೆಯ ಒಟ್ಟು 6 ತಾಲೂಕುಗಳಲ್ಲಿ ರಾಜ್ಯ ವಿಪತ್ತು ನಿರ್ವಹಣಾ ನಿಧಿ ಹಾಗೂ ಕೃಷಿ ಭಾಗ್ಯ ಯೋಜನೆಯನ್ನು ಸಾಮಾನ್ಯ ವರ್ಗದ ರೈತರಿಗೆ 80 ರಷ್ಟು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ರೈತರಿಗೆ 90 ರಷ್ಟು ಸಹಾಯಧನದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಸಹಾಯಧನ: ಕ್ಷೇತ್ರ ಬದು ನಿರ್ಮಾಣದಲ್ಲಿ ಸಾಮಾನ್ಯರಿಗೆ 80 ರಷ್ಟು, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ 90 ರಷ್ಟು ಸಹಾಯಧನ ನೀಡಲಾಗುವುದು. ನೀರು ಸಂಗ್ರಹಣಾ ರಚನೆಗೆ (ಕೃಷಿ ಹೊಂಡ) ಸಾಮಾನ್ಯರಿಗೆ 80 ರಷ್ಟು, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ 90 ರಷ್ಟು ಸಹಾಯಧನ ನೀಡಲಾಗುವುದು. ನೀರು ಇಂಗದಂತೆ ತಡೆಯಲು ಪಾಲಿಥೀನೊಂದಿಕೆ (ಗರಿಷ್ಠ-ರೂ 50000 ಸಾಮಾನ್ಯರಿಗೆ 80 ರಷ್ಟು, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ 90 ರಷ್ಟು ಸಹಾಯಧನ ನೀಡಲಾಗುವುದು. ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ ನಿರ್ಮಾಣಕ್ಕೆ ಸಾಮಾನ್ಯರಿಗೆ 40 ರಷ್ಟು, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ 50 ರಷ್ಟು ಸಹಾಯಧನ ನೀಡಲಾಗುವುದು. ಹೊಂಡದಿಂದ ನೀರು ಎತ್ತಲು ಡೀಸೆಲ್, ಪೆಟ್ರೋಲ್, ಸೋಲಾರ್ಪಂಪ್ಸೆಟ್ ನಿರ್ಮಾಣಕ್ಕೆ ಸಾಮಾನ್ಯರಿಗೆ 50 ರಷ್ಟು, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ 90 ರಷ್ಟು ಸಹಾಯಧನ ನೀಡಲಾಗುವುದು.ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ರೈತ ಸಂಪರ್ಕ ಕೇಂದ್ರವನ್ನು ಸಂಪರ್ಕಿಸಬೇಕು ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾನವ ಸರಪಳಿ ರಚನೆಗೆ ಸೂಚನೆ

ಹೊಸಪೇಟೆ: ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 15ನ್ನು ಕರ್ತವ್ಯ ದಿನವನ್ನಾಗಿ ಪರಿಗಣಿಸಿ ಶಾಲಾ ಕಾಲೇಜು ವಿದ್ಯಾರ್ಥಿಗಳನ್ನು ಅಂದು ನಡೆಯುವ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳುವಂತೆ ಸೂಕ್ತ ನಿರ್ದೇಶನ ನೀಡಿ ಅಗತ್ಯ ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿ ಗಳಾದ ಎಂ.ಎಸ್.ದಿವಾಕರ ವಿಜಯನಗರ ಜಿಲ್ಲೆಯ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ಸೆಪ್ಟೆಂಬರ್ 15ರಂದು ಬೆಳಗ್ಗೆ 7.30ಕ್ಕೆ ಮಾನವ ಸರಪಳಿ ರಚಿಸುವ ಕಾರ್ಯಕ್ರಮ ಆರಂಭವಾಗಲಿದೆ. ಇದಕ್ಕಾಗಿ ಈಗಾಗಲೇ ರೂಟ್ ಮ್ಯಾಪನ್ನು ಅಂತಿಮಗೊಳಿಸಲಾಗಿದೆ. ಅದರನ್ವಯ ಮಾನವ ಸರಪಳಿ ಕೊಪ್ಪಳ ಜಿಲ್ಲೆಯಿಂದ ಎನ್‌ಎಚ್-50 ರಾಷ್ಟ್ರೀಯ ಹೆದ್ದಾರಿ ಮುಖೇನ ವಿಜಯನಗರ ಜಿಲ್ಲೆಯ ಸರಹದ್ದು ಆದ ಟಿ.ಬಿ.ಡ್ಯಾಮನ್ ಗಣೇಶ ದೇವಸ್ಥಾನದ ಹತ್ತಿರ ಇರುವ ಮೊದಲನೇ ಸೇತುವೆಯಿಂದ ಪ್ರವೇಶವಾಗಿ ವಿವಿಧೆಡೆ ಸುಮಾರು 38 ಕಿ.ಮೀನಷ್ಟು ರಚಿಸಲಾ ಗುತ್ತದೆ. ಹೊಸಪೇಟೆ ತಾಲೂಕಿನ ಎಲ್ಲ ಶಾಲಾ-ಕಾಲೇಜುಗಳಿಗೆ ಸೆಪ್ಟೆಂಬರ್ 15 ಭಾನುವಾರದಂದು ಕರ್ತವ್ಯ ದಿನ ಎಂದು ಪರಿಗಣಿಸಿ ಎಲ್ಲಾ ಶಾಲಾ-ಕಾಲೇಜು ವಿದ್ಯಾರ್ಥಿಗಳು, ಸಿಬ್ಬಂದಿಯು ಕಡ್ಡಾಯಾಗಿ ಕಾರ್ಯಕ್ರಮದಲ್ಲಿ ಪಾಲ್ಗೊಳುವಂತೆ ಸೂಕ್ತ ನಿರ್ದೇಶನ ನೀಡಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ವಿಜಯನಗರ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ಹಾಗೂ ಶಾಲಾ-ಶಿಕ್ಷಣ ಮತ್ತು ಸಾಕ್ಷರತ ಇಲಾಖೆಯ ಉಪನಿರ್ದೇಶಕರಿಗೆ ಜಿಲ್ಲಾಧಿಕಾರಿಗಳು ಪತ್ರ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಎಸ್ಸಿ ಎಸ್ಟಿ ಕಲ್ಯಾಣ ಸಮಿತಿ ಅಧ್ಯಕ್ಷರ ಜಿಲ್ಲಾ ಪ್ರವಾಸ

ಹೊಸಪೇಟೆ: ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ಪಿ.ಎಂ. ನರೇಂದ್ರಸ್ವಾಮಿ ನೇತೃತ್ವದ 19 ಜನ ಸದಸ್ಯರನ್ನೊಳಗೊಂಡ ಸಮಿತಿಯು ಸೆಪ್ಟೆಂಬರ್ 19 ರಿಂದ ಸೆಪ್ಟೆಂಬರ್ 21ರವರೆಗೆ ಕಲಬುರಗಿ ವಿಭಾಗದ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಳ್ಳಲಿದೆ ಎಂದು ಕರ್ನಾಟಕ ವಿಧಾನಸಭೆ ಸಚಿವಾಲಯದ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ತಿಳಿಸಿದ್ದಾರೆ. ಈ ಸಮಿತಿಯು ಕಲಬುರಗಿ ವಿಭಾಗದ ಜಿಲ್ಲೆಗಳಾದ ಕಲಬುರಗಿ, ಯಾದಗಿರಿ, ಬೀದರ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯದವರ ಅಭಿವೃದ್ಧಿ, ಕಲ್ಯಾಣ, ಏಳಿಗೆಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಹಾಗೂ ಯೋಜನೆಗಳ ಕುರಿತು ಪ್ರಗತಿ ಪರಿಶೀಲನಾ ಸಭೆ ನಡೆಸಿ ಚರ್ಚೆ ನಡೆಸಲಿದೆ. ಸಮಿತಿಯು ಸೆಪ್ಟೆಂಬರ್ 19 ರಂದು ಬೆಳಿಗ್ಗೆ 10.30ಕ್ಕೆ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಹಾಗೂ ಮಧ್ಯಾಹ್ನ 2.30ಕ್ಕೆ ಬೀದರ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯು ಕ್ರಮವಾಗಿ ಕಲಬುರಗಿ ಮತ್ತು ಬೀದರ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಥವಾ ಜಿಲ್ಲಾ ಪಂಚಾಯತ್ ಕಚೇರಿ ಸಭಾಂಗಣದಲ್ಲಿ ನಡೆಸಿ ಅಲ್ಲಿಂದ ರಾಯಚೂರಿಗೆ ಪ್ರಯಾಣಿಸಿ ವಾಸ್ತವ್ಯ ಮಾಡಲಿದೆ. ಸೆಪ್ಟೆಂಬರ್ 20 ರಂದು ಬೆಳಿಗ್ಗೆ 10.30 ಗಂಟೆಗೆ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಪ್ರಗತಿ ಪರಿಶೀಲನಾ ಸಭೆಯು ರಾಯಚೂರು ಜಿಲ್ಲಾಧಿಕಾರಿಗಳ ಅಥವಾ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆಸಿ ಬಳ್ಳಾರಿಯತ್ತ ಪ್ರಯಾಣ ಬೆಳೆಸಲಿದೆ ಎಂದರು.

ವಿವಿಧ ಯೋಜನೆಗಳ ಸೌಲಭ್ಯಕ್ಕಾಗಿ ಅರ್ಜಿ

ಹೊಸಪೇಟೆ: ಹಗರಿಬೊಮ್ಮನಹಳ್ಳಿ ಪುರಸಭೆ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮತ್ತು ಇತರೆ ಬಡ ಜನಾಂಗದ ಫಲಾನುಭವಿಗಳಿಗೆ ಹಾಗೂ ಅಂಗವಿಕಲ ಫಲಾನುಭವಿಗಳಿಗೆ 2024-25ನೇ ಸಾಲಿನ ಎಸ್.ಎಫ್.ಸಿ. ಯೋಜನೆಯ 24.10 ರಷ್ಟು, 7.25 ರಷ್ಟು ಹಾಗೂ 5 ರಷ್ಟು ಅನುದಾನದಡಿ ವಿವಿಧ ಸೌಲಭ್ಯಗಳನ್ನು ಪಡೆಯಲು ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು ಸೆಪ್ಟೆಂಬರ್ 13 ರ ಒಳಗಾಗಿ ಹಗರಿಬೊಮ್ಮನಹಳ್ಳಿಯ ಪುರಸಭೆ ಕಾರ್ಯಾಲಯಕ್ಕೆ ಕಚೇರಿ ವೇಳೆಯಲ್ಲಿ ಅರ್ಜಿ ಸಲ್ಲಿಸಲು ತಿಳಿಸಿದೆ. ಪುರಸಭೆ ವ್ಯಾಪ್ತಿಯ ಲ್ಲಿ ಬರುವ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪಂ ಗಡದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಹಾಯಧನ ಮತ್ತು ಕೌಶಲ್ಯಾ ಭಿವೃದ್ಧಿ ತರಬೇತಿ ಕಾರ್ಯಕ್ರಮದಡಿ ಎಂ.ಎಸ್. ಆಫೀಸ್, ಡಿ.ಟಿ.ಪಿ. ಮತ್ತು ಅಕೌಂಟಿಂಗ್ ಅಂಡ್ ಟ್ಯಾಲಿ ಕಂಪ್ಯೂಟರ್ ತರಬೇತಿಯನ್ನು ನೀಡುವುದು. ಎಸ್.ಎಫ್.ಸಿ. ಯೋಜನೆಯಡಿ 24.10 ರಷ್ಟು ಮಂಜೂರಾಗಿದ್ದು, ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ 2 ಲಕ್ಷದಿಂದ 5.68 ಲಕ್ಷದವರೆಗೆ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ 1.20 ಲಕ್ಷದಿಂದ 2 ಲಕ್ಷದವರೆಗೆ ಸಹಾಯಧನ ನೀಡಲಾಗುವುದು. ಅಗತ್ಯ ದಾಖಲಾತಿಗಳೊಂದಿಗೆ ವಿಶೇಷ ಚೇತನದ ಪ್ರಮಾಣ ಪತ್ರ, ಮನೆಯ ನಮೂನೆ-3, ಶೌಚಾಲಯ ನಿರ್ಮಾಣ ಮಾಡಿಕೊಳ್ಳುವ ಸ್ಥಳದ ಛಾಯಾಚಿತ್ರ ಅರ್ಜಿ ಸಲ್ಲಿಸಬೇಕು ಎಂದು ಹಗರಿಬೊಮ್ಮನಹಳ್ಳಿ ಪುರಸಭೆಯ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀ ಗಜಾನನ ಮಹಾಮಂಡಳ (ರಿ),
ಹುಬ್ಬಳ್ಳಿ.
ಕ್ರಾಂತಿವೀರ
ಸಂಗೊಳ್ಳಿ ರಾಯಣ್ಣ
ಪ್ರಶಸ್ತಿ-2024
ದಿನಾಂಕ: 12.09.2024ರ
ಗುರುವಾರ
ಮಧ್ಯಾಹ್ನ 12:30 ಘಂಟೆಗೆ
ಸ್ಥಳ: ಅಕ್ಕನ ಬಳಗ ಸಭಾಭವನ,
ಜೆ.ಸಿ. ನಗರ, ಹುಬ್ಬಳ್ಳಿ.
ಬಡವರ ಬಂಧು, ಹಿಂದುಳಿದ ವರ್ಗಗಳ ಧೀಮಂತ ನಾಯಕರು,
ಮಾಜಿ ಉಪಮುಖ್ಯಮಂತ್ರಿಗಳು
ಶ್ರೀ ಕೆ.ಎಸ್. ಈಶ್ವರಪ್ಪ ರವರು
ಮತ್ತು ಮಾಜಿ ಕೇಂದ್ರ ಸಚಿವರು, ಶಾಸಕರಾದ
ಶ್ರೀ ಬಸನಗೌಡ ಪಾಟೀಲ ಯತ್ನಾಳ ಇವರಿಗೆ
ಹಾರ್ದಿಕ ಅಭಿನಂದನೆಗಳು
ಶುಭಕೋರುವವರು
ಪ್ರಕಟಣೆ: ಕೆ.ಎಸ್. ಈಶ್ವರಪ್ಪ ಅಭಿಮಾನಿ ಬಳಗ, ಶಿವಮೊಗ್ಗ